ಇಂದಿನ ಹವಾಮಾನ
ದಕ್ಷಿಣ ಕನ್ನಡ 27⁰ 24⁰ | ಉಡುಪಿ 28⁰ 26⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 06, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಮಲೆಯಾಳ ಭಾಷಾ ಮಸೂದೆಯಲ್ಲಿ ತಿದ್ದುಪಡಿಗೆ ಒತ್ತಾಯ



ಪುಟ 6

ಮಳೆಗಾಲ ಆರಂಭದಲ್ಲೇ ವಾಹನ ಸವಾರರಿಗೆ ಸಂಚಾರ ಕಂಟಕ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!


ಮೊದಲ ಹನಿಯ ಆರ್ಭಟಕ್ಕೆ ನಡುಗಿದ ರಾಷ್ಟ್ರೀಯ ಹೆದ್ದಾರಿ 169

ಗೇಬಿಯನ್‌ಗೆ ಮಳೆ ಟಕ್ಕರ್!

ಕೆತ್ತಿಕಲ್ ನೀಡಿದೆ ಸಂಭಾವ್ಯ ಅವಾಂತರದ ಎಚ್ಚರಿಕೆ







ಹೆದ್ದಾರಿ ವಿಸ್ತರಣೆ ಕಾಮಗಾರಿಯಿಂದಾಗಿ ಗುರುಪುರ- ಕೈಕಂಬ ಜಂಕ್ಷನ್‌ನಲ್ಲಿ ಮೊದಲ ಮಳೆಗೆ ಕೃತಕ ನೆರೆ ಸೃಷ್ಟಿಯಾಗಿದೆ. ಸರ್ವಿಸ್ ರೋಡ್ ಅಕ್ಷರಶಃ ಕಿರು ಹೊಳೆಯಂತಾಗಿದ್ದು, ಸಾರ್ವಜನಿಕರು ನಡೆದಾಡಲು ಹರಸಾಹಸ ಪಡುವಂತಾಗಿದೆ.

ಕೈಕಂಬ: ಇಲ್ಲಿನ ರಾಷ್ಟ್ರೀಯ ಹೆದ್ದಾರಿ 169 ಅಪೂರ್ಣ ಚತುಷ್ಪಥ ಕಾಮಗಾರಿಯಿಂದ ಈ ಭಾಗದಲ್ಲೀಗ ಮೊದಮೊದಲ ಮಳೆಗೆ ಭಾರೀ ಅವಾಂತರಗಳು ಸೃಷ್ಟಿಯಾಗಿವೆ.

ಮುಂದೆ ಮಳೆಗಾಲದಲ್ಲಿ ಎದುರಾಗುವ ಹಲವು ಗಂಭೀರ ಸಮಸ್ಯೆಗಳ ಮುನ್ನೋಟ ವಾಮಂಜೂರಿನಿಂದ ಎಡಪದವುವರೆಗೆ ಈ ಬಾರಿ ಆರಂಭದ ಮಳೆಗೇ ಕಂಡು ಬಂದಿವೆ. ಕಳೆದ ಎರಡು ವರ್ಷಗಳಿಂದ ಸತತವಾಗಿ ಭೂಕುಸಿತಕ್ಕೆ ಒಳಗಾಗುತ್ತಿರುವ ಕೆತ್ತಿಕಲ್ ಪರಿಸರದಲ್ಲಿ ಈ ಬಾರಿ ಮತ್ತೆ ಅನಾಹುತ ಸಂಭವಿಸೀತೇ ಎಂಬ ಆತಂಕ ನಾಗರಿಕರನ್ನು ಕಾಡುತ್ತಿದೆ. ಇದಕ್ಕೆ ಪೂರಕ ಎಂಬಂತೆ ಕೆತ್ತಿಕಲ್ ಗುಡ್ಡದ ಮೇಲ್ಭಾಗದಲ್ಲಿ ಅಳವಡಿಸಲಾಗಿರುವ ಗೇಬಿಯನ್ ವಾಲ್ ಭಾಗದಲ್ಲಿ ಧಾರಾಕಾರ ಮಳೆ ನೀರು ಹರಿಯುತ್ತಿದ್ದು, ಸಂಭಾವ್ಯ ಅಪಾಯದ ಮುನ್ಸೂಚನೆಯನ್ನು ಈಗಲೇ ನೀಡುತ್ತಿದೆ.

ಹೆದ್ದಾರಿಯಲ್ಲಿ ಅಕ್ಷರಶಃ ಕೃತಕ ನೆರೆ

ಶುಕ್ರವಾರ ಬೆಳಿಗ್ಗಿನಿಂದ ಸುರಿಯುತ್ತಿರುವ ಜಡಿಮಳೆಗೆ ಕೆತ್ತಿಕಲ್ ಗುಡ್ಡ ಪ್ರದೇಶದ ಕೆಳಗಡೆ ಹಾದು ಹೋದ ಹೆದ್ದಾರಿಯಲ್ಲಿ ಅಕ್ಷರಶಃ ಕೃತಕ ನೆರೆ ಕಂಡು ಬಂದಿದ್ದು, ಪ್ರಯಾಣಿಕರು ಪರದಾಡಿದ್ದಾರೆ. »ಪುಟ 6

ಕೆಸರು ನೀರಿನ ನಡುವೆ ಪರಾರಿಯಲ್ಲಿ ಪರದಾಟ

ಅಪೂರ್ಣ ಕಾಮಗಾರಿ ನಡೆದಿರುವ ಪರಾರಿ ಹೆದ್ದಾರಿ ಭಾಗದಲ್ಲಿ ಎಲ್ಲೆಂದರಲ್ಲಿ ಕೆಸರು ನೀರು ಕಂಡು ಬಂದಿದೆ. ಹೆದ್ದಾರಿಯ ಬಹುತೇಕ ಕಡೆ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದೆ ಮಳೆ ನೀರೆಲ್ಲ ರಸ್ತೆಯಲ್ಲೇ ಹರಿಯುವಂತಾಗಿದೆ. ನೀರಿನೊಂದಿಗೆ ರಸ್ತೆ ಮೇಲೆ ಜಲ್ಲಿ ಕಲ್ಲುಗಳು ಹರಿದಾಡಿ ಅಲ್ಲಲ್ಲಿ ರಾಶಿ ಬಿದ್ದಿವೆ. ಇದರಿಂದ ದ್ವಿಚಕ್ರ ವಾಹನಿಗರಿಗೆ ಅಪಾಯ ತಪ್ಪಿದ್ದಲ್ಲ.

ಗುಂಡಿಗೆ ಬಿದ್ದ ಸವಾರ

ಎಲ್ಲಿ ನೋಡಿದಲ್ಲಿ ಕೆಸರು ನೀರು ಆವೃತಗೊಂಡಿದೆ. ಘನ ವಾಹನಗಳ ಓಡಾಟಕ್ಕೆ ರಸ್ತೆಯೇ ಕಂಬಳದ ಕರೆಯಂತಾಗಿದೆ. ಸರ್ವಿಸ್ ರಸ್ತೆ ಬದಿಯಲ್ಲಿ ಅಪೂರ್ಣ ಚರಂಡಿ ಕಾಮಗಾರಿಯಿಂದ ರಸ್ತೆ ತುಂಬಾ ನೀರು ತುಂಬಿದ ಕಾರಣ ದ್ವಿಚಕ್ರ ವಾಹನ ಸವಾರನೊಬ್ಬ ಗುಂಡಿಯ ಅರಿವಿಲ್ಲದೆ ಬಿದ್ದು ಗಾಯಗೊಂಡಿದ್ದಾರೆ.

ಅಂದು 'ಬಲೆ' ಅಳವಡಿಸಿದ್ದ ಸ್ಥಳದಲ್ಲಿ ಇಂದು ಧಾರಾಕಾರ ಮಳೆಯ ನೀರು



ಕಳೆದ ವರ್ಷ ಕೆತ್ತಿಕಲ್ ಶಾಲೆಗಿಂತ ಮುಂದಕ್ಕೆ ಕುಸಿದ ಗುಡ್ಡಕ್ಕೆ ಅಳವಡಿಸಿದ್ದ ಗೇಬಿಯನ್ ವಾಲ್ ವಿಶೇಷ ತಂತ್ರಜ್ಞಾನದ ಬಲೆ ನುಚ್ಚುನೂರಾಗಿತ್ತು. ಈಗ ಆ ಸ್ಥಳದಲ್ಲಿ ಭಾರಿ ಪ್ರಮಾಣದ ನೀರು ಹರಿಯುತ್ತಿದ್ದು, ಈ ಬಾರಿಯೂ ಅಪಾಯದ ಮುನ್ಸೂಚನೆ ಕಂಡು ಬಂದಿದೆ. ಉಳಾಯಿಬೆಟ್ಟು ಪಂಚಾಯತ್ ವ್ಯಾಪ್ತಿಯ ಪೆರ್ಮಂಕಿ ಮೂಲಕ ಮಲ್ಲೂರು, ಬೆಂಜನಪದವು ಸಂಪರ್ಕಿಸುವ ಒಳರಸ್ತೆಯ ಪರಾರಿಯಿಂದ ಮುಂದಕ್ಕೆ ಹೊಸ ಸೇತುವೆ ಬಳಿ ರಸ್ತೆ ತುಂಬೆಲ್ಲ ನೀರು ತುಂಬಿದ್ದರೆ, ಹತ್ತಿರದಲ್ಲಿ ಇನ್ನೂ ಮುಗಿಯದ ಕಿರು ಸೇತುವೆ ಕಾಮಗಾರಿಯಿಂದ ಜನತೆ ಹೈರಾಣಾಗಿದ್ದಾರೆ.

ಧಾರಾಕಾರ ಮಳೆಗೆ ರಸ್ತೆಯಲ್ಲಿ ಆಳೆತ್ತರ ನೀರು

ಹೆದ್ದಾರಿಗೆ ನಿರ್ಮಿಸಲಾದ ಹೊಸ ಸೇತುವೆಯ ಪಕ್ಕ ರಸ್ತೆಬದಿಯಲ್ಲಿದ್ದ ಹಳೆ ತೋಡು ನೆಲಸಮಗೊಂಡಿದ್ದು, ಶುಕ್ರವಾರ ಸುರಿದ ಮಳೆಗೆ ರಸ್ತೆಯಲ್ಲಿ ಆಳೆತ್ತರ ನೀರು ತುಂಬಿದೆ. ಇಲ್ಲಿ ಚರಂಡಿ ನಿರ್ಮಿಸದೆ ಹೋದಲ್ಲಿ ಕಿರು ಸೇತುವೆ ಲೋಕಾರ್ಪಣೆಗೊಂಡರೂ ಮಳೆಗಾಲದಲ್ಲಿ ಪರಾರಿಯಿಂದ ಉಳಾಯಿಬೆಟ್ಟಿಗೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ಬರಲಿದೆ.

ಜಂಕ್ಷನ್‌ನಲ್ಲಿ ಕೃತಕ ನೆರೆ

ಹೆದ್ದಾರಿ ವಿಸ್ತರಣೆಯ ಅವ್ಯವಸ್ಥಿತ ಕಾಮಗಾರಿಯಿಂದಾಗಿ ಗುರುಪುರ-ಕೈಕಂಬ ಜಂಕ್ಷನ್‌ನಲ್ಲಿ ಮೊದಲ ಮಳೆಗೆ ಕೃತಕ ನೆರೆ ಸೃಷ್ಟಿಯಾಗಿದೆ. ಇಲ್ಲಿನ ಸರ್ವಿಸ್ ರೋಡ್ ಅಕ್ಷರಶಃ ಕಿರು ಹೊಳೆಯಂತಾಗಿದ್ದು, ಸಾರ್ವಜನಿಕರು ನಡೆದಾಡಲು ಹೋಗಲು ಮಳೆ ಕಡಿಮೆಯಾಗುವವರೆಗೆ ಕಾಯುವಂತಾಯಿತು.

ಕೆತ್ತಿಕಲ್‌ನ ಗುಡ್ಡ ಕುಸಿತ ಸ್ಥಳದಲ್ಲಿ ಮಳೆ ನೀರ ಝರಿಯ ಆತಂಕ

ಕಳೆದ ವರ್ಷದ ಮಳೆಗೆ ಗುಡ್ಡ ಕುಸಿದಿದ್ದ ಕೆತ್ತಿಕಲ್ ಗುಡ್ಡ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ರಕ್ಷಣೆಗಾಗಿ ಈ ಬಾರಿ ಗ್ಯಾಬಿಯನ್ ವಾಲ್ ನಿರ್ಮಿಸಲಾಗಿದೆ. ಹಿಂದಿನ ಬಾರಿ ಇಲ್ಲಿ ಗುಡ್ಡದ ಮೇಲಿಂದ ಹೆದ್ದಾರಿಯತ್ತ ಒಂದೆರಡು ನೀರಿನ ಝರಿ ಇದ್ದರೂ, ಕಳೆದ ಎರಡು ದಿನದಲ್ಲಿ ಸುರಿದ ಮೊದಲ ಮಳೆಗೆ ಗ್ಯಾಬಿಯನ್ ವಾಲ್, ಗುಡ್ಡಕ್ಕೆ ಹಾಸಲಾದ ರಕ್ಷಣಾ ತಂತ್ರಜ್ಞಾನ ಹಾಸುಗಳ ಉದ್ದಕ್ಕೂ ನೀರಿನ ಝರಿಗಳು ಕಂಡು ಬಂದಿವೆ. ಇಲ್ಲೆಲ್ಲ ಈ ಬಾರಿಯೂ ಮತ್ತೆ ಗುಡ್ಡ ಕುಸಿಯುವ ಅಪಾಯ ಎದುರಾಗಿದೆ. ಈ ನಡುವೆ ಮಳೆ ಕೂಡಾ ಬಿರುಸು ಪಡೆದುಕೊಂಡಿದ್ದು, ಯಾವಾಗ ಏನು ಅನಾಹುತ ಘಟಿಸೀತೋ ಎಂಬ ಆತಂಕದಲ್ಲಿ ಜನತೆ ಇದ್ದಾರೆ.

ಸುತ್ತಮುತ್ತ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ವಿವಿಧೆಡೆ ಇಂದು ನಾಳೆ ಭಾರೀ ಮಳೆ ಸಾಧ್ಯತೆ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ಇಂದು (ಜೂ.6) ಹಾಗೂ ನಾಳೆ ಮತ್ತಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಗುಡುಗು, ಸಿಡಿಲು ಗಾಳಿಯ ಸಾಥ್

ಮಳೆಯ ಜೊತೆಗೆ ಗುಡುಗು, ಸಿಡಿಲು ಇರಲಿದ್ದು, ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ. ಈ ಅವಧಿಯಲ್ಲಿ ಗಾಳಿಯ ವೇಗ ತಾಸಿಗೆ 50 ಕಿಮೀ ಇರಲಿದೆ.

ಪೂರ್ವ ಮುಂಗಾರು ಮಳೆ: ಕರಾವಳಿ ಭಾಗದಲ್ಲಿ ಮೂಡುಬಿದಿರೆ ನಂ.1

ಮಂಗಳೂರು: ಶುಕ್ರವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿ ಅತೀ ಹೆಚ್ಚು (5 ಸೆಂ.ಮೀ) ಮಳೆಯಾಗಿದೆ. ಉಳಿದಂತೆ ಮಂಗಳೂರಿನಲ್ಲಿ 4, ಶಕ್ತಿನಗರ, ಸುಳ್ಯ, ಕೊಡಗು ಜಿಲ್ಲೆಯ ಭಾಗಮಂಡಲ, ವೀರಾಜಪೇಟೆ, ಉಡುಪಿ ಜಿಲ್ಲೆಯ ಕೋಟ, ಕುಂದಾಪುರದಲ್ಲಿ 3 ಸೆಂ.ಮೀಟರ್ ಮಳೆ ಪ್ರಮಾಣ ದಾಖಲಾಗಿದೆ.

ಕಡಲು ಪ್ರಕ್ಷುಬ್ಧ ಸಾಧ್ಯತೆ: ಕಡಲಿಗೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ

ಮಂಗಳೂರು: ಮುಂಗಾರು ಪೂರ್ವ ಮಳೆ ವೇಗ ಪಡೆದಿರುವ ಹಿನ್ನೆಲೆಯಲ್ಲಿ ಇಂದಿನಿಂದ (ಜೂ.6) ಜೂನ್ 9ರ ತನಕ ಕಡಲು ಪ್ರಕ್ಷುಬ್ಧಗೊಳ್ಳುವ ಸಾಧ್ಯತೆ ಇದ್ದು, ಯಾವುದೇ ಕಾರಣಕ್ಕೂ ಮೀನುಗಾರರು ಕಡಲಿಗೆ ತೆರಳದಂತೆ ಕೇಂದ್ರ ಹವಾಮಾನ ಇಲಾಖೆ ಸ್ಪಷ್ಟ ಸೂಚನೆ ನೀಡಿದೆ. ಈ ಅವಧಿಯಲ್ಲಿ ಭಾರೀ ಅಲೆಗಳು ಏಳುವ ಸಾಧ್ಯತೆಗಳಿದ್ದು, ಜೊತೆಗೆ ಗಾಳಿಯ ವೇಗ ತಾಸಿಗೆ 60 ಕಿಮೀ ಇರುವ ಸಾಧ್ಯತೆ ಇದೆ.

ಜಲಕ್ಷಾಮ ಭೀತಿ ದೂರ ಮಾಡುತ್ತಿದೆ ಪಶ್ಚಿಮ ಘಟ್ಟ ತಪ್ಪಲಿಗೆ ಬಿದ್ದ ಸತತ ಮಳೆ

ಮಂಗಳೂರು: ಪಶ್ಚಿಮಘಟ್ಟದ ತಪ್ಪಲು ಪ್ರದೇಶಗಳಾದ ಕಾರ್ಕಳ ಹಾಗೂ ಸುತ್ತಮುತ್ತಲಿನಲ್ಲಿ ಸತತವಾಗಿ ಮಳೆಯಾಗುತ್ತಿದ್ದು, ಉಡುಪಿ ಜಿಲ್ಲೆಯ ನದಿಗಳಲ್ಲಿ ನೀರಿನಮಟ್ಟ ಏರಿಕೆಯಾಗುವ ನಿರೀಕ್ಷೆ ಹುಟ್ಟಿಸಿದೆ. ಕಬ್ಬಿನಾಲೆ, ಮುನಿಯಾಲು, ಮುದ್ರಾಡಿ, ಸಾಣೂರು, ಮಿಯಾರು ಮೊದಲಾದ ಭಾಗದಲ್ಲಿ ಕಳೆದ ಕೆಲವು ದಿನಗಳಿಂದ ಉತ್ತಮವಾಗಿ ಮಳೆಯಾಗುತ್ತಿದೆ.

ಇಲ್ಲಿ ನೆಲ ನೋಡದೆ ಹೆಜ್ಜೆಹಾಕಿದರೆ ಆಸ್ಪತ್ರೆವಾಸ ಗ್ಯಾರಂಟಿ

ಇದು ಯಾರು ಅಗೆದ ಹೊಂಡ ಮಾರ್ರೆ?

ಬಂಟ್ವಾಳ: ಇಲ್ಲಿನ ಬಿ.ಸಿ.ರೋಡಿನ ಸರ್ವಿಸ್ ರಸ್ತೆಯ ಪಕ್ಕದ ಕಾಂಪ್ಲೆಕ್ಸ್ ಮುಂಭಾಗದಲ್ಲಿ ಹೊಂಡವೊಂದನ್ನು ತೋಡಲಾಗಿದ್ದು ಇದು ಈಗ ನಿತ್ಯ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಕಳೆದ ಎರಡು ವಾರದಿಂದ ಇಲ್ಲಿನ ಈ ಹೊಂಡ ಯಥಾ ಸ್ಥಿತಿಯಲ್ಲಿದ್ದು ಅಚ್ಚರಿಯೆಂದರೆ ಇಲ್ಲಿ ಯಾವುದೇ ಕಾಮಗಾರಿ ಕೂಡ ನಡೆಯುತ್ತಿಲ್ಲ, ಬಿ.ಸಿ. ರೋಡಿನ ಮುಖ್ಯವೃತ್ತದಿಂದ ನಗರಕ್ಕೆ ಬರುವ ಸರ್ವಿಸ್ ರಸ್ತೆ ಕಿರಿದಾಗಿದೆ. ಈ ಇಕ್ಕಟ್ಟಿನ ಸ್ಥಳದಲ್ಲಿ ಇದು ಹೊಸ ತಲೆನೋವಾಗಿದೆ.

ಅಗೆದವರು ಯಾರು ಎಂಬುದೇ ಗೊತ್ತಿಲ್ಲ

ಟೆಲಿಕಾಂ ಸಂಸ್ಥೆಯವರು ಅಗೆದಿದ್ದಾರೋ, ಪುರಸಭೆಯವರು ಅಗೆದಿದ್ದಾರೋ ಎನ್ನುವುದು ಯಾರಿಗೂ ಗೊತ್ತಿಲ್ಲ, ಆದರೆ ಹೊಂಡ ತೋಡಿದ ಬಳಿಕ ಯಾವುದೇ ಕಾಮಗಾರಿ ಇಲ್ಲಿ ನಡೆಯುತ್ತಿಲ್ಲ. ಹೊಂಡ ಅಗೆದು ಮಣ್ಣನ್ನು ರಸ್ತೆ ಪಕ್ಕವೇ ಹಾಕಲಾಗಿದೆ.

ಮಳೆ ಬಂದಾಗ ಹೊಂಡದ ತುಂಬಾ ನೀರು ತೊಂಬಿಕೊಂಡು ಸಣ್ಣಮಕ್ಕಳು ಇಲ್ಲಿ ನಡೆದುಕೊಂಡು ಹೋಗು ವಾಗ ಆಕಸ್ಮಿಕವಾಗಿ ಬಿದ್ದರೆ ಅಪಾಯ ತಪ್ಪಿದ್ದಲ್ಲ. »ಪುಟ 6



ಲಕ್ಷಣ ಕಾಣ್ತಿಲ್ಲ

ಈ ಗುಂಡಿ ತೀರಾ ಅಪಾಯಕಾರಿಯಾಗಿದ್ದು ಈ ಹೊಂಡ ಮುಚ್ಚುವ ಪ್ರಯತ್ನವೂ ನಡೆದಿಲ್ಲ, ಅಪಾಯ ಸಂಭವಿಸಿದ ಬಳಿಕವೇ ಹೊಂಡ ಮುಚ್ಚುವ ಲಕ್ಷಣ ಕಾಣುತ್ತಿದೆ.

● ಮನೋಹರ್, ಸ್ಥಳೀಯ ವ್ಯಾಪಾರಿ

ಅಪ್ಪಿತಪ್ಪಿ ಬಿದ್ದರೆ...

ಶುಕ್ರವಾರ ದಿನವಿಡೀ ಸುರಿದ ಮಳೆಗೆ ಈ ಹೊಂಡದ ತುಂಬಾ ನೀರು ತುಂಬಿಕೊಂಡಿದ್ದು ಮೇಲ್ನೋಟಕ್ಕೆ ಆಳ ಕಾಣದಂತಿದೆ. ಪಾದಾಚಾರಿಗಳು, ಮಕ್ಕಳು ನಡೆದಾಡುವಾಗ ಅಪ್ಪಿತಪ್ಪಿ ಹೊಂಡಕ್ಕೆ ಬಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿಯಾಗಿದೆ.

ಲೋನ್ ಕೊಡಿಸುವ ಆಮಿಷ: 5,69,069 ರೂ. ವಂಚನೆ

ಕುಂದಾಪುರ: ಲೋನ್ ಕೊಡುವುದಾಗಿ ನಂಬಿಸಿ ಲಕ್ಷಾಂತರ ರೂ. ಮೋಸ ಮಾಡಿದ ಘಟನೆ ಕುಂದಾಪುರದಲ್ಲಿ ನಡೆದಿದೆ.

ಕುಂದಾಮರದ ಫೆರ್ರಿ ರಸ್ತೆ ನಿವಾಸಿ ಪ್ರಣೀತ (38) ಎಂಬುವರು ಫೇಸ್ ಬುಕ್‌ನಲ್ಲಿ ಲೋನ್ ಕೊಡಿಸುವುದಾಗಿ ಬರೆದಿದ್ದ ಮೇರೆಗೆ ಅದರಲ್ಲಿದ್ದ ಮೊಬೈಲ್ ನಂಬರಿಗೆ ಕರೆ ಮಾಡಿದ್ದರು. ಶ್ರೀನಿವಾಸ್ ರಾವ್ ಎಂದು ಪರಿಚಯ ಮಾಡಿಕೊಂಡು ಲೋನ್ ಕೊಡಿಸಲು ಮೊದಲು ಹಣವನ್ನು ಹಾಕಬೇಕು ಎಂದು ಹೇಳಿದ್ದು, ಒಟ್ಟು 5,69,069 ರೂಪಾಯಿ ಹಣವನ್ನು ಫೋನ್ ಪೇ ಮೂಲಕ ವರ್ಗಾವಣೆ ಮಾಡಿಸಿಕೊಂಡಿದ್ದರು. ನಂತರ ಪ್ರಣೀತ ಅವರಿಗೆ ಯಾವುದೇ ಲೋನ್ ರೂಪದಲ್ಲಿ ನೀಡದೆ ವಂಚಿಸಿದ್ದಾರೆ.

ಗದ್ದೆ ಬೇಸಾಯದ ಸಿದ್ಧತೆಯಲ್ಲಿ ಬಿರುಸಾಗಿದ್ದಾರೆ ಉಡುಪಿ ಜಿಲ್ಲೆಯಲ್ಲಿ ಅನ್ನದಾತರು

ಕೃಷಿ ವಲಯದಲ್ಲಿ ಖುಷಿ ಹೆಚ್ಚಿಸಿದ ಮುಂಗಾರು ಹವೆ!

ಉಡುಪಿ: ಕರಾವಳಿ ಜಿಲ್ಲೆಯ ಜನತೆ ಕಳೆದ ಕೆಲವು ವಾರಗಳಿಂದ ಎದುರುನೋಡುತ್ತಿದ್ದ ನೈಋತ್ಯ ಮುಂಗಾರು ನಿರೀಕ್ಷೆಗಿಂತ ತಡವಾಗಿ ಪ್ರವೇಶಿಸಿದರೂ, ಇದೀಗ ಉಡುಪಿ ಜಿಲ್ಲೆಯಾದ್ಯಂತ ಭಾರೀ ಚುರುಕುಗೊಂಡಿದೆ.

ವಾತಾವರಣದ ಏರುಪೇರಿನಿಂದ ಜೂ.4ರಂದು ಕೇರಳ ಪ್ರವೇಶಿಸಿದ ಮುಂಗಾರು ಮೋಡಗಳು, ಕೆಲವೇ ಗಂಟೆಗಳಲ್ಲಿ ಉತ್ತರದತ್ತ ಚಲಿಸಿ ಜೂ. 5ರ ಮುಂಜಾನೆಯಿಂದಲೇ ಉಡುಪಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಸುರಿಯಲಾರಂಭಿಸಿವೆ. ಈ ಮಳೆ ಸುಡುವ ಬೇಸಿಗೆಯಿಂದ ಕಂಗೆಟ್ಟಿದ್ದ ಜನರಿಗೆ ತಂಪು ನೀಡಿದ್ದು, ಜಿಲ್ಲೆಯಾದ್ಯಂತ ಮುಂಗಾರು ಕೃಷಿ ಚಟುವಟಿಕೆಗೆ ಬಿರುಸಿನ ಚಾಲನೆ ನೀಡಿದೆ.

ಮಳೆಯ ಬಿರುಸಿನಿಂದಾಗಿ ಹಳ್ಳ-ತೋಡುಗಳು



ತುಂಬುತ್ತಿದ್ದು, ಗದ್ದೆಗಳಲ್ಲಿ ಮಳೆ ನೀರು ನಿಲ್ಲಲಾರಂಭಿಸಿದೆ. ಎಲ್ಲೆಡೆಗಳಲ್ಲಿ ಕೃಷಿಗೆ ಪೂರಕ ವಾತಾವರಣ ಸೃಷ್ಟಿಯಾಗುತ್ತಿದ್ದಂತೆ ಈಗ ಹೊಲ ಹಸನು ಮಾಡಿಕೊಂಡ ಅನ್ನದಾತರು ಭತ್ತದ ಬಿತ್ತನೆ ಹಾಗೂ ನೇಜಿ ನೆಡುವ ಕಾರ್ಯದಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಕಳೆದ ವರ್ಷ 13,476 ಹೆಕ್ಟೇರ್ ಪ್ರದೇಶದಲ್ಲಿತ್ತು ಕೃಷಿ

ಕಳೆದ ವರ್ಷ ಜಿಲ್ಲೆಯಲ್ಲಿ ಒಟ್ಟು 13,476 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ನಡೆದಿತ್ತು. ಈ ಬಾರಿ ಜೂನ್ ಆರಂಭದಲ್ಲೇ ಉತ್ತಮ ಮಳೆಯಾಗಿ ಕೃಷಿಗೆ ಪೂರಕ ವಾತಾವರಣ ಇರುವುದು ಅನ್ನದಾತರಿಗೆ ಖುಷಿ ನೀಡಿದೆ.

ಜಿಲ್ಲೆಯ ಪ್ರಮುಖ ಕೃಷಿ ವಲಯಗಳಾದ ಕುಂದಾಪುರ, ಬೈಂದೂರು ತಾಲೂಕುಗಳಲ್ಲಿ ರೈತರು ಉಳುಮೆ ಕಾರ್ಯವನ್ನು ತೀವ್ರಗೊಳಿಸಿದ್ದು, ಮುಂಗಾರು ಬಿತ್ತನೆಗೆ ಭೂಮಿ ಸಜ್ಜುಗೊಳಿಸಿದ್ದಾರೆ. ಉಡುಪಿ ನಗರ ಸೇರಿದಂತೆ ಈ ಭಾಗಗಳಲ್ಲಿ ಮಳೆ ಅಬ್ಬರ ಚೆನ್ನಾಗಿರುವುದರಿಂದ ಕೃಷಿಕರು ಅತ್ಯಂತ ಉತ್ಸಾಹದಿಂದ ಗದ್ದೆಗೆ ಇಳಿದಿದ್ದಾರೆ. ಭತ್ತದ ಪ್ರಮುಖ ತಳಿಯಾದ 'ಎಂಒ-4' ಬೀಜದ ಕೊರತೆಯ ಆತಂಕವಿತ್ತಾದರೂ, ಕೃಷಿ ಇಲಾಖೆಯು ಪರ್ಯಾಯ ವ್ಯವಸ್ಥೆ ಹಾಗೂ ದಾಸ್ತಾನು ಹೊಂದಿರುವ ರೈತರನ್ನು ಗುರುತಿಸಿ ನೆರವು ನೀಡಿದ್ದರಿಂದ ಬಿತ್ತನೆ ಕಾರ್ಯ ಸುಗಮವಾಗಿ ಸಾಗಿದೆ.

ಕಳೆದ ಬಾರಿ ಕಾಪು, ಶಿರ್ವ ಹಾಗೂ ಪಡುಬಿದ್ರಿ ಪ್ರದೇಶಗಳಲ್ಲಿ 2,670 ಹೆಕ್ಟೇರ್ ಭೂಮಿಯಲ್ಲಿ ಕೃಷಿ ನಡೆದಿತ್ತು. ಈ ಬಾರಿಯೂ ಉತ್ತಮ ಮಳೆಯಾಗುತ್ತಿರುವುದರಿಂದ ಶಿರ್ವ, ಬೆಳ್ಳೆ ಮತ್ತು ಕುತ್ಯಾರು ಭಾಗಗಳಲ್ಲಿ ಕೃಷಿ ಕಾರ್ಯಗಳು ಚುರುಕುಗೊಂಡಿದ್ದು, ಈ ವರ್ಷ ಕೃಷಿ ವಿಸ್ತೀರ್ಣ ಇನ್ನಷ್ಟು ಹೆಚ್ಚಾಗುವ ಅಂದಾಜಿದೆ.

ಸುತ್ತಮುತ್ತ

ನಾಳೆ ಸೇವಾಭಾರತಿ ಸಂಸ್ಥೆಯಿಂದ ಮೂಳೆ ತಪಾಸಣಾ ಶಿಬಿರ

ಮಂಗಳೂರು: ಸೇವಾಭಾರತಿ, ಮಂಗಳೂರು ಇದರಸೇವಾ ಪ್ರಕಲ್ಪವಾದ 'ಅನಂತಸೌಖ್ಯ; ಹಾಗೂ ಕೆಎಂಸಿ ಆಸ್ಪತ್ರೆ,ಮಂಗಳೂರು ಆಶ್ರಯದಲ್ಲಿ, ಹಿರಿಯ ನಾಗರಿಕರಿಗಾಗಿ ಜೂ.7ರಂದು, ಮೂಳೆ ಖನಿಜ ಸಾಂದ್ರತೆ ಮತ್ತು ರಕ್ತದೊತ್ತಡ ಹಾಗೂ ಸಕ್ಕರೆ ಪರೀಕ್ಷೆಗಳು ಸಹಿತ ಮೂಳೆ ತಪಾಸಣಾಶಿಬಿರ, ವಿ.ಟಿ. ರಸ್ತೆಯಲ್ಲಿರುವಚೇತನಾ ಬಾಲವಿಕಾಸಕೇಂದ್ರದ ವಠಾರದಲ್ಲಿ ನಡೆಯಲಿದೆ. ಕೆ.ಎಂ.ಸಿ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸಕರಾದ ಡಾ.ಕೆ.ಆರ್.ಕಾಮತ್ ಮತ್ತು ಡಾ.ಮಿಥುನ್ ಪೈ, ಅವರ ತಂಡದವರಿಂದ ಬೆಳಗ್ಗೆ 9ರಿಂದ ಮಧ್ಯಾಹ್ನ 12ರ ತನಕಜರಗಲಿದ್ದು, ಇದು ಉಚಿತವಾಗಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಜೂ.7-14: ಉಜಿರೆಯಲ್ಲಿ ಅಧಿಕ ಮಾಸದ ಗಮಕ ಅಷ್ಟಾಹ

ಬೆಳ್ತಂಗಡಿ: ಗಮಕ ಕಲಾ ಪರಿಷತ್ ಸಹಯೋಗದೊಂದಿಗೆ ಉಜಿರೆ ಶ್ರೀ ಜನಾರ್ದನ ದೇವಸ್ಥಾನದಲ್ಲಿ ಜೂ.7ರಿಂದ 14ರ ವರೆಗೆ ಅಧಿಕ ಮಾಸದ ಪಯುಕ್ತ ಪ್ರತಿದಿನ 6ರಿಂದ 7.30ರ ವರೆಗೆ ಪೌರಾಣಿಕ ಆಖ್ಯಾನದ ಗಮಕ ಅಷ್ಟಾಹ ಕಾರ್ಯಕ್ರಮ ನಡೆಯಲಿದೆ. ಜೂ.7ರಂದು ಸಂಜೆ 5.45 ಕ್ಕೆ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು ಉದ್ಘಾಟಿಸಲಿದ್ದು,ಜಿಲ್ಲಾಧ್ಯಕ್ಷ ಗಮಕ ಕಲಾ ಶ್ರೀ ಮಧೂರು ಮೋಹನ ಕಲ್ಲೂರಾಯ ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಾ.ಪಂ. ಮಾಜಿ ಅಧ್ಯಕ್ಷೆ ಉಷಾಕಿರಣ್ ಕಾರಂತ್ ಮುಖ್ಯ ಅತಿಥಿಗಳಾಗಿರುವರು. ಹರಿನಿಂದಾಸ್ತುತಿ ಕಾವ್ಯಭಾಗವನ್ನು ಉಪನ್ಯಾಸಕಿ ಶ್ರೀವಿದ್ಯಾ ಐತಾಳ್ ವಾಚಿಸಿ, ಮಧೂರು ಮೋಹನ ಕಲ್ಲೂರಾಯ ವ್ಯಾಖ್ಯಾನಿಸಲಿದ್ದಾರೆ. ಜು. 14ರಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಅಧ್ಯಕ್ಷ ರಾಮಕೃಷ್ಣ ಭಟ್ ಉಜಿರೆ, ಕಾರ್ಯದರ್ಶಿ ಮೇಧಾ ಅಶೋಕ್ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ .

ಕೆಎಫ್‌ಡಿಸಿ ಕಾರ್ಮಿಕರಿಗೆ ಅರಿಯರ್ಸ್, ಇಎಸ್‌ಐ

ಸುಳ್ಯ: ಕೆಎಫ್ ಡಿಸಿ ಕಾರ್ಮಿಕರಿಗೆ ಅರಿಯರ್ಸ್ ಹಿಂಬಾಕಿ ಮತ್ತು ಇಎಸ್‌ಐ ಪಾವತಿಗೆ ಸಂಬಂಧಿಸಿ ಈ ಹಿಂದಿನ ಅರಣ್ಯ ಸಚಿವ ಈಶ್ವರ್ ಖಂಡ್ರೆ ಆದೇಶದಂತೆ ಅರಿಯರ್ಸ್ ಪಾವತಿ ಹಾಗೂ ಇಎಸ್‌ಐ ನೀಡಲು ಆದೇಶವಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ತಿಳಿಸಿದ್ದಾರೆ. ಅವರು ಶುಕ್ರವಾರ ಸುಳ್ಯ ಪ್ರೆಸ್ ಕ್ಲಬ್ ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಈ ಹಿಂದೆ ಅಧಿಕಾರಿಗಳ ಭರವಸೆಯ ಮೇರೆಗೆ ಕೆಲ ಸಂಘಟನೆಗಳು ಪ್ರತಿಭಟನೆ ಹಿಂಪಡೆದಿದ್ದು, ಅದರಂತೆ ಇದೀಗ ಕಾರ್ಮಿಕರ ಆಶಯದಂತೆ ಅರಿಯರ್ಸ್ ಹಾಗೂ ಇಎಸ್‌ಐ ನೀಡಲು ಸರ್ಕಾರ ಅನುಮತಿ ನೀಡಲಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಮಿಕ ಸಂಘಟನೆಯ ಪ್ರಮುಖರಾದ ಭವಾನಿಶಂಕರ್ ಕಲ್ಮಡ್ಕ, ಶಿವಕುಮಾರ್ ಕಂದಡ್ಕ,ಮಂಜುನಾಥ ಕಂದಡ್ಕ,ರಕ್ಷಿತ್ ಗೂನಡ್ಕ,ಸರವಣ ಮೇದಿನಡ್ಕ,ಚಂದ್ರನ್ ಕೊಟೇಲು ಉಪಸ್ಥಿತರಿದ್ದರು.

ಜೂ.9: ಪಿ.ಪಿ.ಗೋಮತಿ ಸ್ಮಾರಕ ಉಪನ್ಯಾಸ

ಮಂಗಳೂರು: ಪಿ.ಪಿ.ಗೋಮತಿ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್, ಮಂಗಳೂರು ವಿವಿ, ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಇದರ ಆಶ್ರಯದಲ್ಲಿ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಜೂ.9ರಂದು ಪೂರ್ವಾಹ್ನ 10.30ಕ್ಕೆ ಪಿ.ಪಿ.ಗೋಮತಿ ಸ್ಮಾರಕ ವಾರ್ಷಿಕ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು, ಬರಹಗಾರ್ತಿ ಮತ್ತು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತ ದೀಪಾ ಭಾಸ್ತಿ 'ಚಿಂತನೆಯೇ ಭಿನ್ನಮತವಾದಾಗ: ಭಾಷೆ ಮತ್ತು ಜಗತ್ತಿನ ಕುರಿತು ಕೆಲವು ಆಲೋಚನೆಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಪ್ರಮುಖರಾದ ಡಾ.ಬಿ.ಶ್ರೀನಿವಾಸ ಕಕ್ಕಿಲ್ಲಾಯ, ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್, ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಪ್ರಮುಖರಾದ ಬಂಬೀನ ಚಿನ್ನಮ್ಮ, ಡಾ.ಧನಂಜಯ ಕುಂಬ್ಳೆ, ಕಲ್ಲೂರು ನಾಗೇಶ್ ಇದ್ದರು.

ಕೈಕೊಟ್ಟ ಮುಂಗಾರು ಪೂರ್ವ ಮಳೆ, ಮುಂಗಾರು ಮಳೆಯೂ ವಿಳಂಬ | ನೇಜಿ ತಯಾರಿ ಇನ್ನೂ ಆಗಿಲ್ಲ

ಏಣೇಲು ಭತ್ತ ಕೃಷಿ ಕಾರ್ಯ ಆರಂಭಕ್ಕೆ ರೈತರ ಮೀನಮೇಷ

ಪುತ್ತೂರು: ಕಳೆದ ಮೂರು ವರ್ಷಗಳಿಂದ ಭತ್ತ ಕೃಷಿ ಆರಂಭಕ್ಕೆ ಹೆಚ್ಚು ತೊಂದರೆ ನೀಡದ ವರುಣ ಈ ಬಾರಿ ಮತ್ತೆ ಸಮಸ್ಯೆ ತಂದೊಡ್ಡಿದ್ದಾನೆ. ಮೇ ತಿಂಗಳಲ್ಲಿ ಸಾಕಷ್ಟು ಮಳೆ ಸುರಿಯುತ್ತಿದ್ದ ಕಾರಣದಿಂದ ಭತ್ತದ ಏಣೇಲು ಬೆಳೆಗೆ ಮುನ್ನುಡಿ ಬರೆಯಲು ವಿಘ್ನ ಇರಲಿಲ್ಲ, ಆದರೆ ಈ ಬಾರಿ ಮುಂಗಾರು ಪೂರ್ವ ಮಳೆ ಕೈಕೊಟ್ಟಿದೆ. ಮುಂಗಾರು ಪ್ರವೇಶವೂ ವಿಳಂಬ ವಾಗಿದೆ. ಪರಿಣಾಮ ಏಣೇಲು ಭತ್ತ ಬೆಳೆಯಲು ರೈತ ವರ್ಗ ಯೋಚನೆ ಮಾಡುವಂತೆ ಮಾಡಿದೆ.



ಮೇ ತಿಂಗಳಲ್ಲಿ ಸುರಿಯಬೇಕಾಗಿದ್ದ ಮುಂಗಾರು ಪೂರ್ವ ಮಳೆಗೆ ಕಾಯುತ್ತಿದ್ದ ರೈತವರ್ಗ ವರುಣನ ಅವಕೃಪೆಯಿಂದ ಕಂಗಾಲಾಗಿದೆ. ಸಾಮಾನ್ಯವಾಗಿ ಮೇ ಅಂತ್ಯದಲ್ಲಿ ಸಾಕಷ್ಟು ಮಳೆ ಸುರಿದು ಭತ್ತದ ಗದ್ದೆಗಳು ನೀರಿನಿಂದ ತುಂಬಿರಬೇಕಿತ್ತು. ಆದರೆ ಈಗ ಗದ್ದೆಯಲ್ಲಿ ಹನಿ ನೀರು ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಏಣೇಲು ಬೆಳೆಯ ಆರಂಭ ಮತ್ತಷ್ಟು ತಡವಾಗಲಿದೆ. ಜೂನ್ ಆರಂಭದಲ್ಲಿ ದಿನಗಳಲ್ಲಿ ನಾಟಿ ಮಾಡಬೇಕಿದ್ದ ಭತ್ತದ ಬೆಳೆಗೆ ಇನ್ನೂ ನೇಜಿ ತಯಾರಿಗೆ ರೈತ ಇಳಿದಿಲ್ಲ, ಕಾರಣ ಮುಂಗಾರುಪೂರ್ವ ಮಳೆ ನಿರೀಕ್ಷಿತ ರೀತಿಯಲ್ಲಿ ಇಲ್ಲ.

ಸುಗ್ಗಿಯ ಬೆಳೆಗೂ ಪರಿಣಾಮ

ರೈತನ ಭತ್ತದ ಗದ್ದೆಗಳಲ್ಲಿ ಕಳೆ ಗಿಡಗಳು ಬೆಳೆದು ನಿಂತಿವೆ. ಗದ್ದೆಯನ್ನು ಹದ ಮಾಡುವ ಕೆಲಸಕ್ಕೂ ಮಳೆಯ ಕೊರತೆಯಿಂದ ಸಾಧ್ಯವಾಗಿಲ್ಲ, ಮುಂಗಾರು ಕೇರಳ ಪ್ರವೇಶವೇ ತಡವಾಗಿದೆ. ಮಳೆ ತಡವಾದಷ್ಟೂ ರೈತ ಬೆಳೆಯುವ ಬೆಳೆಯೂ ತಡವಾಗುತ್ತಿದೆ. ಇದರಿಂದ ಮುಂದೆ ಸುಗ್ಗಿ ಬೆಳೆಗೂ ಸಮಸ್ಯೆ ಉಂಟಾಗುತ್ತದೆ. ರೈತ ವರ್ಗ ಇಂದಿಗೂ ಮಳೆಯಾಧಾರಿತ ಬೆಳೆಯನ್ನು ನಂಬಿಕೊಂಡಿದ್ದು, ಅನಿಯಮಿತ ಮಳೆ ರೈತವರ್ಗಕ್ಕೆ ಸದಾ ಸಂಕಷ್ಟವನ್ನೇ ಉಂಟುಮಾಡುತ್ತಿದೆ. ಮೇ ತಿಂಗಳಲ್ಲಿ ಮುಂಗಾರುಪೂರ್ವ ಮಳೆ ಸಾಕಷ್ಟು ಸುರಿದರೆ ರೈತವರ್ಗ ನೇಜಿ ತಯಾರಿಯನ್ನು ಆರಂಭಿಸಿ ಗದ್ದೆ ಹದ ಮಾಡುವ ಕೆಲಸಕ್ಕೂ ಮುಂದಾಗುತ್ತಿತ್ತು. ಜೂನ್ ಮೊದಲ ಅಥವಾ 2ನೇ ವಾರದಲ್ಲಿ ನೇಜಿ ನಾಟಿ ಮಾಡುತ್ತಿದ್ದರು. ಸಾಧಾರಣವಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿಗೆ ಬೆಳೆಯ ಕ್ಯೊಲು ಆಗಿ ಮುಂದೆ ಸುಗ್ಗಿ ಬೆಳೆ ತಯಾರಿಯೂ ನಡೆಯುತ್ತಿತ್ತು. ವಾಯುಭಾರ ಕುಸಿತದ ಪರಿಣಾಮ ಒಂದಷ್ಟು ಮಳೆ ಬಂದಿದ್ದರೂ ಭತ್ತದ ಬೇಸಾಯಕ್ಕೆ ಪ್ರಯೋಜನವಾಗಿಲ್ಲ.

> **ಬೇಕಿದೆ ಕೇರಳ ಮಾದರಿ ನೆರವು**
>
> **ಭತ್ತದ ಕೃಷಿಗೆ ಅತ್ಯಂತ ಪೂರಕ ವ್ಯವಸ್ಥೆ, ಪ್ರೋತ್ಸಾಹವನ್ನು ಕೇರಳ ಸರ್ಕಾರ ಮಾಡುತ್ತಿದೆ. ಅದೇ ರೀತಿಯ ವ್ಯವಸ್ಥೆಗಳು ಕರ್ನಾಟಕದಲ್ಲಿ ಅನುಷ್ಠಾನಗೊಂಡರೆ ಮಾತ್ರ ಮುಂದೆ ಭತ್ತದ ಕೃಷಿಯನ್ನು ಉಳಿಸಿಕೊಳ್ಳಲು ಸಾಧ್ಯವಿದೆ. ಹಾಗಾಗಿ ರಾಜ್ಯ ಸರಕಾರ ಕೃಷಿ ಇಲಾಖೆಯ ಮೂಲಕ ಕೇರಳ ಮಾದರಿಯಲ್ಲಿ ರೈತರ ಸಹಾಯಕ್ಕೆ ಮುಂದಾಗಬೇಕು.**
>
> -ಧನಂಜಯ ಗೌಡ ಪಿ. ಭತ್ತ ಕೃಷಿಕರು

ಯಂತ್ರ ಆಧಾರಿತ

ವರ್ಷದಿಂದ ವರ್ಷಕ್ಕೆ ಭತ್ತದ ಕೃಷಿ ರೈತನ ಪಾಲಿಗೆ ಕಷ್ಟ ಸಾಧ್ಯವಾಗಿ ಪರಿಣಮಿಸುತ್ತಿದೆ. ರೈತರು ಅಡಿಕೆ, ತೆಂಗು ಬೆಳೆಗಳನ್ನು ಆಳವಡಿಸಿಕೊಂಡಿದ್ದಾರೆ. ಆದರೆ ಒಂದಷ್ಟು ರೈತರು ಏನೇ ಕಷ್ಟ ಬರಲಿ ನಮ್ಮ ಗದ್ದೆಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಈಗ ಭತ್ತದ ಬೆಳೆ ಲಾಭದಾಯಕವಲ್ಲ ಎಂಬ ಅರಿವಿದ್ದರೂ ತಮಗೆ ಬೇಕಾದಷ್ಟು ಅಕ್ಕಿಯನ್ನು ತಾವೇ ಬೆಳೆಸಿಕೊಳ್ಳಬೇಕು ಎಂಬ ಸಾಂಪ್ರದಾಯಿಕ ಮನಸ್ಸು ಇವರದ್ದಾಗಿದೆ. ಹಾಗಾಗಿ ಹಳೆಯ ಪದ್ಧತಿಯನ್ನು ಬಿಟ್ಟು ಯಾಂತ್ರೀಕೃತ ವ್ಯವಸ್ಥೆಯಲ್ಲಿ ಭತ್ತದ ಬೆಳೆಗಳನ್ನು ಉಳಿಸಿಕೊಳ್ಳುವ ಕಾಯಕ ನಡೆಸುತ್ತಿದ್ದಾರೆ. ವಾಣಿಜ್ಯ ಬೆಳೆಗಳ ಆಕರ್ಷಣೆಯ ನಡುವೆಯೂ ಭತ್ತದ ಕೃಷಿಕರಾಗಿ ಉಳಿದುಕೊಂಡಿದ್ದಾರೆ. ಕೂಲಿಯಾಳುಗಳ ಕೊರತೆ ಇದ್ದರೂ ಯಂತ್ರಗಳನ್ನು ನಂಬಿಕೊಂಡು ಭತ್ತದ ಬೆಳೆಗೆ ಮುನ್ನುಡಿ ಬರೆಯುವ ಕೆಲಸ ಮಾಡುತ್ತಿದ್ದಾರೆ. ಭತ್ತದ ಗದ್ದೆಗಳನ್ನು ಹದ ಮಾಡುವ ಉಳುಮೆಯಿಂದ ಹಿಡಿದು ನೇಜಿನಾಟಿ, ಕ್ಯೊಲು, ಭತ್ತ ಬೇರ್ಪಡಿಸುವಿಕೆ ಎಲ್ಲದಕ್ಕೂ ಈಗ ಯಂತ್ರ ಆಧಾರಿತ. ಆದರೆ ಈ ಸ್ವಾವಲಂಬಿ ರೈತನ ಪಾಲಿಗೆ ತೊಂದರೆ ಕೊಡುತ್ತಿರುವುದು ಮಾತ್ರ ಮಳೆರಾಯ.

ಕ್ಷಯ ಮುಕ್ತ ಭಾರತ ಅಭಿಯಾನಕ್ಕೆ ಅಳಿಲ ಸೇವೆ ಶ್ಲಾಘನೀಯ: ಸಚ್ಚಿನ್



ಬಂಟ್ವಾಳ: ಪ್ರತಿ ತಿಂಗಳು ಕ್ಷಯ ರೋಗಿಗಳಿಗೆ ಪೌಷ್ಟಿಕಾಹಾರ ನೀಡುವ ಸರಕಾರ ಮಾಡಬೇಕಾದ ಕಾರ್ಯವನ್ನು ಖಾಸಗಿ ಸಂಸ್ಥೆಯಾದಸೇವಾಂಜಲಿಪ್ರತಿಷ್ಠಾನಅತ್ಯಂತ ಮುತುವರ್ಜಿ ವಹಿಸಿ ಮಾಡುತ್ತಿರುವುದು ಅಭಿನಂದನೀಯ ಎಂದು ಬಂಟ್ವಾಳ ತಾ.ಪಂ. ಕಾರ್ಯನಿರ್ವಾಹಣಾಧಿಕಾರಿ ಸಚಿನ್ ಕುಮಾರ್ ಹೇಳಿದರು.

ಕೇಂದ್ರ ಸರ್ಕಾರದ ನಿಕ್ಷಯ್ ಮಿತ್ರ ಯೋಜನೆಯಡಿ ಫರಂಗಿಪೇಟೆಯ ಸೇವಾಂಜಲಿ ಪ್ರತಿಷ್ಠಾನದ ಆಶ್ರಯದಲ್ಲಿ ನಡೆದ ಕ್ಷಯ ರೋಗಿಗಳಿಗೆ ಆಹಾರ, ದವಸಧಾನ್ಯ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಲವಾರು ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿರುವ ಸೇವಾಂಜಲಿ ಪ್ರತಿಷ್ಠಾನ ಪ್ರಧಾನಿಯವರ ಕ್ಷಯ ಮುಕ್ತ ಭಾರತ ಅಭಿಯಾನಕ್ಕೆ ಅಳಿಲ ಸೇವೆ ನೀಡುತ್ತಿದೆ. ಕ್ಷಯ ರೋಗಿಗಳು ಔಷಧಿ ಜೊತೆಗೆ ಪೌಷ್ಟಿಕಾಂಶದ ಆಹಾರ ಸೇವಿಸಿ ಕ್ಷಯ ಮುಕ್ತ ಸಮಾಜ ನಿರ್ಮಾಣ ಕಾರ್ಯ ದಲ್ಲಿ ಕೈ ಜೋಡಿಸುವಂತೆ ವಿನಂತಿಸಿದರು.

ಸೇವಾಂಜಲಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚೇತನ್ ಆರೋಗ್ಯ ಮಾಹಿತಿ ನೀಡಿದರು. ಉದ್ಯಮಿ ಭುವನೇಶ್ ಪಚ್ಚಿನಡ್ಕ ಮುಖ್ಯ ಅತಿಥಿಯಾಗಿದ್ದರು. ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಧಾನಿಯವರ ಆಶಯಕ್ಕೆ ಪೂರಕವಾಗಿ ಸೇವಾಂಜಲಿ ಪ್ರತಿಷ್ಠಾನ 45 ತಿಂಗಳಿನಿಂದ ನಿರಂತರವಾಗಿ ಈ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ಈವರೆಗೆ 230 ಮಂದಿಗೆ ಒಟ್ಟು 15 ಲಕ್ಷ ರೂ. ಖರ್ಚು ಮಾಡಿದೆ ಎಂದರು.

ಸೇವಾಂಜಲಿ ಟ್ರಸ್ಟಿ ದೇವದಾಸ್ ಶೆಟ್ಟಿ ಕೊಡ್ಮಾಣ್ ಕಾರ್ಯಕ್ರಮ ನಿರೂಪಿಸಿದರು.

ಶಕ್ತಿ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ

ಮಂಗಳೂರು: ಶಕ್ತಿನಗರದಲ್ಲಿರುವ ಶಕ್ತಿ ಪಿಯುಕಾಲೇಜಿನರೇಷ್ಮಾಮೆಮೋರಿಯಲ್ ಸಭಾಂಗಣದಲ್ಲಿ 2026-27ನೇ ಶೈಕ್ಷಣಿಕ ವರ್ಷ ಆರಂಭದ ಪೂರ್ವಭಾವಿಯಾಗಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮಾಹಿತಿ ಕಾರ್ಯಾಗಾರ ನಡೆಯಿತು.



ಶಕ್ತಿ ವಿದ್ಯಾ ಸಂಸ್ಥೆಯ ಸಂಸ್ಥೆಯ ಸಂಸ್ಥಾಪಕ ಡಾ. ಕೆ.ಸಿ. ನ್ಯಾಕ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಸಂಸ್ಥೆಯು 8 ವರ್ಷಗಳನ್ನು ಪೂರೈಸಿ 9ನೇ ವರ್ಷದೆಡೆಗೆ ಸಾಗುತ್ತಿದೆ. ಇದುವರೆಗಿನ ಸಂಸ್ಥೆಯ ಪಯಣದಲ್ಲಿ ಉತ್ತಮವಾದ ಫಲಿತಾಂಶವನ್ನು ಸಂಸ್ಥೆ ನೀಡುತ್ತಾ ಬಂದಿದೆ. ಇದರ ಪ್ರತಿಫಲವಾಗಿ ಸಂಸ್ಥೆಯ ವಿದ್ಯಾರ್ಥಿಗಳ ದಾಖಲಾತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಸಂತೋಷದ ವಿಷಯ. ಮುಂದಿನ ದಶಮಾನೋತ್ಸವದ ಸಂದರ್ಭದಲ್ಲಿ ಸಂಸ್ಥೆ ಇನ್ನಷ್ಟು ದಾಖಲೆಯ ಫಲಿತಾಂಶಗಳನ್ನು ಗಳಿಸುವ ನೆಲೆಯಲ್ಲಿ ಅನೇಕ ಹೊಸ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿಕೊಂಡಿದೆ. ಆದ್ದರಿಂದ ಹೊಸ ನಿಯಮಗಳಿಗೆ ವಿದ್ಯಾರ್ಥಿಗಳು ಮತ್ತು ಪೋಷಕರು ಪೂರಕ ವಾಗಿ ಸಹಕರಿಸಬೇಕು ಎಂದು ಹೇಳಿದರು.

ಪ್ರಾಂಶುಪಾಲ ಪ್ರದೀಪ್‌ಕುಮಾರ್ ಶೆಟ್ಟಿ ಮಾತನಾಡಿ, ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಮತ್ತು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಶಿಕ್ಷಣ ಸಂಸ್ಥೆ ಮತ್ತು ಪೋಷಕರುಜೊತೆಯಾಗಿ ಕೈ ಸೇರಿಸಬೇಕು. ಕೇವಲ ಶಿಕ್ಷಣ ಸಂಸ್ಥೆಯಿಂದ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಕಟ್ಟುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದಕಾಲೇಜಿನ ನಿಯಮ ಮತ್ತು ವ್ಯವಸ್ಥೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು ಪೋಷಕರಜವಾಬ್ದಾರಿ ಆಗಿದೆ. ಎರಡು ವರ್ಷಗಳ ವಿದ್ಯಾಭ್ಯಾಸದಲ್ಲಿ ಅನಗತ್ಯ ಚಟುವಟಿಕೆಗಳನ್ನು ತೊರೆದು ವಿದ್ಯಾಭ್ಯಾಸ ಮಾಡಿದಾಗ ಮಾತ್ರ ಒಳ್ಳೆಯ ಫಲಿತಾಂಶ ಪಡೆಯಲು ಸಾಧ್ಯ. ಆ ಮೂಲಕ ಅಪೇಕ್ಷಿತ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಪಡೆಯಲು ಸಾಧ್ಯ ಎಂದರು.

ಶೈಕ್ಷಣಿಕ ಸಂಯೋಜಕ ಮಂಜುನಾಥ ಚಾವಡಿ ಸ್ಪರ್ಧಾತ್ಮಕ ಪರೀಕ್ಷೆಗಳ ಯೋಜನೆಯನ್ನು ವಿವರವಾಗಿ ಹೇಳಿದರು. ಉಪನ್ಯಾಸಕ ಸುನೀಲ್ ಪಲ್ಲಜಲು ನಿರ್ವಹಿಸಿದರು. ಬಳಿಕ ವಿದ್ಯಾರ್ಥಿಗಳ ಪೋಷಕರು ಮತ್ತು ಉಪನ್ಯಾಸಕರ ಸಂವಾದ ಕಾರ್ಯಕ್ರಮನಡೆಯಿತು.

ಪುತ್ತೂರು ಎವಿಜಿ ಆಂಗ್ಲ ಮಾಧ್ಯಮ ಶಾಲೆ 'ಆರಂಭ-2026'



ಪುತ್ತೂರು: ಜಗತ್ತು ವೇಗವಾಗಿ ಸಾಗುತ್ತಿದ್ದು, ಹೊಸ ಕಲ್ಪನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ಅತಿ ಅಗತ್ಯವಾಗಿದೆ. ಸಂಸ್ಕೃತಿ, ಸಂಸ್ಕಾರವನ್ನೊಳಗೊಂಡ ಶಿಕ್ಷಣ ಇಂದಿನ ಅಗತ್ಯವಾಗಿದೆ. ವ್ಯಕ್ತಿತ್ವ ವಿಕಸನ, ಶಕ್ತಿಯ ಸಂಚಲನದಿಂದ ಮಾನವ ಸಂಪನ್ಮೂಲ ಕ್ರೋಢೀಕರಣವಾಗಬೇಕು. ಸ್ವಾಭಿಮಾನಿ, ಸಮೃದ್ಧ, ಸಶಕ್ತ ಭಾರತ ನಿರ್ಮಾಣಕ್ಕೆ ಮಕ್ಕಳಿಗೆ ಸಿಗುವ ಉತ್ತಮ ಶಿಕ್ಷಣ ಅಡಿಪಾಯ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದರು.

ಅವರು ಬನ್ನೂರು ಕೃಷ್ಣನಗರದ ಅಲುಂಬುಡ ಎವಿಜಿ ಆಂಗ್ಲ ಮಾಧ್ಯಮ ಶಾಲೆಯ 2026-27ನೇ ಸಾಲಿನ ಶೈಕ್ಷಣಿಕ ವರ್ಷಾರಂಭದ 'ಆರಂಭ-2026' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಗುಲಾಮಗಿರಿ ಮನೋಭಾವ ಹೊರಗೆ ಬರುವುದಕ್ಕಾಗಿಯೇ ಕೇಂದ್ರ ಸರಕಾರ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ ಎಂದು ಡಿ.ವಿ. ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ವೆಂಕಟ್ರಮಣ ಗೌಡ ಕಳುವಾಜೆ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳಿಗೆ ಪಠ್ಯದ ಜತೆಗೆ ಸಂಸ್ಕಾರಯುತಶಿಕ್ಷಣ, ರಾಷ್ಟ್ರಮೊದಲು ಎಂಬ ಮೌಲ್ಯದ ಬೋಧನೆಯನ್ನು ನೀಡಲಾಗುತ್ತಿದೆ. ಅಂಕಕ್ಕಿಂತಲೂ ಸಂಸ್ಕೃತಿ, ಸಂಸ್ಕಾರಯುತ ವ್ಯಕ್ತಿಯನ್ನು ರಾಷ್ಟ್ರಕ್ಕೆ ಸಮರ್ಪಿಸುವ ಕಾರ್ಯವನ್ನು ಸಂಸ್ಥೆ ಮಾಡಲಿದೆ ಎಂದರು.

ಸಂಸ್ಥೆಯ ಸಂಚಾಲಕ ಎ.ವಿ. ನಾರಾಯಣ ಪ್ರಸ್ತಾವನೆಗೈದರು. ಆಡಳಿತ ಮಂಡಳಿ ಉಪಾಧ್ಯಕ್ಷ ಉಮೇಶ್ ಮಲುವೇಲ್, ಆಡಳಿತಾಧಿಕಾರಿ ಗುಡ್ಡಪ್ಪಗೌಡ ಬಲ್ಯ, ಪಿಟಿಎ ಅಧ್ಯಕ್ಷೆ ಸೌಮ್ಯಶ್ರೀ ಹೆಗ್ಡೆ ವೇದಿಕೆಯಲ್ಲಿದ್ದರು. ವಿದ್ಯಾರ್ಥಿ ವಿಖ್ಯಾತ್ ಸಂವಿಧಾನ ಪೀಠಿಕೆ ವಾಚಿಸಿದರು. ಮುಖ್ಯಶಿಕ್ಷಕ ಅಮರನಾಥ ಬಿ.ಪಿ. ವಂದಿಸಿದರು. ಬೆಳಗ್ಗೆ ಗಣಹೋಮ, ಸತ್ಯನಾರಾಯಣ ಪೂಜೆ ನಡೆಯಿತು.

ಸಂಸ್ಕೃತಿ, ಜಾನಪದದಲ್ಲಿ ಕನ್ನಡ, ತಮಿಳು, ಮಲಯಾಳಕ್ಕೆ ತುಳು ಸಮಾನ: ಡಾ.ಬೆಳ್ಳೂರು



ಕೊಣಾಜೆ: ಸಂಸ್ಕೃತಿ ಮತ್ತು ಜಾನಪದದ ಶ್ರೀಮಂತಿಕೆಯಲ್ಲಿ ತುಳು ಕನ್ನಡ, ತಮಿಳು, ಮಲಯಾಳಕ್ಕೆ ಸರಿಸಮಾನದ ಕೆಲವು ಕಡೆ ಸ್ವಲ್ಪ ಹೆಚ್ಚೇ ತೂಕವುಳ್ಳದ್ದೆಂದು ತೋರುತ್ತದೆ. ಲಿಪಿ ಮತ್ತು ಲಿಖಿತ ಸಾಹಿತ್ಯ ಪರಂಪರೆಯಲ್ಲಿ ಮಧ್ಯಕಾಲದ ಕೊಂಡಿ ಇಲ್ಲದಿರುವುದರಿಂದ ಸ್ವಲ್ಪ ಗೊಂದಲಗಳಿವೆ ನಿಜ. ಆದರೆ ತುಳುವರು ಈ ಬಗೆಗೆ ಕೀಳರಿಮೆ ಪಡಬೇಕಾಗಿಲ್ಲ ಎಂದು ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ರಾಧಾಕೃಷ್ಣ ಬೆಳ್ಳೂರು ಹೇಳಿದರು.

ಅವರು ಶುಕ್ರವಾರ ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀಮಂಜುನಾಥೇಶ್ವರ ತುಳುಪೀಠದ ವತಿಯಿಂದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ಬಿಎ ವಿವೇಕ ರೈ ವಿಚಾರ ವೇದಿಕೆಯಲ್ಲಿ ಪ್ರಚಾರೋಪನ್ಯಾಸ ಮಾಲಿಕೆಯಡಿ 'ತುಳು ಸಾಹಿತ್ಯ ಪರಂಪರೆ' ಕುರಿತು ಉಪನ್ಯಾಸ ನೀಡಿದರು.

ಕನ್ನಡದಲ್ಲಿ ಭಾಷಿಕ ಅವಸ್ಥಾಂತರಗಳನ್ನು ಅರ್ಥ ಮಾಡಿಕೊಳ್ಳಲು ಪ್ರಾಚೀನ, ಮಧ್ಯಕಾಲೀನ, ಆಧುನಿಕ ರೂಪಗಳಿವೆ. ಮಧ್ಯಕಾಲೀನ ತುಳು ಸಾಹಿತ್ಯ ದೊರಕದಿರುವುದು ಒಂದು ಕೊರತೆ. ಆದರೆ 13ನೇ ಶತಮಾನದಿಂದಲೇ ತುಳುವಿನ ಲಿಖಿತ ಸಾಹಿತ್ಯ ಪರಂಪರೆಯಿದೆ. ಅದರ ಅರ್ಥವತ್ತಾದ ಓದು ಸಾಧ್ಯವಾಗಲಿ ಎಂದರು.

ತುಳು ಪೀಠದ ಸಂಯೋಜಕ ಡಾ. ಧನಂಜಯ ಕುಂಬ್ಳೆ ಮಾತನಾಡಿ, ತುಳು ಲಿಪಿ ಮತ್ತು ಪ್ರಾಚೀನ ಕೃತಿಗಳ ಕುರಿತು ಸಂಶೋಧನೆ ನಡೆದು ಮೂರು ದಶಕಗಳು ಕಳೆದರೂ ಇನ್ನೂ ತುಳುವಿಗೆ ಲಿಪಿಯಿಲ್ಲ ಎನ್ನುತ್ತಾರೆ. ಈ ಅವಜ್ಞೆ ಸಲ್ಲದು ಎಂದರು. ಡಾ.ಯಶುಕುಮಾರ್ ಇದ್ದರು. ಅಧ್ಯಕ್ಷತೆ ವಹಿಸಿದ್ದ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಪ್ರೊ.ನಾಗಪ್ಪ ಗೌಡ ಮಾತನಾಡಿದರು. ತುಳುಪೀಠದ ಪ್ರಸಾದ್ ಅಂಚನ್ ನಿರೂಪಿಸಿದರು.

ಮೂಲ್ಕಿ ನಗರದಲ್ಲಿ ಜೂ.15ರಿಂದ ನಾಲ್ಕು ವಿಧದಲ್ಲಿ ತ್ಯಾಜ್ಯ ಸಂಗ್ರಹ



ಮುಲ್ಕಿ: ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮೂಲ್ಕಿ ನಗರದಲ್ಲಿ ಜೂ.15ರಿಂದತ್ಯಾಜ್ಯಗಳನ್ನುನಾಲ್ಕುವಿಧದಲ್ಲಿ ವಿಂಗಡಿಸಿ ಸಂಗ್ರಹಿಸಲು ನಗರಾಡಳಿತ ಕಾರ್ಯಸೂಚಿ ಹಮ್ಮಿಕೊಂಡಿದೆ ಎಂದು ನಪಂ ಮುಖ್ಯಾಧಿಕಾರಿ ಮಧುಕರ್ ಕೆ. ತಿಳಿಸಿದ್ದಾರೆ.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೂಲ್ಕಿ ನಪಂ ಸಮುದಾಯ ಭವನದಲ್ಲಿ ಮೂಲ್ಕಿ ನಪಂ, ಎಚ್‌ಡಿಬಿ ಫೈನಾನ್ಶಿಯಲ್ ಸರ್ವಿಸ್, ಸ್ವಚ್ಛ ಸರ್ವೇಕ್ಷಣ್, ಸಾಹಸ್ ಎನ್‌ಜಿಒ ಮತ್ತು ಮೂಲ್ಕಿ ಸರಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ಹಮ್ಮಿಕೊಂಡ ಸ್ವಚ್ಛತಾ ಅಭಿಯಾನ, ಗಿಡ ನೆಡುವ ಅಭಿಯಾನ ಮತ್ತು ಪ್ಲಾಗಿಂಗ್ ಕಾರ್ಯಕ್ರಮದಲ್ಲಿವಿದ್ಯಾರ್ಥಿಗಳನ್ನುದ್ದೇಶಿಸಿ ಅವರು ಮಾತನಾಡಿದರು.

ಇದೇ ವೇಳೆ ದಿನವೊಂದಕ್ಕೆ 100 ಕೆಜಿಗಿಂತ ಹೆಚ್ಚು ತ್ಯಾಜ್ಯ ನೀಡುವವರು ಹಸಿಕಸಗಳನ್ನು ತಾವೇ ಸಂಸ್ಕರಿಸಬೇಕು. ನಪಂಗೆ ನೀಡಿದಲ್ಲಿ ಹೆಚ್ಚುವರಿ ಶುಲ್ಕ ವಿಧಿಸಲಾಗುವುದು. ನಗರದಲ್ಲಿ ಇಂತಹ 20 ಬೃಹತ್ ತ್ಯಾಜ್ಯ ಉತ್ಪಾದಕರನ್ನು ಗುರುತಿಸಲಾಗಿದ್ದು ಈ ಬಗ್ಗೆ ಪ್ರತಿಯೊಬ್ಬರಿಗೂ ಸೂಕ್ತ ಮಾಹಿತಿ ನೀಡಲಾಗುವುದು. ಜೂ. 15ರಿಂದ ಈ ನಿಯಮ ಜಾರಿಯಾಗಲಿದೆ ಎಂದರು.

ಮುಖ್ಯ ಅತಿಥಿ ಮೂಲ್ಕಿ ಸರಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಾ.ವಾಸುದೇವ ಬೆಳ್ಳೆ ಮಾತನಾಡಿದರು.

ನಪಂ ಮಾಜಿ ಸದಸ್ಯ ಪುತ್ತುಬಾವ, ಎಚ್‌ಡಿಇಬಿ ಫೈನಾನ್ಶಿಯಲ್‌ನ ಅಮಿತ್, ನ.ಪಂ. ಆರೋಗ್ಯ ನಿರೀಕ್ಷಕಿ ಶಶಿಕಲಾ, ಮೂಲ್ಕಿ ಠಾಣಾ ಮಧುಕರ್, ಸರಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಜಯಲಕ್ಷ್ಮೀ ನಾಯಕ್ ಮುಖ್ಯ ಅತಿಥಿಗಳಾಗಿದ್ದರು. ಸಾಹಸ್ ಎನ್‌ಜಿಒದ ವಿಶಾಲ ಕಾರ್ಯಕ್ರಮ ನಿರ್ವಹಿಸಿದರು. ಭವಿತ್ ಪ್ರಸ್ತಾವಿಸಿದರು. ಶ್ರವಣ್, ಸಾಗರ್, ರವೀಂದ್ರ ಉಪಸ್ಥಿತರಿದ್ದರು.



ಬಂಟ್ವಾಳ ತಾಲೂಕಿನ ಪಾಣೆಮಂಗಳೂರು ಶ್ರೀ ಶಾರದಾ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಶುಕ್ರವಾರ ಆಚರಿಸಲಾಯಿತು. ಕನ್ನಡ ಭಾಷಾ ಶಿಕ್ಷಕ, ಎನ್‌ಸಿಸಿ ಚೀಫ್ ಆಫೀಸರ್ ಧನರಾಜ್ ಡಿ.ಆರ್., ಮುಖ್ಯ ಶಿಕ್ಷಕ ಶಿವಪ್ಪ ನಾಯ್ಕ್, ಇಕೋ ಕ್ಲಬ್ ಸಂಯೋಜಕಿ ಶೀಲತಾ ಪಾಲ್ಗೊಂಡಿದ್ದರು.



ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿಯವರ ಶಿಫಾರಸ್ಸಿನಂತೆ 1.30 ಲಕ್ಷ ರೂ. ಅನುದಾನದಲ್ಲಿ ದೇವಸ್ಯಮುಡೂರು ಗ್ರಾಮದ ವಿಶೇಷಚೇತನ ಮೋಹನ್ ಆಚಾರ್ಯ ಅವರಿಗೆ ಮಂಜೂರಾದ ತ್ರಿಚಕ್ರ ವಾಹನವನ್ನು ಶುಕ್ರವಾರ ಶಾಸಕರ ಕಚೇರಿ ಆವರಣದಲ್ಲಿ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಪ್ರಮುಖರಾದ ರಾಮಕೃಷ್ಣ ಮಯ್ಯ ಇದ್ದರು.

ಬಿಜೆಪಿ ನಗರ ಮಂಡಲದ ಹಿಂದುಳಿದ ವರ್ಗಗಳ ಮೋರ್ಚಾ ಪದಾಧಿಕಾರಿಗಳ ಘೋಷಣೆ | ಎಲ್ಲ ಪಕ್ಷಗಳಿಗೂ ಶೇ. 60 ಮತದಾರರು ಹಿಂದುಳಿದ ವರ್ಗದವರು

ಬಿಜೆಪಿಯಲ್ಲಿ ಎಲ್ಲಾ ಮೋರ್ಚಾಗಳಿಗೆ ವಿಶೇಷವಾದ ಸಂಘಟನಾ ಕೆಲಸ ಕಾರ್ಯವಿದೆ: ನಾರಾಯಣ

ಪುತ್ತೂರು: ಪುತ್ತೂರು ಬಿಜೆಪಿ ನಗರ ಮಂಡಲದ ಹಿಂದುಳಿದ ಮೋರ್ಚಾದ ನೂತನ ಪದಾಧಿಕಾರಿಗಳ ಘೋಷಣಾ ಕಾರ್ಯಕ್ರಮ ಬಿಜೆಪಿ ಕಚೇರಿಯಲ್ಲಿ ನಡೆಯಿತು. ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್ ಅವರು ನೂತನ ಪದಾಧಿಕಾರಿಗಳನ್ನು ಘೋಷಣೆ ಮಾಡಿದರು.

ಒಬಿಸಿ ಮತದಾರರೆ ಹೆಚ್ಚು

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಕಾರ್ಯದರ್ಶಿ ಆರ್.ಸಿ. ನಾರಾಯಣ ಮಾತನಾಡಿ, ಬಿಜೆಪಿಯಲ್ಲಿ ಎಲ್ಲಾ ಮೋರ್ಚಾಗಳಿಗೆ ವಿಶೇಷವಾದ ಸಂಘಟನಾ ಕೆಲಸ ಕಾರ್ಯವಿದೆ. ಅದೇ ರೀತಿ ಹಿಂದುಳಿದ ಮೋರ್ಚಾ ರಾಜ್ಯ ಮತ್ತು ರಾಷ್ಟ್ರದಲ್ಲಿ ಬಿಜೆಪಿಯ ಮಾತೃಸಂಘಟನೆಗೆ ಶಕ್ತಿ ಕೊಡುವ ಕೆಲಸ



ಮಾಡುತ್ತಾ ಬಂದಿದೆ. ಹಾಗಾಗಿ ಎಲ್ಲಾ ಮಂಡಲಗಳಲ್ಲಿ ಮೋರ್ಚಾಗಳನ್ನು ಜೋಡಿಸಿಕೊಂಡು ಸಂಘಟನೆಗೆ ಶಕ್ತಿ ಕೊಡುವ ಕೆಲಸ ಮಾಡಲಾಗಿದೆ ಎಂದರು.

ಪಕ್ಷ ಎಂದಾಗ ಎಲ್ಲಾ ಸಮುದಾಯ, ಸಂಘಟನೆಗಳ ಭಾವನೆಗಳಿಗೆ ಗೌರವ ಕೊಡಬೇಕೆಂದು ಮತ್ತು ಬಿಜೆಪಿ ಎಲ್ಲಾ ಸಮುದಾಯವನ್ನು ಮುಟ್ಟಬೇಕೆಂಬ ಕಾರಣಕ್ಕಾಗಿ ಮೋರ್ಚಾಗಳನ್ನು ಮಾಡಿದೆ. ಸುಮಾರು ಶೇ. 60 ಮತದಾರರು ಬಿಜೆಪಿ ಅಥವಾ ಬೇರೆ ರಾಜಕೀಯ ಪಾರ್ಟಿಯಲ್ಲಿ ಇರುವುದು ಅದು ಹಿಂದುಳಿದ ವರ್ಗಗಳದ್ದು, ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಕೂಡಾ ಕೇಂದ್ರ ಸರ್ಕಾರದಲ್ಲಿ ಸುಮಾರು 27 ಮಂದಿ ಮಂತ್ರಿಗಳಿದ್ದಾರೆ. ನಮ್ಮ ಸಂಘಟನೆಗೆ ಶಕ್ತಿ ಕೊಡಬೇಕಾದರೆ ನಾವು ನಿರಂತರವಾಗಿ ಪಕ್ಷದ ವ್ಯವಸ್ಥೆಯಲ್ಲಿ ನಾವು ಜೋಡಿಸಿಕೊಳ್ಳಬೇಕು. ಆಗ ನಾವು ವ್ಯಕ್ತಿಗತವಾಗಿ ಬೆಳೆಯುತ್ತೇವೆ. ಕೊಟ್ಟ ಜವಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕು ಎಂದರು.

ತಿಂಗಳಿಗೊಮ್ಮೆ ಸಭೆ

ಹಿಂದುಳಿದ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಮಂಡಲದ ಪ್ರಭಾರಿ ಶಶಿಧರ್ ಕಲ್ಮಂಜ ಮಾತನಾಡಿ, ಮುಂದಿನ ದಿನ ಇಲ್ಲಿರುವ 7 ಶಕ್ತಿ ಕೇಂದ್ರದಲ್ಲಿ ಕೂಡಾ ಒಬಿಸಿ ಮೋರ್ಚಾದ ಎರಡು ಮಂದಿಯ ತಂಡವಾಗಬೇಕು. ಮಹಾಶಕ್ತಿ ಕೇಂದ್ರಕ್ಕೂ ಎರಡು ತಂಡವಾಗಬೇಕು. ನೂತನ ಪದಾಧಿಕಾರಿಗಳ ಸಮಿತಿಯಲ್ಲಿ ತಂಡಗಳ ರಚನೆಯಾಗಬೇಕು. ಪ್ರತಿ 15 ದಿನಕ್ಕೆ ಒಮ್ಮೆ 11 ಮಂದಿಯ ಪದಾಧಿಕಾರಿಗಳು ಸಭೆ ಸೇರಿ ಚರ್ಚಿಸಬೇಕು. ತಿಂಗಳಿಗೊಮ್ಮೆ ಎಲ್ಲರು ಸೇರಿ ಸಭೆ ನಡೆಸಬೇಕು ಎಂದರು.

ಬಿಜೆಪಿ ಕಾರ್ಯಕರ್ತ ಶಾಶ್ವತ

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪ್ರಸನ್ನ ಮಾರ್ತ ಮಾತನಾಡಿ, ಹಿರಿಯರ ಪುಣ್ಯದಿಂದ ಬಿಜೆಪಿಯ ಪದಾಧಿಕಾರಿಗಳಾಗುವ ಯೋಗ ಲಭಿಸುತ್ತದೆ. ಬಿಜೆಪಿ ಕಾರ್ಯಕರ್ತ ಅನ್ನುವುದು ಯಾವತ್ತೂ ಶಾಶ್ವತ. ಪದಾಧಿಕಾರಿ ಅನ್ನುವುದು ಜವಾಬ್ದಾರಿ ಮಾತ್ರ. ಸಿಕ್ಕಿದ ಜವಾಬ್ದಾರಿ ಸರಿಯಾಗಿ ನಿಭಾಯಿಸಿದರೆ ಮುಂದೆ ಇನ್ನು ಹೆಚ್ಚಿನ ಅವಕಾಶ ಲಭಿಸುತ್ತದೆ ಎಂದರು.

ಒಬಿಸಿ ಬಲಿಷ್ಠವಾಗಲಿದೆ

ಬಿಜೆಪಿ ನಗರ ಮಂಡಲದ ಹಿಂದುಳಿದ ಮೋರ್ಚಾದ ನೂತನ ಅಧ್ಯಕ್ಷ ನಿರಂಜನ್ ಮಾನ್ಯ ಮಾತನಾಡಿ, ಹಿರಿಯರ ಮಾರ್ಗದರ್ಶನದಲ್ಲಿ ಪುತ್ತೂರು ನಗರ ಮಂಡಲದಲ್ಲಿ ಹಿಂದುಳಿದ ಮೋರ್ಚವನ್ನು ಬಹಳ ಬಲಿಷ್ಠವಾಗಿ ಮಾಡುತ್ತೇವೆ ಎಂದರು.

ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್ ಪಿ.ಬಿ., ಮಾಜಿ ಶಾಸಕ ಸಂಜೀವ ಮಠಂದೂರು, ಬಿಜೆಪಿ ಜಿಲ್ಲಾ ಕಾರ್ಯದರ್ಶಿಗಳಾದ ರವಿ ಸೂಮರ್, ವಿದ್ಯಾ ಗೌರಿ, ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಯುವರಾಜ್ ಪೆರಿಯತ್ತೋಡಿ, ಶಶಿಧರ್ ನಾಯಕ್, ನಾಗೇಂದ್ರ ಬಾಳಿಗ, ಮಹಿಳಾ ಮೋರ್ಚಾದ ಅಧ್ಯಕ್ಷೆ ಸ್ವರ್ಣಲತಾ ಹೆಗ್ಡೆ, ದೀಕ್ಷಾ ಪೈ, ವಿಜಯಲಕ್ಷ್ಮೀ ಶಗ್ರಿತ್ತಾಯ, ಆಶಾ ಭಗವಾನ್, ನಿಶ್ಮಿತ ಸಹಿತ ಹಿಂದುಳಿದ ಮೋರ್ಚಾಗಳ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದರು. ಹರೀಶ್ ಆಚಾರ್ಯ ಸ್ವಾಗತಿಸಿ, ವಂದಿಸಿದರು.

ಸುತ್ತ ಮುತ್ತ

ಬಿಳಿನೆಲೆ ಶಾಲೆಯಲ್ಲಿ ಪರಿಸರ ದಿನಾಚರಣೆ



ಸುಬ್ರಹ್ಮಣ್ಯ: ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆ ಹಾಗೂ ಶ್ರೀ ವೇದವ್ಯಾಸ ವಿದ್ಯಾಲಯಗಳ ಜಂಟಿ ಆಶ್ರಯದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.
ಅಧ್ಯಕ್ಷತೆಯನ್ನು ಆಡಳಿತ ಮಂಡಳಿ ಕಾರ್ಯದರ್ಶಿ ಶ್ರೀಕೃಷ್ಣ ಶರ್ಮ ವಹಿಸಿದ್ದರು. ಉಪವಲಯಾರಣ್ಯಾಧಿಕಾರಿ ಅಪೂರ್ವ ಅತ್ರಪ್ಪಾಡಿ, ಅರಣ್ಯ ಸಂರಕ್ಷಕ ಪರ ಮೋಹನ್, ಗ್ರಾ.ಪಂ ಮಾಜಿ ಸದಸ್ಯ ಸತೀಶ್ ಕಳಿಗೆ ಅತಿಥಿಗಳಾಗಿದ್ದರು. ಪ್ರೌಢಶಾಲಾ ಮುಖ್ಯಗುರು ಸತ್ಯಶಂಕರ ಭಟ್ ಎಂ, ವೇದವ್ಯಾಸ ವಿದ್ಯಾಲಯದ ಮುಖ್ಯ ಶಿಕ್ಷಕ ಪ್ರಶಾಂತ್ ಬಿ., ಶಿಕ್ಷಕ ದಿನೇಶ್ ಕುಂದರ್ ಮೊದಲಾದವರು ಉಪಸ್ಥಿತರಿದ್ದರು. ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು ಗಿಡ ನೆಟ್ಟರು. ಶಿಕ್ಷಕ ಪ್ರವೀಣ್ ನಿರೂಪಿಸಿದರು.

ಮೂಡುಬಿದಿರೆ: ಮಕ್ಕಳಿಗೆ ಹಸಿರು ಸಂರಕ್ಷಣೆ ಜಾಗೃತಿ



ಮೂಡುಬಿದಿರೆ: ಇಲ್ಲಿನ ಗಾಂಧಿನಗರದ ದ. ಕ. ಜಿ. ಪಂ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ ಮತ್ತು ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಯಿತು.
ಶಾಲಾ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ವಿದ್ಯಾರ್ಥಿಗಳಲ್ಲಿ ಹಸಿರು ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ಮುಖ್ಯ ಶಿಕ್ಷಕಿ ಕಸ್ತೂರಿ ಎಚ್. ಪರಿಸರ ದಿನದ ಮಹತ್ವವನ್ನು ತಿಳಿಸಿದರು. ಪ್ರಕೃತಿಯನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದ್ದು ವಿದ್ಯಾರ್ಥಿ ದೆಸೆಯಿಂದಲೇ ಗಿಡ-ಮರಗಳನ್ನು ಬೆಳೆಸುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು. ಚಿತ್ರಕಲಾ ಸ್ಪರ್ಧೆ ನಡೆಯಿತು. ಶಿಕ್ಷಕಿಯರಾದ ಭವ್ಯ, ಸುಪ್ರೀತಾ ಉಪಸ್ಥಿತರಿದ್ದರು.

ಕೊಣಾಜೆ: ಸ್ವಚ್ಛ ರಸ್ತೆ, ಹಸಿರು ರಸ್ತೆ ಶ್ರಮದಾನ



ಕೊಣಾಜೆ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜನಶಿಕ್ಷಣ ಟ್ರಸ್ಟ್ ನೇತೃತ್ವದಲ್ಲಿ ಸ್ವಚ್ಛ ರಸ್ತೆ ಹಸಿರು ರಸ್ತೆ ಅಭಿಯಾನದಡಿ ಮುಡಿಪು ಚೆಕ್ ಪೋಸ್ಟ್‌ನ ರಸ್ತೆ ಬದಿಗಳು ಮತ್ತು ಸಾಲು ಮರಗಳ ಬುಡದಲ್ಲಿ ಬಿದ್ದಿರುವ ಪ್ಲಾಸ್ಟಿಕ್, ಪ್ಯಾಡ್, ಪ್ಯಾಂಪರ್ಸ್ ತ್ಯಾಜ್ಯಗಳನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸಲಾಯಿತು. ಜನ ಶಿಕ್ಷಣ ಟ್ರಸ್ಟ್ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ನೆಟ್ಟು ಬೆಳೆಸಿದ ಸಾಲು ಮರ ಹಣ್ಣಿನ ಗಿಡಗಳ ಬುಡಗಳಲ್ಲಿ ತುಂಬಿ ಕೊಂಡಿದ್ದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಂಗ್ರಹಿಸಿ ಬಾಳೆಪುಣಿ ಗ್ರಾ.ಪಂ. ಸ್ವಚ್ಛ ಸಂಕೀರ್ಣದ ಮೂಲಕ ವಿಲೇವಾರಿ ಮಾಡಿ ಗಿಡಗಳನ್ನು ಸಂರಕ್ಷಿಸುವ ಕಾರ್ಯ ಮಾಡಲಾಯಿತು. ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಟ್ರಸ್ಟ್ ನಿರ್ದೇಶಕರು, ಗ್ರಾಮ ಸ್ವರಾಜ್ ಅಭಿಯಾನದ ಸಂಯೋಜಕ ಚೇತನ್ ಕುಮಾರ್, ಸ್ವಚ್ಛತಾ ಸೇನಾನಿ ಇಸ್ಮಾಯಿಲ್ ಕಣಂತೂರು ಮೊದಲಾದವರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲಾಡಳಿತದ ವತಿಯಿಂದ ವಿಶ್ವ ಪರಿಸರ ದಿನಾಚರಣೆ

ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ಡಿಸಿ



ಮಂಗಳೂರು: ಪರಿಸರ, ನೀರು, ಆಹಾರ ಶುಚಿಯಾಗಿದ್ದರೆ ಜೀವ ಸಂಕುಲ ರಕ್ಷಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಸುತ್ತಲಿನ ಪರಿಸರವನ್ನು ಶುಚಿಯಾಗಿಟ್ಟು ರಕ್ಷಿಸಬೇಕಿದೆ. ಪರಿಸರದ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಹೇಳಿದರು.
ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅರಣ್ಯ ಇಲಾಖೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಶುಕ್ರವಾರ ನಗರದ ಕೆಪಿಟಿಯಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮುಂದಿನ ಪೀಳಿಗೆಗೆ ಪರಿಸರ ಉಳಿಸಿ
ಪ್ರತಿಯೊಬ್ಬರು ತಮ್ಮ ಮನೆಯ ಸುತ್ತಮುತ್ತಲಿನ ಪರಿಸರ ರಕ್ಷಿಸಿದರೆ ಸಮಾಜ ಸ್ವಸ್ಥವಾಗಿ ಉತ್ತಮ ಪರಿಸರವನ್ನು ಹೊಂದುತ್ತದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ಬದುಕಿನ ಜಂಜಾಟದಲ್ಲಿ ಪರಿಸರ ನಾಶವಾಗುತ್ತಿದೆ. ಮುಂದಿನ ಪೀಳಿಗೆಗೆ ಭವಿಷ್ಯಕ್ಕಾಗಿ ಪರಿಸರ ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದು ಅವರು ಹೇಳಿದರು.

ಆರೋಗ್ಯದ ಮೇಲೆ ಪರಿಣಾಮ
ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಬುನ್ನಿಸಾ ಮಾತನಾಡಿ, ಪರಿಸರ ನಾಶದಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಉಂಟಾಗಲಿದೆ. ನಮ್ಮ ಸುತ್ತಮುತ್ತಲಿನ ಪರಿಸರವನ್ನು ನಾವೇ ಕಾಪಾಡಿಕೊಳ್ಳಬೇಕು. ಪರಿಸರವನ್ನು ಉಳಿಸಿದರೆ ಪರಿಸರ ನಮ್ಮನ್ನು ರಕ್ಷಿಸುತ್ತದೆ ಎಂದವರು ಹೇಳಿದರು.
ಸಮಾರಂಭದಲ್ಲಿ ಜಿ. ಪಂ. ಉಪ ಕಾರ್ಯದರ್ಶಿ ಜಯಲಕ್ಷ್ಮಿ ರಾಯ ಕೋಡ, ಹಿರಿಯ ಪರಿಸರ ಅಧಿಕಾರಿ ರಾಜಶೇಖರ ಪುರಾಣಿಕ್, ಕೆ.ಪಿ.ಟಿ ಪ್ರಾಂಶುಪಾಲ ಹರೀಶ್ ಶೆಟ್ಟಿ ಎಸ್., ಐ.ಟಿ.ಕೆ ನಿವೃತ್ತ ಪ್ರಾಧ್ಯಾಪಕ ಶ್ರೀನಿಕೇತನ್, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಮಂಜು, ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ಬಾಕ್ ಸೀಡ್ ಬಾಲ್ ವಿತರಣೆ
ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೆ ಸೀಡ್ ಬಾಲ್ ಮತ್ತು ಬಟ್ಟೆ ಬ್ಯಾಗ್‌ನ್ನು ವಿತರಿಸಲಾಯಿತು. ಇದಕ್ಕೂ ಮೊದಲು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಯೆಯ್ಯಾಡಿಯಿಂದ ಕೆ.ಪಿ.ಟಿವರೆಗೆ ಜಾಥಾ ಕಾರ್ಯಕ್ರಮ ನಡೆಯಿತು. ಪ್ರಧಾನ ಜಿಲ್ಲಾ ನ್ಯಾಯಾಧೀಶ ಬಸವರಾಜ್ ಅವರು ಜಾಥಾಕ್ಕೆ ಚಾಲನೆ ನೀಡಿದರು.

ಅಲ್ಲಲ್ಲಿ ಪರಿಸರ ದಿನಾಚರಣೆಯ ಸಂಭ್ರಮ



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾಪು ಪುರಸಭೆ ವತಿಯಿಂದ ಕಾಪು ಗ್ರಂಥಾಲಯ ಕಟ್ಟಡ ಬಳಿ ನಡೆದ ಗಿಡ ನೆಡುವ ಕಾರ್ಯಕ್ರಮದಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿದರು. ಪುರಸಭೆಯ ಅಧ್ಯಕ್ಷ ಮೋಹಿನಿ ಶೆಟ್ಟಿ, ಉಪಾಧ್ಯಕ್ಷ ಸರೀತಾ ಶಿವಾನಂದ, ಕಾಪು ಪುರಸಭೆಯ ಮುಖ್ಯಾಧಿಕಾರಿ ನೀಲಕಂಠ ಮೇಸ್ತಾ ಹಾಗೂ ಸದಸ್ಯರು, ಉಪಸ್ಥಿತರಿದ್ದರು.



ಮಂಗಳೂರಿನ ವಿ.ಟಿ. ರಸ್ತೆಯಲ್ಲಿನ ಸೇವಾ ಭಾರತಿಯ ಅಂಗಸಂಸ್ಥೆಯಾದ ಚೇತನಾ ಬಾಲ ವಿಕಾಸ ಕೇಂದ್ರದಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ವಿಶೇಷ ಚೇತನ ಮಕ್ಕಳು ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟರು. ಸೇವಾ ಭಾರತಿ ವಿಶ್ವಸ್ಥ ಖಜಾಂಚಿ ವಿನೋದ್ ಶೆಣೈ, ಚೇತನಾ ಬಾಲ ವಿಕಾಸ ಕೇಂದ್ರದ ಮುಖ್ಯೋಪಾಧ್ಯಾಯಿನಿ ಸುಪ್ರೀತಾ, ಶಾಲಾ ಶಿಕ್ಷಕ, ಶಿಕ್ಷಕೇತರ ವೃಂದ, ಸ್ವಯಂಸೇವಕರು, ಮಕ್ಕಳು ಪಾಲ್ಗೊಂಡರು.



ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ವಠಾರದಲ್ಲಿ ಫಲವೃಕ್ಷ ಗಿಡ ನೆಡಲಾಯಿತು. ನಗರಸಭಾ ಸದಸ್ಯ ಕೆ.ಎನ್.ರಾಮಕೃಷ್ಣ ಹೊಳ್ಳ, ಶ್ರೀ ಕ್ಷೇತ್ರದ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಟಿ., ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಉಷಾ ಅರ್ಜುನ್, ಶ್ರೀ ಕ್ಷೇತ್ರದ ಪ್ರಧಾನ ಅರ್ಚಕ ಶಿವಶಂಕರ ಅಡಿಗ, ದೇಗುಲದ ನಿಕಟಪೂರ್ವ ಸದಸ್ಯ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಕ್ಷೇತ್ರದ ಸಿಬ್ಬಂದಿಗಳಾದ ಶಾಂಭವಿ, ಜ್ಞಾನಲತಾ, ರಮೇಶ್, ಉಮೇಶ್ ಮಾರಾರ್, ರಾಧಾಕೃಷ್ಣ ನಂಬೀಶನ್ ಇದ್ದರು.

ಹಸಿರು ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬರು ಕೈಜೋಡಿಸೋಣ



ಬಂಟ್ವಾಳ: ಪ್ರಕೃತಿ ಇದ್ದರೆ ನಾವು, ಪ್ರಕೃತಿ ಮುನಿದರೆ ಸಾವು, ಪರಿಸರ ನಮ್ಮ ಜೀವನದ ಆಧಾರವಾಗಿದೆ. ಅರಣ್ಯ ನಾಶ, ಮಾಲಿನ್ಯ ಮತ್ತು ಜಾಗತಿಕ ತಾಪಮಾನ ಏರಿಕೆಯಿಂದ ಪರಿಸರಕ್ಕೆ ಹಾನಿಯಾಗುತ್ತಿದ್ದು, ಇದರ ಪರಿಣಾಮ ಹವಾಮಾನದಲ್ಲೂ ವೈಪರೀತ್ಯವಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರು ಕನಿಷ್ಠ ಒಂದು ಗಿಡವನ್ನು ನೆಟ್ಟು ಆ ಮೂಲಕ ಪರಿಸರವನ್ನು ಕಾಪಾಡುವ ಸಂಕಲ್ಪವನ್ನು ಮಾಡೋಣ. ಜೊತೆಗೆ ಹಸಿರು ಪರಿಸರ ನಿರ್ಮಾಣಕ್ಕಾಗಿ ಕೈಜೋಡಿಸೋಣ ಎಂದು ವೀರಕಂಬ ಗ್ರಾಮ ವಲಯ ಅರಣ್ಯ ಸಮಿತಿ ಅಧ್ಯಕ್ಷ ವಿಶ್ವನಾಥ ಎಂ. ಹೇಳಿದರು.
ಶುಕ್ರವಾರ ವೀರಕಂಬ ಗ್ರಾಮದ ಮಜಿ ಸಹಿಪ್ರಾ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಅಂಗವಾಗಿ ಶಾಲಾ ಆವರಣದಲ್ಲಿ ಹಣ್ಣಿನ ಗಿಡವನ್ನು ನಾಟಿ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ಮುಖ್ಯ ಶಿಕ್ಷಕಿ ಬೆನಡಿಕ್ಟಾ ಆಗ್ನೇಸ್ ಮಂಡೋನ್ಸ, ವಿದ್ಯಾರ್ಥಿಗಳಿಗೆ ಪರಿಸರ ರಕ್ಷಣೆಯ ಮಹತ್ವ ತಿಳಿಸಿದರು. ವಿದ್ಯಾರ್ಥಿಗಳ ಪರವಾಗಿ ಎಂಟನೇ ತರಗತಿಯ ವಿದ್ಯಾರ್ಥಿ ಕೀರ್ತಿಕಾ ಪರಿಸರದ ಜಾಗೃತಿ ಹಾಗೂ ರಕ್ಷಣೆಯ ಕುರಿತು ವಿವರಿಸಿದರು.
ಕಲ್ಲಡ್ಕ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಅಧ್ಯಕ್ಷ ಮಾಧವ ಸಾಲಿಯಾನ್ ಕುದ್ರೆಬೆಟ್ಟು, ಎಸ್‌ಡಿಎಂಸಿ ಅಧ್ಯಕ್ಷ ಕೊರಗಪ್ಪ ನಾಯ್ಕ, ಶಾಲಾ ವಿದ್ಯಾರ್ಥಿ ಸಂಘದ ಅಧ್ಯಕ್ಷ ಈಶ್ವರ ಭಟ್ ರಾಕೋಡ್, ವಿದ್ಯಾರ್ಥಿ ಸಂಘದ ಸಂಘಟನಾ ಕಾರ್ಯದರ್ಶಿ ಚಿನ್ನಾ ಮೈರಾ, ಪೋಷಕರಾದ ಯತೀಶ್ ಮೈರಾ, ಶಾಲಾ ಶಿಕ್ಷಕರು, ಶಾಲಾ ಮಕ್ಕಳು ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ಶಿಕ್ಷಕ ಇಂದುಶೇಖರ್ ರವರು ವಂದಿಸಿದರು. ಶಿಕ್ಷಕಿ ಸಂಗೀತ ಶರ್ಮ ಪಿ.ಜಿ. ನಿರೂಪಿಸಿದರು.

ಗಿಡ ನೆಟ್ಟು ಪರಿಸರ ರಕ್ಷಣೆಯ ಮಹತ್ವ ಸಾರಿದ ವಿದ್ಯಾರ್ಥಿಗಳು



ಕಡಬ: ವಿಶ್ವ ಪರಿಸರ ದಿನಾಚರಣೆಯನ್ನು ಕಡಬದ ಸರಕಾರಿ ಪ್ರೌಢಶಾಲೆಯಲ್ಲಿ ಅರಣ್ಯ ಇಲಾಖೆ ಪಂಜ ವಲಯದ ಸಹಯೋಗದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು. ಅರಣ್ಯ ಇಲಾಖೆಯ ವತಿಯಿಂದ ಶಾಲಾ ಪರಿಸರದಲ್ಲಿ ಬೆಳೆಸಲು ಸುಮಾರು 75 ವಿವಿಧ ಜಾತಿಯ ಗಿಡಗಳನ್ನು ಶಾಲೆಗೆ ಹಸ್ತಾಂತರಿಸಲಾಯಿತು. ಬಳಿಕ ಅತಿಥಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಪರಿಸರ ರಕ್ಷಣೆಯ ಮಹತ್ವವನ್ನು ಸಾರಿದರು.
ಮುಖ್ಯ ಅತಿಥಿಯಾಗಿ ಆಗಮಿಸಿದ ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್ ಮಾತನಾಡಿ, ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸುವ ಮೂಲಕ ಪ್ರಕೃತಿ ಉಳಿವಿಗೆ ಕೈಜೋಡಿಸಬೇಕು. ಪರಿಸರ ಸಂರಕ್ಷಣೆ ಎನ್ನುವುದು ಕೇವಲ ಕಾರ್ಯಕ್ರಮಕ್ಕೆ ಸೀಮಿತವಾಗದೆ ಪ್ರತಿ ಯೊಬ್ಬರೂ ತಮ್ಮ ಕರ್ತವ್ಯ ಎನ್ನುವಂತೆ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

■ ಶಾಲೆಗೆ 75 ವಿವಿಧ ಜಾತಿಯ ಗಿಡಗಳನ್ನು ಹಸ್ತಾಂತರಿಸಿದ ಅರಣ್ಯ ಇಲಾಖೆ

ಪ.ಪಂ. ಸದಸ್ಯ ಕೃಷ್ಣಪ್ಪ ಪೂಜಾರಿ, ಪಂಜ ವಲಯದ ಉಪ ವಲಯ ಅರಣ್ಯಾಧಿಕಾರಿ ಉಮೇಶ್ ಹಾಗೂ ಸಿಬ್ಬಂದಿ, ದ. ಕ. ಜಿ.ಪಂ. ಮಾಜಿ ಸದಸ್ಯ ಪಿ. ಪಿ. ವರ್ಗೀಸ್, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಅಶ್ರಫ್ ಶೇಡಿಗುಂಡಿ, ಉಪ ಪ್ರಾಂಶುಪಾಲೆ ಡಾ. ವೇದಾವತಿ ಬಿ., ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಮೊದಲದವರು ಉಪಸ್ಥಿತರಿದ್ದರು.

ಸಸಿ ನೆಟ್ಟು ವಿಶ್ವ ಪರಿಸರ ದಿನ ಆಚರಿಸಿದ ಕರ್ಣಾಟಕ ಬ್ಯಾಂಕ್



ಮಂಗಳೂರು: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕರ್ಣಾಟಕ ಬ್ಯಾಂಕ್ ತನ್ನ ಪ್ರಧಾನ ಕಚೇರಿ ಆವರಣದಲ್ಲಿ ಶುಕ್ರವಾರ ಸಸಿ ನೆಡುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮವನ್ನು ಆಚರಿಸಿತು.
ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಎಸ್. ಭಟ್ ಅವರು ಹಿರಿಯ ಅಧಿಕಾರಿಗಳೊಂದಿಗೆ ಸಸಿಗಳನ್ನು ನೆಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
ಈ ಸಂದರ್ಭ ಮಾತನಾಡಿದ ಅವರು, ಸಾಮಾಜಿಕ ಹೊಣೆಗಾರಿಕೆ ಯೋಜನೆಗಳಡಿ ಕರ್ಣಾಟಕ ಬ್ಯಾಂಕ್ ನಿರಂತರ ವಿವಿಧ ಪರಿಸರ ಸ್ನೇಹಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದು ಪರಿಸರ ಸಂರಕ್ಷಣೆ ಹಾಗೂ ಹಸಿರು ಭವಿಷ್ಯದತ್ತ ಆದ್ಯತೆ ನೀಡಿದೆ ಎಂದರು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ವಚ್ಛ ಪರಿಸರದಿಂದ ನಮ್ಮ ಆರೋಗ್ಯವು ಉತ್ತಮ: ಅರಣ್ಯಾಧಿಕಾರಿ ಶರ್ಮಿಷ್ಠಾ



ಬೆಳ್ತಂಗಡಿ: ಶ್ರೀ ಗುರುದೇವ ಪದವಿ ಪೂರ್ವ ಕಾಲೇಜು ಬೆಳ್ತಂಗಡಿ ಇದರ ನೇತೃತ್ವದಲ್ಲಿ ಅರಣ್ಯ ಇಲಾಖೆ ಹಾಗೂ ವನ್ಯಜೀವಿ ಇಲಾಖೆ ಬೆಳ್ತಂಗಡಿ ಇದರ ಸಹಭಾಗಿತ್ವದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾಲೇಜು ಸಭಾಂಗಣದಲ್ಲಿ ನಡೆಯಿತು.
ಬೆಳ್ತಂಗಡಿ ವನ್ಯಜೀವಿ ವಿಭಾಗದ ವಲಯ ಅರಣ್ಯಾಧಿಕಾರಿ ಶರ್ಮಿಷ್ಠಾ ಮಾತನಾಡಿ, ಪ್ರಕೃತಿಯನ್ನು ಸ್ವಚ್ಛವಾಗಿಸುವುದು ನಮ್ಮ ಜವಾಬ್ದಾರಿ. ಪರಿಸರ ಉತ್ತಮವಾಗಿದ್ದಷ್ಟು ನಮ್ಮ ಆರೋಗ್ಯವೂ ಉತ್ತಮವಾಗಿರಲು ಸಾಧ್ಯ. ಹಾಗಾಗಿ ವಿದ್ಯಾರ್ಥಿ ದೆಸೆಯಲ್ಲಿಯೇ ಪ್ರಕೃತಿಯನ್ನು ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.
ಸಂಪನ್ಮೂಲ ವ್ಯಕ್ತಿ ಉಪ ವಲಯ ಅರಣ್ಯಾಧಿಕಾರಿ ಕೆ.ಸಿ. ಮ್ಯಾಥ್ಯೂ ಮಾತನಾಡಿ, ಪ್ರಕೃತಿ ದೇವರ ಕೊಡುಗೆ. ಮನುಷ್ಯನ ಆಲೋಚನೆಗಳಿಗೆ ನಿಲುಕದ ಸೃಷ್ಟಿ ವೈಭವ ಈ ಪ್ರಕೃತಿಯಲ್ಲಿದೆ. ಅರಣ್ಯ, ಜಲ, ಮಣ್ಣು ವಾತಾವರಣದ ರಕ್ಷಣೆ ಮಾಡಬೇಕು. ಪ್ರತಿ ವರ್ಷ ವ್ಯಕ್ತಿಯೋರ್ವ ಒಂದು ಗಿಡ ನೆಟ್ಟು ಪೋಷಿಸಬೇಕು. ಈ ಪ್ರಕೃತಿಯಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ವಿವೇಚನೆಯಿಂದ ಬಳಸಬೇಕಾಗಿದೆ. ನೀರಿನ ಸದ್ಬಳಕೆ ಮಾಡಬೇಕಾದುದು ನಮ್ಮ ಜವಾಬ್ದಾರಿಯಾಗಿದೆ ಎಂದರು.
ಕಾಲೇಜಿನ ಪ್ರಾಂಶುಪಾಲ ಸುಕೇಶ್ ಕುಮಾರ್ ಕೆ. ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗುರುದೇವ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯೆ ಡಾ. ಸವಿತಾ, ಕಾಲೇಜಿನ ಉಪ ನ್ಯಾಸಕರು, ಸಿಬ್ಬಂದಿ ವರ್ಗ, ಅರಣ್ಯ ಇಲಾಖೆಯ ಸಿಬ್ಬಂದಿ ಸುರೇಶ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ರಕ್ಷಿತಾ, ಶ್ವೇತಾ ಹಾಗೂ ಮೇಘನಾ ಪ್ರಾರ್ಥಿಸಿದರು. ಉಪ ಪ್ರಾಚಾರ್ಯ ಬಿ. ಎ. ಶಮೀವುಲ್ಲಾ ಸ್ವಾಗತಿಸಿದರು. ಇತಿಹಾಸ ವಿಭಾಗದ ಉಪನ್ಯಾಸಕ ಹರೀಶ್ ಪೂಜಾರಿ ಕಾರ್ಯಕ್ರಮ ನಿರೂಪಿಸಿ, ಕನ್ನಡ ವಿಭಾಗದ ಉಪನ್ಯಾಸಕ ಗಣೇಶ್ ಬಿ. ಶಿರ್ಲಾಲು ವಂದಿಸಿದರು.

ಹಿಂದು ಸಂಸ್ಕೃತಿಯಲ್ಲಿ ಗಿಡ, ಮರಗಳಿಗೆ ವಿಶೇಷ ಸ್ಥಾನಮಾನ: ಶಾಸಕ ಗಂಟಿಹೊಳೆ



ಕುಂದಾಪುರ: ಪ್ರಕೃತಿಯಲ್ಲಿರುವ ಮರ-ಗಿಡಕ್ಕೂ ಹಿಂದು ಧಾರ್ಮಿಕ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ಆದಕ್ಕಾಗಿ ಧಾರ್ಮಿಕ ಮಹತ್ವ ಹೊಂದಿದ ಹೆಸರುಗಳನ್ನು ಇಡಲಾಗಿದೆ. ಪ್ರಕೃತಿ ಮತ್ತು ಧರ್ಮವನ್ನು ಅವಿನಾಭಾವವಾಗಿ ಜೋಡಿಸಿರುವುದು ಹಿಂದು ಸಂಸ್ಕೃತಿಯ ವಿಶಿಷ್ಟತೆ ಎಂದು ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.
ಆಲೂರಿನ ಕಳಿಯಲ್ಲಿ ಚಿತ್ರಕೂಟ ಚಿಕಿತ್ಸಾಲಯದಲ್ಲಿ ನಡೆದ ಚಿತ್ರಕೂಟ ಔಷಧಿ ವನ ಉದ್ಘಾಟನೆ ಮತ್ತು ವನಮಹೋತ್ಸವ ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಳಿ ಆಲೂರು ಚಿತ್ರಕೂಟ ಚಿಕಿತ್ಸಾಲಯದ ವೈದ್ಯ ಡಾ. ರಾಜೇಶ್ ಬಾಯರಿ ವಹಿಸಿದ್ದರು. ಕುಂದಾಪುರ ಐಸಿಟಿ ವಲಯದ ಆರ್‌ಎಫ್‌ಒ ದಿಲೀಪ್ ಕುಮಾರ್ ಬಿ.ವಿ. ಮಾತನಾಡಿದರು. ಜಿಪಂ ಮಾಜಿ ಸದಸ್ಯ ಡಾ. ಅತುಲ್‌ಕುಮಾರ್ ಶೆಟ್ಟಿ ಉಪ್ರಳ್ಳಿ ಶ್ರೀ ಕಾಳಿಕಾಂಬ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಚಂದ್ರಯ್ಯ ಆಚಾರ್ಯ ಕಳಿ, ಮಹಾಬಲ ಬಾಯರಿ ಉಪಸ್ಥಿತರಿದ್ದರು. ಚಿತ್ತೂರು ಪ್ರಭಾಕರ ಆಚಾರ್ಯ ನಿರೂಪಿಸಿ, ಡಾ. ಅನುಲೇಖಾ ಬಾಯರಿ ವಂದಿಸಿದರು.

ಭವಿಷ್ಯಕ್ಕೆ ಮಾದರಿ
ಒಂದು ಗಿಡ ನೆಡುವ ಮೂಲಕ 2008ರಲ್ಲಿ ಪ್ರಾರಂಭವಾದ, ಯಾವುದೇ ಪ್ರಚಾರವಿಲ್ಲದೆ ಸಂಪದ್ಭರಿತ ಪ್ರಕೃತಿಯಲ್ಲಿರುವ ಚಿತ್ರಕೂಟ ಚಿಕಿತ್ಸಾಲಯಕ್ಕೆ ದೇಶ-ವಿದೇಶಗಳಿಂದ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬೈಂದೂರಿನ ಭವಿಷ್ಯಕ್ಕೆ ಚಿತ್ರಕೂಟ ಚಿಕಿತ್ಸಾಲಯ ಮಾದರಿಯಾಗಲಿದೆ.
● ಗುರುರಾಜ ಗಂಟಿಹೊಳೆ, ಶಾಸಕರು, ಬೈಂದೂರು

ಪ್ರತಿದಿನವೂ ಪರಿಸರವನ್ನು ಉಳಿಸಿ, ಬೆಳೆಸೋಣ: ಕಮಲಾಕ್ಷ ಶಂಭೂರು



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರೌಢ ಶಾಲೆಯಲ್ಲಿ ಶುಕ್ರವಾರ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.
ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮಂಗಳೂರು ಗ್ರಾಮಾಂತರ ಜಿಲ್ಲಾ ಪರ್ಯಾವರಣ ಸಂಯೋಜಕರಾದ ಕಮಲಾಕ್ಷ ಶಂಭೂರು ಮಾತನಾಡಿ, ಪರಿಸರ ದಿನವನ್ನು ಕೇವಲ ಒಂದು ದಿನಕ್ಕೆ ಮೀಸಲಿಡದೆ ಪ್ರತಿದಿನವೂ ಪರಿಸರವನ್ನು ಉಳಿಸಿ, ಬೆಳೆಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು.
ಪ್ರೌಢಶಾಲಾ ಮುಖ್ಯ ಗುರುಗಳಾದ ಗೋಪಾಲ್ ಶ್ರೀಮಾನ್ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಧಾತ್ರಿ ಪರಿಸರ ಗೀತೆಯನ್ನು ಹಾಡಿದಳು. ಪರಿಸರ ದಿನಾಚರಣೆಯ ಅಂಗವಾಗಿ ನಡೆಸಿದ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಿನೀತ್ ಪರಿಸರ ದಿನದ ಮಹತ್ವವನ್ನು ತಿಳಿಸಿದನು. ಪರಿಸರಕ್ಕೆ ಸಂಬಂಧಿಸಿದ ಘೋಷಣೆಯನ್ನು ಜಿನ್ನಪ್ಪ ಶ್ರೀಮಾನ್ ವಿದ್ಯಾರ್ಥಿಗಳಿಂದ ಹೇಳಿಸಿದರು. ರಾಜೇಶ್ವರಿ ಸ್ವಾಗತಿಸಿ, ವಂದಿಸಿದರು. ಸಂಜಯ್ ಕಾರ್ಯಕ್ರಮ ನಿರೂಪಿಸಿದರು.

ವೀರಮಂಗಲ ಪಿಎಂಶ್ರೀ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

'ಏಕ್ ಪೇಡ್ ಮಾ ಕೇ ನಾಮ್' ಅಭಿಯಾನದಡಿ ಹಸಿರು ಕಾಳಜಿ



ಪುತ್ತೂರು: ವೀರಮಂಗಲದ ಪಿಎಂಶ್ರೀ ಸಹಿಪ್ರಾ ಶಾಲೆಯ ಇಕೋ ಕ್ಲಬ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಮಿಷನ್ ಲೈಫ್ ಹಾಗೂ 'ಏಕ್ ಪೇಡ್ ಮಾ ಕೇ ನಾಮ್' ಅಭಿಯಾನದಡಿ ಅರ್ಥಪೂರ್ಣವಾಗಿ ನಡೆಸಲಾಯಿತು.
ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಪರಿಸರ ಜಾಗೃತಿ ಘೋಷಣೆಗಳನ್ನು ಕೂಗುತ್ತಾ ಬ್ಯಾಂಡ್ ವಾದನದೊಂದಿಗೆ ಪರಿಸರ ಜಾಗೃತಿ ಮೆರವಣಿಗೆ ನಡೆಸಿದರು. ಎಸ್.ಡಿ.ಎಂ.ಸಿ. ಸದಸ್ಯ ಮೋಹನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಸ್.ಡಿ.ಎಂ.ಸಿ. ಉಪಾಧ್ಯಕ್ಷೆ ವಿನುತಾ, ಸದಸ್ಯೆ ಚಂದ್ರಾವತಿ ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು.
ಮಿಷನ್ ಲೈಫ್‌ನ ಆಶಯದಂತೆ ಪರಿಸರ ಸ್ನೇಹಿ ಜೀವನಶೈಲಿಯ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಈ ಸಂದರ್ಭ ಶಾಲೆಯ ಮಿಯಾವಾಕಿ ವನದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು. 'ಏಕ್ ಪೇಡ್ ಮಾ ಕೇ ನಾಮ್' ಅಭಿಯಾನದಡಿ ಸುಮಾರು 20 ಮಂದಿ ತಾಯಂದಿರು ತಮ್ಮ ಮಕ್ಕಳೊಂದಿಗೆ ಸೇರಿ ತಾಯಿಯ ಹೆಸರಿನಲ್ಲಿ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು.
ವಿದ್ಯಾರ್ಥಿಗಳು ಪರಿಸರ ಜಾಗೃತಿ ಗೀತೆಗಳನ್ನು ಹಾಡಿ, ಪರಿಸರ ಘೋಷಣೆಗಳನ್ನು ಮೊಳಗಿಸಿ ಎಲ್ಲರಲ್ಲೂ ಹಸಿರು ಪರಿಸರದ ಬಗ್ಗೆ ಕಾಳಜಿ ಮೂಡಿಸಿದರು.
ಶಾಲಾ ಮುಖ್ಯ ಶಿಕ್ಷಕ ತಾರಾನಾಥ ಸವಣೂರು, ಶಿಕ್ಷಕಿಯರಾದ ಶೋಭಾ, ಶಿಲ್ಪರಾಣಿ, ಸೌಮ್ಯ, ಮಲ್ಲಿಕಾ, ಕುಬ್ರಾ, ಸಂಚನಾ ಹಾಗೂ ಸವಿತಾ, ಅಡುಗೆ ಸಿಬ್ಬಂದಿಗಳು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ಹಸಿರು ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸುವ ಸಂಕಲ್ಪ ಕೈಗೊಳ್ಳಬೇಕು ಎಂಬ ಸಂದೇಶದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಅಮಾಸೆಬೈಲು ಶಾಲಾ ವಠಾರದಲ್ಲಿ ವಿಶ್ವ ಪರಿಸರ ದಿನಾಚರಣೆ

ಗಿಡವನ್ನು ತಾಯಿಯಂತೆ ಆರೈಕೆ ಮಾಡಿ: ಕೊಡ್ಗಿ



ಕುಂದಾಪುರ: ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಪ್ರತಿಯೊಬ್ಬರೂ ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಟ್ಟು ಪೋಷಿಸಬೇಕು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಮಕ್ಕಳಿಂದಲೇ ಈ ಜಾಗೃತಿ ಆರಂಭವಾಗಬೇಕು. ಒಂದು ಗಿಡ ನೆಟ್ಟರೆ ಅದು ಮುಂದಿನ ಪೀಳಿಗೆಗೆ ನಾವು ನೀಡುವ ಅಮೂಲ್ಯ ಕೊಡುಗೆ ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹೇಳಿದರು.
ಅರಣ್ಯ ಇಲಾಖೆ ಆಗುಂಬೆ ವನ್ಯಜೀವಿ ವಲಯ ಹಾಗೂ ಶಾಲೆಯ ಸಹ ಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅಮಾಸೆಬೈಲಿನ ಸರ್ಕಾರಿ ಪ್ರೌಢಶಾಲಾ ವಠಾರದಲ್ಲಿ 'ತಾಯಿಯ ಹೆಸರಿನಲ್ಲಿ ಒಂದು ಗಿಡ' ನೆಡುವ ಕಾರ್ಯ ಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.
ಅರಣ್ಯ ಇಲಾಖೆಯ ಈ ಕಾರ್ಯಕ್ರಮ ಮಾದರಿ. ಶಾಲಾ ಹಂತದಲ್ಲೇ ಪರಿಸರ ಪ್ರೀತಿ ಬೆಳೆಸಿದರೆ ಹಸಿರು ಕರ್ನಾಟಕದ ಕನಸು ನನಸಾಗುತ್ತದೆ. ನೆಟ್ಟ ಗಿಡಗಳನ್ನು ವಿದ್ಯಾರ್ಥಿಗಳು ತಮ್ಮ ತಾಯಿಯಂತೆ ಆರೈಕೆ ಮಾಡಬೇಕು ಎಂದು ಕರೆ ನೀಡಿದರು.
ಆಗುಂಬೆ ವನ್ಯಜೀವಿ ವಲಯ ಅಮಾಸೆಬೈಲು ಇದರ ಅರಣ್ಯ ಅಧಿಕಾರಿ ರೂಪೇಶ್, ಶಾಲಾ ಮುಖ್ಯೋಪಾಧ್ಯಾಯ ನಾಗರಾಜ್, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ಕುಮಾರ್ ಭಾಗವತ್, ಶಾಲಾ ಅಧ್ಯಾಪಕರು, ಅರಣ್ಯ ಇಲಾಖೆ ಸಿಬ್ಬಂದಿಗಳು, ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡು ಗಿಡಗಳನ್ನು ನೆಟ್ಟರು.

ಸುತ್ತಮುತ್ತ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಸರ ದಿನಾಚರಣೆ

ಕಾಸರಗೋಡು: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಸಸಿಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಿತು. ಪ್ರಧಾನ ಜಿಲ್ಲಾ ನ್ಯಾಯಾಧೀಶ ಮತ್ತು ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಆರ್.ವಿನಾಯಕ ರಾವ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಥಮ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶೆ ಪಿ.ಎಚ್.ರಜಿತಾ, ಇತರ ಜಿಲ್ಲಾ ನ್ಯಾಯಾಧೀಶರು, ನ್ಯಾಯಾಧೀಶರು, ವಕೀಲರ ಸಂಘದ ಅಧ್ಯಕ್ಷರು, ವಕೀಲರು ಮತ್ತು ನ್ಯಾಯಾಲಯದ ಸಿಬ್ಬಂದಿಗಳು ಭಾಗವಹಿಸಿದ್ದರು. ಡಿಎಲ್‌ಎಸ್‌ಎ ಕಾರ್ಯದರ್ಶಿ ಮತ್ತು ಹಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶ ಎಸ್.ಶಿವದಾಸ್ ಮಾತನಾಡಿದರು.

ಡೀಸೆಲ್ ಸಬ್ಸಿಡಿ ನೀಡುವಂತೆ ರೈತ ಸಂಘ ಆಗ್ರಹ

ಬಂಟ್ವಾಳ: ಜಾಗತಿಕ ಯುದ್ಧದ ಪರಿಣಾಮ ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದಾಗಿ ಕೃಷಿ ವಲಯಕ್ಕೆ ದೊಡ್ಡ ಹೊಡೆತ ಉಂಟಾಗಿರುವ ನಿಟ್ಟಿನಲ್ಲಿ ರೈತರಿಗೆ ಡೀಸೆಲ್ ಸಬ್ಸಿಡಿ ನೀಡುವಂತೆ ಕ.ರಾ. ರೈತ ಸಂಘ ಸರಕಾರವನ್ನು ಮನವಿ ಮೂಲಕ ಆಗ್ರಹಿಸಿದೆ. ಈಗಾಗಲೇ ಗದ್ದೆ ಉಳುಮೆ,ಅಡಿಕೆ ತೋಟಗಳಿಗೆ ಮದ್ದು ಸಿಂಪಡಣೆ,ಅಡಿಕೆ ತೋಟಗಳಲ್ಲಿ ಹಾಗೂ ಇತರ ಕಡೆ ಕಳೆನಾಶ ಸಿಂಪಡಣೆ ಹಾಗೂ ಇತರ ಕೆಲಸಗಳು ಪೆಟ್ರೋಲ್ ಹಾಗೂ ಡಿಸೇಲ್ ಮೇಲೆ ಅವಲಂಬಿತವಾಗಿದ್ದು ತೈಲ ಬೆಲೆ ಏರಿಕೆಯಿಂದಾಗಿ ರೈತರಿಗೆ ಹಾಗೂ ಕೃಷಿವಲಯಕ್ಕೆ ಅಪಾರ ನಷ್ಟ ಉಂಟಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಕೂಲಿಯಾಳುಗಳ ಕೊರತೆಯಿಂದ ಕೃಷಿ ಚಟುವಟಿಕೆಗಳು ಹಿನ್ನಡೆಗೊಂಡಿದ್ದರೂ ರೈತರು ಯಾಂತ್ರಿಕ ಕೃಷಿ ಚಟುವಟಿಕೆಯತ್ತ ಗಮನ ಹರಿಸಿದ್ದಾರೆ.ಕೃಷಿ ಸರಕು ಸಾಗಣೆಯ ವಾಹನಗಳಿಗೆ ದುಬಾರಿ ಖರ್ಚು ತಗುಲಿದ್ದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.ಆದ್ದರಿಂದ ಕೃಷಿ ಚಟುವಟಿಕೆಯಲ್ಲಿ ನಿರತರಾಗಿರುವ ಕೃಷಿ ಯಂತ್ರೋಪಕರಣ ಹಾಗೂ ವಾಹನಗಳಿಗೆ ಡಿಸೇಲ್ ಸಬ್ಸಿಡಿ ನೀಡುವಂತೆ ದ.ಕ ಜಿಲ್ಲೆಯ ಸಂಸದರು, ಶಾಸಕರು ಹಾಗೂ ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಇವರಲ್ಲಿ ಮನವಿ ಮಾಡಲಾಗಿದೆ ಎಂದು ಕ.ರಾ. ರೈತ ಸಂಘದ ರಾಜ್ಯ ಕಾರ್ಯದರ್ಶಿ ಮನೋಹರ್ ಶೆಟ್ಟಿ ನಡಿಕಂಬಳಗುತ್ತು ಹಾಗೂ ಸಂಘದ ದ.ಕ ಜಿಲ್ಲಾಧ್ಯಕ್ಷರಾದ ಶ್ರೀಧರ ಶೆಟ್ಟಿ ಬೈಲುಗುತ್ತು ಅವರು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುದಾನ ನೀಡುವಲ್ಲಿ ಆಡಳಿತ ವಿಫಲ: ನವೀನ್ ನಾಯಕ್

ಕಾರ್ಕಳ: ಪುರಸಭಾ ವ್ಯಾಪ್ತಿಯ ಕಸದ ಸಮಸ್ಯೆ ಪರಿಹಾರಕ್ಕಾಗಿ ಹಾಗೂ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಕಾರ್ಕಳ ಶಾಸಕರು ಈಗಾಗಲೇ ಜಿಲ್ಲಾ ಸಹಾಯಕ ಕಮಿಷನರ್, ಜಿಲ್ಲಾ ಯೋಜನಾಧಿಕಾರಿ ಹಾಗೂ ಇತರ ಅಧಿಕಾರಿಗಳ ಸಭೆ ಕರೆದು ಕಾರ್ಕಳದ ಅಭಿವೃದ್ಧಿಯ ಕುರಿತು ಸಭೆ ನಡೆಸಿದ್ದಾರೆ. ಪುರಸಭಾ ವ್ಯಾಪ್ತಿಯ ಅಭಿವೃದ್ಧಿಯ ಕುರಿತಾಗಿಯೇ ಚರ್ಚೆ ನಡೆಸಿ ಕಾರ್ಯಯೋಜನೆ ರೂಪಿಸಿದ್ದಾರೆ. ಇದರ ಪರಿಣಾಮವಾಗಿ ತಕ್ಷಣವೇ ಪುರಸಭಾ ವ್ಯಾಪ್ತಿಯ ಕಸದ ಸಮಸ್ಯೆ ಬಗೆ ಹರಿಯಲಿದೆ ಎನ್ನುವುದನ್ನರಿತು ಇದರ ಕ್ರೆಡಿಟ್ ಪಡೆದುಕೊಳ್ಳುವ ತರಾತುರಿಯಲ್ಲಿ ಸ್ಥಳೀಯ ಕಾಂಗ್ರೆಸ್ ನಾಯಕರು ತಮ್ಮ ಪ್ರಚಾರದ ಗೀಳಿಗೆ ನಾನಾ ರೀತಿಯ ಮಾಧ್ಯಮ ಹೇಳಿಕೆಗಳನ್ನು ನೀಡಲು ಶುರು ಮಾಡಿರುವುದು ಹಾಸ್ಯಾಸ್ಪದ ಎಂದು ಕಾರ್ಕಳ ಬಿಜೆಪಿ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್ ತಿಳಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅದ್ಯಾವ ರೀತಿ ಕೆಲಸ ಮಾಡುತ್ತಿದೆ ಅನ್ನೋದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಕಾಂಗ್ರೆಸ್ಸಿನ ಗದ್ದುಗೆ ಗುದ್ದಾಟದಲ್ಲಿ ರಾಜ್ಯದ ಆಡಳಿತ ಯಂತ್ರವೇ ಕುಸಿದಿದೆ. ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದು 3 ವರ್ಷಗಳಾದರೂ ಯಾವ ಕ್ಷೇತ್ರಕ್ಕೂ ಒಂದು ಬಿಡಿಗಾಸು ಅಭಿವೃದ್ಧಿಗಾಗಿ ಬಿಡುಗಡೆಯಾಗುತ್ತಿಲ್ಲ. ರಾಜ್ಯ ಸರ್ಕಾರೀ ನೌಕರರಿಗೆ ಸರಿಯಾಗಿ ವೇತನ ಸಿಗುತ್ತಿಲ್ಲ, ಪುರಸಭಾ ಕಾರ್ಮಿಕರಿಗೂ ವೇತನ ನೀಡುತ್ತಿಲ್ಲ, ಜನ ಸಾಮಾನ್ಯರಿಗೆ ಜೀವನಾಧಾರವಾಗಿರುವ ಮಾಸಿಕ ವೃದ್ಧಾಪ್ಯ ವೇತನ, ವಿಧವಾ ವೇತನದಂತಹ ಪಿಂಚಣಿಯು ಸಹ ಮರೀಚಿಕೆಯಾಗಿಬಿಟ್ಟಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯದ ನಡುವೆಯೂ ಕಾರ್ಕಳದ ಶಾಸಕರು ಮಾತ್ರ ಯಾವುದೇ ಪ್ರಚಾರ ನೀಡದೆ, ಯೋಜನೆ ರೂಪಿಸಿ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಿದ್ದಾರೆ ಎಂದು ನವೀನ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಬ್ರಹ್ಮಣ್ಯದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ | ನ.ಸೀತಾರಾಮ ಕಳವಳ

ಗಾಳಿಯ ಗುಣಮಟ್ಟ ಕುಸಿತ ಅಪಾಯಕಾರಿ



ಸುಬ್ರಹ್ಮಣ್ಯ: ನಾವು ಇಂದು ಪರಿಸರವನ್ನು ಉಳಿಸದಿದ್ದರೆ ನಿತ್ಯ ಮಾಲಿನ್ಯ ಭರಿತ ಗಾಳಿಯನ್ನು ಉಸಿರಾಡಬೇಕಾಗುವ ಪರಿಸ್ಥಿತಿ ಬರಬಹುದು. ಆದ್ದರಿಂದ ಪ್ರತಿಯೊಬ್ಬ ಪ್ರಜೆಯೂ ಸ್ವಚ್ಛ ಪರಿಸರ ಕಾಪಾಡುವುದು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಿ, ಪರಿಸರ ಕಾಳಜಿ ಬೆಳೆಸಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಸಹ ಸೇವಾ ಪ್ರಮುಖ್, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ವ್ಯವಸ್ಥಾಪನ ಸಮಿತಿಯ ಮಾಜಿ ಸದಸ್ಯ ನ.ಸೀತಾರಾಮ ಕರೆ ನೀಡಿದರು.

ಮಂಗಳೂರಿನ ನಿಟ್ಟೆ ಫಿಜಿಯೋಥೆರಪಿ ಮಹಾವಿದ್ಯಾಲಯ (ಕ್ಷೇಮ) ಆಯೋಜಿಸಿರುವ ವಿಶ್ವ ಪರಿಸರ ದಿನದ ಅಂಗವಾಗಿ ಶುಕ್ರವಾರ ಕುಕ್ಕೆ ಸುಬ್ರಹ್ಮಣ್ಯ ದೇವಳದ ಪರಿಸರದಲ್ಲಿ ನಡೆದ ಕ್ಲೀನ್ ಕುಮಾರಧಾರಾ, ಗ್ರೀನ್ ಸುಬ್ರಹ್ಮಣ್ಯ ಬೃಹತ್ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿ, ಮಾತನಾಡಿದರು.

ಇಂದು ಇಡೀ ವಿಶ್ವದಲ್ಲಿ ವಾಯುಮಾಲಿನ್ಯ ನೀರು ಮಣ್ಣು ಗಾಳಿ ಇತ್ಯಾದಿಗಳ ಮೇಲೆ ಮನುಷ್ಯನ ದೌರ್ಜನ್ಯ ನಡೆಯುತ್ತಿದೆ. ನಾವು ಉತ್ತಮ ಬದುಕನ್ನ ರೂಪಿಸಿಕೊಳ್ಳಬೇಕಾದರೆ ಯೋಗ್ಯ ರೀತಿಯಲ್ಲಿ ಪರಿಸರವನ್ನ ಸಂರಕ್ಷಿಸೋಣ ಎಂದು ನುಡಿದರು.

ಸ್ವಚ್ಛತಾ ಸೇವೆ

ನಿಟ್ಟೆ ಇನ್ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿಯ ಸುಮಾರು 70 ವಿದ್ಯಾರ್ಥಿಗಳು ಸ್ನಾನಘಟ್ಟ ಬಳಿ, ಆದಿಸುಬ್ರಮಣ್ಯ ಪರಿಸರದಲ್ಲಿ ಸ್ವಚ್ಛತಾ ಕಾರ್ಯಕ್ರಮ ಕೈಗೊಂಡರು.

ನದಿಗೆ ಬಟ್ಟೆ ಎಸೆಯದಿರಿ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ ಮಾತನಾಡಿ, ಮೂಢ ನಂಬಿಕೆಯಿಂದ ದೂರವಿದ್ದು ನದಿಯಲ್ಲಿ ಬಟ್ಟೆ ಹಾಕಿ ಪರಿಸರ ಮಾಲಿನ್ಯ ಮಾಡುವುದರ ವಿರುದ್ಧ ಜಾಗೃತಿ ಅತ್ಯಗತ್ಯ ಎಂದರು.

ನಿಟ್ಟೆ ಕ್ಷೇಮದ ಡೀನ್ ಡಾ. ಸಂದೀಪ್ ರೈ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಪ್ರಸನ್ನ ದರ್ಬೆ, ವನಜಾ ವಿ.ಭಟ್, ಶೋಭಾ ಗಿರಿಧರ್, ಮಾಸ್ಟರ್ ಪ್ಲಾನ್ ಸಮಿತಿ ಮಾಜಿ ಸದಸ್ಯ ಮನೋಜ್ ಎಸ್, ನಿಟ್ಟೆ ಇನ್ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿ ಪ್ರಾಂಶುಪಾಲ ಡಾ. ದಿನೇಶ್ ಕುಮಾರ್ ಕೆ.ಯು., ಪ್ರಾಧ್ಯಾಪಕ ಡಾ. ಪುರುಷೋತ್ತಮ, ವೈದ್ಯಾಧಿಕಾರಿ ಡಾ. ವಿಕ್ರಮ ಶೆಟ್ಟಿ ದಂತ ವೈದ್ಯ ಡಾ. ಚರಣ್ ಶೆಟ್ಟಿ, ಮೇಲ್ವಿಚಾರಕ ತಾರನಾಥ್, ನಿಟ್ಟೆ ಫಿಜಿಯೋಥೆರಪಿ ಕನ್ವೀನರ್ ರಾಕೇಶ್ ಕೃಷ್ಣ ಕೋ- ಆರ್ಡಿನೇಟರ್ ನಿತ್ಯಲ್ ಕುಮಾರ್ ಇದ್ದರು. ನಿವೃತ್ತ ಉಪನ್ಯಾಸಕ ವಿಶ್ವನಾಥ ನಡುತೋಟ ನಿರೂಪಿಸಿದರು.

ಅಲ್ಲಲ್ಲಿ ಪರಿಸರ ದಿನಾಚರಣೆ



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪುತ್ತೂರು ವಿಭಾಗದ ಬಿ.ಸಿ. ರೋಡ್ ಘಟಕದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ನೆರವೇರಿತು. ಬಂಟ್ವಾಳದ ಶಿಶು ಅಭಿವೃದ್ಧಿ ಅಧಿಕಾರಿ ಮಮ್ತಾಜ್, ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ಶಾಲಿನಿ ಶ್ರೀಧರ್ ಶೆಟ್ಟಿ, ಬಿಸಿರೋಡ್ ಘಟಕದ ಸಹಾಯಕ ಕಾರ್ಯಾಧೀಕ್ಷಕ ವಿನಯ ಜೆ. ರೈ, ಸಂಚಾರ ಅಧೀಕ್ಷಕ ಗಣೇಶ್ ಪೈ, ಕೇಶವ, ಸಿಬ್ಬಂದಿಗಳು ಹಾಜರಿದ್ದರು. ವಿವಿಧ ಹಣ್ಣುಗಳ ಗಿಡ ನೆಡಲಾಯಿತು.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೊಗವೀರ ಯುವ ಸಂಘಟನೆ ಹಾಗೂ ಮಹಿಳಾ ಸಂಘಟನೆ ಸಾಲಿಗ್ರಾಮ ಘಟಕ ಹಾಗೂ ಪ.ಪಂ. ಸಾಲಿಗ್ರಾಮ ಸಂಯುಕ್ತ ಆಶ್ರಯದಲ್ಲಿ ಕೋಟ ಪ್ಯಾಪ್ಪಿಯ ಪಾರಂಪಳ್ಳಿ ಸಮುದ್ರ ಕಿನಾರೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸಂಘಟನೆಯ ಸಾಲಿಗ್ರಾಮ ಘಟಕ ಅಧ್ಯಕ್ಷ ಕಿರಣ ಕುಂದರ್, ಪೂರ್ವಾಧ್ಯಕ್ಷ ಕೃಷ್ಣಮೂರ್ತಿ ಮರಕಾಲ, ಚಂದ್ರ ಬಂಗೇರ, ಜಿಲ್ಲಾ ಸಮಿತಿಯ ಪೂರ್ವಾಧ್ಯಕ್ಷ ಸಂಜೀವ ಎಂ.ಎಸ್., ಶಿವರಾಮ ಕೆ.ಎಂ., ಜಯಂತ್ ಅಮೀನ್ ಕೋಡಿ, ಸಲಹಾ ಸಮಿತಿಯ ರಮೇಶ್ ಕುಂದರ್, ರಾಮಬಂಗೇರ, ಲೋಕೇಶ ಕಾಂಚನ್ ಮತ್ತು ಪ.ಪಂ. ಆರೋಗ್ಯ ನಿರೀಕ್ಷಕ ಮಮತಾ ಇದ್ದರು.



ಉಳ್ಳಾಲ ಅನುದಾನಿತ ಭಾರತ್ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯು ಅರಣ್ಯ ಇಲಾಖೆಯ ಸಹಯೋಗದಲ್ಲಿ ಜರಗಿತು. ಪರಿಸರ ಪ್ರೇಮಿ ಮಾಧವ್ ಉಳ್ಳಾಲ್, ನಿವೃತ್ತ ಶಿಕ್ಷಕಿ, ಲಲಿತಾ.ಬಿ.ರಾವ್, ಕೋಟೆಕಾರು ಉಪವಲಯ ಅರಣ್ಯಾಧಿಕಾರಿಯಾದ ಮೆಹಬೂಬ್ ಸಾಬ್ ಗುಡಿಹೊಲ, ಅರಣ್ಯ ಪಾಲಕ ವೀಣಾ ಹಾಗೂ ರೋಹಿತ್ ಕುಮಾರ್,ಅರಣ್ಯ ವೀಕ್ಷಕ ಅಭಿಜಿತ್, ಶಾಲಾ ಸಂಚಾಲಕ ರೋಹಿದಾಸ್ ಬಂಗೇರ, ಶಾಲಾ ಪರಿಸರ ಸಂಘದ ಮಾರ್ಗದರ್ಶಕಿ ಪ್ರಜ್ಞಾ, ಶಾಲಾ ಮುಖ್ಯ ಶಿಕ್ಷಕ ವಿನಯ ಕುಮಾರಿ, ಅಧ್ಯಾಪಕ ತಿಪ್ಪೆಸ್ವಾಮಿ, ಶಿಕ್ಷಕ ಪ್ರಕಾಶ್ ಗುಂಪೆ ಮೊದಲಾದವರಿದ್ದರು.



ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಸ್ಕೌಟ್ಸ್ ಗೈಡ್ಸ್ ಮತ್ತು ಎನ್.ಸಿ.ಸಿ ಘಟಕದ ಸಹಯೋಗದೊಂದಿಗೆ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಕುಂದಾಪುರ ವಲಯ ಅರಣ್ಯಾಧಿಕಾರಿ ದಿಲೀಪ್ ಕುಮಾರ್ ಬಿ.ವಿ., ವಲಯ ಅರಣ್ಯಾಧಿಕಾರಿ ಪರಮೇಶ್ವರ ಪಟಗಾರ್, ಬೀಟ್ ಅರಣ್ಯ ರಕ್ಷಕ ಶಿವಣ್ಣ ಆರ್.ವಿ., ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಕೃಷ್ಣ ಅಡಿಗ, ಸಹ ಶಿಕ್ಷಕಿ ರೇಖಾ ಶೆಟ್ಟಿ, ಸಹ ಶಿಕ್ಷಕಿ ಚೈತ್ರಾ ಮೊದಲಾದವರು ಉಪಸ್ಥಿತರಿದ್ದರು.

ಬಂಟ್ವಾಳ ತಾಲೂಕಿನ ವಿವಿಧೆಡೆ ಸರಕಾರಿ ಶಾಲೆಗಳಲ್ಲಿ ಪರಿಸರ ದಿನಾಚರಣೆ



ಬಂಟ್ವಾಳ: ತಾಲೂಕಿನ ವಿವಿಧ ಸರಕಾರಿ ಶಾಲೆಗಳಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಶುಕ್ರವಾರ ಆಚರಿಸಲಾಯಿತು.

ದಡ್ಡಲಕಾಡು

ಬಂಟ್ವಾಳಕ್ಕೆ ಸಮೀಪದ ದಡ್ಡಲಕಾಡು ಪಿಎಂಶ್ರೀ ಸರಕಾರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನದ ಪ್ರಯುಕ್ತ ವಿದ್ಯಾರ್ಥಿಗಳಿಗೆ ವಿಶ್ವ ಪರಿಸರದ ಮಹತ್ವವನ್ನು ತಿಳಿಸಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಗಿಡವನ್ನು ನೆಟ್ಟು ನೀರನ್ನು ಹಾಕಿ ಚಾಲನೆ ನೀಡಿದರು. ಪರಿಸರಕ್ಕೆ ಸಂಬಂಧಿಸಿದ ಘೋಷ ವಾಕ್ಯ ಗಳನ್ನು ಹೇಳಿ ಜಾಥಾ ನಡೆಸಿದರು. ತದನಂತರ ಪ್ಲಾಸ್ಟಿಕ್ ಮುಕ್ತ ಸ್ವಚ್ಛ ಪರಿಸರ ಧ್ಯೇಯ ದಡಿ ಶಾಲಾ ಸುತ್ತ ಮುತ್ತಲಿನ ಪರಿಸರ ಸ್ವಚ್ಛಗೊಳಿಸಲಾಯಿತು.

ಪಿಎಂಶ್ರೀ ವಿಟ್ಲ:

ಪಿಎಂಶ್ರೀ ವಿಟ್ಲ ಶಾಲೆಯ ಆವರಣದಲ್ಲಿ ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ ಕೆ. ಅವರು ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಿದರು. ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ವಿದ್ಯಾರ್ಥಿಗಳು, ಶಿಕ್ಷಕರು ಹಾಜರಿದ್ದರು.

ವಾಮದಪದವು

ತಾಲೂಕಿನ ಸರ್ಕಾರಿ ಪ್ರೌಢಶಾಲೆ ನಯನಾಡು ಹಾಗೂ ವಾಮದಪದವು ಸರಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗದ ವತಿಯಿಂದ ಶಾಲಾ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ತಾಲೂಕು ಇಸಿಒ ರಮಾನಂದ ನೂಜಿಪಾಡಿ,ಶಾಲಾ ಶಿಕ್ಷಕರು,ವಿದ್ಯಾರ್ಥಿಗಳು ಹಾಜರಿದ್ದರು.

ಯುವವಾಹಿನಿ ಮಾಣಿ ಘಟಕದಿಂದ 'ಯುವ ವೃಕ್ಷೋತ್ಸವ' ಕಾರ್ಯಕ್ರಮ



ಬಂಟ್ವಾಳ: ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಯುವವಾಹಿನಿ ಮಾಣಿ ಘಟಕದಿಂದ 'ಮರದ ನೆರಳು ಬದುಕಿಗೆ ನೆರಳು' ಎಂಬ ಧ್ಯೇಯದೊಂದಿಗೆ ಹಮ್ಮಿಕೊಂಡಿರುವ ಯುವ ವೃಕ್ಷೋತ್ಸವ ಕಾರ್ಯಕ್ರಮಕ್ಕೆ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಸಭಾಭವನದ ವಠಾರದಲ್ಲಿ ಚಾಲನೆ ನೀಡಲಾಯಿತು.

ನಾರಾಯಣ ಗುರು ಸೇವಾ ಸಹಕಾರಿ ಸಂಘದ ಅಧ್ಯಕ್ಷ ನಾರಾಯಣ ಸಾಲಿಯಾನ್ ಉದ್ಘಾಟಿಸಿದರು. ಯುವವಾಹಿನಿ ಘಟಕದ ಅಧ್ಯಕ್ಷ ಗಣೇಶ್ ಸಾಯಿ ಕೊಡಾಜೆ, ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಕಾರ್ಯದರ್ಶಿ ರಮೇಶ್ ಪೂಜಾರಿ ಮುಜಲ, ಸಿಇಒ ಪಲ್ಲವಿ ಲೋಕೇಶ್, ಪ್ರಚಾರ ನಿರ್ದೇಶಕ ಚರಣ್, ಗೀತಾ ಹಾಗೂ ಮ್ಯಾನೇಜರ್ ಜನಾರ್ಧನ ಪೂಜಾರಿ ಉಪಸ್ಥಿತರಿದ್ದರು. ಅಭಿಯಾನದ ಅಂಗವಾಗಿ ಬಾಬನಕಟ್ಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅನಂತಾಡಿ ಗ್ರಾಮ ಪಂಚಾಯಿತ್‌ನಲ್ಲಿ ಯುವ ವೃಕ್ಷೋತ್ಸವವನ್ನು ಕೈಗೊಳ್ಳಲಾಯಿತು.

ಈ ವಿಭಿನ್ನ ವೃಕ್ಷೋತ್ಸವ ಅಭಿಯಾನವು ಸರಕಾರಿ ಶಾಲೆ, ಆಸ್ಪತ್ರೆ, ಗ್ರಾಮ ಪಂಚಾಯತ್ ಹಾಗೂ ವಿವಿಧ ಧಾರ್ಮಿಕ ಕೇಂದ್ರಗಳಲ್ಲಿ ಒಂದು ತಿಂಗಳ ಕಾಲ ನಿರಂತರವಾಗಿ ಮುಂದುವರಿಯಲಿದೆ ಎಂದು ಘಟಕದ ಅಧ್ಯಕ್ಷ ಗಣೇಶ್ ಸಾಯಿರವರು ತಿಳಿಸಿದರು.

ಕೋಟದ ವಿವೇಕ ವಿದ್ಯಾಸಂಸ್ಥೆಯ ಆವರಣದಲ್ಲಿ ಪರಿಸರ ದಿನಾಚರಣೆ



ಕೋಟ: ಪ್ರಕೃತಿ ಇಲ್ಲದೆ ಮನುಕುಲವಿಲ, ಮನುಕುಲಕ್ಕೆ ಅಗತ್ಯವಾದ ಪ್ರಕೃತಿಯ ಮೇಲೆ ನಿರಂತರ ಹಾನಿಗೊಳಿಸುವ ಕಾರ್ಯ ಈ ಮಾನವ ಮಾಡುತ್ತಿದ್ದಾನೆ ಇದರ ಪರಿಣಾಮ ಈಗಾಲೇ ನಾವುಗಳು ಅನುಭವಿಸುತ್ತಿದ್ದೇವೆ ಹೀಗಿರುವಾಗ ಯುವ ಸಮುದಾಯ ಪ್ರಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡಲೇ ಬೇಕು ಎಂದು ಪತ್ರಕರ್ತ ರವೀಂದ್ರ ಕೋಟ ವಿದ್ಯಾರ್ಥಿಗಳಿಗೆ ಕರೆ ನೀಡಿದರು

ಕೋಟದ ವಿವೇಕ ವಿದ್ಯಾಸಂಸ್ಥೆಯ ವಿವೇಕ ಬಾಲಕಿಯರ ಪ್ರೌಢಶಾಲೆಯ ಸ್ವರ್ಣಭವನದಲ್ಲಿ ಇಕೋ ಕ್ಲಬ್ ಆಶ್ರಯದಲ್ಲಿ ವಿಶ್ವಪರಿಸರ ದಿನದ ಅಂಗವಾಗಿ ಗಿಡ ನಡುವ ಮೂಲಕ ವಿದ್ಯಾರ್ಥಿಗಳಿಗೆ ಜಾಗೃತಿ ಸಂದೇಶವನ್ನು ನೀಡಿದರು.

ವಿವೇಕ ವಿದ್ಯಾಸಂಸ್ಥೆ ವತಿಯಿಂದ ಸನ್ಮಾನ ಸ್ವೀಕರಿಸಿ ಪರಿಸರ ಪ್ರೇಮಿ ಪಂಚವರ್ಣದ ಮಹೇಶ್ ಬೆಳಗಾವಿ ಮಾತನಾಡಿ, ಪರಿಸರದ ಮೇಲೆ ಮಾನವ ದೌರ್ಜನ್ಯ ಎಸಗುತ್ತಿದ್ದಾನೆ. ಕಂಡಕಂಡಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಸೆದು ಮಲಿನಗೊಳಿಸುತ್ತಿದ್ದಾನೆ. ಅಭಿವೃದ್ಧಿ ನೆಪದಲ್ಲಿ ಮರ ಕಡಿದು ಕಾಂಕ್ರೀಟ್ ಕಾಡು ನಿರ್ಮಿಸುತ್ತಿದ್ದಾನೆ. ಇದರಿಂದ ತಾಪಮಾನ ದಿನದಿಂದ ದಿನಕ್ಕೆ ಏರುತ್ತಿದೆ,ಮಳೆಯ ಪ್ರಮಾಣ ಕುಸಿಯಲು ಆರಂಭಿಸಿದೆ ಹೀಗಾದರೆ ಮುಂದಿನ ಸ್ಥಿತಿ ಅಯೋಮಯ ಎಂದರಲ್ಲದೆ ವಿದ್ಯಾರ್ಥಿಗಳೇ ಜಾಗೃತರಾಗಿ ಗಿಡ ನೆಟ್ಟು ಪೋಷಿಸುವ ಕಾರ್ಯ ಮಾಡಿ, ಎಂದು ಕರೆ ನೀಡಿದರು.

ಇದೇ ವೇಳೆ ಶಾಲಾ ಕೈ ತೋಟದಲ್ಲಿ ಬೆಂಡೆ ಬೀಜ ನೆಟ್ಟು ವಿದ್ಯಾರ್ಥಿಗಳಿಗೆ ಸಾವಯೋವ ತರಕಾರಿ ಬೆಳೆಯುವ ಪರಿಯನ್ನು ಶಿಕ್ಷಕರು ನೀಡಿದರು. ಈ ವೇಳೆ ಮಹೇಶ್ ಬೆಳಗಾವಿ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿಯ ಪ್ರತಿಜ್ಞಾ ವಿಧಿ ಭೋದಿಸಿದರು. ವಿವೇಕ ಬಾಲಕಿಯರ ಪ್ರೌಢಶಾಲಾ ಮುಖ್ಯ ಶಿಕ್ಷಕ ವೆಂಕಟೇಶ ಉಡುಪ ಅಧ್ಯಕ್ಷತೆ ವಹಿಸಿದ್ದರು. ಇಕೋ ಕ್ಲಬ್ ಸಂಚಾಲಕಿ ಶಿಕ್ಷಕಿ ಮಮತಾ, ಶಿಕ್ಷಕ ಇದ್ದರು. ವಿದ್ಯಾರ್ಥಿನಿ ಅನಘ ಹೊಳ್ಳ ಸ್ವಾಗತಿಸಿ ನಿರೂಪಿಸಿ ಇಕೋ ಕ್ಲಬ್ ಕಾರ್ಯದರ್ಶಿ ಅಮೂಲ್ಯ ವಂದಿಸಿದರು.

ಮಾಣಿ ಬಾಲವಿಕಾಸದಲ್ಲಿ ವಿಶ್ವ ಪರಿಸರ ದಿನ, ವನಮಹೋತ್ಸವ ಕಾರ್ಯಕ್ರಮ



ವಿಟ್ಲ: ಪೆರಾಜೆ- ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಂಗಳೂರು, ಸಾಮಾಜಿಕ ಅರಣ್ಯ ವಿಭಾಗ ಮಂಗಳೂರು ಹಾಗೂ ಸಾಮಾಜಿಕ ಅರಣ್ಯ ವಲಯ, ಬಂಟ್ವಾಳ ಇದರ ಆಶ್ರಯದಲ್ಲಿ ಮಾಣಿಯ ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಜೂನ್ 5ರಂದು ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಬಂಟ್ವಾಳ ವಲಯ ಅರಣ್ಯಾಧಿಕಾರಿ ಸತೀಶ್ ಲೂಕ ಮಾತನಾಡಿ, ವಿಶ್ವ ಪರಿಸರ ದಿನಾಚರಣೆಯ ಇತಿಹಾಸ ಹಾಗೂ ಮಹತ್ವದ ಬಗ್ಗೆ ವಿವರಿಸಿದರು.

ಬಾಲವಿಕಾಸ ಸಂಸ್ಥೆಯ ಮುಖ್ಯಶಿಕ್ಷಕಿ ಸುಪ್ರಿಯಾ ದೇವರಮಜಲು ಅಧ್ಯಕ್ಷತೆ ವಹಿಸಿದ್ದರು ಈ ಕಾರ್ಯಕ್ರಮದಲ್ಲಿ ಬಂಟ್ವಾಳ ಉಪ ಅರಣ್ಯಾಧಿಕಾರಿ ಪ್ರೀತಂ ಎಸ್., ಬಂಟ್ವಾಳ ಉಪವಲಯ ಆರಣ್ಯಾಧಿಕಾರಿ ಕೃಷ್ಣ ಜೋಗಿ, ಬಾಲವಿಕಾಸ ಸಂಸ್ಥೆಯ ನರ್ಸರಿ ವಿಭಾಗದ ಶೈಕ್ಷಣಿಕ ಸಲಹೆಗಾರ ಫಿಲೋಮಿನಾ ಐಡಾ ಲೋಬೋ, ಸಂಸ್ಥೆಯ ಶಿಕ್ಷಕ – ಶಿಕ್ಷಕೇತರ ವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದ ಈ ಕಾರ್ಯಕ್ರಮಕ್ಕೆ ಅತಿಥಿಗಳನ್ನು ಸಂಸ್ಥೆಯ ಉಪ ಮುಖ್ಯಶಿಕ್ಷಕರಾದ ದಿನಕರ ಪೂಜಾರಿ ಶಾಲು ಹಾಕಿ ಸ್ವಾಗತಿಸಿದರು. ಈ ಕಾರ್ಯಕ್ರಮವನ್ನು ಸಂಸ್ಥೆಯ ವಿಜ್ಞಾನ ಶಿಕ್ಷಕಿ ಆಶ್ವಿನಿ ನಿರೂಪಿಸಿ, ವಂದಿಸಿದರು.

ಶಾಲಾ ಪರಿಸರದಲ್ಲಿ ಗಿಡದ ನಾಟಿ

ಪ್ರಕೃತಿಯಿಂದ ಸ್ಫೂರ್ತಿ ಹವಾಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿ ಎಂಬ ಧ್ಯೇಯ ವಾಕ್ಯದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಗಳೂರು ಸಾಮಾಜಿಕ ಆರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸತೀಶ್ ಎ.ವಿ. ಅವರು ಶಾಲಾ ವಿದ್ಯಾರ್ಥಿಗಳಿಗೆ ಗಿಡ ಹಸ್ತಾಂತರಿಸಿ, ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟು ಪರಿಸರ ಕಾಳಜಿಯ ಮನವರಿಕೆ ಮಾಡಿದರು.

ಹೋಲಿ ಫ್ಯಾಮಿಲಿ ಪ್ರೌಢಶಾಲೆಯಲ್ಲಿ ಪರಿಸರ ದಿನ, ಹಣ್ಣಿನ ಗಿಡಗಳ ನಾಟಿ



ಮಂಗಳೂರು: ಉತ್ತಮಪರಿಸರದಿಂದ ಉತ್ತಮ ಜೀವನ ನಡೆಸಲು ಸಾಧ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆಯನ್ನು ಮೂಡಿಸಿದಾಗ ಮುಂದೆ ಸದೃಢ ಸಮಾಜವನ್ನು ಹಾಗೂ ಉತ್ತಮ ಪರಿಸರವನ್ನು ನಿರ್ಮಿಸಲು ಸಾಧ್ಯ ಎಂದು ಬಜಪೆ ಅನುದಾನಿತ ಹೋಲಿ ಫ್ಯಾಮಿಲಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ವಂ. ಭ. ಜೆಸ್ಸಿ ಪ್ರೀಮಾ ಹೇಳಿದರು.

ಹೋಲಿ ಫ್ಯಾಮಿಲಿ ಪ್ರೌಢಶಾಲೆಯ ಶಾಲಾ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಹಣ್ಣಿನ ಗಿಡ ನೆಟ್ಟು ಅವರು ಮಾತನಾಡಿದರು. ವಿದ್ಯಾರ್ಥಿಗಳು ಪರಿಸರ ಗೀತೆ, ರೂಪಕ ಹಾಗೂ ಭಾಷಣವನ್ನು ಪ್ರಸ್ತುತಪಡಿಸಿ ಪರಿಸರ ಜಾಗೃತಿ ಮೂಡಿಸಿದರು. ಶಾಲಾ ಪರಿಸರ ವಿಜ್ಞಾನ ಸಂಘದ ಸಂಚಾಲಕ ವಾಸುದೇವ ರಾವ್ ಕುಡುಪು ಹಾಗೂ ಧನ್ಯ ಸ್ವಾಗತಿಸಿ, ನಿರೂಪಿಸಿದರು. ಪರಿಸರ ವಿಜ್ಞಾನ ಸಂಘದ ಕಾರ್ಯದರ್ಶಿ ಸ್ವಾತಿ ವಂದಿಸಿದರು. ಶಿಕ್ಷಕ ಪ್ರಶಾಂತ್, ಲಿಲ್ಲಿ ಮಿನೇಜಸ್, ಯಶೋಧ, ಗೀತಾಂಬ, ಶ್ರೀಜಾ ಸಹಕರಿಸಿದರು.

ಶಾರದಾ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ | ಡಾ.ಎಂ.ಬಿ. ಪುರಾಣಿಕ್ ಅಭಿಪ್ರಾಯ

ಪರಿಸರದ ಸ್ವಚ್ಛತೆಯ ಜೊತೆಗೆ ವರ್ಷಕ್ಕೆ ಒಂದಾದರೂ ಗಿಡ ನೆಡಿ



ಮಂಗಳೂರು: ಮಂಗಳೂರು ನಗರದ ಕೊಡಿಯಾಲ ಬೈಲಿನ ಶಾರದಾ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.

ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ ಮಾತನಾಡಿ, ಪ್ರತಿಯೊಬ್ಬನೂ ವೈಯಕ್ತಿಕ ಸ್ವಚ್ಛತೆ, ಸುತ್ತಲಿನ ಪರಿಸರದ ಸ್ವಚ್ಛತೆಯ ಜತೆಗೆ ವರ್ಷಕ್ಕೆ ಒಂದಾದರೂಗಿಡವನ್ನು ನೆಡುವ ಸಂಕಲ್ಪತೊಡಬೇಕು ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಯಾವಾಗ ನಮಗೆ ಸಾಮಾಜಿಕ ಪರಿಸರದ ಕಾಳಜಿ ಬರುವುದಿಲ್ಲವೋ ನಾವು ನಮ್ಮ ಜೀವನಕ್ಕೆ ಬೇಕಾದ ಮೂಲಭೂತ ಸಂಗತಿಗಳಾದ ಶುದ್ಧಗಾಳಿ, ಶುದ್ಧನೀರು, ಸ್ವಚ್ಛ ಪರಿಸರಗಳನ್ನು ಹೊಂದಲಾರೆವು ಎಂದರು.

ಟ್ರಸ್ಟಿ, ನಿರ್ದೇಶಕ ಸಮೀರ್ ಪುರಾಣಿಕ್, ಶಾರದಾ ವಿದ್ಯಾಲಯದ ಪ್ರಾಂಶುಪಾಲರಾದ ಚಂದ್ರಿಕಾ ಭಂಡಾರಿ, ದಯಾನಂದ ಕಟೀಲ್, ಉಪ ಪ್ರಾಂಶುಪಾಲೆ ಕೆ. ಲಕ್ಷ್ಮೀ ಪೈ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಂಗವಾಗಿ ವಿದ್ಯಾಲಯದ ಒಂಬತ್ತು ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹಾಡು, ನೃತ್ಯ, ಕಿರು ಪ್ರಹಸನಗಳನ್ನು ಪ್ರಸ್ತುತಪಡಿಸಿ ಪರಿಸರ ಸಂರಕ್ಷಣೆಯ ಸಂದೇಶವನ್ನು ಸಾರಿದರು. ಅಧ್ಯಾಪಕಿಯರಾದ ಚಂದ್ರಿಕಾ, ವನಿತಾ, ಕಲಾವತಿ, ವಿನಯ, ಸ್ಮಿತಾ ನಾಯರ್ ಸಂಯೋಜಿಸಿ ಮಾರ್ಗದರ್ಶನವಿತ್ತರು.

ಕಡಬ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಅರಣ್ಯ ಇಲಾಖೆಯಿಂದ 75 ಜಾತಿ ಗಿಡಗಳ ವಿತರಣೆ



ಕಡಬ: ವಿಶ್ವ ಪರಿಸರ ದಿನಾಚರಣೆಯನ್ನು ಕಡಬದ ಸರಕಾರಿ ಪ್ರೌಢಶಾಲೆಯಲ್ಲಿ ಅರಣ್ಯ ಇಲಾಖೆ ಪಂಜ ವಲಯದ ಸಹಯೋಗದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಅರಣ್ಯ ಇಲಾಖೆಯ ವತಿಯಿಂದ ಶಾಲಾ ಪರಿಸರದಲ್ಲಿ ಬೆಳೆಸಲು ಸುಮಾರು 75 ವಿವಿಧ ಜಾತಿಯ ಗಿಡಗಳನ್ನು ಶಾಲೆಗೆ ಹಸ್ತಾಂತರಿಸಲಾಯಿತು. ಬಳಿಕ ಅತಿಥಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸುವ ಮೂಲಕ ಪ್ರಕೃತಿ ಉಳಿವಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಪಟ್ಟಣ ಪಂಚಾಯತ್ ಸದಸ್ಯ ಕೃಷ್ಣಪ್ಪ ಪೂಜಾರಿ, ಪಂಜ ವಲಯದ ಉಪ ವಲಯ ಅರಣ್ಯಾಧಿಕಾರಿ ಉಮೇಶ್ ಹಾಗೂ ಸಿಬ್ಬಂದಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಪಿ.ಪಿ. ವರ್ಗೀಸ್, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಅಶ್ರಫ್ ಶೇಡಿಗುಂಡಿ, ಉಪ ಪ್ರಾಂಶುಪಾಲೆ ಡಾ. ವೇದಾವತಿ ಬಿ., ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸುತ್ತ ಮುತ್ತ

ಕಡಪ್ಪುರದಲ್ಲಿ ವಿಶ್ವ ಪರಿಸರ ದಿನಾಚರಣೆ

ಕಾಸರಗೋಡು: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸೋಶ್ಯಲ್ ಪೊಲೀಸಿಂಗ್ ಡಿವಿಶನ್, ಎಸ್‌ಪಿಸಿ ಕಾಸರಗೋಡು, ಶ್ರೀ ಕುರುಂಬಾ ಭಗವತೀ ಕ್ಷೇತ್ರ ಕಡಪ್ಪುರ ಇವುಗಳ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಕಾಸರಗೋಡು ಕಡಪ್ಪುರದಲ್ಲಿ ಗಿಡ ನೆಟ್ಟು ಪರಿಸರ ಶುಚೀಕರಣ ನಡೆಸಲಾಯಿತು.
ಭೂಮಿಯನ್ನು ರಕ್ಷಿಸಿ ಎಂಬ ಸಂದೇಶದೊಂದಿಗೆ ಜರಗಿದ ಈ ಕಾರ್ಯಕ್ರಮಕ್ಕೆ ಕಾಸರಗೋಡು ಜಿಎಚ್‌ಎಸ್‌ನ ಸ್ಟೂಡೆಂಟ್ ಪೊಲೀಸ್, ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್, ತಳಂಗರೆ ಜಿಎಂವಿಎಚ್‌ಎಸ್ ಶಾಲೆಯ 1975ನೇ ಬ್ಯಾಚ್ ಸಹಕಾರ ನೀಡಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಭರತ್ ರೆಡ್ಡಿ ಗಿಡ ನೆಟ್ಟು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಎಎಸ್‌ಪಿ ಅಚ್ಯುತ್ ಅಶೋಕ್, ಸಿಐ ನಳಿನಾಕ್ಷನ್, ಜಿಲ್ಲಾ ನೋಡಲ್ ಆಫೀಸರ್ ಪಿ.ಕೆ. ರಾಮಕೃಷ್ಣನ್, ಜನಮೈತ್ರಿ ಆಡಿಷನಲ್ ಜಿಲ್ಲಾ ನೋಡಲ್ ಆಫೀಸರ್ ಎ.ಶಶಿಧರನ್, ನಗರಸಭಾ ಆರೋಗ್ಯ ಕಾರ್ಯಕರ್ತರು ಉಪಸ್ಥಿತರಿದ್ದರು.

ಪೊಡಿಪ್ಪಳ್ಳ - ಬೆಳಿಂಜ ರಸ್ತೆ ಅಭಿವೃದ್ಧಿ: ಜಿ.ಪಂ. ಅಧ್ಯಕ್ಷೆಯಿಂದ ಭರವಸೆ

ಬದಿಯಡ್ಕ: ಪೊಡಿಪ್ಪಳ್ಳದಿಂದ ಕುಂಬ್ಡಾಜೆ – ಬೆಳಿಂಜ ಮೂಲಕ ನಾಟೆಕಲ್ಲು ವರೆಗಿನ ಕಾಸರಗೋಡು ಜಿಲ್ಲಾ ಪಂಚಾಯತ್ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಭರವಸೆ ನೀಡಿದ್ದಾರೆ. ಸಮಿತಿ ಪ್ರತಿನಿಧಿಗಳು ಈ ಬಗ್ಗೆ ನೀಡಿದ ಮನವಿಗೆ ಉತ್ತರಿಸಿದ ಅವರು ಈ ಭರವಸೆ ನೀಡಿದರು. ರಸ್ತೆಗೆ ತುರ್ತಾಗಿ ಮಾಡಬೇಕಾದ ಕೆಲಸ ಆರಂಭಗೊಂಡಿದೆ. ರೀ ಟಾರಿಂಗ್ ನಡೆಸಿ ರಸ್ತೆಯನ್ನು ಸಂಚಾರ ಯೋಗ್ಯವನ್ನಾಗಿ ಮಾಡಲಾಗುವುದು ಎಂದು ಜಿ.ಪಂ. ಅಧ್ಯಕ್ಷರು ತಿಳಿಸಿದರು. ಜನಪರ ಸಮಿತಿ ಸದಸ್ಯರಾದ ವಕೀಲ ಪ್ರಸನ್ನಕುಮಾರ್, ಡಾ.ವೇಣುಗೋಪಾಲ್, ಕೆ.-ಾರೂಕ್ ಕುಂಬ್ಡಾಜೆ, ನಾರಾಯಣ ಗೋಸಾಡ, ಅಬ್ದುಲ್ ರಜಾಕ್ ಟಿ.ಎಂ., ಹರೀಶ್ ಗೋಸಾಡ, ಶಂಕರ ಪಾಟಾಳಿ ಇದ್ದರು.

ರಾಷ್ಟ್ರೀಯ ಹೆದ್ದಾರಿ: ಇಂದು ತುರ್ತು ಸಭೆ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲು ಜೂ.6ರಂದು ಬೆಳಗ್ಗೆ 11 ಗಂಟೆಗೆ ಕಾಸರಗೋಡು ಆರ್‌ಡಿಒ ಕಚೇರಿಯಲ್ಲಿ ವಿಶೇಷ ಸಭೆ ಜರಗಲಿದೆ. ಬ್ಲಾಕ್ ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು, ಇತರ ಜನಪ್ರತಿನಿಧಿಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಗುತ್ತಿಗೆ ಕಂಪೆನಿಯ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಆರ್‌ಡಿಒ ತಿಳಿಸಿದ್ದಾರೆ. ಸ್ಥಳೀಯ ನಿವಾಸಿಗಳ ಆತಂಕವನ್ನು ಪರಿಹರಿಸಿ ನಿರ್ಮಾಣ ಕಾರ್ಯವನ್ನು ಮುಂದುವರಿಸಲು ನಿರ್ಧಾರ ಕೈಗೊಳ್ಳಲಾಗಿದೆ.

ನೀಲೇಶ್ವರದಲ್ಲಿ ಜನಗಣತಿ ತರಬೇತಿ

ಕಾಸರಗೋಡು: ಜನಗಣತಿ ತರಬೇತಿಯ ಭಾಗವಾಗಿ ನೀಲೇಶ್ವರ ನಗರಸಭೆಯಲ್ಲಿ ಮೇಲ್ವಿಚಾರಕರು ಮತ್ತು ಗಣತಿದಾರರಿಗೆ ತರಬೇತಿ ಪ್ರಾರಂಭವಾಗಿದೆ. ನಗರಸಭಾ ಕಾರ್ಯದರ್ಶಿ ಅನುಪಮಾ ಸದಾನಂದನ್ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜೂ.4 ರಿಂದ 10ರ ವರೆಗೆ ನಗರಸಭೆಯ ಸಮ್ಮೇಳನ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿದೆ. ಎರಡು ಬ್ಯಾಚ್‌ಗಳಲ್ಲಿ 100 ಜನರಿಗೆ ತರಬೇತಿ ನೀಡಲಾಗುವುದು. ನೆಹರೂ ಕಲಾ ಮತ್ತು ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಿಕೆ ಡಾ.ಪಿ.ವಿ.ಜಿಶಾ ಮತ್ತು ಜಿಲ್ಲಾ ಕ್ಷೇತ್ರ ತರಬೇತುದಾರರಾದ ಟಿ.ಶಂಸುದ್ದೀನ್ ಹಾಗೂ ಸಿ.ಕೃಷ್ಣಪ್ರಸಾದ್ ತರಬೇತಿಯ ನೇತೃತ್ವ ವಹಿಸಿದ್ದಾರೆ.

ಕಾಞಂಗಾಡಿನಲ್ಲಿ ಜನಗಣತಿ ತರಬೇತಿ

ಕಾಸರಗೋಡು: ಜನಗಣತಿಗೆ ಸಂಬಂಧಿಸಿದಂತೆ ಕಾಞಂಗಾಡು ನಗರಸಭೆಯಲ್ಲಿ ಜನಗಣತಿ ಚಟುವಟಿಕೆಗಳನ್ನು ಕೈಗೊಳ್ಳಲು ನೇಮಕಗೊಂಡ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ತರಬೇತಿ ಪ್ರಾರಂಭವಾಗಿದೆ. ತರಬೇತಿಯನ್ನು 12 ದಿನಗಳಲ್ಲಿ ನಾಲ್ಕು ಬ್ಯಾಚ್‌ಗಳಾಗಿ ವಿಂಗಡಿಸಲಾಗಿದೆ.

ಕಾಸರಗೋಡು ಸರಕಾರಿ ಐಟಿಐ ವಿದ್ಯಾಸಂಸ್ಥೆಯಲ್ಲಿ ನೇಮಕಾತಿಗೆ ಆಹ್ವಾನ

ಕಾಸರಗೋಡು: ಕಾಸರಗೋಡು ಸರಕಾರಿ ಐಟಿಐ ವಿದ್ಯಾಸಂಸ್ಥೆಯಲ್ಲಿ ಜುಲೈ ತಿಂಗಳಿನಲ್ಲಿ ನಡೆಯಲಿರುವ ಅಖಿಲ ಭಾರತ ಟ್ರೇಡ್ ಟೆಸ್ಟ್ ಪ್ರಾಯೋಗಿಕ ಪರೀಕ್ಷೆಗೆ ಬಾಹ್ಯ ಪರೀಕ್ಷಕರಾಗಿ ಕರ್ತವ್ಯ ನಿರ್ವಹಿಸಲು ಆಸಕ್ತಿ ಹೊಂದಿರುವ ತಾಂತ್ರಿಕವಾಗಿ ಅರ್ಹತೆ ಪಡೆದ ಉದ್ಯೋಗಿಗಳು (ಇಂಜಿನಿಯರಿಂಗ್ ಪದವಿ, ಇಂಜಿನಿಯರಿಂಗ್ ಡಿಪ್ಲೊಮಾ, ಮೂರು ವರ್ಷಗಳ ಕೆಲಸದ ಅನುಭವ ಪಡೆದಿರಬೇಕು) ಪೋರ್ಟಲ್‌ನಲ್ಲಿ ಪರೀಕ್ಷಕರ ನೋಂದಣಿಯನ್ನು ಪೂರ್ಣಗೊಳಿಸಬೇಕು. ಹೆಚ್ಚಿನ ಮಾಹಿತಿಗೆ 04994256440 ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಣೆ

ಕಾಸರಗೋಡು: ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿರುವ ಕೇರಳ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಸದಸ್ಯರ ಮಕ್ಕಳಿಗೆ ಎಲ್‌ಕೆಜಿ ಮತ್ತು ಪ್ರಥಮ ದರ್ಜೆ ತರಗತಿಗಳಿಗೆ ಪ್ರವೇಶ ಪಡೆಯಲು ಅಧ್ಯಯನ ಸಾಮಗ್ರಿಗಳನ್ನು ಖರೀದಿಸಲು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು ಜೂ.20ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳಿಗೆ 0497 2970272 ಕರೆ ಮಾಡಬಹುದು.

ಐತಿಹಾಸಿಕ ಚಂದ್ರಗಿರಿ ಕೋಟೆಯಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ದೊರಕಿತು ಚಾಲನೆ

ಕಾಸರಗೋಡು ಜಿಲ್ಲೆಯಲ್ಲಿ ಬೃಹತ್ ಹಸಿರೀಕರಣ ಅಭಿಯಾನ

ಕಾಸರಗೋಡು: 'ಜಾಗತಿಕ ತಾಪಮಾನ ಏರಿಕೆ ತಡೆಗೆ ಮರಗಳೇ ಪರಿಹಾರ' ಎಂಬ ಸಂದೇಶದೊಂದಿಗೆ ಕುಟುಂಬಶ್ರೀ ಜಿಲ್ಲಾ ಮಿಷನ್ ನೇತೃತ್ವದಲ್ಲಿ ಕಾಸರಗೋಡು ಜಿಲ್ಲೆಯಾದ್ಯಂತ ವ್ಯಾಪಕ ಪರಿಸರ ಸಂರಕ್ಷಣಾ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ.

ಜಿಲ್ಲಾ ಮಿಷನ್‌ನ ಈ ವರ್ಷದ ಪರಿಸರ ದಿನಾಚರಣೆಯ ಭಾಗವಾಗಿ ಮಳೆಹನಿ-ಸಾವಿರ ಕೈಗಳ ಮೂಲಕ ಸಾವಿರ ಸಸಿಗಳು ಎಂಬ ಯೋಜನೆಯ ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಅವರು ಐತಿಹಾಸಿಕ ಚಂದ್ರಗಿರಿ ಕೋಟೆಯಲ್ಲಿ ಸಸಿ ನೆಡುವ ಮೂಲಕ ನೆರವೇರಿಸಿದರು.

ಪ್ರಕೃತಿ ಸಂರಕ್ಷಣೆ ಮತ್ತು ಹಸಿರೀಕರಣದ ಗುರಿಯೊಂದಿಗೆ ಜಿಲ್ಲೆಯ ಎಲ್ಲಾ ಸಿಡಿಎಸ್‌ಗಳ ನೇತೃತ್ವದಲ್ಲಿ ವ್ಯಾಪಕವಾದ ಸಾರ್ವಜನಿಕ ಅಭಿಯಾನವನ್ನು ರೂಪಿಸಲಾಗಿದೆ. ಜಿಲ್ಲೆಯ ಶಾಲೆಗಳು, ಸ್ಥಳೀಯಾಡಳಿತ ಸಂಸ್ಥೆಗಳು ಮತ್ತು ಹಸಿರು ಕ್ರಿಯಾ ಸೇನೆಯ ಸಂಪೂರ್ಣ ಸಹಕಾರದೊಂದಿಗೆ ಸ್ವಚ್ಛತಾ ಚಟುವಟಿಕೆಗಳು ಮತ್ತು ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿಯನ್ನು ಕೈಗೊಳ್ಳಲಾಗುತ್ತಿದೆ. ಸಿಡಿಎಸ್ ಕಾರ್ಯಕರ್ತರು ಮನೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸಸಿಗಳನ್ನು ನೆಡುವರು ಮತ್ತು ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಕೈಗೊಳ್ಳಲಿದ್ದಾರೆ. ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಪರಿಸರ ಸಂದೇಶಗಳೊಂದಿಗೆ ಜಾಗೃತಿ ರ್‍ಯಾಲಿಗಳು ಮತ್ತು ಅಭಿಯಾನಗಳನ್ನು ಆಯೋಜಿಸಲಾಗಿತ್ತು. ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ, ಸಾವಯವ ಕೃಷಿ ವಿಧಾನಗಳು ಮತ್ತು ಅಡುಗೆ ಮನೆ ನಿರ್ಮಾಣದಂತಹ ವಿಷಯಗಳ ಕುರಿತು ಸಾರ್ವಜನಿಕರಿಗೆ ವಿಶೇಷ ಜಾಗೃತಿ ತರಗತಿಗಳನ್ನು ನಡೆಸಲಾಯಿತು. ಭೂಮಿಯ ಹಸಿರನ್ನು ಕಾಪಾಡಿಕೊಳ್ಳುವ ಮತ್ತು ಭವಿಷ್ಯದ ಪೀಳಿಗೆಗೆ ಪ್ರಕೃತಿಯನ್ನು ಸಂರಕ್ಷಿಸುವ ಈ ಮಹಾನ್ ಧ್ಯೇಯದಲ್ಲಿ ಜಿಲ್ಲೆಯ ಜನರು ಭಾಗವಹಿಸಲಿದ್ದಾರೆ.



ಅರಣ್ಯ ಇಲಾಖೆಯಿಂದ ಪರಿಸರ ದಿನ

ವಿಶ್ವ ಪರಿಸರ ದಿನದಂದು ಕಾಸರಗೋಡು ಜಿಲ್ಲಾ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗದ ನೇತೃತ್ವದಲ್ಲಿ ಚಿನ್ಮಯ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಉಪ ಜಿಲ್ಲಾಧಿಕಾರಿ ಲಿಪು ಎಸ್. ಲಾರೆನ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಮ್ಮ ಪೂರ್ವಜರು ನಮಗಾಗಿ ಭೂಮಿ ಮತ್ತು ಭೂ ಸಂಪನ್ಮೂಲಗಳನ್ನು ಸಂರಕ್ಷಿಸಿದಂತೆ ಭವಿಷ್ಯದ ಪೀಳಿಗೆಗೆ ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ಹೊಸ ಪೀಳಿಗೆಯ ಮೇಲಿದೆ ಎಂದು ಹೇಳಿದರು.

ವಿದ್ಯಾನಗರದ ಚಿನ್ಮಯ ವಿದ್ಯಾಲಯದ ತೇಜಸ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಚಿನ್ಮಯ ವಿದ್ಯಾಲಯದ ಸ್ಮರಣಿಕೆಯನ್ನು ಉಪ ಜಿಲ್ಲಾಧಿಕಾರಿ ಲಿಪು ಎಸ್. ಲಾರೆನ್ಸ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು.

ಪ್ರಾಂಶುಪಾಲ ಟಿ.ವಿ.ಸುಕುಮಾರನ್ ಭಾಗವಹಿಸಿದರು. ಸಾಮಾಜಿಕ ಅರಣ್ಯ ಇಲಾಖೆಯ ಎಸಿಎಫ್ ವಿ.ಬಿ.ಉದಯಸೂರ್ಯ ಇದ್ದರು. ಶಾಲಾ ಮಕ್ಕಳಿಗೆ ಉಪ ಡಿಸಿ ಗಿಡ ವಿತರಿಸಿದರು. ಜಿಲ್ಲಾ ಸಾಮಾಜಿಕ ಅರಣ್ಯ ಎಸಿಎಫ್ ವಿ.ಬಿ.ಉದಯಸೂರ್ಯ, ರೇಂಜ್ ಆಫೀಸರ್ ಕೆ.ಗಿರೀಶ್, ಡೆಪ್ಯೂಟಿ ರೇಂಜ್ ಆಫೀಸರ್ ವಿಜಯನಾಥ್ ಮತ್ತು ಉಪ ಪ್ರಾಂಶುಪಾಲ ಎಂ.ಕೆ. ಅಭಿಜಿತ್ ಮಾತನಾಡಿದರು.

ಉರಗ ತಜ್ಞ ಸುನೀಲ್ ಸುರೇಂದ್ರನ್ ಹಾವುಗಳ ಬಗ್ಗೆ ಮಾಹಿತಿ ನೀಡಿದರು. ವಿದ್ಯಾರ್ಥಿನಿ ಅಂಶುಕ ಸ್ವಾಗತಿಸಿ, ನಿವೇದ್ಯಾ ವಾಮನ್ ವಂದಿಸಿದರು.

ಜಿಲ್ಲಾ ಮಟ್ಟದ ಕಾರ್ಯಕ್ರಮ

ವಿದ್ಯಾನಗರ ಸಿವಿಲ್ ಸ್ಟೇಷನ್ ವಠಾರದಲ್ಲಿ ಜಿಲ್ಲಾ ಮಟ್ಟದ ಪರಿಸರ ದಿನವನ್ನು ಶುಕ್ರವಾರ ಹಮ್ಮಿಕೊಳ್ಳಲಾಯಿತು. ಎಡಿಎಂ ಕೆ.ವಿ. ಶ್ರುತಿ ಅವರು ಗಿಡ ನೆಡುವ ಮೂಲಕ ಉದ್ಘಾಟಿಸಿದರು. ಜಿಲ್ಲಾ ಮಣ್ಣು ಸಂರಕ್ಷಣಾ ಅಧಿಕಾರಿ ವಿ.ವಿ.ಪ್ರಕಾಶ್ ಮಾತನಾಡಿದರು. ಸಹಾಯಕ ಮಣ್ಣು ಪರಿಶೋಧನಾ ನಿರ್ದೇಶಕ ಪಿ.ವಿ.ಪ್ರಮೋದ್, ನಿಸರ್ಗ ಸಂಘಟನೆಯ ಕಾರ್ಯದರ್ಶಿ ಎ.ಬಾಬು ಮತ್ತು ರಾಮಚಂದ್ರನ್ ಶುಭಕೋರಿದರು. ಜಿಲ್ಲೆಯ ಮಣ್ಣು ಪರಿಶೋಧನೆ ಮತ್ತು ಮಣ್ಣು ಸಂರಕ್ಷಣಾ ಇಲಾಖೆಯ ನೌಕರರು ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಧರ್ಮಸ್ಥಳದಿಂದ ಹೊನ್ನಮೂಲೆ ಕ್ಷೇತ್ರಕ್ಕೆ 2 ಲ.ರೂ. ಅನುದಾನ ಹಸ್ತಾಂತರ



ಕಾಸರಗೋಡು: ಹೊನ್ನಮೂಲೆ ಶ್ರೀ ಮಹಾಮಾಯಿ ದುರ್ಗಾಪರಮೇಶ್ವರಿ ದೇವಸ್ಥಾನವು ನೂತನ ಶಿಲಾಮಯದಿಂದ ನಿರ್ಮಾಣಗೊಳ್ಳುತ್ತಿದ್ದು, ಇದರ ಅಂಗವಾಗಿ ಧರ್ಮಸ್ಥಳ ಶ್ರೀ ಕ್ಷೇತ್ರದಿಂದ ಪ್ರಸಾದ ರೂಪವಾಗಿ 2 ಲಕ್ಷ ರೂಪಾಯಿ ಅನುದಾನ ಒದಗಿಸಲಾಗಿದೆ.

ಈ ಮೊತ್ತದ ಡಿ.ಡಿ.ಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾಸರಗೋಡು ಯೋಜನಾಧಿಕಾರಿ ದಿನೇಶ್, ದರ್ಮಸ್ಥಳ ಶ್ರೀ ಮಂಜುನಾಥೇಶ್ವರ ಭಜನಾ ಪರಿಷತ್ ಕಾಸರಗೋಡು ಇದರ ಗೌರವಾಧ್ಯಕ್ಷ ಜಯಾನಂದಕುಮಾರ್ ಹೊಸದುರ್ಗ, ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ವಲಯ ಮೇಲ್ವಿಚಾರಕ ಗೋಪಾಲಕೃಷ್ಣ ಜನ ಜಾಗೃತಿಯ ವಲಯ ಅಧ್ಯಕ್ಷ ಕಿರಣ್‌ಪ್ರಸಾದ್ ಕೂಡ್ಲು ಅವರು ಶ್ರೀ ಕ್ಷೇತ್ರ ನಿರ್ಮಾಣ ಸಮಿತಿಯ ಗೌರವಾಧ್ಯಕ್ಷ ಭಾಸ್ಕರ ಕೆ. ಹೊನ್ನಮೂಲೆ, ಅಧ್ಯಕ್ಷ ರೋಹಿತಾಕ್ಷ ಕೆ. ನಾಗರಕಟ್ಟೆ, ಕಾರ್ಯದರ್ಶಿ ರಾಜೇಶ್ ಎಸ್.ರಾವ್, ಕೋಶಾಧಿಕಾರಿ ರಾಧಾಕೃಷ್ಣ ಹೊನ್ನಮೂಲೆ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭ ಕಾಸರಗೋಡು ನಗರಸಭೆಯ ಸದಸ್ಯೆ ದಿವ್ಯಾ ಸಂದೀಪ್, ನಾಗರಕಟ್ಟೆ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರಾದ ಗೋಪಾಲ ಹೊನ್ನಮೂಲೆ, ಮಂಜುನಾಥ ಹೊನ್ನಮೂಲೆ, ಶಶಿಕಾಂತ ಹೊನ್ನಮೂಲೆ, ಪ್ರಕಾಶ್ ಅಮ್ಮಂಗೋಡು, ತುಳಸಿ, ರೇವತಿ, ಚಿತ್ರಕಲಾ, ನಿಶಾ ಅನಿಲ್ ನಾಗರಕಟ್ಟೆ, ಉಷಾ ಅಖಿಲೇಶ್ ಮುಂತಾದವರು ಉಪಸ್ಥಿತರಿದ್ದರು.

9.69 ಕೋ.ರೂ. ವೆಚ್ಚದಲ್ಲಿ ಬಾಕಿಲಪದವು ಸೇತುವೆಯ ನಿರ್ಮಾಣಕ್ಕೆ ಅನುಮೋದನೆ



ಪೆರ್ಲ: ಎಣ್ಮಕಜೆ ಗ್ರಾಮ ಪಂಚಾಯತ್ ಗೊಳಪಟ್ಟ ಬಹು ನಿರೀಕ್ಷಿತ ಯೋಜನೆಯಾದ ಬಾಕಿಲಪದವು ಸೇತುವೆ ನಿರ್ಮಾಣ ಕಾಮಗಾರಿಯ ಅಂಗವಾಗಿ 9.69 ಕೋಟಿ ರೂಪಾಯಿ ಯೋಜನೆಗೆ ಸಾಂಕೇತಿಕ ಅನುಮತಿ ದೊರೆತಿರುವುದಾಗಿ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ತಿಳಿಸಿದ್ದಾರೆ. ಈ ಹಿಂದೆ 2023-24ರಲ್ಲಿ ಆಗಿನ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದ ಸೋಮಶೇಖರ ಜೆ.ಎಸ್. ಆಡಳಿತದ ಕಾಲಾವಧಿಯಲ್ಲಿ ಈ ಸೇತುವೆ ನಿರ್ಮಾಣಕ್ಕೆ ಶಾಸಕರಲ್ಲಿ ಬೇಡಿಕೆ ಇರಿಸಿದ ಫಲವಾಗಿ ಅಂದು ಕಾಮಗಾರಿ ನಡೆಸಲು ರಾಜ್ಯ ಸರಕಾರದ ಲೋಕೋಪಯೋಗಿ ಇಲಾಖೆಯಿಂದ ಗುತ್ತಿಗೆ ನೀಡಲಾಗಿತ್ತು.

ಬಳಿಕ ಸ್ಥಳದಲ್ಲಿ ಸೇತುವೆ ನಿರ್ಮಾಣದ ಪೂರ್ವಪರ ಕಾಮಗಾರಿಗಳು ನಡೆಯುತ್ತಿದ್ದಂತೆ ಸ್ಥಳೀಯ ವ್ಯಕ್ತಿಗಳು ಸ್ಥಳದ ತಕರಾರು ಕಾರಣವೊಡ್ಡಿ ಕೆಲಸ ಕಾರ್ಯಕ್ಕೆ ತಡೆಯೊಡ್ಡಲಾಗಿತ್ತು. ಇದಾದ ಬಳಿಕ ಸ್ವತಹ ಅಂದಿನ ಪಂಚಾಯತ್ ಅಧ್ಯಕ್ಷರೇ ಮುತುವರ್ಜಿ ವಹಿಸಿ ಫಲಾನುಭವಿಗಳನ್ನು ಸೇರಿಸಿ ಕ್ರಿಯಾ ಸಮಿತಿಯೊಂದನ್ನು ರಚಿಸಿ ಯೋಜನೆ ನಷ್ಟಗೊಳ್ಳಬಾರದೆಂಬ ಉದ್ದೇಶದಿಂದ ಸ್ಟೇ ತಂದ ಸ್ಥಳಗಳನ್ನು ಬಿಟ್ಟು ಸೇತುವೆ ನಿರ್ಮಾಣ ಕಾಮಗಾರಿಗೆ ಅನುಕೂಲಕರ ಸ್ಥಳಗಳನ್ನು ಪುನರ್ ಪರಿಶೀಲಿಸುವಂತೆ ಸಮಗ್ರ ಯೋಜನೆ ತಯಾರಿಸಿ ಲೋಕೋಪಯೋಗಿ ಇಲಾಖೆಗೆ ನೀಡಲಾಗಿತ್ತು. ಇದಾದ ಬಳಿಕ ಶಾಸಕರ ಸಹಿತ ಸಂಬಂಧಪಟ್ಟವರ ಬಳಿ ನಿರಂತರ ಒತ್ತಡ ಹೇರಲಾಗಿದ್ದು ಇದೀಗ ಸೇತುವೆ ನಿರ್ಮಾಣಕ್ಕೆ ಸಾಂಕೇತಿಕ ಅನುಮತಿ ಲಭಿಸಿದೆ. ಈ ಯೋಜನೆ ಪೂರ್ಣಗೊಂಡರೆ ನಲ್ಕ, ವರುಂಬುಡಿ, ಬಾಕಿಲಪದವು ಮೂಲಕ ಕಲ್ಯಾಟೆ, ಸಾಯ, ಚವರ್ಕಾಡು, ಅಡ್ಯನಡ್ಕ ಮೊದಲಾದೆಡೆಯ ಜನತೆಗೆ ವರದಾನವಾಗಲಿದೆ.

ಶಾಸಕರಿಗೆ ಅಭಿನಂದನೆ

ಕಾಮಗಾರಿಯ ಪುನರ್ ಪ್ರಕ್ರಿಯೆಗೆ ನಿರಂತರ ಶ್ರಮಿಸಿದ ಮಂಜೇಶ್ವರದ ಶಾಸಕ ಎ.ಕೆ.ಎಂ.ಅಶ್ರಫ್ ಹಾಗೂ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಪ್ರಸ್ತುತ ಜಿಲ್ಲಾ ಪಂಚಾಯತ್ ಸದ್ಯರಾಗಿರುವ ಸೋಮಶೇಖರ ಜೆ.ಎಸ್. ಅವರನ್ನು ಸ್ಥಳೀಯ ನಾಗರಿಕರು ಅಭಿನಂದಿಸಿದ್ದಾರೆ.

ಮಂಗಲ್ಪಾಡಿ: ಎಸ್‌ಸಿ-ಎಸ್‌ಟಿ ವಿದ್ಯಾರ್ಥಿಗಳಿಗೆ ಸವಲತ್ತು ವಿತರಣೆ



ಮಂಜೇಶ್ವರ: ಮಂಗಲ್ಪಾಡಿ ಗ್ರಾಮ ಪಂಚಾಯತ್‌ನ ವ್ಯಾಪ್ತಿಗೊಳಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಂಗಲ್ಪಾಡಿ ಗ್ರಾಮ ಪಂಚಾಯತ್‌ನ ಪ್ಲಾನ್ ಫಂಡ್‌ನಿಂದ ಕೊಡಮಾಡಿದ ಮೇಜು, ಕುರ್ಚಿಗಳ ವಿತರಣಾ ಸಮಾರಂಭ ಮುಳಿಂಜ ಜಿಎಲ್‌ಪಿ ಶಾಲೆಯಲ್ಲಿ ನಡೆಯಿತು.

ಮಂಗಲ್ಪಾಡಿ ಗ್ರಾ.ಪಂ. ಅಧ್ಯಕ್ಷ ಗೋಲ್ಡನ್ ರಹಮಾನ್ ಕಾರ್ಯಕ್ರಮವನ್ನು ಪೀಠೋಪಕರಣ ವಿತರಿಸುವುದರ ಮೂಲಕ ಉದ್ಘಾಟಿಸಿದರು. ಪಂಚಾಯತ್‌ನ ಉಪಾಧ್ಯಕ್ಷೆ ಸಮೀನ ಟೀಚರ್ ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿ ಜಾರ್ಜ್ ಕ್ರಾಸ್ತಾ, ಗ್ರಾ.ಪಂ. ಸದಸ್ಯ ಅಶೋಕ ಕೆ., ಫಾತಿಮತ್ ಝುಹೌರ, ನಫೀಸ ಮುನೀರ್ ಹಾಗೂ ಎಸ್‌ಸಿ ಪ್ರೇರಕ್ ಸುಮಲತಾ ಇದ್ದರು. ಮಂಗಲ್ಪಾಡಿ ಗ್ರಾ.ಪಂ.ನ ಶಿಕ್ಷಣ ಸಮಿತಿ ಪಿಇಸಿ ಕಾರ್ಯದರ್ಶಿ ಶಾಲೆಯ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ ಸಮಾರಂಭದ ನೇತೃತ್ವ ವಹಿಸಿದ್ದರು. ಎಸ್‌ಟಿ ಪ್ರೇರಕ್ ಪ್ರಮೋಟರ್ ದಿವಿನ ವಂದಿಸಿದರು.

ವಿತರಣೆ

ಪಂಚಾಯತ್‌ನ 15 ಪರಿಶಿಷ್ಟ ಜಾತಿ ಹಾಗೂ 6 ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೇಜು ಹಾಗೂ ಕುರ್ಚಿಗಳನ್ನು ನೀಡಲಾಯಿತು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಮಂಜೇಶ್ವರ ತಾಲೂಕಿನ ಕುಂಬಳೆ ವಲಯದಿಂದ ಎಡನಾಡು ಅಂಗನವಾಡಿ ಕೇಂದ್ರದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ನಿವೃತ್ತ ಪೊಲೀಸ್ ಅಧಿಕಾರಿ ಸೋಮಯ್ಯ, ಜನ ಜಾಗೃತಿ ವಲಯಾಧ್ಯಕ್ಷ ಮಹೇಶ್ ಪುಣಿಯೂರು, ಒಕ್ಕೂಟದ ಅಧ್ಯಕ್ಷ ಮುರಳೀಧರ, ದಯಾನಂದ, ಗೋಪಾಲ, ಅಂಗನವಾಡಿ ಕಾರ್ಯಕರ್ತೆ ಜಾನಕಿ, ಮೇಲ್ವಿಚಾರಕರು, ಸೇವಾ ಪ್ರತಿನಿಧಿ, ಸದಸ್ಯರು, ಮಕ್ಕಳು ಉಪಸ್ಥಿತರಿದ್ದರು.

ಗಿಡ ನೆಡುವುದರಿಂದ ಮಾನವ-ಪ್ರಕೃತಿ ನಡುವಿನ ಬಾಂಧವ್ಯ ವೃದ್ಧಿ: ಅಶ್ವಿನಿ ಕರೆ



ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್‌ನ ಪೆರಡಾಲ 13ನೇ ವಾರ್ಡ್ ಸಮಿತಿಯ ವತಿಯಿಂದ ವಿಶ್ವ ಪರಿಸರ ದಿನದ ಅಂಗವಾಗಿ ಪೆರಡಾಲ ನವಜೀವನ ಹೈಸ್ಕೂಲ್ ರಸ್ತೆ ಹಾಗೂ ಶಾಸ್ತ್ರೀ ಕಾಂಪೌಂಡ್ ರಸ್ತೆಯ ಶುಚಿಕರಣ ಮತ್ತು ಗಿಡ ನೆಡುವ ಕಾರ್ಯಕ್ರಮವು ವಾರ್ಡ್ ಸಮಿತಿ ಅಧ್ಯಕ್ಷ ನಾರಾಯಣ ಮಾಸ್ತರ್ ಮೈರ್ಕಳ ಅವರ ನೇತೃತ್ವದಲ್ಲಿ ನಡೆಯಿತು.

ಬಿಜೆಪಿ ಬದಿಯಡ್ಕ ಪಂಚಾಯತ್ ಸಮಿತಿ ಅಧ್ಯಕ್ಷ ಉದನೇಶ್ವರ ಬಿ. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಹಾಗೂ ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಉದ್ಘಾಟಿಸಿ ಮಾತನಾಡಿ, 2026ರ ವಿಶ್ವ ಪರಿಸರ ದಿನದ ಸಂದೇಶವಾದ ಹವಮಾನ ಕ್ರಿಯೆ, ಸುಸ್ಥಿರ ಅಭಿವೃದ್ಧಿಯ ಬಗ್ಗೆ ವಿವರಿಸಿದರು. ಗಿಡ ನೆಡುವುದರಿಂದ ಮಾನವ ಮತ್ತು ಪ್ರಕೃತಿಯ ನಡುವಿನ ಬಾಂಧವ್ಯ ಹೆಚ್ಚುತ್ತದೆ ಎಂದು ಅವರು ನುಡಿದರು.

ಕಾರ್ಯಕ್ರಮಕ್ಕೆ ಶುಭಾಶಂಸನೆಗೈದು ಮಾತನಾಡಿದ ಬದಿಯಡ್ಕ ಪಂಚಾಯತ್ ಸದಸ್ಯ ಬಾಲಕೃಷ್ಣ ಶೆಟ್ಟಿ ಕಡಾರು ಅವರು, ಶಾಲಾ ಜೀವನದಲ್ಲಿ ನೆಟ್ಟ ಹಲಸಿನ ಗಿಡವೊಂದು ಇಂದು ಫಲವನ್ನು ನೀಡುತ್ತಿದೆ. ಇಂದು ನೆಟ್ಟ ಹಲಸಿನ ಗಿಡವು ಮುಂದಿನ ಪೀಳಿಗೆಗೆ ಫಲವನ್ನು ನೀಡಲಿ ಎಂದು ಹಾರೈಸಿದರು.

ಇದೇ ಸಂದರ್ಭ ರಸ್ತೆ ಬದಿಗಳನ್ನು ಶುಚಿಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ವಿಜಯ ಸಾಯಿ, ಪುಂಡಲೀಕ ಆಚಾರ್ಯ, ಬಾಲಸುಬ್ರಹ್ಮಣ್ಯ ಭಟ್, ದೇವಪ್ಪ ಮುರಿಯಂಕೂಡ್ಲು, ರಘುನಾಥ ರೈ, ಪ್ರಫುಲ್ಲ, ಅಜಿತ್ ಭಾಗವಹಿಸಿದ್ದರು. ಸಾಯಿ ಪ್ರಣವ್ ಸ್ವಾಗತಿಸಿ, ವಾರ್ಡ್ ಪ್ರಧಾನ ಕಾರ್ಯದರ್ಶಿ ನಾರಾಯಣ ಪಿ. ಪೆರಡಾಲ ಕಾರ್ಯಕ್ರಮ ವಂದಿಸಿದರು.

ಧರ್ಮತ್ತಡ್ಕ ಪ್ರೌಢಶಾಲೆಯಲ್ಲಿ ಸಾಧಕ ಮಕ್ಕಳಿಗೆ ಅಭಿನಂದನೆ, ದತ್ತಿನಿಧಿ ವಿತರಣೆ



ಮಂಜೇಶ್ವರ: ಧರ್ಮತ್ತಡ್ಕ ಶ್ರೀ ದುರ್ಗಾಪರಮೇಶ್ವರಿ ಪ್ರೌಢಶಾಲೆಯಲ್ಲಿ 2026-27ನೇ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ತರಗತಿಯ ವಿದ್ಯಾರ್ಥಿಗಳ ಹೆತ್ತವರಿಗಾಗಿ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಅಲ್ಲದೆ 2025-26ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಬರೆದ ಎಲ್ಲಾ 240 ಮಂದಿ ವಿದ್ಯಾರ್ಥಿಗಳು ತೇರ್ಗಡೆಗೊಂಡು ಶಾಲೆಗೆ ನೂರು ಶೇಕಡಾ ಫಲಿತಾಂಶ ಲಭಿಸಿದೆ. ಈ ಸಂದರ್ಭ ಎಲ್ಲಾ ವಿಷಯಗಳಲ್ಲೂ ಎ ಪ್ಲಸ್ ಪಡೆದ ಒಟ್ಟು 12 ಮಂದಿ ವಿದ್ಯಾರ್ಥಿಗಳಿಗೆ ಹಾಗೂ ಒಂಬತ್ತು ವಿಷಯಗಳಲ್ಲಿ ಎ ಪ್ಲಸ್ ಪಡೆದ 5 ಮಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಅಲ್ಲದೆ ಆರ್ಥಿಕವಾಗಿ ಹಿಂದುಳಿದ, ಕನ್ನಡ ಮಾಧ್ಯಮದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡುವ ಮೇಪೋಡು ಸುಬ್ರಾಯ ಮಯ್ಯ ದತ್ತಿನಿಧಿಯನ್ನು ಆಯ್ದ 5 ಮಂದಿ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಕಿ ಈಶ್ವರಿ ಡಿ. ವಿತರಿಸಿದರು. ಶಾಲಾ ಪಿಟಿಎ ಅಧ್ಯಕ್ಷ ಅಶೋಕ್ ಭಂಡಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಧ್ಯಾಪಕರ, ಹೆತ್ತವರ ಬೆಂಬಲದಿಂದ ವಿದ್ಯಾರ್ಥಿಗಳು ಉನ್ನತ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು ಎಂದು ಅಭಿಪ್ರಾಯಪಟ್ಟರು. ಶಾಲಾ ಮೆನೇಜರ್ ಎನ್.ಶಂಕರನಾರಾಯಣ ಭಟ್ ಮಾತನಾಡಿ, ಈ ವರ್ಷ ನೂತನ ಪಠ್ಯಪುಸ್ತಕ ಜಾರಿಯಾಗಿ ಹೊಸ ಪಠ್ಯಕ್ರಮದ ಕಲಿಕೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ ಎಂದು ನುಡಿದರು. ಮುಖ್ಯೋಪಾಧ್ಯಾಯ ಶಶಿಕುಮಾರ್ ಪಿ. ಪ್ರಾಸ್ತಾವಿಕ ಮಾತನಾಡಿದರು. ಎಂಪಿಟಿಎ ಅಧ್ಯಕ್ಷೆ ದಿವ್ಯಾಭಾರತಿ ಶುಭಹಾರೈಸಿದರು. ಸುನೀತಾ ಕೆ. ಸ್ವಾಗತಿಸಿ, ಪ್ರದೀಪ್ ಕೆ. ವಂದಿಸಿದರು. ಪ್ರಶಾಂತ ಹೊಳ್ಳ ಎನ್. ನಿರೂಪಿಸಿದರು. ಸೂರ್ಯನಾರಾಯಣ ಭಟ್ ಪ್ರಾರ್ಥಿಸಿದರು.



ಸೇವಾ ಭಾರತಿಯ ಕಾಸರಗೋಡು ಜಿಲ್ಲೆಯ ಸೇವಾ ಚಟುವಟಿಕೆಗಳಿಗಿರುವ ಸೇವಾ ನಿಧಿಯನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಸೇವಾ ಭಾರತಿ ಜಿಲ್ಲಾಧ್ಯಕ್ಷ ಎಂ.ಟಿ.ರಮೇಶ್ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭ ಆರ್‌ಎಸ್‌ಎಸ್ ಕ್ಷೇತ್ರೀಯ ಪ್ರಚಾರಕ್ ಹರಿಕೃಷ್ಣನ್, ಹಿರಿಯ ಪ್ರಚಾರಕ್ ಸೇತುಮಾಧವನ್, ಸೇವಾ ಭಾರತಿ ಜಿಲ್ಲಾ ಸಮಿತಿ ಸದಸ್ಯರಾದ ಪ್ರತೀಕ್ ಆಳ್ವ, ವಿಶಾಲ್‌ಕುಮಾರ್, ರೇವತಿ ಟೀಚರ್ ಪಾಲ್ಗೊಂಡಿದ್ದರು.

ಕನ್ನಡ ಸಂಘಟನೆ, ರಾಜಕೀಯ ಪ್ರತಿನಿಧಿಗಳ ಕಾಸರಗೋಡು ನಿಯೋಗದಿಂದ ಮುಖ್ಯಮಂತ್ರಿಗೆ ಮನವಿ ಸಲ್ಲಿಕೆ

ಮಲೆಯಾಳ ಭಾಷಾ ಮಸೂದೆಯಲ್ಲಿ ತಿದ್ದುಪಡಿಗೆ ಕೇರಳಂ ಸರ್ಕಾರಕ್ಕೆ ಒತ್ತಾಯ

ಕಾಸರಗೋಡು: ಕೇರಳ ಸರಕಾರವು ಪ್ರಸ್ತಾಪಿಸಿರುವ ಮಲೆಯಾಳ ಭಾಷಾ ಮಸೂದೆಯಲ್ಲಿ ಕೆಲ ತಿದ್ದುಪಡಿ ಕೈಗೊಳ್ಳುವಂತೆ ಆಗ್ರಹಿಸುವ ಉದ್ದೇಶದಿಂದ ಕಾಸರಗೋಡಿನಿಂದ ತೆರಳಿದ ಕನ್ನಡ ಸಂಘಟನೆ ಹಾಗೂ ರಾಜಕೀಯ ಪ್ರತಿನಿಧಿಗಳ ನಿಯೋಗವು ಗುರುವಾರ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದೆ.

ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್, ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ, ಉದುಮ ಶಾಸಕ ಕೆ.ನೀಲಕಂಠನ್ ಹಾಗೂ ತೃಕ್ಕರೀಪ್ಪುರ ಶಾಸಕ ಸಂದೀಪ್ ವಾರಿಯರ್ ಈ ವೇಳೆ ಹಾಜರಿದ್ದರು. ನಿಯೋಗವು ಆ ಬಳಿಕ ಸಚಿವರಾದ ರಮೇಶ್ ಚೆನ್ನಿತ್ತಲ, ಪಿ.ಕೆ.ಕುಂಞಾಲಿಕುಟ್ಟಿ ವಿಷ್ಣುನಾಥನ್, ಸನ್ನಿ ಜೋಸೆಫ್, ಶಂಸುದ್ದೀನ್, ಬಿಂದು ಕೃಷ್ಣ , ಡೆಪ್ಯೂಟಿ ಸ್ಪೀಕರ್ ಶಾನಿ ಮೋಲ್ ಉಸ್ಮಾನ್ ಹಾಗೂ ಶಾಸಕರಾದ ರಾಜೀವ್ ಚಂದ್ರಶೇಖರ್, ಚಾಂಡಿ ಉಮ್ಮನ್, ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕಾಪಿಲ್ ಸೇರಿದಂತೆ ಹಲವು ಪ್ರಮುಖ ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಪ್ರತ್ಯೇಕ ಮನವಿಗಳನ್ನು ಸಲ್ಲಿಸಿದ್ದಾರೆ.



ಸ್ಪಂದಿಸಿದ ಸಿಎಂ

ಜಿಲ್ಲೆಯ ಶಾಸಕರು ಕೂಡ ಮಸೂದೆಯಿಂದ ಉಂಟಾಗುವ ಸಮಸ್ಯೆ ಬಗ್ಗೆ ಸಿಎಂ ಗಮನ ತರುವಲ್ಲಿ ಯಶಸ್ವಿಯಾಗಿದ್ದು, ಇದಕ್ಕೆ ಸಿಎಂ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಶಾಸಕರೊಂದಿಗೆ ಸಮನ್ವಯ ಸಾಧಿಸಿ ನಿಯೋಗಕ್ಕೆ ಸಿಎಂ ಭೇಟಿಗೆ ಅವಕಾಶ ಕಲ್ಪಿಸುವಲ್ಲಿ ವಕೀಲರಾದ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಬಿ.ಸುಬ್ಬಯ್ಯ ರೈ ಶ್ರಮ ವಹಿಸಿದ್ದಾರೆ.

ಕಾಸರಗೋಡಿನ ಕನ್ನಡಿಗರ ಹಕ್ಕು ರಕ್ಷಿಸಿ

ಇದು ಕಾಸರಗೋಡಿನ ಕನ್ನಡಿಗರ ಹಾಗೂ ಕನ್ನಡ ಮಕ್ಕಳ ಭಾಷಾ ಮತ್ತು ಶೈಕ್ಷಣಿಕ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ. ಈಗಾಗಲೇ ಕೇರಳ ಹೈಕೋರ್ಟ್ ಕಾನೂನು ಹೋರಾಟ ಮುಂದುವರಿಯುತ್ತಿದೆ. ಕರ್ನಾಟಕ ಸಮಿತಿಯ ಅಧ್ಯಕ್ಷ , ವಕೀಲ ಕೆ.ಮುರಳೀಧರ ಬಳ್ಳಕ್ಕುರಾಯ, ಕಸಾಪ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿ ಹಾಗೂ ವಕೀಲ ಎನ್.ಕೆ.ಮೋಹನದಾಸ್, ಗಮಕ ಕಲಾ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಟಿ.ಶಂಕರನಾರಾಯಣ ಭಟ್, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಅಬ್ದುಲ್ ರಹಿಮಾನ್ ಸುಬ್ಬಯ್ಯಕಟ್ಟೆ ಹಾಗೂ ಪಿಎಸ್‌ಸಿ ನಿವೃತ್ತ ಡೆಪ್ಯೂಟಿ ಡೈರೆಕ್ಟರ್ ಗಣೇಶ್ ಪ್ರಸಾದ್ ಪಾಣೂರು ಮುಂತಾದವರು ಭಾಗವಹಿಸಿದ್ದರು.

ಸುತ್ತ ಮುತ್ತ

ಭರತನಾಟ್ಯ : ಬಿ. ಗ್ರೇಡ್ ಕಲಾವಿದರಾಗಿ ಆಯ್ಕೆ




ಕುಂದಾಪುರ: ಕುಂದಾಪುರದ ನೃತ್ಯ ವಸಂತ ನಾಟ್ಯಾಲಯ ವಿದ್ಯಾರ್ಥಿಗಳಾದ ಪೂರ್ವಿಕ ಮತ್ತು ವಿದುಷಿ ಸುಪ್ರೀತಾ ಅವಿನಾಶ್ ಅವರು ದೂರದರ್ಶನ ಬೆಂಗಳೂರು ಇದರ ಭರತನಾಟ್ಯ ವಿಭಾಗದಲ್ಲಿ ಬಿ. ಗ್ರೇಡ್ ಕಲಾವಿದರಾಗಿ ಆಯ್ಕೆಯಾಗಿದ್ದಾರೆ. ಅವರ ಸಾಧನೆಗೆ ಸಂಸ್ಥೆಯ ಭರತನಾಟ್ಯ ಗುರು ವಿದುಷಿ ಪ್ರವಿತಾ ಅಶೋಕ್ ಮತ್ತು ಅಧ್ಯಕ್ಷರು ಮತ್ತು ವಿಶ್ವಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಮೊದಲನೇ ಪುಟದಿಂದ

ಮಳೆ ಟಕ್ಕರ್!

ಕಿರುಸೇತುವೆ ನಿರ್ಮಾಣ ಕಾಮಗಾರಿ ಆರಂಭಗೊಂಡ ಬಳಿಕ ಖಾಸಗಿ ಗದ್ದೆ ಪ್ರದೇಶದಲ್ಲಿ ಮಣ್ಣಿನ ತಾತ್ಕಾಲಿಕ ರಸ್ತೆ ನಿರ್ಮಿಸಲಾಗಿದೆ. ಮಳೆಗೆ ಈ ರಸ್ತೆ ಸಂಪೂರ್ಣ ಹೊಂಡಾಗುಂಡಿಯಾಗಿದ್ದು, ಒಂದೊಮ್ಮೆ ಮಳೆ ಜಾಸ್ತಿಯಾದಲ್ಲಿ ಕೃಷಿಗೆ ಅನುಕೂಲವಾಗುವಂತೆ ರಸ್ತೆ ಮುಚ್ಚಬೇಕಾಗುತ್ತದೆ. ಆಗ ಸರಕಾರಿ ಬಸ್ ಸಹಿತ ಸಾರ್ವಜನಿಕರ ಸಂಪರ್ಕವೇ ಕಡಿದು ಹೋಗಲಿದೆ ಹೊಸ ಸೇತುವೆ ಬಳಿ ತಕ್ಷಣ ಚರಂಡಿ ನಿರ್ಮಿಸುವಂತೆ ಹಾಗೂ ಉಳಾಯಿಬೆಟ್ಟಿನಲ್ಲಿ ಕಿರು ಸೇತುವೆ ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಎಂದು ಉಳಾಯಿಬೆಟ್ಟು ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ವಿಶ್ವನಾಥ ಶೆಟ್ಟಿ ಆಗ್ರಹಿಸಿದ್ದಾರೆ.

ಎಡಪದವು ವಿವೇಕಾನಂದ ಕಾಲೇಜು ಬಳಿ ಅಂಗಡಿಗಳಿಗೆ ನೀರು ನುಗ್ಗಿದೆ. ಇಲ್ಲಿ ಮಳೆ ನೀರು ಹರಿದು ಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಅವಾಂತರಗಳು ಸೃಷ್ಟಿಯಾಗಿವೆ. ಹೆದ್ದಾರಿ ಇಲಾಖೆಯ ಅವೈಜ್ಞಾನಿಕ ಮತ್ತು ಅರೆಬರೆ ಕಾಮಗಾರಿಯಿಂದಾಗಿ ಗುರುಪುರ-ಕೈಕಂಬ ಪೇಟೆ ಅಕ್ಷರಶ ಗದ್ದೆಯಂತಾಗಿದ್ದು, ಹೆದ್ದಾರಿ ಇಲಾಖೆ ಶೀಘ್ರ ಸಮಸ್ಯೆ ಪರಿಹರಿಸದಿದ್ದಲ್ಲಿ ನಾಗರಿಕ ಹಿತರಕ್ಷಣಾ ಸಮಿತಿ ಪ್ರತಿಭಟನಾ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಗುರುಪುರ-ಕೈಕಂಬ ನಾಗರಿಕ ಹಿತರಕ್ಷಣಾ ಸಮಿತಿ ಪದಾಧಿಕಾರಿ ಹರೀಶ್ ಮಟ್ಟಿ ಹೇಳಿದ್ದಾರೆ.

ಇಲ್ಲಿ ನಡೆದಿರುವ ಅವೈಜ್ಞಾನಿಕ ಕಾಮಗಾರಿಯಿಂದ ಕೃತಕ ನೆರೆ ಉಂಟಾಗಿದೆ. ಮಳೆಗಾಲಕ್ಕೆ ಮುಂಚೆಯೇ ಹೆದ್ದಾರಿ ಪಕ್ಕ ಚರಂಡಿ ನಿರ್ಮಿಸುತ್ತಿದ್ದರೆ ಇಂತಹ ಎಡವಟ್ಟು ಆಗುತ್ತಿರಲಿಲ್ಲ. ಕೈಕಂಬದಲ್ಲಿ ನಡೆದಿರುವ ಅವೈಜ್ಞಾನಿಕ ಕಾಮಗಾರಿ ಬಗ್ಗೆ ಗುರುಪುರ-ಕೈಕಂಬ ನಾಗರಿಕ ಹಿತರಕ್ಷಣಾ ಸಮಿತಿ ಹೋರಾಟ ನಡೆಸುತ್ತಲೇ ಬಂದಿದ್ದರೂ ಜಿಲ್ಲಾಡಳಿತ ಮಾತ್ರ ಮನವಿಗೆ ಸ್ಪಂದಿಸಿಲ್ಲ. ಇಲ್ಲಿ ನಡೆದಿರುವ ಅವೈಜ್ಞಾನಿಕ ಕಾಮಗಾರಿ ಬಗ್ಗೆ ಜಿಲ್ಲಾಡಳಿತಕ್ಕೆ ದೂರು ನೀಡಿದ್ದೇವೆ, ಪ್ರಯೋಜನವಾಗಿಲ್ಲ, ಹೋರಾಟ ಫಲವಾಗಿ ಇಲ್ಲೊಂದು ಅಂಡರ್ ಪಾಸ್ ನಿರ್ಮಿಸಲಾಗುತ್ತಿದೆ. ಮಳೆ ನೀರು ಅಂಗಡಿಗಳಿಗೆ ನುಗ್ಗಿದೆ. ಕೆಲವರಿಗೆ ಅಪಾರ ನಷ್ಟ ಉಂಟಾಗಿದ್ದು, ಜಿಲ್ಲಾಧಿಕಾರಿಗಳು ಭೇಟಿ ನೀಡಿ ಪರಿಸ್ಥಿತಿಯ ಅವಲೋಕಿಸಬೇಕು ಎಂದು ಸಮಿತಿಯ ಪದಾಧಿಕಾರಿ ಹಾಗೂ ಕಂದಾವರ ಪಂಚಾಯತ್ ಮಾಜಿ ಅಧ್ಯಕ್ಷೆ ವಿಜಯಾ ಜಿ. ಸುವರ್ಣ ಮನವಿ ಮಾಡಿದ್ದಾರೆ.

ಹೊಂಡ ಮಾರ್ರ್ರೆ?

ಇಲ್ಲಿನ ಅಂಗಡಿಗೆ ಬರುವ ಗ್ರಾಹಕರಿಗೆ ಈ ಹೊಂಡದಿಂದಾಗಿ ಸಮಸ್ಯೆ ಉಂಟಾಗಿದೆ. ವಾಹನ ಚಾಲಕರು ಕೂಡ ತಮ್ಮ ವಾಹನ ರಸ್ತೆ ಪಕ್ಕ ಪಾರ್ಕ್ ಮಾಡಲು ಸಾಧ್ಯವಾಗದೆ ರಸ್ತೆಯಲ್ಲಿಯೇ ನಿಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹೊಂಡ ಯಾವ ಕಾಮಗಾರಿಗಾಗಿ ಅಗೆಯಲಾಗಿದೆ, ಆ ಕಾಮಗಾರಿ ಯಾವಾಗ ಮುಗಿಯುತ್ತದೆ. ಕಾಮಗಾರಿ ನಡೆಸುವವರು ಯಾರು? ಎನ್ನುವ ಯಾವ ಮಾಹಿತಿಯೂ ಇಲ್ಲ, ಅಪಾಯಕಾರಿ ಹೊಂಡದಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂ ಪುರಸಭೆಯ ಅ ಕಾರಿಗಳು ಮೌನವಾಗಿದ್ದಾರೆ.

ಟೆಲಿಕಾಂ ಕಚೇರಿ ಮುಂದೆ ಆಟೋರಿಕ್ಷಾಗಳು ರಸ್ತೆಯಲ್ಲಿ ನಿಂತಾಗ ಓಡೋಡಿ ಬರುವ ಟ್ರಾಫಿಕ್ ಪೊಲೀಸರು ಎರಡು ವಾರದಿಂದ ಹೊಂಡ ನಿರ್ಮಾಣವಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂಅ ಮೌನವಾಗಿರುವುದು ಯಾಕೆ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ. ಈ ನಡುವೆ ಸರ್ವಿಸ್ ರಸ್ತೆಯಲ್ಲಿ ಮಳೆ ನೀರು ಸಮರ್ಪಕವಾಗಿ ಚರಂಡಿ ಸೇರದೆ ರಸ್ತೆಯಲ್ಲೇ ನಿಲುಗಡೆಯಾಗುವುದರಿಂದಲೂ ಇಲ್ಲಿ ಬಸ್ಸಿಗಾಗಿ ಕಾಯುವ ಪ್ರಯಾಣಿಕರು ಸಹಿತ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದೆ.

ಕಟಪಾಡಿಯಲ್ಲಿ ಅರ್ಧಕ್ಕೆ ನಿಂತ ಅಂಡರ್‌ಪಾಸ್ ಕಾಮಗಾರಿಯಿಂದ ಸೃಷ್ಟಿಯಾಗಿದೆ ಸಮಸ್ಯೆ

ಮಳೆಗಾಲ ಆರಂಭದಲ್ಲೇ ವಾಹನ ಸವಾರರಿಗೆ ಸಂಚಾರ ಕಂಟಕ!

ಉಡುಪಿ: ಕಟಪಾಡಿ ಜಂಕ್ಷನ್‌ನಲ್ಲಿ ಬಹುಕಾಲದ ಬೇಡಿಕೆಯಾಗಿದ್ದ ಓವರ್ ಪಾಸ್ ಕಾಮಗಾರಿಯು ಮಳೆಗಾಲದ ಆರಂಭದಲ್ಲೇ ಅರ್ಧಕ್ಕೆ ಮೊಟಕುಗೊಂಡಿದ್ದು, ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಚರಿಸುವ ಸಾವಿರಾರು ವಾಹನ ಸವಾರರು ಹಾಗೂ ಸ್ಥಳೀಯ ಸಾರ್ವಜನಿಕರು ನಿರಂತರ ಸಂಚಾರ ದಟ್ಟಣೆಯಿಂದಾಗಿ ನರಕಯಾತನೆ ಅನುಭವಿಸುವಂತಾಗಿದೆ.

ಒಂದು ಬದಿ ಮಾತ್ರ ಸಂಚಾರಕ್ಕೆ ಮುಕ್ತ

ಕಟಪಾಡಿ ಜಂಕ್ಷನ್‌ನಿಂದ ಎಡ-ಬಲ ಸೇರಿ ಒಟ್ಟು 550 ಮೀಟರ್ ಉದ್ದದ ಹಾಗೂ 5.5 ಮೀಟರ್ ಎತ್ತರದ ಈ ಬೃಹತ್ ಅಂಡರ್ ಪಾಸ್ ಕಾಮಗಾರಿಯನ್ನು ನ್ಯಾಶನಲ್ ಇನ್‌ಫ್ರಾ ಪ್ರಾಜೆಕ್ಟ್ ಕಂಪೆನಿ ವಹಿಸಿಕೊಂಡಿದ್ದು, ಕಿನ್ನಿಮೂಲ್ಕಿ ಗೋಪುರದ ಬಳಿಯ ಮಾದರಿಯಲ್ಲಿ ಹೆದ್ದಾರಿ ನಿರ್ಮಿಸಲು ಉದ್ದೇಶಿಸಲಾಗಿದೆ. ಸದ್ಯ ಕಾಮಗಾರಿಯ ಒಂದು ಬದಿಯನ್ನು ಮಾತ್ರ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆಯಾದರೂ, ಮುಂಗಾರು ಮಳೆ ಚುರುಕುಗೊಂಡ ಹಿನ್ನೆಲೆ ಮತ್ತೊಂದು ಬದಿಯ ಕಾಮಗಾರಿ ಅರ್ಧಕ್ಕೇ ಸ್ಥಗಿತಗೊಳಿಸಿರುವುದು ಈಗ ಇಡೀ ಜಂಕ್ಷನ್ ಅನ್ನು ಗೊಂದಲದ ಗೂಡಾಗಿಸಿದೆ.




ಕಿರಿದಾದ ಹಳೇ ಸರ್ವಿಸ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್: ಮಣ್ಣು ಕುಸಿತದ ಭೀತಿ!

ಮಂಗಳೂರು ಕಡೆಗೆ ಸಾಗುವ ವಾಹನಗಳನ್ನು ಸದ್ಯ ಮೊದಲಿನ ಹಳೆಯ ಸರ್ವಿಸ್ ರಸ್ತೆಯ ಮೂಲಕ ಸಂಚರಿಸಲು ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಈ ಸರ್ವಿಸ್ ರಸ್ತೆಯು ಅತ್ಯಂತ ಕಿರಿದಾಗಿದ್ದು, ಅದರಲ್ಲೂ ದುರಸ್ತಿ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಬೆಳಗಿನಿಂದ ರಾತ್ರಿಯವರೆಗೂ ಜಂಕ್ಷನ್‌ನಲ್ಲಿ ನಿರಂತರ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಮತ್ತೊಂದೆಡೆ, ಕಾಮಗಾರಿ ಗಾಗಿ ಹೆದ್ದಾರಿ ಬದಿಯ ಬರೆಗಳ ಹಾಗೆ ಬಿಟ್ಟಿರು ವುದರಿಂದ, ಮಳೆ ತೀವ್ರಗೊಂಡಂತೆಲ್ಲಾ ಬೃಹತ್ ಪ್ರಮಾಣದಲ್ಲಿ ಮಣ್ಣು ಕುಸಿಯುವ ಭೀತಿ ಎದುರಾಗಿದೆ. ಅಲ್ಲದೆ ರಸ್ತೆ ಇಡೀ ಕೆಸರುಮಯವಾಗಿದ್ದು, ಸಂಚಾರವೇ ಸಂಕಷ್ಟವಾಗಿದೆ.

1 ಕಿಮೀ ಸಂಚರಿಸಿ ಯೂಟರ್ನ್

ಶಂಕರಪುರ, ಮಂಚಕಲ್, ಶಿರ್ವ ಭಾಗದಿಂದ ಬರುವ ವಾಹನಗಳು ಅಂಡರ್ ಪಾಸ್ ಕಾಮಗಾರಿ ಪೂರ್ಣಗೊಳ್ಳುವವರೆಗೆ ಈ ಬಸ್ ಸ್ಟಾಪ್ ಅನ್ನು 1 ಕಿಲೋ ಮೀಟರ್ ಮುಂದಕ್ಕೆ ಹೋಗಿ ಅಲ್ಲೇ ಯೂಟರ್ನ್ ತೆಗೆದುಕೊಂಡು ಸಂಚರಿಸಬೇಕಾದ ಅನಿವಾರ್ಯತೆ ಇದೆ. ಕಟಪಾಡಿ, ಮಟ್ಟುವಿಗೆ ಹೋಗುವ ವಾಹನಗಳು 1 ಕಿ.ಮೀ. ಹೆಚ್ಚುವರಿ ಸಂಚರಿಸಿ, ಒಳ ರಸ್ತೆಯಲ್ಲಿ ಸಾಗಬೇಕಾದ ಅನಿವಾ ರ್ಯತೆ ಇನ್ನೂ 8 ತಿಂಗಳಿಗೂ ಹೆಚ್ಚು ಅವಧಿ ಇರಲಿದೆ.

ಒಬ್ಬನೇ ಸಿಬ್ಬಂದಿ: ಪೊಲೀಸರಿಗೆ ಸಿಗದ ಮುಕ್ತಿ

ರಾಷ್ಟ್ರೀಯ ಹೆದ್ದಾರಿ 66ರ ಉಡುಪಿ-ಮಂಗಳೂರು ವಾಹನಗಳು ಮಾತ್ರವಲ್ಲದೆ, ಬೆಳ್ಳೆ, ಶಿರ್ವ, ಬಂಟಕಲ್ಲು, ಶಂಕರಪುರ, ಮಣಿಪುರ , ಮಟ್ಟು ಕಟಪಾಡಿ ಪೇಟೆ ಯೊಳಗಿಂದ ಬರುವ ಎಲ್ಲಾ ವಾಹನಗಳು ಇದೇ ಜಂಕ್ಷನ್ ಮೂಲಕ ಹಾದು ಹೋಗಬೇಕಾಗಿದೆ. ಹೀಗಾಗಿ ಬೆಳಿಗ್ಗೆ 8 ರಿಂದ ಸಂಜೆ 8ರವರೆಗೆ ಇಲ್ಲಿ ಜನದಟ್ಟಣೆ , ವಾಹನ ದಟ್ಟಣೆ ಸಾಮಾನ್ಯವಾಗಿದೆ. ಇಂತಹ ಪ್ರಮುಖ ಜಂಕ್ಷನ್‌ನಲ್ಲಿ ಸಂಚಾರ ನಿಯಂತ್ರಿಸಲು ಕೇವಲ ಒಬ್ಬನೇ ಒಬ್ಬ ಪೊಲೀಸ್ ಸಿಬ್ಬಂದಿ ಇರುತ್ತಾರೆ. ನಾಲ್ಕೂ ದಿಕ್ಕುಗಳಿಂದ ಬರುವ ವಾಹನ ನಿಯಂತ್ರಿಸಲು ಒಬ್ಬ ಸಿಬ್ಬಂದಿಯಿಂದ ಅಸಾಧ್ಯವಾಗುತ್ತಿದ್ದು, ಇದರ ನಡುವೆ ಪೊಲೀಸರು ವಾಹನ ತಪಾಸಣೆ ಸಾಹಸಕ್ಕೂ ಕೈಹಾಕುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಶಿರ್ವ ಆನಂದತೀರ್ಥ ವಿದ್ಯಾಲಯದಲ್ಲಿ ಪುಟಾಣಿಗಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ



ಶಿರ್ವ: ಅಕ್ಷರಾಭ್ಯಾಸವು ಮಗುವಿನ ವಿದ್ಯಾಭ್ಯಾಸದ ಪಯಣಕ್ಕೆ ಶುಭಾರಂಭ ಸೂಚಿಸುವ ಸಾಂಪ್ರದಾಯಿಕ ವಿಧಿಯಾಗಿದ್ದು ಭಾರತದಲ್ಲಿ ತಲೆಮಾರುಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಮಗುವಿನ ಶಿಕ್ಷಣ ಜೀವನದ ಮೊದಲ ಹೆಜ್ಜೆಯಾಗಿ ಪರಿಗಣಿಸಲ್ಪಡುತ್ತದೆ. ಈ ಸಂಪ್ರದಾಯವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಆನಂದತೀರ್ಥ ವಿದ್ಯಾಲಯದಲ್ಲಿ ಗುರುವಾರ ಪ್ಲೇಹೋಮ್ ಹಾಗೂ ಪೂರ್ವ ಪ್ರಾಥಮಿಕ ವಿಭಾಗದ ಮಕ್ಕಳಿಗಾಗಿ ಅಕ್ಷರಾಭ್ಯಾಸ ಆಯೋಜಿಸಲಾಯಿತು.

ಪೋಷಕರು ತಮ್ಮ ಮಕ್ಕಳೊಂದಿಗೆ ಆಗಮಿಸಿ ಸಮಾರಂಭದಲ್ಲಿ ಭಾಗವಹಿಸಿದರು. ಪೂರ್ವ ಪ್ರಾಥಮಿಕ ಶಿಕ್ಷಕಿಯರು ಕಾರ್ಯಕ್ರಮದ ಸ್ಥಳವನ್ನು ಸಾಂಪ್ರದಾಯಿಕ ರೀತಿಯಲ್ಲಿ ಅಲಂಕರಿಸಿ ಭಕ್ತಿಮಯ ಹಾಗೂ ಶಾಂತ ವಾತಾವರಣವನ್ನು ನಿರ್ಮಿಸಿದ್ದರು.

ಮಾರ್ಗದರ್ಶನ

ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ಅರಸಿನ ಕಡ್ಡಿಯ ಸಹಾಯದಿಂದ ಅಕ್ಕಿಯ ತಟ್ಟೆಯಲ್ಲಿ ಪವಿತ್ರ ನಾಮಗಳನ್ನು ಬರೆಯಲು , ಗುರುತಿಸಲು ಮಾರ್ಗದರ್ಶನ ನೀಡಲಾಯಿತು.

ಅಕ್ಷರಾಭ್ಯಾಸದ ವಿಧಿವಿಧಾನವನ್ನು ವಿದ್ವಾನ್ ಕೇಶವಮೂರ್ತಿ ನೆರವೇರಿಸಿದರು. ಪವಿತ್ರ ಹೋಮ , ಸರಸ್ವತಿ ಪೂಜೆಯನ್ನು ಶ್ರೀಧ್ರುವ ಆಚಾರ್ಯ ಕನ್ನರ್ಪಾಡಿ ನೆರವೇ ರಿಸಿದರು. ಬಳಿಕ ಮಕ್ಕಳು ಬಳಪ ಬಳಸಿ ಕೊಂಡು ಪಾಟಿಯಲ್ಲಿ ತಮ್ಮ ವಿದ್ಯಾಭ್ಯಾಸದ ಆರಂಭಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಶಿಕ್ಷಕಿ ಸುಮಾಕಿರಣ್ ನಿರೂಪಿಸಿದರು. ಶಾಲಾ ಆಡಳಿತ ಮಂಡಳಿ ಸದಸ್ಯೆ ರೂಪಾ ಬಲ್ಲಾಳ್, ಪ್ರಾಂಶುಪಾಲೆ ಡಾ. ಗೀತಾ ಶಶಿಧರ್, ಪೂರ್ವ ಪ್ರಾಥಮಿಕ ವಿಭಾಗದ ಎಲ್ಲಾ ಶಿಕ್ಷಕಿಯರು, ಉಪಸ್ಥಿತರಿದ್ದರು.

ಮಣೂರು ಪಡುಕರೆ ಗೀತಾನಂದ ಫೌಂಡೇಶನ್: ಇಂದು 'ಆನಂದೋತ್ಸವ', ವಿವಿಧ ಕಾರ್ಯಕ್ರಮ

ಕೋಟ: ಇಲ್ಲಿನ ಮಣೂರು ಪಡುಕರೆಯ ಗೀತಾನಂದ ಫೌಂಡೇಶನ್ ವತಿಯಿಂದ ಆನಂದೋತ್ಸವ ಕಾರ್ಯಕ್ರಮವು ಜೂ. 6ರಂದು ಮಣೂರು-ಪಡುಕರೆಯ ಕೆ. ಸಿ. ಕುಂದರ್ ಸ್ಮರಣಾರ್ಥ ಸಭಾಭವನದಲ್ಲಿ ಜರಗಲಿದೆ. ಕಾರ್ಯಕ್ರಮದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಕೊಡುಗೆಗಳ ಹಸ್ತಾಂತರ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಬಾರಿ ಆನಂದೋತ್ಸವದಲ್ಲಿ ಹಲವು ಜನಪರ ಕಾರ್ಯಕ್ರಮ ಆಯೋಜಿಸಲಾಗಿದೆ.

ಉಚಿತ ನೋಟ್‌ಬುಕ್ ವಿತರಣೆ

ಈ ಆನಂದೋತ್ಸವದಲ್ಲಿ ಒಟ್ಟು 52 ಶಾಲೆಗಳ 6500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್‌ಗಳನ್ನು ವಿತರಿಸಲಾಗುವುದು. ವಿದ್ಯಾರ್ಥಿವೇತನ , ಸಮವಸ್ತ್ರ ಪರಿಸರದ ಪ್ರತಿಭಾವಂತ, ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಸಮವಸ್ತ್ರ ವಿತರಣೆ ನಡೆಯಲಿದೆ.

ಶಾಲಾ ಬಸ್ ಹಸ್ತಾಂತರ,ಸಸಿ ವಿತರಣೆ

ಈ ಸಂದರ್ಭ ಶಾಲಾ ಬಸ್ ಹಸ್ತಾಂತರ ಪ್ರಕ್ರಿಯೆ ಹಾಗೂ ಪರಿಸರ ಜಾಗೃತಿಯ ಅಂಗವಾಗಿ ಸಸಿ ವಿತರಣೆ ನಡೆಯಲಿವೆ.

ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ

2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿ (ಡಿಸ್ಟಿಂಕ್ಷನ್) ಗಳಿಸಿ ಅತ್ಯುತ್ತಮ ಸಾಧನೆ ಮಾಡಿದ ಮಣೂರು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಪ್ರೋತ್ಸಾಹ ಧನ ನೀಡಿ ಗೌರವಿಸಲಾಗುವುದು.

ಕಾರ್ಯಕ್ರಮವನ್ನು ಉಡುಪಿ ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಪ್ರವರ್ತಕರಾದ ನಾಡೋಜ ಡಾ. ಜಿ. ಶಂಕರ್ ಉದ್ಘಾಟಿಸಲಿದ್ದು ಕೋಟ ಗೀತಾನಂದ ಫೌಂಡೇಶನ್‌ನ ಪ್ರವ ರ್ತಕ ಆನಂದ ಕುಂದರ್ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಕಿರಣ್ ಕುಮಾರ್ ಕೊಡ್ಗಿ, ಮಾಜಿ ಸಂಸದ ಕೆ. ಜಯಪ್ರಕಾಶ್ ಹೆಗ್ಡೆ , ಉದ್ಯಮಿಗಳಾದ ಆನಂದ ಪಿ. ಸುವರ್ಣ ದಿನೇಶ್ ಹೆಗ್ಡೆ ಮೊಳಹಳ್ಳಿ,ಕೋಟ ಸಿ ಎ ಬ್ಯಾಂಕ್ ಅಧ್ಯಕ್ಷ ಡಾ. ಕೆ.ಕೃಷ್ಣಕಾಂಚನ್, ಶಿಕ್ಷಣ ಇಲಾಖೆ ಅಧಿಕಾರಿಗಳಾದ ಮಾರುತಿ, ಲೋಕೇಶ್, ಉಮಾ, ಖ್ಯಾತ ಮನೋ ವೈದ್ಯ ಡಾ. ಪ್ರಕಾಶ್ ತೋಳಾರ್, ಮೊಗವೀರ ಸಂಘಟನೆ ಅಧ್ಯಕ್ಷ ರವಿಶ್ ಕೊರವಾಡಿ, ಸತೀಶ್ ಬಾರಿಕೇರೆ, ಅಜಿತ್ ದೇವಾಡಿಗ , ಕಾಲೇಜಿನ ಪ್ರಾಂಶುಪಾಲ ಡಾ. ರಾಜೇಂದ್ರ ಎಸ್. ನಾಯಕ್, ಪಿಯು ಕಾಲೇಜಿನ ಪ್ರಾಂಶುಪಾಲ ಡೆನಿಸ್ ಬಾಂಜಿ ಕೆ., ಸಂಯುಕ್ತ ಪ್ರೌಢಶಾಲಾ ಮುಖ್ಯ ಶಿಕ್ಷಕ ವಿವೇಕಾನಂದ ಬಿ. ಗಾಂವ್ಕರ್, ಪ್ರಾಥಮಿಕ ವಿಭಾಗದ ವಿಜಯ ಅಲ್ಲೂರು ಉಪಸ್ಥಿತರಿರಲಿದ್ದಾರೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಳೂರು ಗ್ರಾಪಂ: ಜನಸಂಪರ್ಕ ಸಭೆ, ಸಾರ್ವಜನಿಕರ ಅಹವಾಲುಗಳ ಸ್ವೀಕಾರ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೇಳೂರು ಗ್ರಾ.ಪಂ.ಸಮುದಾಯ ಭವನದಲ್ಲಿ ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ನೇತೃತ್ವದಲ್ಲಿ ಜನ ಸಂಪರ್ಕ ಸಭೆ ಹಾಗೂ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಶಾಸಕರಿಗೆ ಮನವಿ

ಗ್ರಾಮಸ್ಥರು ರಸ್ತೆ, ಕುಡಿಯುವ ನೀರು, ವಸತಿ ಯೋಜನೆ, ಕಂದಾಯ, ಮೆಸ್ಕಾಂ ಹಾಗೂ ಅರಣ್ಯ ಇಲಾಖೆಗೆ ಸಂಬಂಧಿಸಿದ ಮೂಲ ಸೌಕರ್ಯ ಸಮಸ್ಯೆಗಳ ಬಗ್ಗೆ ಶಾಸಕರಿಗೆ ಮನವಿ ಸಲ್ಲಿಸಿದರು.

ಅಹವಾಲು ಸ್ವೀಕಾರ

ಅಹವಾಲುಗಳನ್ನು ಸ್ವೀಕರಿಸಿದ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರು ಸ್ಥಳದಲ್ಲಿಯೇ ಅಧಿಕಾರಿ ಗಳೊಂದಿಗೆ ಚರ್ಚಿಸಿ, ಶೀಘ್ರ ಪರಿಹಾರ ಕಲ್ಪಿಸುವ ಭರವಸೆ ನೀಡಿದರು.

ಅಧಿಕಾರಿಗಳಿಗೆ ಸೂಚನೆ

ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ವಿಳಂಬವಿಲ್ಲದೆ ತಲುಪುವಂತೆ ಅಧಿಕಾರಿಗಳು ತ್ವರಿತವಾಗಿ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಕುಂದಾಪುರ ತಹಶೀಲ್ದಾರ್ ಪ್ರದೀಪ್ ಕುರುಡೇಕರ್, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಮಹೇಶ್, ಬೇಳೂರು ಗ್ರಾಮ ಪಂಚಾಯತ್ ಪಿಡಿಒ ಪ್ರಶಾಂತ್, ಆಡಳಿತಾಧಿಕಾರಿ ರಾಘವೇಂದ್ರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಒಳಕಾಡು ಸರ್ಕಾರಿ ಶಾಲೆಯ ಎಲ್‌ಕೆಜಿ ತರಗತಿ ಶಾಸಕ ಯಶ್‌ಪಾಲ್ ಉದ್ಘಾಟನೆ



ಉಡುಪಿ: ಒಳಕಾಡು ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ನೂತನವಾಗಿ ಆರಂಭಗೊಂಡ ಎಲ್. ಕೆ. ಜಿ. ತರಗತಿಯನ್ನು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಉದ್ಘಾಟಿಸಿದರು.

ಬಳಿಕ ಮಾತನಾಡಿ, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೂ ಆಂಗ್ಲ ಮಾಧ್ಯಮ ಶಿಕ್ಷಣ ಕಲ್ಪಿಸುವ ನಿಟ್ಟಿನಲ್ಲಿ ಶಾಲೆಯಲ್ಲಿ ಎಲ್. ಕೆ. ಜಿ. ತರಗತಿ ಆರಂಭಿಸಲಾಗಿದ್ದು ಈ ಮೂಲಕ ಖಾಸಗಿ ಶಾಲೆಗೆ ಸರಿಸಮನಾಗಿ ಗುಣಮಟ್ಟದ ಶಿಕ್ಷಣ ಪ್ರಾಥಮಿಕ ಶಾಲೆಯಲ್ಲಿಯೇ ನೀಡಲು ಸಾಧ್ಯ ಎಂದರು.

ಶಾಲೆಯ ಹಳೆ ವಿದ್ಯಾರ್ಥಿ ಐ ಪಾಂಡುರಂಗ ಮಿತ್ತಂತಾಯ, ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಖಜಾನೆ ಕಚೇರಿ ಮುಂಬೈ ಇವರ ವಿಶೇಷ ಶಿಫಾರಸಿನ ಅಡಿ ಮಂಜೂರಾದ ಕೆನರಾ ಬ್ಯಾಂಕ್ ಸಿ. ಎಸ್. ಆರ್. ಅನುದಾನದಲ್ಲಿ ಎಲ್. ಕೆ. ಜಿ ತರಗತಿಗಳಿಗೆ ಮರದ ಪೀಠೋಪಕರಣಗಳನ್ನು ಬ್ಯಾಂಕ್ ವತಿಯಿಂದ ನೀಡಿದ್ದನ್ನು ಈ ಸಮಯದಲ್ಲಿ ಶಾಸಕರು ಸ್ಮರಿಸಿಕೊಂಡರು. ಕೆನರಾ ಬ್ಯಾಂಕ್ ವೃತ್ತ ಕಚೇರಿಯ ಪ್ರಧಾನ ವ್ಯವಸ್ಥಾಪಕ ಎಚ್. ಕೆ. ಗಂಗಾಧರ ರವರಿಗೆ ಶಾಸಕ ಯಶ್‌ಪಾಲ್ ಸುವರ್ಣ ಅಭಿನಂದನೆ ಸಲ್ಲಿಸಿದರು.

ಕೆನರಾ ಬ್ಯಾಂಕಿನ ಡಿಜಿಎಂ ಮಹಾಮಾಯ ಪ್ರಸಾದ್ ರಾಯ್, ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಯಲ್ಲಮ್ಮ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಡಾ. ವಿರೂಪಾಕ್ಷ (ಪ್ರಾಥಮಿಕ), ರಮೇಶ್ ಹೆಗ್ಡೆ (ಪ್ರೌಢ ಶಾಲೆ), ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಣೇಶ್ ಶೇಟ್, ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯಿನಿ ಪೂರ್ಣಿಮಾ, ಪ್ರೌಢ ಶಾಲೆಯ ಕುಸುಮ, ಸಮಿತಿಯ ಸದಸ್ಯರು, ಶಿಕ್ಷಕರು, ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕ್ಯಾಂಪಸ್ ಸಂದರ್ಶನ: ತರಬೇತಿದಾರರಿಗೆ ಖಾಯಂ ಉದ್ಯೋಗದ ನೇಮಕಾತಿ ಪತ್ರ



ಕುಂದಾಪುರ: ಬಿದ್ಕಲ್‌ಕಟ್ಟೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಗುರುವಾರ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ತರಬೇತಿದಾರರಿಗೆ ಶಿಶಿಕ್ಷು ತರಬೇತಿ ಹಾಗೂ ಖಾಯಂ ಉದ್ಯೋಗದ ನೇಮಕಾತಿ ಪತ್ರ ವಿತರಿಸಲಾಯಿತು.

ಪ್ರಾಚಾರ್ಯ ಹರೀಶ್ ಮಾರ್ಗದರ್ಶನದಂತೆ ಬೆಂಗಳೂರಿನ ಪ್ರತಿಷ್ಠಿತ ಕಿವ್ರಾಜ್ ಎಲಿಕ್ಸರ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ವತಿಯಿಂದ ಸಂದರ್ಶನ ಆಯೋಜಿಸಿತ್ತು.

ಕಿವ್ರಾಜ್ ಸಂಸ್ಥೆಯ ಸೀನಿಯರ್ ಎಚ್ ಆರ್ ಮ್ಯಾನೇಜರ್ ಆರ್ಥಿಕ್, ಜನರಲ್ ಮ್ಯಾನೇಜರ್ ಮಂಜುನಾಥ ಕೆ.ಆರ್., ಲರ್ನಿಂಗ್ ಡೆವಲಪ್ಮೆಂಟ್ ಹೆಡ್ ದತ್ತರಾಜ್ ಸಂದರ್ಶನ ನಡೆಸಿದರು.

ಬಿದ್ಕಲ್‌ಕಟ್ಟೆ ಐ.ಟಿ.ಐನ ಪ್ಲೇಸ್‌ಮೆಂಟ್ ಆಫೀಸರ್ ಮನೋಹರ್ ಶೆಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದು, ಕಿರಿಯ ತರಬೇತಿ ಅಧಿಕಾರಿಗಳಾದ ಪ್ರಸನ್ನ ಆಚಾರ್ಯ, ಪ್ರಫುಲ್ಲ ಕೆ. ಎನ್., ಬಸವ ನಾಯಕ್, ಸುಮಂಗಲ, ರೂಪದೇವಿ, ಅಜಿತ್ ಆಚಾರ್, ಕಚೇರಿ ಸಿಬ್ಬಂದಿಗಳಾದ ಸುಮಾರಾಣಿ, ಮನೋಜ್ ಕುಮಾರ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಉತ್ತಮ ವೇತನ, ಸೌಲಭ್ಯ

ಉತ್ತಮ ಸಂಬಳ, ಇಎಸ್‌ಐ, ಪಿಎಫ್, ಗ್ರಾಚ್ಯುಟಿ ಸೌಲಭ್ಯ, ಇನ್ಸೆಂಟಿವ್ ಸೌಲಭ್ಯ ಗಳನ್ನು ಕಂಪೆನಿ ನೀಡುತ್ತಿದ್ದು 60 ದಶಕಗಳಿಂದ ಸಾರ್ವಜನಿಕ ಸೇವೆಯಲ್ಲಿರುವ ಈ ಸಂಸ್ಥೆ 1500ಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿದೆ. 16ಕ್ಕೂ ಹೆಚ್ಚು ಬ್ರಾಂಡೆಡ್ ಕಂಪನಿಗಳ ಸೇಲ್ಸ್ ಮತ್ತು ಸರ್ವಿಸಿಂಗ್ ಸೌಲಭ್ಯ ನೀಡುತ್ತಿದೆ.

ತಾಯಿ ಹೆಸರಿನಲ್ಲಿ ಒಂದು ಗಿಡ ನೆಡುವ ಕಾರ್ಯಕ್ರಮಕ್ಕೆ ಶಾಸಕ ಗುರ್ಮೆ ಚಾಲನೆ



ಕಾಪು: ಬಿಜೆಪಿ ಕಾಪು ಮಂಡಲ ಕಾಪು ಬಿಜೆಪಿ ರೈತ ಮೋರ್ಚಾ ವತಿಯಿಂದ 'ವಿಶ್ವಾಸ, ಅಭಿವೃದ್ಧಿ ಮತ್ತು ಜನಕಲ್ಯಾಣದ 12 ವರ್ಷಗಳ' ಅಂಗವಾಗಿ ಪಾದೂರು ಚಂದ್ರನಗರದಲ್ಲಿ ಹಮ್ಮಿಕೊಳ್ಳಲಾದ 'ಏಕ್ ಪೇಡ್ ಮಾಕೆ ನಾಮ್' ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಡುವ ಕಾರ್ಯಕ್ರಮಕ್ಕೆ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಶುಕ್ರವಾರ ಚಾಲನೆ ನೀಡಿದರು.

ಈ ಸಂದರ್ಭ ಕಾಪು ಮಂಡಲ ಬಿಜೆಪಿ ಅಧ್ಯಕ್ಷರಾದ ಜಿತೇಂದ್ರ ಶೆಟ್ಟಿ, ಮಾಜಿ ಶಾಸಕರಾದ ಲಾಲಾಜಿ ಆರ್ ಮೆಂಡನ್, ಕಾಪು ಮಂಡಲ ಬಿಜೆಪಿ ರೈತ ಮೋರ್ಚಾದ ಅಧ್ಯಕ್ಷರಾದ ಕೃಷ್ಣ ಮಜೂರು, ಪ್ರಧಾನ ಕಾರ್ಯದರ್ಶಿಗಳಾದ ಕೇಶವ ಮೊಯಿಲಿ, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಕಾರ್ಯದರ್ಶಿಗಳಾದ ಪ್ರವೀಣ್ ಶೆಟ್ಟಿ ಪಾಂಗಾಳ, ಮಹಿಳಾ ಮೋರ್ಚಾದ ಅಧ್ಯಕ್ಷರಾದ ನೀತಾ ಗುರುರಾಜ್, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ ರಾವ್, ಕಾರ್ಯದರ್ಶಿಗಳಾದ ಪ್ರವೀಣ್ ಅಡ್ವೆ, ಶಿರ್ವ ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ಸಂದೀಪ್ ರಾವ್, ಗ್ರಾಮ ಪಂಚಾಯತ್ ಸದಸ್ಯರು, ಉಪಸ್ಥಿತರಿದ್ದರು.

- **ಬಿಜೆಪಿ ಕಾಪು ಮಂಡಲ ಕಾಪು ಬಿಜೆಪಿ ರೈತ ಮೋರ್ಚಾದಿಂದ ಪಾದೂರು ಚಂದ್ರನಗರದಲ್ಲಿ ನಡೆದ ಕಾರ್ಯಕ್ರಮ**
- **'ಏಕ್ ಪೇಡ್ ಮಾಕೆ ನಾಮ್' ಕಾರ್ಯಕ್ರಮ**

ಅಧಿಕಾರಿಗಳೊಂದಿಗೆ ಸಂತೆಕಟ್ಟೆ ಅಂಡರ್ ಪಾಸ್ ಕಾಮಗಾರಿ ಪರಿಶೀಲಿಸಿದ ಶಾಸಕ ಯಶ್‌ಪಾಲ್

ಸಾರ್ವಜನಿಕರಿಗೆ ಸಮಸ್ಯೆಯಾಗದಂತೆ ಎಚ್ಚರ ವಹಿಸಲು ಸೂಚನೆ

ಉಡುಪಿ: ರಾಷ್ಟ್ರೀಯ ಹೆದ್ದಾರಿ 66 ಸಂತೆಕಟ್ಟೆ ಅಂಡರ್ ಪಾಸ್ ಬಸ್ ಶೆಲ್ಟರ್ ಸಹಿತ ಪೂರಕ ಕಾಮಗಾರಿಗಳ ಬಗ್ಗೆ ಹೆದ್ದಾರಿ ಪ್ರಾಧಿಕಾರ , ನಗರಸಭೆ ಅಧಿಕಾರಿಗಳೊಂದಿಗೆ ಶಾಸಕ ಯಶಪಾಲ್ ಸುವರ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂತೆಕಟ್ಟೆ ಅಂಡರ್ ಪಾಸ್ ಕಾಮಗಾರಿ ಪೂರ್ಣಗೊಂಡು ವಾಹನ ಸಂಚಾರ ಆರಂಭವಾಗಿದ್ದು, ಇನ್ನೂ ಹಲವಾರು ಪೂರಕ ಕಾಮಗಾರಿಗಳು ನಡೆಯಬೇಕಾಗಿದೆ. ಹೆದ್ದಾರಿಯ ಎರಡು ಬದಿಯಲ್ಲಿ ಬಸ್ ನಿಲ್ದಾಣ, ಶೌಚಾಲಯ, ಅಂಡರ್ ಪಾಸ್ ಸೇತುವೆ ಮೇಲೆ ಡಿವೈಡರ್ ಅಳವಡಿಕೆ, ತಡೆಗೋಡೆ ನಿರ್ಮಾಣ, ಸಂತೆಕಟ್ಟೆ ನೇಜಾರು ತಿರುವಿನಲ್ಲಿ ವೃತ್ತ ನಿರ್ಮಾಣ, ಎರಡೂ ಬದಿಯ ಸರ್ವಿಸ್ ರಸ್ತೆ ಆರಂಭಗೊಳ್ಳುವಲ್ಲಿ ಅಗಲೀಕರಣ, ಸರ್ವಿಸ್ ರಸ್ತೆ ಸುರಕ್ಷತಾ ಬೇಲಿ ವಿಸ್ತರಣೆ, ಸರ್ವಿಸ್ ರಸ್ತೆ ಬದಿಯಲ್ಲಿ ಇಂಟರ್‌ಲಾಕ್ ಅಳವಡಿಕೆ, ಆಶೀರ್ವಾದ್ ಲಕ್ಷ್ಮೀನಗರ ಜಂಕ್ಷನ್ ಅಗಲೀಕರಣ, ದಾರಿದೀಪ ಸಹಿತ ವಾಹನಗಳ ಸುಗಮ ಸಂಚಾರ, ಪಾದಚಾರಿಗಳ ಸುರಕ್ಷತಾ ದೃಷ್ಟಿಯಿಂದ ಅಗತ್ಯ ಕ್ರಮಗಳ ಬಗ್ಗೆ ತಕ್ಷಣ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಉಡುಪಿ ನಗರಸಭೆ ಮಾಜಿ ಅಧ್ಯಕ್ಷರಾದ ಪ್ರಭಾಕರ ಪೂಜಾರಿ, ಸ್ಥಳೀಯ ಮುಖಂಡ ಉಮೇಶ್ ಶೆಟ್ಟಿ, ಕೃಷ್ಣ ದೇವಾಡಿಗ, ಸತೀಶ್ ನಾಯ್ಕ್, ಉದಯ, ಚಿನ್ಮಯ ಮೂರ್ತಿ, ರಾಮ ಪೂಜಾರಿ, ಪ್ರಸಾದ್ ರಾವ್, ಅಮಿತ್ ಪೂಜಾರಿ, ಬೈಕಾಡಿ ಸುಪ್ರಸಾದ್ ಶೆಟ್ಟಿ , ನಗರಸಭೆ ಪೌರಾಯುಕ್ತ ಮಹಾಂತೇಶ ಹಂಗರಗಿ, ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರ ದುರ್ಗಾಪ್ರಸಾದ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಪ್ರಮುಖರಿದ್ದರು.

ಸೂಕ್ತ ಕ್ರಮ ವಹಿಸಿ

ಕುಂದಾಪುರ ಭಾಗಕ್ಕೆ ತೆರಳುವ ಎಕ್ಸ್‌ಪ್ರೆಸ್ ಬಸ್ಸುಗಳು ಸಂತೆಕಟ್ಟೆ ಜಂಕ್ಷನ್‌ಗೆ ಬಾರದೆ ನೇರ ಸಂಚರಿಸುವ ಬಗ್ಗೆ ಸಾರ್ವಜನಿಕರ ದೂರಿನ ಮೇರೆಗೆ ಬಸ್ಸುಗಳು ಸರ್ವೀಸ್ ರಸ್ತೆ ಮೂಲಕ ಸಂಚರಿಸುವಂತೆ ಕ್ರಮ ವಹಿಸಲು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಶಾಸಕ ಯಶ್‌ಪಾಲ್ ಸುವರ್ಣ ಸೂಚನೆ ನೀಡಿದರು.

'ಮೆಗಾ ಪ್ಲೇಸ್ಮೆಂಟ್ ಡ್ರೈವ್- 2026' ಕಾರ್ಯಕ್ರಮ

ಕುಂದಾಪುರ: ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಪಡೆಯುವ ಪೂರ್ವದಲ್ಲಿ ವಿದ್ಯಾರ್ಥಿಗಳು ಸೃಜನಶೀಲ ಕೌಶಲ್ಯ ಬೆಳೆಸಿಕೊಳ್ಳಬೇಕು. ಕಂಪೆನಿಯ ಮುಖ್ಯ ಉದ್ದೇಶ ಅರಿತು ವ್ಯವಹರಿಸಿದರೆ ಒಳ್ಳೆಯ ಉದ್ಯೋಗಿಗಳಾಗಲು ಸಾಧ್ಯ ಎಂದು ಕುಂದಾಪುರದ ಸೃಷ್ಟಿ ಇನ್ಫೋಟೆಕ್‌ನ ಆಡಳಿತ ನಿರ್ದೇಶಕ ಹರ್ಷವರ್ಧನ ಶೆಟ್ಟಿ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ಲೇಸ್ಮೆಂಟ್ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ಮೆಗಾ ಪ್ಲೇಸ್ಮೆಂಟ್ ಡ್ರೈವ್- 2026 ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.



ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ, ಪ್ಲೇಸ್ಮೆಂಟ್ ಸಂಯೋಜಕ ರಜತ ಬಂಗೇರ ಉಪಸ್ಥಿತರಿದ್ದರು.

500 ಕ್ಕಿಂತ ಹೆಚ್ಚು ಅಂತಿಮ ವರ್ಷದ ವಿದ್ಯಾರ್ಥಿಗಳು ಈ ಡ್ರೈವ್‌ನಲ್ಲಿ ಭಾಗವಹಿಸಿದ್ದರು. ಪ್ಲೇಸ್‌ಮೆಂಟ್ ಅಧಿಕಾರಿ ತಿಮ್ಮಪ್ಪ ಡಿ.ಎಸ್. ಸ್ವಾಗತಿಸಿ, ಶ್ರೀಷಾ ಪ್ರಾರ್ಥಿಸಿ, ಪ್ಲೇಸ್ಮೆಂಟ್ ಸಂಯೋಜಕ ಶ್ರೀ ಮಹೇಶ ಕುಮಾರ್ ವಂದಿಸಿದರು. ಪ್ಲೇಸ್ಮೆಂಟ್ ಸಂಯೋಜಕಿ ಪ್ರೀತಿ ಹೆಗ್ಡೆ ಅತಿಥಿಗಳನ್ನು ಪರಿಚಯಿಸಿದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರಥ್ವಿಶ್ರೀ ಜಿ. ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಮಂಗಳೂರು
ಶನಿವಾರ, 6 ಜೂನ್ 2026
ಸಂಪುಟ 48, ಸಂಚಿಕೆ 79, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಆತ್ಮನಿರ್ಭರಕ್ಕೆ ಭಾರತದ ಪ್ರಮುಖ ಆದ್ಯತೆ: ಪ್ರಧಾನಿ ಮೋದಿ
• ಪುಟ 2

ಉಗ್ರರ ಜತೆ ಸಂಪರ್ಕ ರಾಜ್ಯದ ಇಬ್ಬರ ಸೆರೆ
• ಪುಟ 2





ಕಿರುಸುದ್ದಿ

ಟ್ರಾಫಿಕ್ ರೂಲ್ ಬ್ರೇಕ್: ದಂಡತೆರಲು ಮತ್ತೊಮ್ಮೆ ಶೇ. 50 ರಿಯಾಯಿತಿ

• **ಪುತ್ತೂರು:** ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಟ್ರಾಫಿಕ್ ರೂಲ್ಸ್ ಬ್ರೇಕ್ ಮಾಡಿದ ಕಾರಣಕ್ಕೆ ದಂಡನೆ ಪಾವತಿಗೆ ಮತ್ತೊಮ್ಮೆ ಶೇಕಡಾ 50 ರಷ್ಟು ರಿಯಾಯಿತಿ ನೀಡಲಾಗಿದೆ. ಆದರೆ, ಈ ರಿಯಾಯಿತಿ ಕೇವಲ 20 ದಿನ ಮಾತ್ರ ಇರಲಿದೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಶೇ. 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರಕಾರಕ್ಕೆ ಮತ್ತೊಮ್ಮೆ ಅವಕಾಶ ಕಲ್ಪಿಸಿದೆ. ಜೂ.21ರಿಂದ ಜು. 10ರ ವರೆಗೆ ಕಾಲಾವಕಾಶವನ್ನು ನೀಡಿ ಆದೇಶಿಸಿದೆ. 20 ದಿನ ನೀಡಿರುವ ಕಾಲಾವಕಾಶ ಬಳಸಿಕೊಂಡು ವಾಹನಗಳ ಮಾಲೀಕರು ದಂಡ ಪಾವತಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. 2026ರ ಮೇ ಮೊದಲು ಪೊಲೀಸ್ ಇಲಾಖೆಯ ಸಂಚಾರ ಇ-ಚಲನ್‌ಗಳಲ್ಲಿ ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತು ಸಾರಿಗೆ ಇಲಾಖೆಯಲ್ಲಿ 1991ರಿಂದ 2022ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ. 50 ರಿಯಾಯಿತಿಯ ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ- ಉಚಿತ ಸಹಾಯವಾಣಿ ನಂಬರ್‌ಗೆ 15100 ನ್ನು ಸಂಪರ್ಕಿಸುವಂತೆ ಸಮಿತಿಯ ಅಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫುಟ್‌ಪಾತ್‌ನಲ್ಲಿ ವ್ಯಾಪಾರ: ತೆರವಿಗೆ ಆಗ್ರಹ

• **ಮಂಗಳೂರು:** ನಗರದ ರಸ್ತೆ ಬದಿಯ ಫುಟ್‌ಪಾತ್‌ಗಳು ಬೀದಿ ಬದಿ ವ್ಯಾಪಾರಿಗಳಿಂದ ತುಂಬಿದ್ದು, ಸಾರ್ವಜನಿಕರು ನಡೆದಾಡಲು ಕಷ್ಟಕರವಾದ ಸ್ಥಿತಿ ನಿರ್ಮಾಣವಾಗಿದೆ. ಪಾಲಿಕೆ ಅಧಿಕಾರಿಗಳು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಎಲ್ಲೆಂದರಲ್ಲಿ ವ್ಯಾಪಾರ ಮಾಡುವುದಕ್ಕೆ ಕಡಿವಾಣ ಬೀಳಬೇಕು ಎಂದು ಸಾಮಾಜಿಕ ಕಾರ್ಯಕರ್ತೆ ಪ್ರಸನ್ನ ರವಿ ಆಗ್ರಹಿಸಿದ್ದಾರೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಪುರಭವನದ ಮುಭಾಗ ಶನಿವಾರ ಮತ್ತು ಭಾನುವಾರ ಹೆಚ್ಚಿನ ಸಂಖ್ಯೆಯ ವ್ಯಾಪಾರಿಗಳು ಫುಟ್‌ಪಾತ್ ಅಕ್ರಮಿಸುತ್ತಿದ್ದು, ಇದರಿಂದ ಸಾರ್ವಜನಿಕರು ಸಂಕಷ್ಟ ಎದುರಿಸುವಂತಾಗಿದೆ. ಈ ಬಗ್ಗೆ ಹಲವು ಬಾರಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದರೂ ಏನೂ ಪ್ರಯೋಜನವಾಗಿಲ್ಲ ಎಂದರು.

4ನೇ ಮಹಡಿಯಿಂದ ಕೆಳಗೆ ಬಿದ್ದು ಕಾರ್ಮಿಕ ಮೃತ್ಯು

• **ಮೂಡುಬಿದಿರೆ:** ಕಟ್ಟಡವೊಂದಕ್ಕೆ ಶೀಟು ಅಳವಡಿಸುವ ವೇಳೆ ನಾಲ್ಕನೇ ಮಹಡಿಯಿಂದ ಕೆಳಗೆ ಬಿದ್ದು ಯುವ ಕಾರ್ಮಿಕನೊಬ್ಬ ಮೃತಪಟ್ಟ ಘಟನೆ ಮೂಡುಬಿದಿರೆಯ ಕಡಪಳ್ಳ ಗಾಂಧಿನಗರದಲ್ಲಿ ನಡೆದಿದೆ.

ಮಾರ್ಪಾಡಿ ಗ್ರಾಮದ ಪಾದೆಮನೆ ನಿವಾಸಿ ಸಂತೋಷ್ ಅವರ ಪುತ್ರ ಶೌರ್ಯ ಎಸ್. ಆಚಾರ್ಯ (17) ಮೃತಪಟ್ಟವರು. ಕಡಪಳ್ಳ ಗಾಂಧಿನಗರದಲ್ಲಿರುವ ರಾಯಲ್ ಪ್ಯಾರಡೈಸ್ ಕಟ್ಟಡದ ನಾಲ್ಕನೇ ಮಹಡಿಯಲ್ಲಿ ಶೀಟು ಅಳವಡಿಸುವ ಕಾಮಗಾರಿಯಲ್ಲಿ ತೊಡಗಿದ್ದ ವೇಳೆ ಆಕಸ್ಮಿಕವಾಗಿ ಕೆಳಗೆ ಬಿದ್ದಿದ್ದಾರೆ ಎನ್ನಲಾಗಿದೆ.

ಗಂಭೀರವಾಗಿ ಗಾಯಗೊಂಡಿದ್ದ ಶೌರ್ಯ ಅವರನ್ನು ತಕ್ಷಣ ಆಳ್ವಾಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತಾದರೂ, ತೀವ್ರ ರಕ್ತಸ್ರಾವ ಹಾಗೂ ಒಳಗಾಯಗಳಿಂದ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಕಟ್ಟಡದ ಗುತ್ತಿಗೆದಾರ ಪ್ರವೀಣ್ ಹಾಗೂ ಮಾಲೀಕ ನೋಬರ್ಟ್ ಶಾಬಾ ರೇಗೋ ವಿರುದ್ಧ ಮೂಡುಬಿದಿರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧನ ಮೃತದೇಹ ಪತ್ತೆ

• **ಬಂಟ್ವಾಳ:** ಪೊಳಲಿ ದೇವಳದ ಪಕ್ಕದಲ್ಲಿರುವ ಪಂಪ್ ಶೆಡ್ಡಿನಲ್ಲಿ ಮಲಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಮೃತರನ್ನು ಮಾಯಿಲ ಎಂಬವರ ಪುತ್ರನಾಗಿರುವ ಡೊಂಬಯ್ಯ ಎಂದು ಗುರುತಿಸಲಾಗಿದ್ದು, ಸುಮಾರು 64ವರ್ಷ ಪ್ರಾಯ ವಾಗಿರಬಹುದು ಎಂದು ಅಂದಾಜಿಸಲಾಗಿದೆ. ಕಪ್ಪು ಮೈಬಣ್ಣ, ಸಪೂರ ಶರೀರ, ಕಪ್ಪು ಮಿಶ್ರಿತ ಬಿಳಿ ಕೆದರಿದ ಉದ್ದನೆಯ ತಲೆಗೂದಲು, ಬಿಳಿ ಉದ್ದನೆಯ ಗಡ್ಡ, ಬಲಗಾಲಿನ ಪಾದದ ಮೇಲೆ ಗಾಯಕ್ಕೆ ಹಾಕಿರುವ ಆಸ್ಪತ್ರೆಯ ಬ್ಯಾಂಡೇಜ್ ಇದ್ದು, ಕುಂಕುಮ ಬಣ್ಣದ ಅಂಗಿ, ತಿಳಿ ಹಳದಿ ಪಂಚೆ ಇರುತ್ತದೆ. ವಾರೀಸುದಾರರು ಇದ್ದಲ್ಲಿ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಗೆ (08255- 235000; 9480805308) ಸಂಪರ್ಕಿಸುವಂತೆ ಕೋರಲಾಗಿದೆ ಕಳೆದ 7-8 ವರ್ಷದಿಂದ ಪೊಳಲಿ ದೇವಸ್ಥಾನದ ವಠಾರದಲ್ಲಿ ಓಡಾಡಿಕೊಂಡು ಕೂಲಿ ಕೆಲಸ ಮಾಡಿ, ದೇವಸ್ಥಾನದ ವಠಾರದಲ್ಲಿಯೇ ರಾತ್ರಿ ಉಳಿದುಕೊಳ್ಳುತ್ತಿದ್ದ ಡೊಂಬಯ್ಯ ಎಂಬವರು ಇತ್ತೀಚೆಗೆ ಅನಾರೋಗ್ಯದ ಕಾರಣದಿಂದ ದೇವಸ್ಥಾನದ ಅನ್ನಛತ್ರದಲ್ಲಿ ಊಟ ಮಾಡಿಕೊಂಡು ಈ ಪರಿಸರದಲ್ಲೇ ಬಿಕ್ಷೆ ಬೇಡಿ ಜೀವನ ನಡೆಸುತಿದ್ದರೆನ್ನಲಾಗಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಮೃತರ ಹೆಸರು ಮತ್ತು ಪ್ರಾಯವನ್ನು ಆಸ್ಪತ್ರೆಯ ಚೀಟಿಯ ಆಧಾರದಲ್ಲಿ ಗುರುತು ಹಚ್ಚಲಾಗಿದೆ



ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ತಿರುವನಂತಪುರದ ಸೆಕ್ರೆಟರಿಯೇಟ್ ಮುಂಭಾಗದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಪರಿಸರ ದಿನ ಸಮಾರಂಭದಲ್ಲಿ ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಮಾವಿನ ಗಿಡವನ್ನು ನೆಟ್ಟರು.

ಬಿ.ಕೆ. ಹರಿಪ್ರಸಾದ್‌ಗೆ ಒಲಿದ ಕೆಪಿಸಿಸಿ ಅಧ್ಯಕ್ಷ ಸ್ಥಾನ

ಬಿಲ್ಲವರ ಯೂನಿಯನ್ ಹರ್ಷ

• **ಮಂಗಳೂರು:** ಬಿಲ್ಲವ ಸಮಾಜದ ನಾಯಕ, ಹಿಂದುಳಿದ, ಶೋಷಿತ ವರ್ಗಗಳ ಪ್ರಬಲ ಧ್ವನಿಯಾಗಿ ಸಮಾನತೆಗಾಗಿ ಶ್ರಮಿಸಿರುವ ಬಿ.ಕೆ.ಹರಿಪ್ರಸಾದ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ದೊರೆತಿರುವುದು ಬಹಳ ಸಂತಸದ ವಿಷಯ ಎಂದು ಅಖಿಲ ಭಾರತ ಬಿಲ್ಲವರ ಯೂನಿಯನ್ ಅಧ್ಯಕ್ಷ ನವೀನ್ ಚಂದ್ರ ಸುವರ್ಣ ಹರ್ಷ ವ್ಯಕ್ತಪಡಿಸಿದ್ದಾರೆ.

ಹರಿಪ್ರಸಾದ್ ಅವರು ರಾಜ್ಯಸಭೆಯ ಸದಸ್ಯರಾಗಿರುವಾಗ ಮತ್ತು ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾದ ಸಂಧರ್ಭದಲ್ಲಿ ತಮ್ಮ ಅನುದಾನವನ್ನು ಅತಿ ಹೆಚ್ಚಾಗಿ ವಿದ್ಯಾಸಂಸ್ಥೆಗಳ ಅಭಿವೃದ್ಧಿಗಾಗಿ ನೀಡಿದವರು. ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವವನ್ನು ರಾಜಕೀಯದಲ್ಲಿ ನಿಜಾರ್ಥದಲ್ಲಿ ಪಾಲಿಸಿಕೊಂಡು ಬಂದವರು. ಯೂನಿಯನ್‌ನ ಜತೆಯಲ್ಲಿ ನಿಕಟ ಬಾಂಧವ್ಯ ಹೊಂದಿದ್ದಾರೆ ಎಂದು ಅವರು ಹೇಳಿದ್ದಾರೆ.

ಪ್ರಸ್ತುತ ಯೂನಿಯನ್‌ನ ಅಧ್ಯಕ್ಷರು ವಿದೇಶ ಪ್ರವಾಸದಲ್ಲಿರುವ ಕಾರಣ ಅವರ ಅನುಪಸ್ಥಿತಿಯಲ್ಲಿ ಯೂನಿಯನ್ ಪರವಾಗಿ, ಉಪಾಧ್ಯಕ್ಷ ಲೋಕನಾಥ ಅಮೀನ್ ಮತ್ತು ಸಂಘಟನಾ ಕಾರ್ಯದರ್ಶಿ, ದಾಮೋದರ ಆರ್.ಸುವರ್ಣ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಉದಯ ಚಂದ್ರ ಡಿ.ಸುವರ್ಣ ಅವರು ಬೆಂಗಳೂರಿನಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.



ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ 8 ಸಾವಿರ ಮರಗಳ ಬಲಿದಾನ

ಗಿಡ ನೆಡುವ ಯೋಜನೆ ಠುಸ್?

• **ಕಾಸರಗೋಡು:** ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 66ರ ಸಮಗ್ರ ಅಭಿವೃದ್ಧಿ ಯೋಜನೆಯ ಅಂಗವಾಗಿ ರಸ್ತೆ ಬದಿಗಳಲ್ಲಿದ್ದ ಮರಗಳನ್ನು ಕಡಿದು ತೆರವುಗೊಳಿಸಲಾಗಿದ್ದು, ಅದರ ಬದಲಿಗೆ ಗಿಡಗಳನ್ನು ನೆಟ್ಟು ಬೆಳೆಸುವ ಯೋಜನೆಯು ಇನ್ನೂ ಆರಂಭಗೊಂಡಿಲ್ಲ. ಹೈವೇ ಕಾಮಗಾರಿಗೆ ಚಾಲನೆ ನೀಡಿದ ದಿನದಂದೇ ಗಿಡ ನಾಟಿ ಕಾರ್ಯಕ್ರಮವನ್ನು ರಸ್ತೆ ಉದ್ಘಾಟನೆಗಿಂತ ಮೊದಲೇ ಪೂರ್ತಿಗೊಳಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ ಈ ಭರವಸೆ ಮಾತ್ರ ಇದೀಗ ಹುಸಿಯಾಗಿದೆ.

ಕಾಸರಗೋಡು ಜಿಲ್ಲೆಯ ತಲಪಾಡಿಯಿಂದ ಕಾಲಿಕ್ಕಡವುವರೆಗಿನ ರಾಷ್ಟ್ರೀಯ ಹೆದ್ದಾರಿ ಬದಿಗಳಲ್ಲಿದ್ದ 8 ಸಾವಿರದಷ್ಟು ಮರಗಳನ್ನು ಕಡಿದು ತೆರವುಗೊಳಿಸಲಾಗಿತ್ತು. ರಸ್ತೆ ಅಗಲೀಕರಣದ ಸಲುವಾಗಿ ಇದು ಅನಿವಾರ್ಯ ಎಂದು ತಿಳಿಸಲಾಗಿತ್ತು. ಹೆದ್ದಾರಿ ಬದಿಗಳಲ್ಲಿ ಅಪಾರ ನೆರಳು ನೀಡುತ್ತಿದ್ದ ಮತ್ತು ಪಕ್ಷಿಗಳಿಗೆ ಆವಾಸ ಸ್ಥಾನವಾಗಿದ್ದ ವಿವಿಧ ವಿಧದ ಎತ್ತರವಾದ ಮರಗಳು, ಮಾವಿನ ಮರಗಳು, ಅಪೂರ್ವವಾದ ಮರಗಳು, ಹಲಸಿನ ಮರಗಳು ಮಾತ್ರವಲ್ಲದೆ ಕಳೆದ ಕೆಲವು ವರ್ಷಗಳಲ್ಲಿ ವಿವಿಧ ಸಂಘ ಸಂಸ್ಥೆಗಳ ನೇತೃತ್ವದಲ್ಲಿ ನೆಟ್ಟು ಬೆಳೆಸಲಾದ ಸಣ್ಣ ಪುಟ್ಟ ಮರಗಳನ್ನು ಕೂಡಾ ಕಡಿಯಲಾಗಿತ್ತು.

ಇದೇ ವೇಳೆ ತೆರವುಗೊಳಿಸಿದ ಮರಗಳ ಬದಲಿಗೆ ಹತ್ತು ಪಟ್ಟು ಅಂದರೆ 80 ಸಾವಿರದಷ್ಟು ಸಸಿಗಳನ್ನು ನೆಟ್ಟು ಬೆಳೆಸಲು ತೀರ್ಮಾನ ಕೈಗೊಳ್ಳಲಾಗಿತ್ತು. ಈ ನಿಟ್ಟಿನಲ್ಲಿ ರಸ್ತೆ ನಿರ್ಮಾಣ ಗುತ್ತಿಗೆ ಸಂಸ್ಥೆಗಳು ಅವುಗಳ ಸಾರ್ವಜನಿಕ ಅನುದಾನದಿಂದ ಭಾರೀ ಮೊತ್ತವನ್ನು ಜಿಲ್ಲಾ ಆಡಳಿತ ಕೂಟಕ್ಕೆ ಹಸ್ತಾಂತರಿಸಿವೆ. ಆದರೂ ಬದಲಿಗೆ ಗಿಡಗಳನ್ನು ನೆಡುವ ಪ್ರಕ್ರಿಯೆ ಮಾತ್ರ ಸಮರ್ಪಕವಾಗಿ ಹಾಗೂ ಫಲಪ್ರದವಾಗಿ ಆರಂಭಗೊಂಡಿಲ್ಲ ಎಂದು ಪರಿಸರಪ್ರೇಮಿ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.



ರಾಷ್ಟ್ರೀಯ ಹೆದ್ದಾರಿ ಬದಿ ಹಾಗೂ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಸಸಿಗಳನ್ನು ನೆಟ್ಟು ಬೆಳೆಸಲು ಜಿಲ್ಲೆಯ ಸಂಬಂಧಪಟ್ಟ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಮೊದಲಿಗೆ ಜವಾಬ್ದಾರಿ ವಹಿಸಲಾಗಿತ್ತು. ಆದರೆ ಈ ವಿಚಾರದಲ್ಲಿ ಯೋಜನೆಯ ನಿರ್ವಹಣೆಯ ಹೊಣೆ ಹೊತ್ತಿರುವ ಕಾಸರಗೋಡು ಜಿಲ್ಲಾ ಪಂಚಾಯತ್ ಆಡಳಿತವು ಅಗತ್ಯದಷ್ಟು ಆಸಕ್ತಿ ತೋರುತ್ತಿಲ್ಲ ಎಂದು ದೂರಲಾಗಿದೆ. ಬೆಲೆಬಾಳುವ ವಿವಿಧ ಜಾತಿಯ ಮರಗಳನ್ನು ತೆರವುಗೊಳಿಸಿದ ಬದಲಿಗೆ ಬೆಳೆಸಬೇಕಾದ ಗಿಡಗಳ ವೈವಿಧ್ಯತೆಗಳ ಪಟ್ಟಿಯನ್ನು ವಿಜ್ಞಾನ ಸಾಹಿತ್ಯ ಪರಿಷತ್‌ನ ಪರಿಸರ ವಿಷಯ ಸಮಿತಿಯು ಜಿಲ್ಲಾ ಆಡಳಿತ ಕೂಟಕ್ಕೆ ಹಸ್ತಾಂತರಿಸಿದೆ. ಅಯಾ ಊರಿನ ಹಾಗೂ ಸ್ಥಳೀಯ ಅಪೂರ್ವ ಗಿಡಗಳನ್ನು ನೆಟ್ಟು ಬೆಳೆಸಲು ವಿಶೇಷ ಆದ್ಯತೆ ನೀಡಬೇಕು ಎಂದು ಸಮಿತಿಯು ಜಿಲ್ಲಾಡಳಿತವನ್ನು ಆಗ್ರಹಿಸಿದೆ. ಈ ವಿಚಾರದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಆಡಳಿತವು ಸಮರ್ಥ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಇನ್ನಾದರೂ ಹಸಿರು ಪರಿಸರ ಯೋಜನೆಯ ಅಂಗವಾಗಿ ಗಿಡಗಳನ್ನು ನೆಟ್ಟು ಪೋಷಿಸುವ ಅಗತ್ಯತೆಯನ್ನು ಮನಗಂಡು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ.

ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳ್ಳುವ ಮೂಲಕ ಜಿಲ್ಲೆಯ ಸರ್ವತೋಮುಖ ಪ್ರಗತಿಗೆ ಪೂರಕವಾಗಿದೆ. ಆದರೆ ಇದರೊಂದಿಗೆ ಜಿಲ್ಲೆಯಲ್ಲಿ ಪರಿಸರ ಸಂರಕ್ಷಣೆ ಹಾಗೂ ಹಸಿರು ಸಂರಕ್ಷಣೆಯನ್ನು ಪೋಷಿಸುವ ಜವಾಬ್ದಾರಿಯೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮತ್ತು ಗುತ್ತಿಗೆದಾರ ಕಂಪೆನಿಗಳಿಗಿರಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ವಿಶೇಷ ಕಾಳಜಿ ವಹಿಸಬೇಕು. ಹಾಗಾದಲ್ಲಿ ಮಾತ್ರ ಗಿಡ ನೆಡುವ ಯೋಜನೆಯು ಸಾಕಾರಗೊಳ್ಳಬಹುದು. ಈ ವಿಚಾರದಲ್ಲಿ ಹೊಣೆಯರಿತು ಕೆಲಸ ಮಾಡಿದಾಗ ಸಾರ್ಥಕತೆ ಪಡೆಯುತ್ತದೆ. ಹೈವೇ ಬದಿಗಳಲ್ಲಿ ಮತ್ತೆ ಗಿಡ ಮರಗಳು ಬೆಳೆದು ನೆರಳು ನೀಡುವ ಜೊತೆಗೆ ಮಾನವರಿಗೆ ಮತ್ತು ಪಕ್ಷಿ ಸಂಕುಲಗಳಿಗೆ ಅನುಕೂಲವಾಗುತ್ತದೆ.

■ **ಉದಯಕುಮಾರ್,**
ಪರಿಸರ ಪ್ರೇಮಿ ಕಾಸರಗೋಡು

ಸಿಲಿಂಡರ್ ಅಕ್ರಮ ದಾಸ್ತಾನು: ಬಂಧನ

• **ಉಡುಪಿ:** ಮಲ್ಪೆ ಜಂಕ್ಷನ್ ಬಳಿಯ ಮನೆಯೊಂದರಲ್ಲಿ ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ ಅಕ್ರಮವಾಗಿ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮಲ್ಪೆ ಪೊಲೀಸರು ಮತ್ತು ಆಹಾರ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಮಲ್ಪೆ ಮುಖ್ಯ ರಸ್ತೆ ಕೊಡವೂರು ಗ್ರಾಮದ ನಿವಾಸಿ ಸನತ್ ಆರ್. ಕಾಮತ್ (43) ಬಂಧಿತ ಆರೋಪಿ. ಈತನಿಂದ ಒಟ್ಟು 21 ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.



ಜಂಟಿ ದಾಳಿ, ಮಾಲು ವಶ

ಸನತ್ ಕಾಮತ್ ಎಂಬಾತ ಅಕ್ರಮವಾಗಿ ಸಿಲಿಂಡರ್‌ಗಳನ್ನು ಸಂಗ್ರಹಿಸಿಡುತ್ತಿರುವ ಬಗ್ಗೆ ಸಿಕ್ಕಿದ ಖಚಿತ ಮಾಹಿತಿಯ ಮೇರೆಗೆ ಉಡುಪಿ ತಾಲೂಕು ಕಚೇರಿಯ ಆಹಾರ ಶಿರಸ್ತೇದಾರ್ ಆಶಾ ಕೆ. ಹಾಗೂ ಆಹಾರ ನಿರೀಕ್ಷಕ ಹಿತೇಶ್ ಯು.ಬಿ. ಅವರು ಮಲ್ಪೆ ಪೊಲೀಸ್ ಠಾಣಾ ಪಿಎಸ್‌ಐ ಅನಿಲ್ ಕುಮಾರ್ ಮತ್ತು ಸಿಬ್ಬಂದಿಗಳೊಂದಿಗೆ ಜೂನ್ 3 ರಂದು ಬೆಳಗ್ಗೆ ಆರೋಪಿಯ ಮನೆ ಅಂಗಳಕ್ಕೆ ಜಂಟಿ ದಾಳಿ ನಡೆಸಿದರು. ಈ ಸಂದರ್ಭ ಸ್ಥಳದಲ್ಲಿ 19 ಕೆ.ಜಿಯ ಅನಿಲ ತುಂಬಿದ 1 ಸಿಲಿಂಡರ್ ಸಹಿತ ಒಟ್ಟು 12 ವಾಣಿಜ್ಯ ಸಿಲಿಂಡರ್‌ಗಳು ಹಾಗೂ 5 ಕೆ.ಜಿಯ 9 ವಾಣಿಜ್ಯ ಸಿಲಿಂಡರ್‌ಗಳು ಯಾವುದೇ ಪರವಾನಿಗೆ ಮತ್ತು ದಾಖಲೆಗಳಿಲ್ಲದೆ ದಾಸ್ತಾನಿಟ್ಟಿರುವುದು ಪತ್ತೆಯಾಗಿದೆ. ಅಧಿಕಾರಿಗಳು ಈ ಎಲ್ಲಾ 21 ಸಿಲಿಂಡರ್‌ಗಳನ್ನು ಮಹಜರು ಪ್ರಕ್ರಿಯೆಯ ಮೂಲಕ ಸ್ವಾಧೀನಪಡಿಸಿಕೊಂಡಿದ್ದಾರೆ.

ಮೀನುಗಾರಿಕಾ ಉದ್ದೇಶಕ್ಕೆ ಮಾರಾಟ

ದಾಳಿ ವೇಳೆ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ, ತಾನು ಯಾವುದೇ ಲೈಸೆನ್ಸ್ ಹೊಂದಿಲ್ಲದೇ ಈ ವಾಣಿಜ್ಯ ಸಿಲಿಂಡರ್‌ಗಳನ್ನು ಮೀನುಗಾರಿಕಾ ಉದ್ದೇಶಕ್ಕಾಗಿ ಬಳಸುವವರಿಗೆ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡಲು ದಾಸ್ತಾನು ಇಟ್ಟಿರುವುದಾಗಿ ಒಪ್ಪಿಕೊಂಡಿದ್ದಾನೆ. ಆಹಾರ ಇಲಾಖೆಯ ಅಧಿಕಾರಿಗಳು ನೀಡಿದ ಅಧಿಕೃತ ದೂರಿನ ಮೇರೆಗೆ ಮಲ್ಪೆ ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯ್ದೆ ಹಾಗೂ ಎಲ್‌ಪಿಜಿ ಸರಬರಾಜು ಮತ್ತು ವಿತರಣೆ ನಿಯಂತ್ರಣ ಆದೇಶದ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಪುತ್ತೂರಿನಲ್ಲಿ ಹಲಸು-ಹಣ್ಣು ಮೇಳ ಮಳಿಗೆಗಳ ಉದ್ಘಾಟನೆ

ಹಲಸಿನಲ್ಲಿ ಔಷಧೀಯ ಅಂಶ: ಡಾ. ಭಟ್

• **ಪುತ್ತೂರು:** ನವತೇಜ ಟ್ರಸ್ಟ್ ಇದರ ನೇತೃತ್ವದಲ್ಲಿ ಮುಳಿಯ ಮ್ಯಾನೇಜ್ಡ್ ಫಾರ್ಮ್ ಲ್ಯಾಂಡ್ಸ್‌ನ ಪ್ರಾಯೋಜಕತ್ವದಲ್ಲಿ ಮೂರು ದಿನಗಳ ಕಾಲ ಇಲ್ಲಿನ ಕಿಲ್ಲೆ ಮೈದಾನದಲ್ಲಿ ನಡೆಯಲಿರುವ ಹಲಸು ಹಣ್ಣು ಮೇಳದ ಮಳಿಗೆಗಳ ಉದ್ಘಾಟನೆಯು ಶುಕ್ರವಾರ ನೆರವೇರಿತು.

ಮಳಿಗೆಗಳನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಮಂಗಳಾ ಹೋಮಿಯೋಪತಿಕ್ ಕ್ಲಿನಿಕ್‌ನ ಡಾ.ರಮೇಶ್ ಭಟ್, ಹಲಸು ಇತರ ಹಣ್ಣುಗಳಿಗಿಂತ ವಿಷಮುಕ್ತವಾಗಿದೆ. ಹಲಸಿನಲ್ಲಿ ವಿವಿಧ ಔಷಧೀಯ ಅಂಶಗಳೂ ಒಳಗೊಂಡಿದ್ದು, ಹಲಸು ಆಹಾರವೂ ವಸ್ತುವೂ ಹೌದು, ಔಷಧಿಯ ವಸ್ತುವಾಗಿಯೂ ಪರಿಣಾಮಕಾರಿ ಎಂದರು.

ಹಲಸು ಮೇಳ ಆಯೋಜಿಸುವ ಬಗ್ಗೆ ಹಲವರಲ್ಲಿ ಜಿಜ್ಞಾಸೆಯಿದ್ದು ಹಲಸಿನಲ್ಲಿರುವ ವಿವಿಧ ಜಾತಿಯ ಹಣ್ಣುಗಳು, ವಿವಿಧ ತಳಿಗಳು, ಅವುಗಳನ್ನು ನೆಟ್ಟು ಬೆಳೆಸುವ ವಿಧಾನ, ಅವಶ್ಯಕ ಸಲಕರಣೆಗಳ ಬಳಕೆ ಹಾಗೂ ಮಾರುಕಟ್ಟೆಗಳ ಮಾಹಿತಿ ಮೇಳದ ಒಂದೇ ಸೂರಿನಡಿಯಲ್ಲಿ ಜನತೆಗೆ ದೊರೆಯಲು ಹಲಸು ಮೇಳದ ಆವಶ್ಯಕತೆಯಿದೆ ಎಂದರು.

ಪ್ರಗತಿಪರ ಕೃಷಿಕ ಸಂದೀಪ್ ಶೆಟ್ಟಿ ಅರಿಯಡ್ಕ ಮಾತನಾಡಿ, ಹಲಸಿನ ಕೃಷಿಯಲ್ಲಿ ಆರ್.ಆರ್-38 ಮಾಣಿ ಹೊಸ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದ್ದು, ಈ ತಳಿಯು ಮೇಳದಲ್ಲಿ ಅನಾವರಣಗೊಳ್ಳಲಿದೆ ಎಂದು ಹೇಳಿದರು.

ಸುಜಾತ ರಮೇಶ್, ಸಮೃದ್ಧಿ ಗಿಡ ಗೆಳೆತನ ಸಂಘದ ಅಧ್ಯಕ್ಷ ಶಂಕರ್ ಸಾರಡ್ಕ, ನಿತ್ಯ ಫುಡ್‌ಪ್ರಾಡಕ್ಟ್‌ನ ರಾಧಾಕೃಷ್ಣ ಇಟ್ಟಿಗುಂಡಿ, ನವತೇಜ ಟ್ರಸ್ಟ್ ಅಧ್ಯಕ್ಷ ಅನಂತಪ್ರಸಾದ್ ನೈತ್ತಡ್ಕ, ಸದಸ್ಯ ವೇಣುಗೋಪಾಲ್ ಉಪಸ್ಥಿತರಿದ್ದರು. ಸುಹಾಸ್ ಮರಿಕೆ ಸ್ವಾಗತಿಸಿ, ನಾ. ಕಾರಂತ ಪೆರಾಜೆ ವಂದಿಸಿದರು.



ಮೇಳದಲ್ಲೇನಿದೆ...

ಹಲವು ಹಣ್ಣು ಮೇಳದಲ್ಲಿ ಸುಮಾರು 90ರಷ್ಟು ವಿವಿಧ ಮಳಿಗೆಗಳಿದ್ದು, ವಿವಿಧ ಜಾತಿಯ ಹಣ್ಣು, ಹೂವಿನ ಗಿಡ, ಅಲಂಕಾರಿಕ ಹೂವಿನ ಗಿಡ, ಹಲಸು, ಮಾವಿನ ಹಣ್ಣುಗಳು, ಗೃಹ ಉತ್ಪನ್ನಗಳು, ಕ್ಯಾಂಪ್ಕೋ ಚಾಕಲೇಟ್, ತಾಳೆ ಬೆಲ್ಲ, ವಿವಿಧ ಹಣ್ಣುಗಳ ಹಲ್ವ, ವಿಜಯ ಸೋಲಾರ್, ಆಗರಬತ್ತಿ, ಪಶುಪತಿ ಲೈಟ್, ತೂಕದ ಯಂತ್ರ, ಮನೆ ಬಳಕೆ ಸಾಮಗ್ರಿಗಳು, ಫುಡ್ ಪ್ರಾಡಕ್ಟ್ ಗಳು, ಸಾವಯವ ಐಸ್ ಕ್ರೀಂ, ಹಲಸಿನ ಸೋಳೆಯ ಕಟ್ಟಿಂಗ್ ಮೆಷಿನ್, ರೆಡಿಮೇಡ್ ಉಡುಪು ಮಳಿಗೆ, ಕೃಷಿ ಯಂತ್ರೋಪಕರಣಗಳು, ಗೆರಟೆ ಅಲಂಕಾರಿಕ ವಸ್ತುಗಳು, ಕೃಷಿ ಉಪಯೋಗ ಸಾಮಗ್ರಿಗಳು, ಸಾವಯವ ಮಸಾಲೆ ಹುಡಿಗಳು, ಮೌತ್ ವಾಷ್, ಅಡಿಕೆ ಪತ್ರಿಕೆ, ಜ್ಞಾನಗಂಗಾ ಪುಸ್ತಕ ಮಳಿಗೆ, ತರಕಾರಿ ಬೀಜಗಳ ಮಳಿಗಳ ಜೊತೆಗೆ 12 ಆಹಾರ ಮಳಿಗೆಗಳೂ ಮೇಳೈಸಿದೆ.

ವಿ. ರಾಧಾಕೃಷ್ಣನ್‌ಗೆ ಮಂಗಳೂರಿನಲ್ಲಿ ಆತ್ಮೀಯ ಸ್ವಾಗತ

ನಾಳೆ ಬಿಎಂಎಸ್ ಜಿಲ್ಲಾಕಾರ್ಯಕಾರಿಣಿ

• **ಮಂಗಳೂರು:** ಭಾರತೀಯ ಮಜ್ದೂರ್ ಸಂಘದ (ಬಿಎಂಎಸ್) ಜಿಲ್ಲಾ ಕಾರ್ಯಕಾರಿಣಿ ಜೂ.7ರಂದು ಮಂಗಳೂರಿನಲ್ಲಿರುವ ಬಿಎಂಎಸ್ ಜಿಲ್ಲಾ ಕಾರ್ಯಾಲಯದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬಿಎಂಎಸ್ ದಕ್ಷಿಣ ಹಾಗೂ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ವಿ.ರಾಧಾಕೃಷ್ಣನ್ ಅವರು ಶುಕ್ರವಾರ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿದ್ದು, ಅವರನ್ನು ಭಾರತೀಯ ಮಜ್ದೂರ್ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ವತಿಯಿಂದ ಆತ್ಮೀಯವಾಗಿ ಸ್ವಾಗತಿಸಲಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಸಹ ಕಾರ್ಯವಾಹ ಪಿ.ಎಸ್.ಪ್ರಕಾಶ್, ಭಾರತೀಯಮಜ್ದೂರ್ ಸಂಘದ ರಾಜ್ಯ ಉಪಾಧ್ಯಕ್ಷ ಸತೀಶ್ ಶೆಟ್ಟಿ, ಜಿಲ್ಲಾ ಅಧ್ಯಕ್ಷ ಅನಿಲ್ ಕುಮಾರ್ ಯು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ, ಜಿಲ್ಲಾ ಉಪಾಧ್ಯಕ್ಷ ರೋಹಿತಾಕ್ಷ ಉಪಸ್ಥಿತರಿದ್ದರು.

ಜೂ.7ರಂದು ಕಾರ್ಯಕ್ರಮ

ವಿ.ರಾಧಾಕೃಷ್ಣನ್ ಜೂ. 7ರಂದು ಬಿಎಂಎಸ್ ಜಿಲ್ಲಾ ಕಾರ್ಯಾಲಯದ 'ಪ್ರಭಾಕರ ಘಾಟೆ' ಸಭಾಂಗಣದಲ್ಲಿ ನಡೆಯಲಿರುವ ಭಾರತೀಯ ಮಜ್ದೂರ್ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೆ ಜಿಲ್ಲೆಯ ವಿವಿಧ ಸಂಯೋಜಿತ ಯೂನಿಯನ್ ಕಚೇರಿಗೆ ಭೇಟಿ ನೀಡಿ ಸಂಘಟನಾ ಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಲಿದ್ದಾರೆ. ಯೂನಿಯನ್‌ಗಳ ದಾಖಲಾತಿಗಳ ಸಮರ್ಪಕ ನಿರ್ವಹಣೆ, ಸದಸ್ಯತ್ವ ನೋಂದಣಿ, ರಿಜಿಸ್ಟರ್‌ಗಳ ಪಾಲನೆ, ಲೆಕ್ಕಪತ್ರಗಳ ನಿರ್ವಹಣೆ, ವಾರ್ಷಿಕ ವರದಿಗಳ ಸಲ್ಲಿಕೆ, ಅಫಿಲಿಯೇಷನ್ ನವೀಕರಣ ಹಾಗೂ ಭಾರತೀಯ ಮಜ್ದೂರ್ ಸಂಘದ ನಿಯಮಾವಳಿಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಪದಾಧಿಕಾರಿಗಳಿಗೆ ಅವರು ಮಾರ್ಗದರ್ಶನ ನೀಡಲಿದ್ದಾರೆ.

ಸಂಘಟನೆಯ ಬಲವರ್ಧನೆ ಹಾಗೂ ಕಾರ್ಯಕ್ಷಮತೆಯ ವೃದ್ಧಿಗಾಗಿ ಎಲ್ಲಾ ಸಂಯೋಜಿತ ಯೂನಿಯನ್‌ಗಳು ಕಾನೂನುಬದ್ಧ ಹಾಗೂ ಸಂಘಟನಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮಹತ್ವವನ್ನು ತಿಳಿಸಲಿದ್ದಾರೆ.



ಸಮಗ್ರ ಚರ್ಚೆ

ಜೂನ್ 7ರಂದು ನಡೆಯಲಿರುವ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಜಿಲ್ಲೆಯ ಸಂಘಟನಾ ಬೆಳವಣಿಗೆ, ಕಾರ್ಮಿಕರ ಸಮಸ್ಯೆಗಳು, ಸಂಯೋಜಿತ ಯೂನಿಯನ್‌ಗಳ ಕಾರ್ಯವೈಖರಿ ಹಾಗೂ ಮುಂದಿನ ಸಂಘಟನಾ ಕಾರ್ಯಕ್ರಮಗಳು ಮತ್ತು ಕಾರ್ಯತಂತ್ರಗಳ ಕುರಿತು ಸಮಗ್ರ ಚರ್ಚೆ ನಡೆಯಲಿದೆ ಎಂದು ಬಿಎಂಎಸ್ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಯು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ 4,394 ದಿನಗಳ ನಿರಂತರ ಆಡಳಿತ: ಜೂ.22ರವರೆಗೆ ನಡೆಯಲಿದೆ 12ನೇ ವರ್ಷದ ಸಂಭ್ರಮಾಚರಣೆ

ದ.ಕ. ವಿಧಾನಸಭಾ ಕ್ಷೇತ್ರಗಳಲ್ಲಿ ವಿವಿಧ ಕಾರ್ಯಕ್ರಮ: ಸತೀಶ್ ಕುಂಪಲ

• **ಮಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ 4,394 ದಿನಗಳ ನಿರಂತರ ಆಡಳಿತ ಹಾಗೂ 12ನೇ ವರ್ಷದ ಸಂಭ್ರಮಾಚರಣೆ ದೇಶಾದ್ಯಂತ ನಡೆಯುತ್ತಿದ್ದು, ಅದರಂತೆ ದ.ಕ. ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಜೂ. 5ರಿಂದ 22ರವರೆಗೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ತಿಳಿಸಿದರು.

ಸರ್ಕಾರದ ಸಾಧನೆ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸನ್ನು ಜನತೆ ಬಳಿಗೆ ತಲುಪಿಸುವುದು ವಿಶ್ವಾಸ, ಅಭಿವೃದ್ಧಿ ಮತ್ತು ಜನ ಕಲ್ಯಾಣದ 12 ವರ್ಷಗಳು ಅಭಿಯಾನದ ಉದ್ದೇಶ. ಬಿಜೆಪಿ ಸಂಸದರು, ಶಾಸಕರು, ಇತರೆ ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರ ವಿವಿಧ ತಂಡಗಳಲ್ಲಿ ಜಿಲ್ಲೆ, ತಾಲೂಕು, ವಿಧಾನಸಭಾ ಕ್ಷೇತ್ರ, ಶಕ್ತಿ ಕೇಂದ್ರ, ಮಹಾಶಕ್ತಿ ಕೇಂದ್ರ ಹಾಗೂ 1,876 ಬೂತ್‌ಗಳಲ್ಲಿ ಮೋದಿ ಸಾಧನೆ, ಜನಜಾಗೃತಿ ಹಾಗೂ ಸಂವಾದ ಕಾರ್ಯಕ್ರಮ ನಡೆಸಲಾಗುವುದು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ಆಯುಷ್ಮಾನ್ ನೋಂದಣಿ ಅಭಿಯಾನ, ರೈತ ಮೋರ್ಚಾದಿಂದ ಸಾವಯವ ಕೃಷಿ ಅರಿವು, ಕಿಸಾನ್ ಸಮ್ಮಾನ್ ರೈತ ಫಲಾನುಭವಿಗಳ ನೋಂದಣಿ, ಬಿಜೆಪಿ ಹಿಂದುಳಿದ ವರ್ಗ ಮೋರ್ಚಾದಿಂದ ಸ್ವಚ್ಛತಾ ಕಾರ್ಯಕ್ರಮ, ಪರಿಶಿಷ್ಟ ಜಾತಿ, ವರ್ಗದ ಕಾಲನಿಗಳಲ್ಲಿ ಸ್ವಚ್ಛತೆ ನಡೆಸಲಾಗುವುದು. ಸಮಾಜದ ಎಲ್ಲ ಸ್ತರದ ಮಂದಿಯ ಸಂಪರ್ಕ, ಜಿಲ್ಲೆ, ಮಂಡಲಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮಾವೇಶ, ಕನಿಷ್ಠ 500 ಮಂದಿಗೆ ಗೌರವಿಸಲು ಉದ್ದೇಶಿಸಲಾಗಿದೆ ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಾಧಾಮೋಹನದಾಸ್ ಅಗರ್‌ವಾಲ್ ಅವರು ಜೂ. 13 ರಂದು ದ.ಕ. ಜಿಲ್ಲೆಗೆ ಆಗಮಿಸಲಿದ್ದು, ದಿನಪೂರ್ತಿ ಸಂವಾದ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕರ್ತರಿಗೆ ಉತ್ತೇಜನ ನೀಡಲಿದ್ದಾರೆ. ರಾಷ್ಟ್ರೀಯ ನಾಯಕರೊಬ್ಬರು ಜಿಲ್ಲೆಗೆ ಆಗಮಿಸಿ, ಇಲ್ಲಿನ ಕಾರ್ಯಕರ್ತರ ಜತೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದು ದ.ಕ. ಜಿಲ್ಲೆ ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾಗಿದೆ.

■ **ಸತೀಶ್ ಕುಂಪಲ,** ಜಿಲ್ಲಾಧ್ಯಕ್ಷರು ದ.ಕ.ಬಿಜೆಪಿ

ಸಂಘ ಸಂಸ್ಥೆಗಳ ಸಹಯೋಗದಲ್ಲಿ ಯುವ ಮೋರ್ಚಾ ಆರೋಗ್ಯ, ರಕ್ತದಾನ ಶಿಬಿರ ನಡೆಸಲಿದೆ.

ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ

ವಿಶ್ವಪರಿಸರ ದಿನಾಚರಣೆ ಅಂಗವಾಗಿ ಬಿಜೆಪಿ ಮಹಿಳಾ ಮೋರ್ಚಾದಿಂದ ಶಕ್ತಿನಗರದ ನಾಲ್ಯಪದವು ಶಾಲೆಯಲ್ಲಿ ಸಸಿ ನೆಡುವ ಮೂಲಕ ಶುಕ್ರವಾರ ಪರಿಸರ ದಿನಾಚರಣೆ ಆಚರಿಸಲಾಗಿದೆ. ಈ ಕಾರ್ಯಕ್ರಮ ಇಡೀ ಜಿಲ್ಲೆಯಲ್ಲಿ ನಡೆಯಲಿದೆ. ಜಿಲ್ಲೆಯಲ್ಲಿ 1876 ಬೂತ್‌ಗಳಿದ್ದು, ಪ್ರತಿ ಬೂತ್‌ನಲ್ಲಿ ಕನಿಷ್ಠ ಒಂದು ಗಿಡ ನೆಡಲಾಗುವುದು. ಗರಿಷ್ಠ ಎಷ್ಟು ಗಿಡಗಳನ್ನೂ ನೆಡಬಹುದು. ಈ ಮೂಲಕ ಪರಿಸರ ರಕ್ಷಣೆ ಹಾಗೂ ಪೋಷಣೆಗೆ ಆದ್ಯತೆ ನೀಡಲಾಗುವುದು ಎಂದು ಸತೀಶ್ ಕುಂಪಲ ತಿಳಿಸಿದರು.

ಜೂ. 21 ರಂದು ವಿಶ್ವ ಯೋಗ ದಿನಾಚರಣೆ ಬೂತ್ ಹಾಗೂ ಶಕ್ತಿ ಕೇಂದ್ರ ಮಟ್ಟದಲ್ಲಿ ನಡೆಯಲಿದೆ.

ಈ ಎಲ್ಲ ಕಾರ್ಯಕ್ರಮಗಳ ಮೂಲಕ ಕೇಂದ್ರ ಸರಕಾರದ ಯೋಜನೆ, ಸಾಧನೆಗಳನ್ನು ಜನಮನಕ್ಕೆ ತಲುಪಿಸಲಾಗುವುದು. ಶುಕ್ರವಾರದಿಂದ ಜೂ.22ರವರೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ಮೋದಿ ಸರಕಾರದ ಸಾಧನೆಗಳನ್ನು ಜನತೆಗೆ ತಿಳಿಸಲಾಗುವುದು ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಡಾ. ಮಂಜುಳಾ ರಾವ್, ಯುವಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷೆ ಸುಮಿತ್ರಾ ಕರಿಯ, ಜಿಲ್ಲಾ ಕಾರ್ಯದರ್ಶಿಗಳಾದ ದೇವಪ್ಪ ಪೂಜಾರಿ, ಧನಲಕ್ಷ್ಮೀ ಗಟ್ಟಿ, ಸುಜಿತ್ ಪ್ರತಾಪ್, ಪ್ರಮುಖರಾದ ಅರುಣ್ ಶೇಟ್, ಸಂಜಯ ಪ್ರಭು, ವಸಂತ ಪೂಜಾರಿ, ಮನೋಹರ ಶೆಟ್ಟಿ, ಸಂಧ್ಯಾ ವೆಂಕಟೇಶ್, ಲಲಿತಾ ಶೆಟ್ಟಿ, ಉಮೇಶ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರು
ಶನಿವಾರ, 6 ಜೂನ್ 2026
ಸಂಪುಟ 48, ಸಂಚಿಕೆ 79 ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೇರಳದಲ್ಲಿ ಭಾರೀ ಮಳೆ: ರೆಡ್‌ಅಲರ್ಟ್ | ೧೧
ಭಾರತದ ಆರ್ಥಿಕ ಬೆಳವಣಿಗೆ ಶೇ.7.7ಕ್ಕೆ | ೧೧
ಇಂದಿನಿಂದ ಭಾರತ-ಅಫ್ಘಾನ್ ಟೆಸ್ಟ್ | ೧೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣಪಕ್ಷ, ತಿಥಿ: ಷಷ್ಠಿ, ನಕ್ಷತ್ರ:ಧನಿಷ್ಠೆ

ದಿನದ ಮಾತು

ಸರಿಯಾದ ಚಿಂತನೆ ಇಲ್ಲದಿದ್ದರೆ ಅಭಿವೃದ್ಧಿ ಹೊಂದುವುದು ತೀರಾ ಅಸಾಧ್ಯ.
▲ ಜೆ. ಕೃಷ್ಣಮೂರ್ತಿ

ಸೂರ್ಯ ರೇಖೆಯ ಕುರಿತಾದ ಪ್ರಶ್ನೆಗಳು

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಇಂದು ಸಿಇಟಿ ಫಲಿತಾಂಶ

• **ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ (ಯುಜಿಸಿಇಟಿ) ಫಲಿತಾಂಶವನ್ನು ಜೂ.6ರಂದು ಪ್ರಕಟಿಸಲಿದೆ. ವೈದ್ಯಕೀಯ ಶಿಕ್ಷಣ ಸಚಿವ ಮತ್ತು ಪ್ರಾಧಿಕಾರದ ಸಹ ಅಧ್ಯಕ್ಷ ಡಾ.ಶರಣ ಪ್ರಕಾಶ ಪಾಟೀಲ್ ಅವರು ಮಧ್ಯಾಹ್ನ 12 ಗಂಟೆಗೆ ಸುದ್ದಿಗೋಷ್ಠಿ ನಡೆಸಿ, ಫಲಿತಾಂಶದ ವಿವರಗಳನ್ನು ಪ್ರಕಟಿಸಲಿದ್ದಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಈ ವೇಳೆ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಖುಷ್ಬು ಗೋಯಲ್ ಉಪಸ್ಥಿತರಿರಲಿದ್ದಾರೆ ಎಂದು ಹೇಳಿದ್ದಾರೆ. ಸಾರ್ವಜನಿಕರು, ಅಂದು ಮಧ್ಯಾಹ್ನ 2 ಗಂಟೆಯ ನಂತರ https://keaonline.karnataka.gov.in/ugcet_2026_results/, https://keaonline.karnataka.gov.in/ugcet_2026_result/ ಹಾಗೂ https://cetonline.karnataka.gov.in/kea/ ಲಿಂಕ್‌ಮೂಲಕ ಫಲಿತಾಂಶ ಪಡೆಯಬಹುದು ಎಂದು ವಿವರಿಸಿದ್ದಾರೆ.

ಯುವ ವೈದ್ಯರ ನೇರ ನೇಮಕ: ಸಚಿವ ಖಾದರ್

• **ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಇಚ್ಛಿಸುವ ಎಂಬಿಬಿಎಸ್ ಪದವೀಧರರು ನೇರವಾಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಅನುಮತಿ ಪತ್ರ ರವಾನಿಸಿ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಒಂದು ವಾರದೊಳಗೆ ಅವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಹೊಸದಾಗಿ ನೇಮಕಾತಿ ಆಗುವ ವೈದ್ಯರಿಗೆ ತಿಂಗಳಿಗೆ 60,000 ರೂ. ವೇತನ ನಿಗದಿಪಡಿಸಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

• ಪುಟ ೫

ಭಾರತದಲ್ಲೇ ಫೈಟರ್ ಜೆಟ್ ಜಂಟಿ ಉತ್ಪಾದನೆ

• ಪುಟ ೧೧

ಒತ್ತಡಕ್ಕೆ ಬಗ್ಗುವವರಲ್ಲ ಪಿಎಂ ಮೋದಿ: ಪುಟಿನ್

• ಪುಟ ೧೧



ದೇಶದ ಭದ್ರತೆಗೆ ಮತ್ತಷ್ಟು ಬಲ

• ಪುಟ ೧೧

ಸುದ್ದಿ ಸಮಗ್ರ

ಆತ್ಮನಿರ್ಭರಕ್ಕೆ ಭಾರತದ ಪ್ರಮುಖ ಆದ್ಯತೆ: ಪ್ರಧಾನಿ ಮೋದಿ

ಇಂಧನ ಭದ್ರತೆ ಭವಿಷ್ಯ

ಸೂರತ್‌ನಲ್ಲಿ 18,000 ಕೋಟಿ ರೂ. ಮೊತ್ತದ ಯೋಜನೆಗಳಿಗೆ ಮೋದಿ ಚಾಲನೆ, ಶಿಲಾನ್ಯಾಸ



• **ಸೂರತ್:** ಜಾಗತಿಕ ಉದ್ವಿಗ್ನತೆ, ಯುದ್ಧಗಳು ಮತ್ತು ಇಂಧನ ಬಿಕ್ಕಟ್ಟುಗಳಂತಹ ಸವಾಲುಗಳು ಭಾರತಕ್ಕೆ ಇಂಧನ ಸ್ವಾವಲಂಬನೆಯ ಮಹತ್ವವನ್ನು ಮತ್ತಷ್ಟು ಸ್ಪಷ್ಟಪಡಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಗುಜರಾತ್‌ನ ಸೂರತ್‌ನಲ್ಲಿ ಸುಮಾರು 18,000 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಹಾಗೂ ಶಿಲಾನ್ಯಾಸ ನೆರವೇರಿಸಿದ ಅವರು, ಆತ್ಮನಿರ್ಭರ ಭಾರತ ಪರಿಕಲ್ಪನೆಯ ಅಗತ್ಯವನ್ನು ಮತ್ತೊಮ್ಮೆ ಸಮರ್ಥಿಸಿದರು.

ಕೋವಿಡ್ ಮಹಾಮಾರಿ, ವಿವಿಧ ಯುದ್ಧಗಳು ಹಾಗೂ ಪಶ್ಚಿಮ ಏಷ್ಯಾದ ಸಂಘರ್ಷಗಳಿಂದ ಉಂಟಾದ ಇಂಧನ ಕೊರತೆಯಂತಹ ಸವಾಲುಗಳಿಂದ ವಿಶ್ವ ಕಳೆದ ಒಂದು ದಶಕದಲ್ಲಿ ತೀವ್ರ ಒತ್ತಡ ಅನುಭವಿಸಿದೆ. ಆದರೆ 140 ಕೋಟಿ ಭಾರತೀಯರ ಒಗ್ಗಟ್ಟಿನ ಪ್ರಯತ್ನದಿಂದ ಭಾರತ ಈ ಎಲ್ಲ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿದೆ ಎಂದು ತಿಳಿಸಿದರು.

ಇಂಧನ ಕ್ಷೇತ್ರದಲ್ಲಿ ಮಹತ್ತರ ಸಾಧನೆಗಳು: ಕಳೆದ 12 ವರ್ಷಗಳಲ್ಲಿ ಭಾರತ ಇಂಧನ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ಎಂದು ಪ್ರಧಾನಿ ಹೇಳಿದರು. ದೇಶದ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 250 ಗಿಗಾವ್ಯಾಟ್‌ಗೆ ಏರಿಕೆಯಾಗಿದೆ. ಎಥನಾಲ್ ಮಿಶ್ರಣ ಕಾರ್ಯಕ್ರಮ ವಿಸ್ತರಿಸಿದ್ದು, ರೈಲ್ವೆ ವಿದ್ಯುದೀಕರಣ ವೇಗ ಪಡೆದುಕೊಂಡಿದೆ. ಪರಮಾಣು ಶಕ್ತಿ ಯೋಜನೆಗಳು, ವಿದ್ಯುತ್ ಜಾಲಗಳ ಆಧುನೀಕರಣ, ಅನಿಲ ಪೈಪ್‌ಲೈನ್ ವಿಸ್ತರಣೆ ಹಾಗೂ ಪೆಟ್ರೋಲಿಯಂ ಸಂಗ್ರಹ ಮತ್ತು ಸಾಗಣೆ ಸೌಲಭ್ಯಗಳ ಅಭಿವೃದ್ಧಿಯೂ ವೇಗವಾಗಿ ನಡೆಯುತ್ತಿದೆ ಎಂದು ವಿವರಿಸಿದರು.

ಹಸಿರು ಅಭಿವೃದ್ಧಿಯತ್ತ ಹೆಜ್ಜೆ

ವಿಶ್ವ ಪರಿಸರ ದಿನದಂದು ಮಾತನಾಡಿದ ಪ್ರಧಾನಿ, ಭಾರತ ಹಸಿರು ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

➡ಪುಟ ೭

ಎಲ್ ಆ್ಯಂಡ್ ಟಿ ಹಜೀರಾ ಘಟಕಕ್ಕೆ ಭೇಟಿ

ಇದಕ್ಕೂ ಮುನ್ನ ಪ್ರಧಾನಿ ಮೋದಿ ಸೂರತ್ ಜಿಲ್ಲೆಯ ಹಜೀರಾದಲ್ಲಿರುವ ಲಾರ್ಸನ್ ಆ್ಯಂಡ್ ಟೂಬ್ರೋ (ಎಲ್ ಆ್ಯಂಡ್ ಟಿ) ಸಂಸ್ಥೆಯ ಭಾರೀ ಇಂಜಿನಿಯರಿಂಗ್ ಸಂಕೀರ್ಣಕ್ಕೆ ಭೇಟಿ ನೀಡಿದರು. ಅಲ್ಲಿ ನಿರ್ಮಾಣವಾಗುತ್ತಿರುವ ಜೊರಾವರ್ ಲಘು ಟ್ಯಾಂಕ್ ಸೇರಿದಂತೆ ವಿವಿಧ ರಕ್ಷಣಾ ಸಾಧನಗಳ ಬಗ್ಗೆ ಮಾಹಿತಿ ಪಡೆದರು. ಡಿಆರ್‌ಡಿಒ ಮತ್ತು ಎಲ್ ಆ್ಯಂಡ್ ಟಿ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ 25 ಟನ್ ತೂಕದ ಈ ಟ್ಯಾಂಕ್‌ನ್ನು ವಿಶೇಷವಾಗಿ ಚೀನಾ ಗಡಿಯಂತಹ ಪ್ರದೇಶಗಳಲ್ಲಿ ತ್ವರಿತ ನಿಯೋಜನೆಗಾಗಿ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಲಾಯಿತು. ಭಾರತದ ಇಂಧನ ಭದ್ರತೆ, ಕೈಗಾರಿಕಾ ಸಾಮರ್ಥ್ಯ ಹಾಗೂ ಆತ್ಮನಿರ್ಭರತೆಯೇ ದೇಶದ ಭವಿಷ್ಯದ ಬೆಳವಣಿಗೆಯ ಪ್ರಮುಖ ಆಧಾರಗಳಾಗಿವೆ ಎಂದು ಪ್ರಧಾನಿ ಮೋದಿ ಹೇಳಿದರು.

ಭಾರತದಲ್ಲಿ ₹3 ಲಕ್ಷ ಕೋಟಿ ಹೂಡಿಕೆ: ಏರ್‌ಟ್ರಂಕ್ ಘೋಷಣೆ

• **ಹೊಸದಿಲ್ಲಿ:** ಹೈಪರ್‌ಸ್ಕೇಲ್ ಡೇಟಾ ಸೆಂಟರ್ ಕ್ಷೇತ್ರದ ಪ್ರಮುಖ ಸಂಸ್ಥೆಯಾದ ಏರ್‌ಟ್ರಂಕ್, 2030ರೊಳಗೆ ಭಾರತದಲ್ಲಿ 3 ಲಕ್ಷ ಕೋಟಿ ರೂ. (30 ಬಿಲಿಯನ್ ಡಾಲರ್) ಹೂಡಿಕೆ ಮಾಡುವುದಾಗಿ ಘೋಷಿಸಿದೆ. ಈ ಹೂಡಿಕೆಯಿಂದ ದೇಶದಲ್ಲಿ 5 ಗಿಗಾವಾಟ್ (ಜಿಡಬ್ಲ್ಯು) ಡೇಟಾ ಸೆಂಟರ್ ಸಾಮರ್ಥ್ಯ ಅಭಿವೃದ್ಧಿಪಡಿಸುವ ಗುರಿಯನ್ನು ಕಂಪನಿ ಹೊಂದಿದೆ. ಪ್ರಧಾನಿ ಮೋದಿಯವರು ಶುಕ್ರವಾರ ಏರ್‌ಟ್ರಂಕ್ ಸಂಸ್ಥಾಪಕ ಹಾಗೂ ಸಿಇಒ ರಾಬಿನ್ ಖುದಾರೊಂದಿಗೆ ನಡೆದ ಸಭೆ ಬಳಿಕ ಈ ಮಾಹಿತಿ ನೀಡಿದರು.

➡ಪುಟ ೭

ತುಮಕೂರಲ್ಲಿ ಪೊಲೀಸರ ಕಾರ್ಯಾಚರಣೆ

ಉಗ್ರರ ಜತೆ ಸಂಪರ್ಕ ರಾಜ್ಯದ ಇಬ್ಬರ ಸೆರೆ



• **ತುಮಕೂರು:** ಪಾಕಿಸ್ತಾನ ಮೂಲದ ಶಂಕಿತ ಉಗ್ರರೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇರೆಗೆ ದಾವಣಗೆರೆ ಮತ್ತು ತುಮಕೂರಿನಲ್ಲಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಯುವಕರು ದೇಶದ ಆಂತರಿಕ ಬೆಳವಣಿಗೆಗಳ ಕುರಿತು ಪ್ರಚೋದನಾತ್ಮಕ ಸಂದೇಶಗಳನ್ನು ರವಾನಿಸುತ್ತಿದ್ದರು ಪೊಲೀಸರು ತಿಳಿಸಿದ್ದಾರೆ.

ತುಮಕೂರಿನ ಬೀಡಿ ಲೇಔಟ್ ನಿವಾಸಿ ದಾವಣಗೆರೆ ಮೂಲದ ಜಮೀರ್ ಖಾನ್(22) ಹಾಗೂ ತುಮಕೂರಿನ ಶ್ರೀರಾಮನಗರದ ಅಲ್ಲಾಭಕ್ಷ (24) ಬಂಧಿತರು. ಇವರು ಪಾಕಿಸ್ತಾನ ಮೂಲದ ಶಂಕಿತ ಉಗ್ರರಾದ ಶಾಬಾಸ್ ಭುಟ್ಟಿ ಮತ್ತು ರಾಣಾ ಉನೇಸ್ ಜತೆ ನಿರಂತರ ಸಂಪರ್ಕದಲ್ಲಿದ್ದರು ಎಂಬ ಮಾಹಿತಿ ಗುಪ್ತಚರ ಇಲಾಖೆಗೆ ಲಭ್ಯವಾಗಿತ್ತು. ಈ ಮಾಹಿತಿ ಆಧಾರದ ಮೇಲೆ ಪೊಲೀಸರು ಇಬ್ಬರನ್ನೂ ಬಂಧಿಸಿದ್ದಾರೆ.

ವಾಟ್ಸ್ಯಾಪ್, ಇನ್‌ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣಗಳ ಮೂಲಕ ಆರೋಪಿಗಳು ವಿದೇಶದಲ್ಲಿರುವ ಶಂಕಿತ ಉಗ್ರರೊಂದಿಗೆ ಸಂಪರ್ಕದಲ್ಲಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ ದೇಶದಲ್ಲಿ ಅಶಾಂತಿ ಸೃಷ್ಟಿಸುವ ಹಾಗೂ ವಿಧ್ವಂಸಕ ಚಟುವಟಿಕೆಗಳಿಗೆ ನೆರವಾಗುವ ಉದ್ದೇಶದಿಂದ ಸ್ಥಳೀಯ ಯುವಕರನ್ನು ಸಂಪರ್ಕಿಸುವ ಪ್ರಯತ್ನ ನಡೆದಿತ್ತು. ಈ ಹಿನ್ನೆಲೆ ಆರೋಪಿಗಳ ಡಿಜಿಟಲ್ ಸಂಪರ್ಕ, ಹಣಕಾಸು ವ್ಯವಹಾರ, ವಿದೇಶಿ ನಂಟುಗಳ ಕುರಿತು ತನಿಖೆ ಮುಂದುವರಿದಿದೆ.

➡ಪುಟ ೭

ಕೇಂದ್ರ ತನಿಖಾ ಸಂಸ್ಥೆಗಳ ನಿಗಾ

ಅಲ್ಲಾಭಕ್ಷ ಸಾಮಾಜಿಕ ಜಾಲತಾಣಗಳಲ್ಲಿ ನಡೆಸುತ್ತಿದ್ದ ಅನುಮಾನಾಸ್ಪದ ಚಟುವಟಿಕೆಗಳು ಹಾಗೂ ದೇಶ ವಿರೋಧಿ ಚಾಟಿಂಗ್‌ಗಳ ಬಗ್ಗೆ ಕೇಂದ್ರ ತನಿಖಾ ಸಂಸ್ಥೆಗಳು ತೀವ್ರ ನಿಗಾ ವಹಿಸಿದ್ದವು. ಆತನ ಲಿಂಕ್‌ಗಳನ್ನು ಪತ್ತೆಹಚ್ಚಿದ ಬಳಿಕ, ತನಿಖಾ ಸಂಸ್ಥೆಗಳು ರಾಜ್ಯ ಪೊಲೀಸರಿಗೆ ಮಾಹಿತಿ ರವಾನಿಸಿದ್ದವು. ಈ ಹಿನ್ನೆಲೆ ಕಾರ್ಯಾಚರಣೆ ನಡೆಸಿದ ತುಮಕೂರು ನಗರ ಪೊಲೀಸರು ಗುರುವಾರ ರಾತ್ರಿ ಕ್ಯಾತಸಂದ್ರದಲ್ಲಿ ಆರೋಪಿಯನ್ನು ಬಂಧಿಸಿದ್ದಾರೆ.

➡ಪುಟ ೭

ಎಕ್ಸ್ ಮೂಲಕ ಉಗ್ರರ ಲಿಂಕ್

ಬಂಧಿತ ಅಲ್ಲಾಭಕ್ಷಗೆ 20 ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ವಿದೇಶಿ ಶಂಕಿತ ಉಗ್ರನೊಬ್ಬ ಪರಿಚಯವಾಗಿದ್ದ. ಇನ್ಸ್ಟಾಗ್ರಾಮ್‌ನಲ್ಲಿ ಶಂಕಿತ ಮಾಡುತ್ತಿದ್ದ ಪೋಸ್ಟ್‌ಗೆ ಈತ ಲೈಕ್ ಮಾಡುವುದರ ಜತೆ ಮೆಸೇಜ್ ಸಹ ಮಾಡುತ್ತಿದ್ದ. ನಂತರ ಇವರಿಬ್ಬರ ಸಂಪರ್ಕ ಎಕ್ಸ್ ನಲ್ಲಿ ಮುಂದುವರಿದಿದ್ದು, ಹಲವು ವಿಷಯಗಳ ಕುರಿತು ಚರ್ಚೆ ಮಾಡಿದ್ದರು ಎಂಬ ಆಘಾತಕಾರಿ ಮಾಹಿತಿ ತಿಳಿದುಬಂದಿದೆ. ದೇಶದ ಆಂತರಿಕ ಭದ್ರತೆ ಮತ್ತು ಶಾಂತಿ ಕದಡುವ ನಿಟ್ಟಿನಲ್ಲಿ ಈತ ಸರಣಿ ಪ್ರಚೋದನಾತ್ಮಕ ಸಂದೇಶಗಳನ್ನು ರವಾನಿಸುತ್ತಿದ್ದ ಹಾಗೂ ದೇಶ ವಿರೋಧಿ ಚಟುವಟಿಕೆಗಳ ಕುರಿತು ಚಾಟ್ ನಡೆಸುತ್ತಿದ್ದ ಎಂಬ ಆರೋಪವಿದೆ.

ಅಮ್ಮನಿಗಾಗಿ ಒಂದು ಗಿಡ ಕಾರ್ಯಕ್ರಮದಲ್ಲಿ ನಿರ್ಮಲಾ ಮಾತು

ರಾಜ್ಯದಲ್ಲೂ ಮಿಯಾವಾಕಿ ಕಾಡು

• **ವಿಜಯನಗರ:** ಸಸಿ ನೆಡುವುದು ಕೇವಲ ಒಂದು ದಿನದ ಆಚರಣೆಯಾಗಬಾರದು. ಅದು ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು. ನಮ್ಮ ಸುತ್ತಮುತ್ತಲಿನ ವಾತಾವರಣ, ಪಶು, ಪಕ್ಷಿಗಳು ಮತ್ತು ಗಿಡಮರಗಳು ಸಮೃದ್ಧವಾಗಿದ್ದರೆ ಮಾತ್ರ ಮನುಕುಲದ ಪ್ರಗತಿ ಸಾಧ್ಯ. ಇಲ್ಲದಿದ್ದರೆ ಇಡೀ ಜೀವಸಂಕುಲವೇ ನಾಶವಾಗಿ ಭೂಮಿ ಬರಡಾಗುತ್ತದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಅರಣ್ಯ ಇಲಾಖೆ ವತಿಯಿಂದ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಚಿಕ್ಕಜೋಗಿಹಳ್ಳಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಮ್ಮನಿಗಾಗಿ ಒಂದು ಗಿಡ -ಸಸಿ ನೆಡುವ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಶತಮಾನಗಳ ಹಿಂದೆ ವಿಶ್ವದ ಶ್ರೀಮಂತ ಸಾಮ್ರಾಜ್ಯ ಎನಿಸಿದ್ದ ವಿಜಯನಗರ ಎಲ್ಲ ರೀತಿಯಲ್ಲೂ ಸಂಪದ್ಭರಿತವಾಗಿತ್ತು ಎಂಬುದು ಇತಿಹಾಸದಿಂದ ತಿಳಿಯುತ್ತದೆ. ನಂತರ ನಮ್ಮ ಪೂರ್ವಜರು ಮಾಡಿರಬಹುದಾದ ತಪ್ಪಿನಿಂದ ಈ ಭಾಗದಲ್ಲಿ ಅರಣ್ಯ ನಾಶವಾಗಿದೆ.

➡ಪುಟ ೭



ವಿಜಯನಗರ ಜಿಲ್ಲೆ ಬದ್ಧತೆ ಕೊಂಡಾಡಿದ ಸಚಿವೆ

• ಪುಟ ೭

ಖಾತೆ ಹಂಚಿಕೆ ಅಸಮಾಧಾನ | ರೆಡ್ಡಿ ಮನವೊಲಿಸುವೆ: ಸಿಎಂ

ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ



• **ಬೆಂಗಳೂರು:** ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡ ಕೇವಲ ಎರಡೇ ದಿನಕ್ಕೆ ಸರ್ಕಾರಕ್ಕೆ ಬಂಡಾಯದ ಬಿಸಿ ತಟ್ಟಿದೆ. ತಮಗೆ ಇಷ್ಟವಿಲ್ಲದ ಜಲಸಂಪನ್ಮೂಲ ಖಾತೆ ಹಂಚಿಕೆ ಮಾಡಿರುವುದಕ್ಕೆ ಹಿರಿಯ ನಾಯಕ ರಾಮಲಿಂಗಾರೆಡ್ಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆದರೆ, ಸಿಎಂ ಅವರು ರಾಮಲಿಂಗಾರೆಡ್ಡಿ ಮನವೊಲಿಸುವ ಭರವಸೆ ನೀಡಿದ್ದಾರೆ.

ತಮ್ಮ ಕೋರಮಂಗಲ ನಿವಾಸದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ರಾಮಲಿಂಗಾರೆಡ್ಡಿ ಅವರು, ಈಗಿನ ಸಿಎಂ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಅವರು 2023ರಲ್ಲಿ ನಮ್ಮ ಮನೆಗೆ ಬಂದಿದ್ದರು. ಮುಂದೆ ನಾನೇ ಸಿಎಂ ಆಗುತ್ತೇನೆ. ನಿಮಗೆ ಬೆಂಗಳೂರು ನಗರಾಭಿವೃದ್ಧಿ ಕೊಡುತ್ತೇನೆ ಎಂದಿದ್ದರು. ಪ್ರಮಾಣ ವಚನಕ್ಕೂ ಮುನ್ನ ಅವರನ್ನು ಭೇಟಿ ಯಾದಾಗಲೂ ಬೆಂಗಳೂರು ನಗರಾಭಿವೃದ್ಧಿ ನಿಮಗೆ ಕೊಡುತ್ತೇನೆ ಎಂದಿದ್ದರು.

➡ಪುಟ ೭

ರಾಜೀನಾಮೆ ಪತ್ರದಲ್ಲೇನಿದೆ?

ಮಾನ್ಯರೇ,

ನನಗೆ ತಮ್ಮ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಿದ್ದಕ್ಕೆ ತಮಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ನನ್ನ ಧನ್ಯವಾದಗಳು. ನಾನು ನನ್ನ ಆತ್ಮಸಾಕ್ಷಿ ವಿರುದ್ಧವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದ ಕಾರಣ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ನನ್ನ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ. ನಾನು ಶಾಸಕನಾಗಿ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿ ಮುಂದುವರಿಯುತ್ತೇನೆ.

ವಂದನೆಗಳೊಂದಿಗೆ,
ರಾಮಲಿಂಗಾರೆಡ್ಡಿ.

ಮುನಿದು ತಣ್ಣಗಾದ ಮುನಿಯಪ್ಪ • ಪುಟ ೭

ಖರ್ಗೆ ನಾಮಪತ್ರ ಸಲ್ಲಿಕೆ

ರಾಜ್ಯಸಭಾ ಚುನಾವಣೆ

• **ಬೆಂಗಳೂರು:** ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ.

ಚುನಾವಣಾಧಿಕಾರಿಯಾಗಿರುವ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ. ಈ ವೇಳೆ ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಜತೆಯಲ್ಲಿದ್ದರು. ನಾಮಪತ್ರ ಸಲ್ಲಿಕೆ ಬಳಿಕ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, ಇವತ್ತು ನಾನು ನಾಮಪತ್ರ ಸಲ್ಲಿಕೆ ಮಾಡಿದ್ದೇನೆ. ರಾಜ್ಯದ ಮತ್ತು ಕೇಂದ್ರದ ನಾಯಕರು ಉಪಸ್ಥಿತರಿದ್ದುದರಿಂದ ಈ ನಾಮಪತ್ರ ಸಲ್ಲಿಕೆ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ದೊರಕಿತು.

➡ಪುಟ ೭

ಅಕ್ರಮ ನುಸುಳುಕೋರರ ವಿರುದ್ಧ ಅಮಿತ್ ಶಾ ಎಚ್ಚರಿಕೆ

ಜನಸಂಖ್ಯಾ ಬದಲಾವಣೆ ಸಹಿಸಲ್ಲ

• **ಅಗರ್ತಲಾ:** ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಬಿಹಾರದಲ್ಲಿ ಜನಸಂಖ್ಯಾ ವಿನ್ಯಾಸದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಸ್ಪಷ್ಟಪಡಿಸಿದರು.

ತ್ರಿಪುರಾದ ಲಂಕಾಮುರಾ ಗಡಿ ಕಾವಲು ಕೇಂದ್ರದಲ್ಲಿ (ಬಿಎಸ್‌ಎಫ್ ಬಿಒಪಿ) ಯೋಧರನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಅಂತಾರಾಷ್ಟ್ರೀಯ ಗಡಿಗಳ ಭದ್ರತೆಯನ್ನು ಮತ್ತಷ್ಟು ಬಲಪಡಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದು, ಸ್ಮಾರ್ಟ್ ಬಾರ್ಡರ್ ಯೋಜನೆ ಅಂತಿಮ ಹಂತದಲ್ಲಿದೆ ಎಂದು ಹೇಳಿದರು. ದೇಶದ ಏಳು-ಎಂಟು ಗಡಿ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಸ್ಮಾರ್ಟ್ ಬಾರ್ಡರ್ ಯೋಜನೆ ಜಾರಿಗೊಳಿಸಲಾಗುವುದು. ಈ ವ್ಯವಸ್ಥೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ, ಸ್ಥಳೀಯ ಆಡಳಿತ ಮತ್ತು ಗಡಿ ಕಾವಲು ಪಡೆಗಳ ಸಮನ್ವಯ ಇರಲಿದೆ ಎಂದು ಅವರು ತಿಳಿಸಿದರು. ಪ್ರತಿ ಗಡಿಯೂ ತನ್ನದೇ ಆದ ಸವಾಲುಗಳನ್ನು ಹೊಂದಿದೆ. ಮಾನವ ಕಳ್ಳಸಾಗಣೆ, ಶಸ್ತ್ರಾಸ್ತ್ರಗಳ ಸಾಗಣೆ ಹಾಗೂ ಮಾದಕ ವಸ್ತುಗಳ ಕಳ್ಳಸಾಗಣೆ ನಡೆಯುತ್ತಿದ್ದರೂ ಬಿಎಸ್‌ಎಫ್ ಯೋಧರು ಸಮರ್ಥವಾಗಿ ಎದುರಿಸುತ್ತಿದ್ದಾರೆ ಎಂದು ಶಾ ಶ್ಲಾಘಿಸಿದರು.



ಬಿಎಸ್‌ಎಫ್ ಯೋಧರೊಂದಿಗೆ ಅಮಿತ್ ಶಾ.


> 2047ರೊಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸಲು ನಕಲಿ ನೋಟುಗಳ ಹರಿವು, ಮಾನವ ಕಳ್ಳಸಾಗಣೆ ಮತ್ತು ಮಾದಕ ವಸ್ತುಗಳ ಸಾಗಣೆಯನ್ನು ಸಂಪೂರ್ಣವಾಗಿ ತಡೆಯಬೇಕಾಗಿದೆ.
> ■ ಅಮಿತ್ ಶಾ, ಕೇಂದ್ರ ಗೃಹ ಸಚಿವ

ದಿಲ್ಲಿ ಡಿಜಿಪಿ ಪತ್ನಿ ಕಾಡಾನೆ ದಾಳಿಗೆ ಬಲಿ



• **ಮಡಿಕೇರಿ:** ತೋಟದ ಕೆಲಸ ನೋಡಲೆಂದು ತೆರಳಿದ ಮಹಿಳೆ ಮೇಲೆ ಕಾಡಾನೆಯೊಂದು ದಾಳಿ ನಡೆಸಿ ಸಾಯಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಕೋಣನಕಟ್ಟೆಯಲ್ಲಿ ಶುಕ್ರವಾರ ಬೆಳ್ಳಂಬೆಳಗ್ಗೆ ನಡೆದಿದೆ. ದಿಲ್ಲಿ ಡಿಜಿಪಿ ಅಣ್ಣಳಮಾಡ ಸುನಿಲ್ ಅಚ್ಚಯ್ಯ ಎಂಬುವರ ಪತ್ನಿ ಸಂಧ್ಯಾ (50) ಎಂಬುವರೇ ಕಾಡಾನೆ ದಾಳಿಗೆ ಸಾವಿಗೀಡಾದವರಾಗಿದ್ದಾರೆ.

➡ಪುಟ ೭



ಇದು ಭಾರತದ ಸಮಯ

ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳ ಮೂರನೇ-ಎರಡು ಭಾಗದ ಕಾಲಾವಧಿ ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಈ ವರ್ಗದ ಸಮಾರೋಪ ಸಮಾರಂಭ ನಾಗ್ಪುರದಲ್ಲಿ ಗುರುವಾರ ನಡೆಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಿರ್ಲಾ ಸಮೂಹದ ಅಧ್ಯಕ್ಷ ಕುಮಾರ ಮಂಗಳಂ ಬಿರ್ಲಾ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಮತ್ತು ಕುಮಾರ ಮಂಗಲಂ ಬಿರ್ಲಾ ಅವರು ಮಾಡಿದ ಭಾಷಣದ ಸಾರಾಂಶ ಇಲ್ಲಿದೆ.

ಮೋಹನ್ ಭಾಗವತ್, ಆರೆಸ್ಸೆಸ್ ಸರಸಂಘಚಾಲಕ

ಭಾರತವು ಮುನ್ನಡೆಯಲಿ ಎಂಬುದಕ್ಕಾಗಿ ಈ ಪೂರಕ ವಾತಾವರಣ ಜನಮಾನಸದಲ್ಲಿ ಸೃಷ್ಟಿಯಾಗುತ್ತಿದೆ. ಆದರ ಜೊತೆಜೊತೆಗೆ ಪರಿಸ್ಥಿತಿಯೂ ತನ್ನ ಬಣ್ಣವನ್ನು ತೋರಿಸುತ್ತಿದೆ. ಜಗತ್ತಿನ ಸ್ವಾರ್ಥದ ಸಂಘರ್ಷಗಳಲ್ಲಿ, ಆ ಸಂಘರ್ಷಕ್ಕೂ ತಮಗೂ ಯಾವುದೇ ಸಂಬಂಧವಿಲ್ಲದ ದೇಶಗಳೂ ಸಹ ಸಂಕಷ್ಟಕ್ಕೀಡಾಗಿವೆ. ಯುದ್ಧ ಇರಾನ್ ಮತ್ತು ಅಮೆರಿಕದ ನಡುವೆ ನಡೆಯುತ್ತಿದ್ದರೆ, ತೈಲದ ಬೆಲೆ ನಮ್ಮಲ್ಲಿ ಹೆಚ್ಚಾಗುತ್ತಿದೆ.

ಒಂದು ಕಾಲದಲ್ಲಿ ಭಾರತ ವಿಶ್ವಗುರುವಾಗಿತ್ತು ಎಂದು ನಾವು ಕೇಳುತ್ತೇವೆ. ಆಗ ಕೇವಲ ಆಧ್ಯಾತ್ಮಿಕ ಗುರುವಾಗಿರಲಿಲ್ಲ, ಬದಲಿಗೆ ಕ್ರಿಸ್ತ ಶಕ 1ರಿಂದ ಕ್ರಿಸ್ತ ಶಕ 1600ರವರೆಗೆ ಭಾರತ ಆರ್ಥಿಕ ದೃಷ್ಟಿಯಿಂದ ವಿಶ್ವದ ಮೊದಲ ದೇಶವಾಗಿತ್ತು. ಜ್ಞಾನ-ವಿಜ್ಞಾನದಲ್ಲೂ ನಾವೇ ಅತ್ಯುನ್ನತರಾಗಿದ್ದೆವು. ಇಂದಿನ ವಿಶ್ವದ ಭೌತಿಕ ಜ್ಞಾನದ ಮೂಲಕ್ಕೆ ಹೋದರೆ, ಹುಡುಕುತ್ತಾ ಹುಡುಕುತ್ತಾ ನಾವು ಮತ್ತೆ ಭಾರತದ ಬಳಿಯೇ ತಲುಪುತ್ತೇವೆ. ಭಾರತೀಯ ಜ್ಞಾನ ಸಂಪತ್ತಿನ ಬಗ್ಗೆ ಚರ್ಚೆಯಾಗುತ್ತಿದೆ, ಅದನ್ನು ಅಧ್ಯಯನ ಮಾಡಿದರೆ ನಮಗೆ ಅರ್ಥವಾಗುತ್ತದೆ. ಇಲ್ಲಿಂದ ಸಂಸ್ಕೃತಿ, ನಾಗರಿಕತೆ, ಆಧ್ಯಾತ್ಮದ ಜೊತೆಗೆ ಅರ್ಥವಿದ್ಯೆ, ಭೌತಿಕ ವಿದ್ಯೆ, ಇಡೀ ಜ್ಞಾನ, ಆಯುರ್ವೇದ, ಗಣಿತ ಇವೆಲ್ಲವೂ ಇಲ್ಲಿಂದಲೇ ಹೋಗಿವೆ.

ಹಾಗಾದರೆ ಸಾವಿರ ವರ್ಷಗಳ ಕಾಲ ಗುಲಾಮಗಿರಿಯನ್ನು ಅನುಭವಿಸುವ ಪಾಡು ನಮಗೇಕೆ ಬಂತು? ನಮ್ಮನ್ನು ಗುಲಾಮರನ್ನಾಗಿ ಮಾಡಿದವರು ನಮಗಿಂತ ಶ್ರೇಷ್ಠರೇನೂ ಆಗಿರಲಿಲ್ಲ, ಅವರ ಸಂಖ್ಯೆಯೂ ಹೆಚ್ಚಿರಲಿಲ್ಲ. ಬಹಳ ದೂರದಿಂದ ಬಂದು ಅವರು ನಮ್ಮನ್ನು ಗೆದ್ದರು. ಯಾವುದೇ ವಿಷಯದಲ್ಲೂ ಅವರು ನಮಗಿಂತ ಮೇಲಿರಲಿಲ್ಲ, ನಮಗಿಂತ ಕೀಳಾಗಿಯೇ ಇದ್ದರು. ಹಾಗಾದರೆ, ನಮ್ಮ ಕೆಲವು ವಿಚಾರಗಳನ್ನು ನಾವು ಉಳಿಸಿಕೊಳ್ಳಲಿಲ್ಲ, ನಾವು ಮರೆತುಬಿಟ್ಟೆವು. ನಮ್ಮ ಸಿದ್ಧತೆಯನ್ನು ನಾವು ಕಳೆದುಕೊಂಡೆವು. ಆ ಸಿದ್ಧತೆಯನ್ನು ನಾವು ಮಾಡಿಕೊಳ್ಳಬೇಕಾಗಿದೆ.

ಮಾತೃವತ್ ಪರದಾರೇಷು, ಪರದ್ರವ್ಯೇಷು ಲೋಷ್ಟವತ್, ಆತ್ಮವತ್ ಸರ್ವಭೂತೇಷು ಎಂಬ ಜೀವನಶೈಲಿ ಇಂದಿಗೂ ಹಿಂದೂ ಸಮಾಜದಲ್ಲಿ ಯಥೇಚ್ಛವಾಗಿ ಕಾಣಸಿಗುತ್ತದೆ. ನಾವು ಹೀಗೆ ಹೇಗೆ ಆದೆವು ಎಂದು ಜಗತ್ತು ಆಲೋಚಿಸುತ್ತದೆ. ಆ ಮಾರ್ಗ ನಮಗೆ ಎಲ್ಲಿಂದ ಸಿಕ್ಕಿತು? ನಮ್ಮ ಪರಂಪರೆಯಿಂದ ಸಿಕ್ಕಿತು. ಈ ದೇಶದ ಅನ್ನ, ನೀರು, ಗಾಳಿಯಿಂದ ನನ್ನ ಪೋಷಣೆಯಾಗಿದೆ. ಈ ದೇಶದ ಸಮೃದ್ಧಿ ಮತ್ತು ಭದ್ರತೆಯು ನಮ್ಮ ಪೂರ್ವಜರಿಗೆ ನೀಡಿದ ಸಂಸ್ಕಾರಗಳಿಂದ ನನ್ನ ಸಂಸ್ಕಾರ ರೂಪುಗೊಂಡಿದೆ. ಆದರ ಆಧಾರದ ಮೇಲೆ ನಾನು ಜಗತ್ತಿನಲ್ಲಿ ಮಾಡುವ ಪರಾಕ್ರಮದ ಶ್ರೇಯಸ್ಸು ನನಗೆ ಸಿಗುತ್ತದೆ. ಆದರೆ ಇದೆಲ್ಲಾ ಯಾರದ್ದು? ಇದು ಈ ರಾಷ್ಟ್ರದ್ದು. ಸಮಾಜ, ಭೂಮಿ, ಆದರ ಮೇಲಿನ ಸೃಷ್ಟಿ, ಅರಣ್ಯ, ಪ್ರಾಣಿ, ನೀರು ಮತ್ತು ಆದರಲ್ಲಿ ವಾಸಿಸುವ ಸಮಾಜ, ಜನಪದ ಇವೆಲ್ಲದರ ಕಾರಣದಿಂದ ನನಗೆ ಇದೆಲ್ಲ ಸಿಕ್ಕಿದೆ. ಹಾಗಾಗಿ ನಾನು ಮರಳಿ ಕೊಡಬೇಕು.

ಮರಳಿ ಕೊಡುವ ಮಾತನ್ನೂ ನನ್ನ ಪರಂಪರೆಯೇ ನನಗೆ ಕಲಿಸುತ್ತದೆ. ಸೃಷ್ಟಿಯನ್ನು ಗೆಲ್ಲಿ, ಸೃಷ್ಟಿಯನ್ನು ಲೂಟಿ ಮಾಡಿ, ಸೃಷ್ಟಿ ಇರುವುದು ನಿಮ್ಮ ಬಳಕೆಗಾಗಿ' ಎಂದು ನಮ್ಮ ಪರಂಪರೆ ಹೇಳಲಿಲ್ಲ. ನಮ್ಮ ಪರಂಪರೆ ಹೇಳಿದ್ದು: 'ನೀನೂ ಸೃಷ್ಟಿಯ ಒಂದು ಭಾಗ, ಮತ್ತು ಇವೆಲ್ಲವೂ ನಿನ್ನ ಪೋಷಕರು' ಅಂತ. ಹಾಗಾಗಿ ತುಳಸಿ ಗಿಡವೂ ನಮಗೆ ಮಾತೆ, ಹಸು ಎಂಬ ಪ್ರಾಣಿಯೂ ನಮಗೆ ಮಾತೆ ಮತ್ತು ಹರಿಯುವ ನದಿಯೂ ಮಾತೆ. ಈ ಕೃತಜ್ಞತೆಯನ್ನು ಇಟ್ಟುಕೊಂಡು ನೀವು ಜೀವನ ನಡೆಸಬೇಕು. ಎರಡು ಕೈಗಳಿಂದ ಸಂಪಾದಿಸಿ, ಸಾವಿರ ಕೈಗಳಿಂದ ಹಂಚಬೇಕು. ನಮಗೆ ಸಿಕ್ಕ ಈ ಜೀವನದ ಅಭ್ಯಾಸ, ಪೀಳಿಗೆಯಿಂದ ಪೀಳಿಗೆಗೆ ನಮ್ಮ ಸಂಸ್ಕಾರಗಳ ಮೂಲಕ ನಮ್ಮ ಸಂಸ್ಕೃತಿಯಿಂದ ನಮಗೆ ಸಿಕ್ಕಿದೆ. ಆ ಅಭ್ಯಾಸ ಪ್ರಪಂಚದ ಬಳಿ ಇಲ್ಲ.

ಅದಕ್ಕಾಗಿಯೇ ಇದೆಲ್ಲವನ್ನೂ ಅರ್ಥಮಾಡಿಕೊಂಡು, ಓದಿ, ಕೇಳಿಯೂ ಜಗತ್ತು ಹೇಳುತ್ತದೆ, 'ಈ ಜಗತ್ತಿಗೆ ಒಂದು ಹೊಸ ದಾರಿಯ ಅಗತ್ಯವಿದೆ. ಆ ದಾರಿಯನ್ನು ಭಾರತ ಮಾತ್ರ ನೀಡಬಲ್ಲದು'. ಆದ್ದರಿಂದಲೇ ಭಾರತದ ಸಮಯ ಬಂದಿದೆ. ಆದರೆ ಕೇವಲ ಸಮಯ ಬಂದರೆ ಸಾಲದು, ಆ ಸಮಯಕ್ಕಾಗಿ ಸಿದ್ಧರಾಗಬೇಕಾಗುತ್ತದೆ. ಮುಖ್ಯ ಅತಿಥಿಗಳು ಭವಿಷ್ಯವು ಈಗಾಗಲೇ ಬಂದಾಗಿದೆ ಎಂದರು. ನಿಯತಿಯು ನಮ್ಮ ಸಿದ್ಧತೆಗಾಗಿ ಕಾಯುತ್ತಿದೆ. ನಾವಂತೂ ಬಹಳ ವರ್ಷಗಳಿಂದ ಹೇಳುತ್ತಿದ್ದೇವೆ – ನಾವು ಎಂದರೆ ಸಂಘದವರಲ್ಲ, ನಾವು ಭಾರತದ ಜನರು – 'ಭಾರತ ವಿಶ್ವಗುರು, ಭಾರತ ವಿಶ್ವಗುರುವಾಗುತ್ತದೆ, ಭಾರತವನ್ನು ವಿಶ್ವಗುರು ಮಾಡಬೇಕು' ಎಂದು ಬಹಳ ದಿನಗಳಿಂದ ಹೇಳುತ್ತಿದ್ದೇವೆ. ಹಾಗಾದರೆ ನಿಂತಿರುವುದಾದರೂ ಎಲ್ಲಿ? ಅಲ್ಲಿಯೇ ನಿಂತಿದ್ದೇವೆ, ನಮ್ಮ ಸಿದ್ಧತೆ ಬಾಕಿ ಇದೆ.

ಸಂಘದ ಸಂಸ್ಥಾಪಕರಾದ ಡಾ. ಹೆಡಗೇವಾರ್ ಅವರು, ಸಮಾಜದ ಉದ್ಧಾರಕ್ಕಾಗಿ ಅವರ ಕಾಲದಲ್ಲಿ ನಡೆಯುತ್ತಿದ್ದ ಎಲ್ಲಾ ಪ್ರಯತ್ನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು, ಅನುಭವ ಪಡೆದರು, ಅವರ ನಾಯಕರೊಂದಿಗೆ ಚರ್ಚಿಸಿದರು. ಕೊನೆಗೆ ಅವರು ಒಂದು ತೀರ್ಮಾನಕ್ಕೆ ಬಂದು, ಇವೆಲ್ಲವೂ ಆಗಬೇಕು, ಆದರೆ ಇದಕ್ಕೆ ಸಮಾಜದ ಸಿದ್ಧತೆ ಅಗತ್ಯವಿದೆ. ಆ ಸಿದ್ಧತೆಯ ಕಾರಣದಿಂದಾಗಿ, ಈ ಎಲ್ಲಾ ಕಾರ್ಯಗಳನ್ನು ಮಾಡಲು ಸಿದ್ಧರಾದ ವ್ಯಕ್ತಿಗಳು ಸಿಗುತ್ತಾರೆ.



ಎಲ್ಲರ ಕೆಲಸಗಳನ್ನು ಪೂರ್ಣಗೊಳಿಸುವ ಈ ಕೆಲಸವನ್ನು ಅವರು 100 ವರ್ಷಗಳ ಹಿಂದೆ ಪ್ರಾರಂಭಿಸಿದರು. ಇದು ಅತ್ಯಂತ ಶ್ರದ್ಧೆಯಿಂದ ಮಾಡಬೇಕಾದ ಕೆಲಸ. ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಸಮಯ ವಿನಿಯೋಗಿಸಬೇಕಾಗುತ್ತದೆ. ವರ್ಷಗಳ ಕಾಲ ಶ್ರಮಿಸಿದಾಗ ಒಬ್ಬ ವ್ಯಕ್ತಿ ಸ್ವಲ್ಪ ಮಟ್ಟಿಗೆ ಸಿದ್ಧನಾಗುತ್ತಾನೆ. ಹೀಗಾಗಿ, ಉಳಿದೆಲ್ಲಾ ಕೆಲಸಗಳಿಂದ ದೂರ ಸರಿದು ಇದರ ಮೇಲೆಯೇ ಅವರು ಕೇಂದ್ರೀಕರಿಸಿದರು. ಅದರ ಪ್ರತಿಫಲವನ್ನು ನೀವು ರಾಷ್ಟ್ರೀಯ ಸ್ವಯಂಸೇವಕ ಸಂಘದ ಇಂದಿನ ಸ್ವರೂಪದಲ್ಲಿ ನೋಡುತ್ತಿದ್ದೀರಿ.

> ಶಿಬಿರಾರ್ಥಿಗಳು ಮಾಡಿದ ಕಾರ್ಯಕ್ರಮಗಳನ್ನು ನೀವು ನೋಡಿದ್ದೀರಿ. ನೋಡಲು ಅವು ಬಹಳ ಸರಳ ಮತ್ತು ನೇರವಾಗಿವೆ. ಇಷ್ಟು ದೊಡ್ಡ ವ್ಯಾಪಕ ಗುರಿಗೂ ಅದಕ್ಕೂ ಏನು ಸಂಬಂಧ? ಎಂದು ಹೊರಗಿನಿಂದ ನೋಡಿದರೆ ಅರ್ಥವಾಗುವುದಿಲ್ಲ. ಒಳಗೆ ಬಂದು ನೋಡಬೇಕು, ಆಗ ಅದು ಅರಿವಾಗುತ್ತದೆ. ಅದನ್ನು ಪದಗಳಲ್ಲಿ ಹೇಳಲಾಗದು, ಪುಸ್ತಕಗಳಲ್ಲಿ ಬರೆಯಲಾಗದು, ಅದನ್ನು ಅನುಭವಿಸಿಯೇ ತಿಳಿಯಬೇಕು. ಅದಕ್ಕಾಗಿಯೇ ನಾವು ಈ ವರ್ಗಕ್ಕೆ ಆಹ್ವಾನಿತರನ್ನು ಕರೆಯುತ್ತೇವೆ, ಸಂಘವನ್ನು ಒಳಗಿನಿಂದ ನೋಡಲು.

ಸಂಘವು ಇದೆಲ್ಲವನ್ನೂ ಏಕೆ ಮಾಡಬೇಕು? ತಮಗಾಗಿ ಅಂತೂ ಮಾಡುತ್ತಿಲ್ಲ. ಇದೆಲ್ಲವೂ ರಾಷ್ಟ್ರಕ್ಕಾಗಿ. ನಮ್ಮ ಹೆಸರನ್ನೂ ಇತಿಹಾಸ ತೆಗೆದುಕೊಳ್ಳದಿದ್ದರೂ ಅದು ಅತ್ಯಂತ ಒಳ್ಳೆಯದೇ, ಸಂಪೂರ್ಣ ಶ್ರೇಯಸ್ಸು ಸಮಾಜಕ್ಕೆ ಸಲ್ಲಬೇಕು. ಏಕೆಂದರೆ ಸಮಾಜದ ಸಂಘಟಿತ ಶಕ್ತಿಯಿಂದಲೇ ರಾಷ್ಟ್ರದ ಉದ್ಧಾರವಾಗುತ್ತದೆ. ಹಿಂದೂ ಭಾರತಕ್ಕಾಗಿ ಜವಾಬ್ದಾರನಾಗಿದ್ದಾನೆ. ಸಂಘಟಿತ ಹಿಂದೂ ಸಮಾಜದ ಶಕ್ತಿಯು, ಎಲ್ಲರನ್ನೂ ಬೆಸೆಯುವ, ಎಲ್ಲರನ್ನೂ ಮುನ್ನಡೆಸುವ, ಎಲ್ಲರನ್ನೂ ಉನ್ನತೀಕರಿಸುವ ತನ್ನ ಈ ಧರ್ಮವನ್ನು ರಕ್ಷಿಸಬೇಕು. ದೇಹ, ಮನಸ್ಸು, ಬುದ್ಧಿಯನ್ನು ಜೋಡಿಸುವ ಅಂಶವು 'ಆತ್ಮ' ಎಂದು ಕರೆಯಲ್ಪಡುತ್ತದೆ. ವ್ಯಕ್ತಿ, ಸಮಾಜ ಮತ್ತು ಸೃಷ್ಟಿಯನ್ನು ಬೆಸೆಯುವ ಅಂಶವು 'ಪರಮಾತ್ಮ' ಎಂದು ಕರೆಯಲ್ಪಡುತ್ತದೆ. ಅದೇ ರೀತಿ, ಅರ್ಥ ಮತ್ತು ಕಾಮಗಳನ್ನು ಬಂಧಿಸಿ ಮೋಕ್ಷದ ಕಡೆಗೆ ಕೊಂಡೊಯ್ಯುವ ಅಂಶವು 'ಧರ್ಮ' ಎಂದು ಕರೆಯಲ್ಪಡುತ್ತದೆ. ನಮ್ಮ ದೇಶ ಧರ್ಮಪ್ರಾಣ ದೇಶ. ನಮ್ಮ ಧರ್ಮವನ್ನು ರಕ್ಷಿಸುತ್ತಾ, ನಮ್ಮ ರಾಷ್ಟ್ರವನ್ನು ಪರಮ ವೈಭವ ಸಂಪನ್ನವನ್ನಾಗಿ ಮಾಡಬೇಕಾಗಿದೆ.

ನಮ್ಮ ಒಬ್ಬ ಕಾರ್ಯಕರ್ತರು ವಿದೇಶದಲ್ಲಿ ವಾಸಿಸುವ ಹಿಂದೂಗಳ ಹೊಸ ಪೀಳಿಗೆಯ ಮುಂದೆ ಈ ಮಾತನ್ನು ವ್ಯಕ್ತಪಡಿಸಿದ್ದರು, ನೀವು ಹಿಂದೂ ಸ್ವಯಂಸೇವಕ ಸಂಘದ ಕೆಲಸವನ್ನು ಎಷ್ಟರಮಟ್ಟಿಗೆ ಮಾಡಬೇಕೆಂದರೆ, ಅದನ್ನು ನೋಡಿ ಅಲ್ಲಿನ ಜನರು ತಮಗೂ ಒಂದು 'ರಾಷ್ಟ್ರೀಯ ಸ್ವಯಂಸೇವಕ ಸಂಘ' ಇರಬೇಕು ಎಂದು ಬಯಸುವಂತಾಗಬೇಕು. ಇಡೀ ಜಗತ್ತು ನೋಡಿ, 'ಯಾವ ಬುನಾದಿಯ ಮೇಲೆ ಇವರು ತಮ್ಮ ದೇಶವನ್ನು ಕಟ್ಟಿದ್ದಾರೋ, ಅದೇ ಬುನಾದಿಯ ಮೇಲೆ ನಾವು ನಮ್ಮ ದೇಶವನ್ನು ನಮ್ಮ ಪ್ರಕೃತಿಗೆ ತಕ್ಕಂತೆ ಕಟ್ಟುತ್ತೇವೆ' ಎಂದು ಹೇಳುವ ರೀತಿಯಲ್ಲಿ ಭಾರತ ತನ್ನ ಮಾರ್ಗದೊಂದಿಗೆ ನಿಲ್ಲಬೇಕು.

ಆಗ ಸೃಷ್ಟಿಯಾಗುವ ಎಲ್ಲ ರಾಷ್ಟ್ರಗಳ ನಿರ್ಮಾಣದ ತಳಪಾಯವೂ 'ವಿಶ್ವ ಬಂಧುತ್ವ'ದ್ದಾಗಿರುತ್ತದೆ, 'ವಸುಧೈವ ಕುಟುಂಬಕಂ' ಆಗಿರುತ್ತದೆ. ಎಲ್ಲರಲ್ಲೂ ಒಂದೇ ಅಂಶವನ್ನು ಕಾಣುವ ದೃಷ್ಟಿಯಿರುತ್ತದೆ. ಅದರ ಆಧಾರದ ಮೇಲೆ ಪ್ರಪಂಚದ ದೇಶಗಳು ನಿರ್ಮಾಣವಾದಾಗ, ಜಗತ್ತಿನ ಎಲ್ಲಾ ರಾಷ್ಟ್ರಗಳು ತಮ್ಮ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಲೇ, ಇಡೀ ವಿಶ್ವದ ನಿರ್ವಹಣೆಯಲ್ಲಿ ತಮ್ಮ ಕೊಡುಗೆಯನ್ನು ಪರಸ್ಪರ ಮೈತ್ರಿ ಭಾವದಿಂದ ಒಟ್ಟಾಗಿ ನೀಡುತ್ತಿರುತ್ತವೆ. ಅಂತಹ ಒಂದು ಕನಸನ್ನು ಕಂಡು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲಸ ಶುರುವಾಗಿದೆ. ಈಗ ಸಂಘ ಎಲ್ಲೆಡೆ ಪರಿಚಿತವಾಗಿದೆ. ಸಮಾಜದ ಪ್ರೀತಿಯೂ ಸಿಗುತ್ತಿದೆ, ನಂಬಿಕೆಯೂ ಇದೆ.

ಇಂತಹ ಗುಣಮಟ್ಟವನ್ನು ಸೃಷ್ಟಿಸುವ ತರಬೇತಿ ಕಾರ್ಯಕ್ರಮ ಇಲ್ಲಿ ನಡೆಯುತ್ತದೆ. ಶಿಬಿರಾರ್ಥಿಗಳು ಮಾಡಿದ ಕಾರ್ಯಕ್ರಮಗಳನ್ನು ನೀವು ನೋಡಿದ್ದೀರಿ. ನೋಡಲು ಅವು ಬಹಳ ಸರಳ ಮತ್ತು ನೇರವಾಗಿವೆ. ಇಷ್ಟು ದೊಡ್ಡ ವ್ಯಾಪಕ ಗುರಿಗೂ ಅದಕ್ಕೂ ಏನು ಸಂಬಂಧ? ಎಂದು ಹೊರಗಿನಿಂದ ನೋಡಿದರೆ ಅರ್ಥವಾಗುವುದಿಲ್ಲ. ಒಳಗೆ ಬಂದು ನೋಡಬೇಕು, ಆಗ ಅದು ಅರಿವಾಗುತ್ತದೆ. ಅದನ್ನು ಪದಗಳಲ್ಲಿ ಹೇಳಲಾಗದು, ಪುಸ್ತಕಗಳಲ್ಲಿ ಬರೆಯಲಾಗದು, ಅದನ್ನು ಅನುಭವಿಸಿಯೇ ತಿಳಿಯಬೇಕು. ಅದಕ್ಕಾಗಿಯೇ ನಾವು ಈ ವರ್ಗಕ್ಕೆ ಆಹ್ವಾನಿತರನ್ನು ಕರೆಯುತ್ತೇವೆ, ಸಂಘವನ್ನು ಒಳಗಿನಿಂದ ನೋಡಲು.

ಸಂಘದ ಈ ಪ್ರಯತ್ನ ನಡೆಯುತ್ತಿದೆ. ಆದರೆ ವಾಸ್ತವವಾಗಿ ಇದು ಕೇವಲ ಸಂಘದ ಪ್ರಯತ್ನವಲ್ಲ. ನಾವೆಲ್ಲರೂ ಈ ಪ್ರಯತ್ನವನ್ನು ಮಾಡಬೇಕು, ಏಕೆಂದರೆ ಭಾರತದ ಸಮಯ ಬಂದಿದೆ. ಭಾರತವೀಗ ಉನ್ನತಿಯತ್ತ ಸಾಗಬೇಕಿದೆ. ಸಾಗಬೇಕೆಂಬ ಇಚ್ಛೆಯೂ ಎಲ್ಲರಿಗೂ ಇದೆ. ಆದರೆ ಅಡೆತಡೆಗಳೂ ಇವೆ. ನಮ್ಮಲ್ಲಿ ಒಡಕು ಮೂಡಿಸುವವರೂ ಇದ್ದಾರೆ. ಭಾರತ ದೊಡ್ಡದಾಗುವುದನ್ನು ಸಹಿಸದ ಶಕ್ತಿಗಳು, ಸಣ್ಣ-ಪುಟ್ಟ ನೆಪಗಳನ್ನು ಹುಡುಕಿಕೊಂಡು ಸಮಾಜ ಜೀವನದಲ್ಲಿ ಅಶಾಂತಿ ಸೃಷ್ಟಿಸಲು ತುದಿಗಾಲಲ್ಲಿ ನಿಂತಿವೆ. ಅವರ ಷಡ್ಯಂತ್ರಗಳೂ ನಡೆಯುತ್ತಿವೆ. ಈ ಸಂಸ್ಕಾರಗಳು ಪ್ರಬಲವಾದರೆ ಜಗತ್ತಿನಲ್ಲಿ ತಮ್ಮ ಆಟ ನಡೆಯುವುದಿಲ್ಲ ಎಂದು ಯೋಚಿಸಿ, ಹಲವು ಶಕ್ತಿಗಳು ನಮ್ಮ ಸಂಸ್ಕಾರಗಳ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರಲು ಸಿದ್ಧವಾಗಿವೆ. ನಾನು ಹೆಚ್ಚು ವಿವರಣೆಗೆ ಹೋಗುವುದಿಲ್ಲ, ಪರಿಸ್ಥಿತಿ ನಿಮ್ಮ ಮುಂದಿದೆ.

ನಿಮ್ಮಲ್ಲಿ ನನ್ನ ವಿನಂತಿ ಇಷ್ಟೇ, ಕೇವಲ ಪ್ರೇಕ್ಷಕರಾಗಿ ಉಳಿಯಬೇಡಿ. ಸಂಘಕ್ಕೆ ಬನ್ನಿ, ಸಂಘವನ್ನು ನೋಡಿ, ಅರ್ಥಮಾಡಿಕೊಳ್ಳಿ. ನಂತರ ಪ್ರತ್ಯಕ್ಷವಾಗಿ ಸಂಘದ ಕಾರ್ಯದಲ್ಲಿ ಪಾಲ್ಗೊಳ್ಳಿ, ಸಮವಸ್ತ್ರ ಧರಿಸಿ ಕಾರ್ಯಕ್ರಮಗಳಿಗೆ, ಶಾಖೆಗೆ ಬನ್ನಿ. ಇದು ಕಷ್ಟವೆನಿಸಿದರೆ, ಸಂಘದ ಸ್ವಯಂಸೇವಕರು ಹಲವಾರು ಕೆಲಸಗಳನ್ನು ಮಾಡುತ್ತಿದ್ದಾರೆ. ವಿವಿಧ ಸಂಘಟನೆಗಳಿವೆ, ಚಟುವಟಿಕೆಗಳಿವೆ, ಸೇವಾ ಕಾರ್ಯಗಳು ನಡೆಯುತ್ತಿವೆ. ಅವುಗಳಲ್ಲಿ ನೀವು ಹಿತೈಷಿಯಾಗಿ ಸಹಕರಿಸಬಹುದು, ಅಲ್ಲಿ ಕಾರ್ಯಕರ್ತರಾಗಬಹುದು, ಅಥವಾ ಆಗಾಗ್ಗೆ ಈ ಕೆಲಸಗಳಲ್ಲಿ ಸಹಾಯ ಮಾಡಬಹುದು. ಅಥವಾ, ಈ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ, ನಿಸ್ವಾರ್ಥ ಬುದ್ಧಿಯಿಂದ ನೀವು ನಿಮ್ಮಿಚ್ಛೆಯಂತೆ ದೇಶಕ್ಕಾಗಿ ಒಳ್ಳೆಯ ಕೆಲಸ ಮಾಡಿದರೆ ಸಾಕು. ನಾವು ಸಂಪರ್ಕ ಇಟ್ಟುಕೊಳ್ಳುತ್ತೇವೆ. ನೀವು ಸಂಘಕ್ಕೆ ಕಾಲಿಡದಿದ್ದರೂ, ದೇಶಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದರೆ ನೀವು ಸಂಘದ ಸ್ವಯಂಸೇವಕರೇ ಎಂದು ನಾವು ಭಾವಿಸುತ್ತೇವೆ.

ಆದರೆ ಈಗ ಸಮಯ ಬಂದಿದೆ. ಇಡೀ ಸಮಾಜವು 'ಸ್ವ'ದ ಬಗೆಗಿನ ಈ ಸ್ಪಷ್ಟ ಕಲ್ಪನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ತನ್ನ ರಾಷ್ಟ್ರದ ಒಳಿತಿಗಾಗಿ, ಜಗತ್ತಿನ ಹಿತಕ್ಕಾಗಿ ಸಕ್ರಿಯವಾಗಲೇಬೇಕಿದೆ. ಹೀಗಾದರೆ, ಮುಂದಿನ ಎರಡು-ಮೂರು ದಶಕಗಳಲ್ಲಿ ಆ ಭವ್ಯ ಭಾರತವನ್ನು ನಾವು ನೋಡಲಿದ್ದೇವೆ.

ಸಮಾಜಮುಖಿ ಆರ್ ಎಸ್ ಎಸ್

ಕುಮಾರ ಮಂಗಲಂ ಬಿರ್ಲಾ, ಬಿರ್ಲಾ ಸಮೂಹದ ಅಧ್ಯಕ್ಷರು

ನನಗೆ ಹಲವು ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರಾದ ಮೋಹನ್ ಭಾಗವತ್ ಜೀ ಅವರನ್ನು ಭೇಟಿಯಾಗುವ ಮತ್ತು ಅವರೊಂದಿಗೆ ಸಂವಾದ ನಡೆಸುವ ಸೌಭಾಗ್ಯ ದೊರೆತಿದೆ. ಪ್ರತಿ ಭೇಟಿಯಲ್ಲೂ ಅವರ ಸರಳತೆ, ವಿನಮ್ರತೆ ಮತ್ತು ರಾಷ್ಟ್ರ ನಿರ್ಮಾಣದ ಬಗೆಗಿನ ಅವರ ಅಚಲವಾದ ಸಮರ್ಪಣಾ ಭಾವ ನನ್ನನ್ನು ಯಾವಾಗಲೂ ಪ್ರೇರೇಪಿಸುತ್ತದೆ. ಸ್ವಾತಂತ್ರ್ಯಪೂರ್ವ ಭಾರತದಿಂದ ಹಿಡಿದು ದೇಶದಲ್ಲಿ ಸಂಭವಿಸಿದ ಭೂಕಂಪಗಳು, ಸುನಾಮಿ, ಪ್ರವಾಹಗಳು, ಯುದ್ಧಗಳು, ಸಾಂಕ್ರಾಮಿಕ ರೋಗಗಳು ಮತ್ತು ಇನ್ನೆಷ್ಟೋ ಸವಾಲುಗಳ ಸಮಯದಲ್ಲಿ ಆರ್‌ಎಸ್‌ಎಸ್ ಸದಾ ರಾಷ್ಟ್ರ ಮತ್ತು ಸಮಾಜದ ಜೊತೆಗೆ ನಿಂತಿದೆ.

ಕಳೆದ ವರ್ಷ 2025ರಲ್ಲಿ ಸಂಘವು 100 ವರ್ಷಗಳನ್ನು ಪೂರೈಸಿದೆ. 100 ವರ್ಷಗಳೆಂದರೆ ಸಣ್ಣ ಮಾತಲ್ಲ. 1925ರಲ್ಲಿ ಭಾರತವು ಇಂದಿನ ನಮ್ಮ ಜನಸಂಖ್ಯೆಯ ಕೇವಲ ಐದನೇ ಒಂದು ಭಾಗವನ್ನು ಹೊಂದಿತ್ತು. ಶತಮಾನಗಳ ಗುಲಾಮಗಿರಿ ನಮ್ಮ ಆತ್ಮವಿಶ್ವಾಸವನ್ನು ಬಹುಶಃ ದುರ್ಬಲಗೊಳಿಸಿತ್ತು. ಆದರೆ ಇಂದು ಭಾರತವು ವಿಶ್ವದ 6ನೇ ಅತಿದೊಡ್ಡ ಆರ್ಥಿಕತೆಯಾಗಿದೆ.

ಪ್ರಧಾನಿ ಮೋದಿ ಜೀ ಅವರು ಆಗಾಗ್ಗೆ ಮುಂಬರುವ 'ಅಮೃತಕಾಲ'ದ ಬಗ್ಗೆ ಮಾತನಾಡುತ್ತಾರೆ. ಭಾರತವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಯುಗವಿದು. ಜನಸಂಖ್ಯಾ ಲಾಭಾಂಶ, ಪೂರಕ ವಾತಾವರಣ, ಮೂಲಸೌಕರ್ಯ, ಡಿಜಿಟಲ್ ವ್ಯವಸ್ಥೆಗಳು ಮತ್ತು ಹಣಕಾಸು ಸೇವೆಗಳ ಈ ವಿಶಿಷ್ಟ ಸಂಗಮವು, ರಾಷ್ಟ್ರವೊಂದರ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಬರುವ ಅವಕಾಶವನ್ನು ನಮಗೆ ಒದಗಿಸುತ್ತದೆ.

ಇದು ಭಾರತದ ಸಮಯ. ಜಗತ್ತು ಮಹಾಶಕ್ತಿಗಳ ಪೈಪೋಟಿಯ ಮಹತ್ವಾಕಾಂಕ್ಷೆಗಳ ನಡುವೆ ಸಿಲುಕಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ, ಕಚ್ಚಾ ತೈಲದ ಬೆಲೆಯು ಯುದ್ಧಗಳ ಕಾರಣದಿಂದಾಗಿ ಒಮ್ಮೆ ಗಗನಕ್ಕೇರಿತು, ಮತ್ತೊಮ್ಮೆ ದಿಢೀರನೆ ಕುಸಿದು ಮತ್ತೆ ಹೊಸ ಎತ್ತರವನ್ನು ತಲುಪಿತು. ಪೂರೈಕೆ ಸರಪಳಿಗಳು ಈ ದಶಕದಲ್ಲಿ ಮೂರನೇ ಬಾರಿಗೆ ಒತ್ತಡಕ್ಕೆ ಸಿಲುಕಿವೆ. ಮತ್ತು ಅಂತಿಮವಾಗಿ ಎಐ (ಕೃತಕ ಬುದ್ಧಿಮತ್ತೆ) ನಮ್ಮ ಬಾಗಿಲಿಗೆ ಬಂದು ನಿಂತಿದೆ.

ಹಲವರಿಗೆ ಬಹುಶಃ ತಿಳಿದಿರಲಿಕ್ಕಿಲ್ಲ, ಆದಿತ್ಯ ಬಿರ್ಲಾ ಗ್ರೂಪ್‌ನ ಪ್ರಮುಖ ಕಂಪನಿಯಾದ 'ಗ್ರಾಸಿಮ್' ನಮ್ಮ ಸ್ವಾತಂತ್ರ್ಯದ ಕೇವಲ 10 ದಿನಗಳ ನಂತರ ಸ್ಥಾಪನೆಯಾಯಿತು. ಆಗ ಹತ್ತಿ ಬೆಳೆಯುತ್ತಿದ್ದ ಹೊಲಗಳು ಪಾಕ್‌ನಲ್ಲಿ ಉಳಿದವು. ಆದರೆ ನನ್ನ ಮುತ್ತಜ್ಜ ಜಿ.ಡಿ.ಬಿರ್ಲಾ ಅವರು ಕೃತಕ ನಾರುಗಳ ಉತ್ಪಾದನೆ ಆರಂಭಿಸಿದರು.

ಇದು ಹೊಸ ದೇಶದ ಹೊಸ ಚಿಂತನೆ. ಅಂದು ತೆಗೆದುಕೊಂಡ ಆ ನಿರ್ಧಾರದಿಂದಾಗಿ, 80 ವರ್ಷಗಳ ನಂತರ ಇಂದು ಗ್ರಾಸಿಮ್ ಕಟ್ಟಡ ಸಾಮಗ್ರಿಗಳು, ರಾಸಾಯನಿಕಗಳು ಮತ್ತು ಫೈಬರ್‌ಗಳಲ್ಲಿ ಜಾಗತಿಕ ನಾಯಕನಾಗಿದೆ, ಲಕ್ಷಾಂತರ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ ಮತ್ತು ಭಾರತದ ಕೈಗಾರಿಕಾ ಶಕ್ತಿಗೆ ಕೊಡುಗೆ ನೀಡುತ್ತಿದೆ.

ಆದಿತ್ಯ ಬಿರ್ಲಾ ಗ್ರೂಪ್ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅನೇಕ ಚಟುವಟಿಕೆಗಳಲ್ಲಿ ಬಹಳಷ್ಟು ಸಾಮ್ಯತೆಗಳಿವೆ. ನಾವೂ ಸಹ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ, ಆರೋಗ್ಯ ಸೇವೆ, ಸಾಮಾಜಿಕ ಉನ್ನತಿ, ಮಹಿಳಾ ಸಬಲೀಕರಣ ಮತ್ತು ಕೌಶಲ್ಯ ಅಭಿವೃದ್ಧಿಗೆ ಅತ್ಯಂತ ಮಹತ್ವ ನೀಡುತ್ತೇವೆ.

ಆರ್ ಎಸ್ ಎಸ್‌ನಂತಹ ಶಾಶ್ವತ ಸಂಸ್ಥೆಗಳ ನಿರ್ಮಾಣ ಮತ್ತು ರಾಷ್ಟ್ರ ನಿರ್ಮಾಣವು ನಾವು ಊಹಿಸುವುದಕ್ಕಿಂತ ಹೆಚ್ಚು ನಿಕಟವಾಗಿ ಹೆಣೆದುಕೊಂಡಿವೆ ಎಂಬ ಸರಳ ನಂಬಿಕೆಯನ್ನು ನಮ್ಮ ಅನುಭವಗಳು ಬಲಪಡಿಸಿವೆ. ಬಲವಾದ ಉದ್ಯಮಗಳ ಅಡಿಪಾಯದ ಮೇಲೆ ಭವಿಷ್ಯವು ರೂಪುಗೊಳ್ಳುತ್ತದೆ.

ಸಿಮೆಂಟ್‌ನಿಂದಲೇ ಪ್ರಾರಂಭಿಸುತ್ತೇನೆ. ನೀರಿನ ನಂತರ ಜಗತ್ತಿನಲ್ಲಿ ಅತಿ ಹೆಚ್ಚು ಬಳಕೆಯಾಗುವ ವಸ್ತು ಸಿಮೆಂಟ್ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗಬಹುದು. ಈ ಅಂಕಿ ಅಂಶವೇ ಸಿಮೆಂಟ್ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಹೇಳುತ್ತದೆ.

ವಾರ್ಷಿಕವಾಗಿ ಸುಮಾರು 500 ಮಿಲಿಯನ್ ಟನ್‌ಗಳ ಉತ್ಪಾದನೆಯೊಂದಿಗೆ ಭಾರತವು ಇಂದು ವಿಶ್ವದ ಎರಡನೇ ಅತಿದೊಡ್ಡ ಸಿಮೆಂಟ್ ಉತ್ಪಾದಕ ರಾಷ್ಟ್ರವಾಗಿದೆ. ಕಳೆದ ದಶಕವು ವಿಶೇಷವಾಗಿ ಪರಿವರ್ತನಾಕಾರಿಯಾಗಿದೆ. ಭಾರತದ ಹೆದ್ದಾರಿ ಜಾಲವು ಸುಮಾರು ಶೇ.60ರಷ್ಟು ವಿಸ್ತರಿಸಿದೆ, ನಮ್ಮ ಮೆಟ್ರೋ ರೈಲು ಜಾಲವು ಶೇ.350ರಷ್ಟು ಹೆಚ್ಚಾಗಿದೆ.



> **ಇಂದಿನ ನನ್ನ ಭೇಟಿಯ ನಂತರ, ರಾಷ್ಟ್ರ ನಿರ್ಮಾಣ ಯೋಜನೆಯಲ್ಲಿ ಆರ್ ಎಸ್ ಎಸ್‌ನ ಪ್ರಭಾವದ ಬಗ್ಗೆ ನನಗೆ ಇನ್ನಷ್ಟು ವಿಶ್ವಾಸ ಮೂಡಿದೆ. ಇಂದು ದಿನವಿಡೀ ಇಲ್ಲಿದ್ದು, ನೀವೆಲ್ಲರೂ ಆರ್ ಎಸ್ ಎಸ್‌ನಲ್ಲಿ ಯಾವೆಲ್ಲಾ ವಿಭಿನ್ನ ಚಟುವಟಿಕೆಗಳನ್ನು ಮಾಡುತ್ತಿದ್ದೀರಿ ಎಂಬುದನ್ನು ನೋಡುವ ಅವಕಾಶ ನನಗೆ ಸಿಕ್ಕಿತು.**

ದೇಶವೊಂದು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ನಿರ್ಮಾಣ ಕಾರ್ಯ ಕೈಗೊಂಡಾಗ, ಸಿಮೆಂಟ್ ಕೇವಲ ಒಂದು ವಸ್ತುವಾಗಿ ಉಳಿಯುವುದಿಲ್ಲ. ಅದೊಂದು ರಾಷ್ಟ್ರೀಯ ಅಭಿವೃದ್ಧಿಯ ಆಸ್ತಿಯೆಂದು ಪರಿಗಣಿಸಲ್ಪಡುತ್ತದೆ. ನಮ್ಮ ಸ್ವಂತ ಸಿಮೆಂಟ್ ಕಂಪನಿ ಅಲ್ಟ್ರಾಟೆಕ್ ಸಿಮೆಂಟ್ ಮೂಲಕ ಈ ಪರಿವರ್ತನೆಯನ್ನು ನೋಡುವ ಸೌಭಾಗ್ಯ ನನ್ನದಾಗಿದೆ.

ಕಳೆದ ದಶಕದಲ್ಲಿ, ಅಲ್ಟ್ರಾಟೆಕ್ ಸಿಮೆಂಟ್‌ನ ಸಾಮರ್ಥ್ಯವು 60 ಮಿಲಿಯನ್ ಟನ್‌ಗಳಿಂದ ಇಂದು 200 ಮಿಲಿಯನ್ ಟನ್‌ಗಳಿಗೆ ಏರಿದೆ. ಮತ್ತು ಇಂದು ಅಲ್ಟ್ರಾಟೆಕ್ ಸಿಮೆಂಟ್ ವಿಶ್ವದ ಅತಿದೊಡ್ಡ ಸಿಮೆಂಟ್ ಕಂಪನಿಯಾಗಿದೆ ಎಂಬುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯ.

ಈ ಯುಗ ಭಾರತದ ಯುಗ. ಯುವ ಭಾರತೀಯನಾಗಿ ಭಾರತದಲ್ಲಿರಲು ಇದಕ್ಕಿಂತ ಉತ್ತಮ ಸಮಯ ಮತ್ತೊಂದಿಲ್ಲ. ನೀವು ಯುವಕರಾಗಿದ್ದು, ಭಾರತದಲ್ಲಿದ್ದುಕೊಂಡು, ನಿಮ್ಮದೇ ಆದ ದೊಡ್ಡ ಉದ್ಯಮವನ್ನು ನಿರ್ಮಿಸಲು ಈ ಹಿಂದಿಗಿಂತಲೂ ಇದು ಅತ್ಯುತ್ತಮ ಸಮಯವಾಗಿದೆ.

ಜಗತ್ತು 100 ವರ್ಷಗಳಲ್ಲಿ ಎಷ್ಟು ಪ್ರಗತಿ ಸಾಧಿಸಿದೆಯೋ, ಅಷ್ಟೇ ಪ್ರಗತಿಯನ್ನು ಮುಂದಿನ 10 ವರ್ಷಗಳಲ್ಲಿ ಜಗತ್ತು ಕಾಣಲಿದೆ. ನಮ್ಮ ಮುಂದಿರುವ ಪ್ರಶ್ನೆಯೆಂದರೆ ಭವಿಷ್ಯವು ಬರುತ್ತದೆಯೇ ಎಂಬುದಲ್ಲ, ಅದು ಈಗಾಗಲೇ ಬಂದಾಗಿದೆ.

ಸಂಸ್ಕೃತದ ಒಂದು ವಾಕ್ಯವಿದೆ, ಅದು ನನಗೆ ಜೀವನ ಮಂತ್ರದಂತಿದೆ. ನಾನು ಬಹಳ ನಂಬುವ ಆ ಮಾತೇ – 'ಚರೈವೇತಿ ಚರೈವೇತಿ', ಅಂದರೆ ನಡೆಯುತ್ತಲೇ ಇರಿ, ಮುನ್ನಡೆಯುತ್ತಲೇ ಇರಿ. ಆದ್ದರಿಂದ ಈ ಅಮೃತಕಾಲವು ರಾಷ್ಟ್ರ ನಿರ್ಮಾಣದಿಂದ ವ್ಯಾಖ್ಯಾನಿಸಲ್ಪಡಲಿ.

ಪಕ್ಷ ಸಂಘಟನೆಗಾಗಿ ಜಿಲ್ಲೆಗಳಿಗೆ ನೂತನ ಸಂಯೋಜಕರ ನಿಯುಕ್ತಿ

ಬೆಂಗಳೂರು: ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ಗಮನಿಸಲು ರಾಜ್ಯ ಕೋರ್ ಸಮಿತಿ ಸದಸ್ಯರನ್ನು ವಿಭಾಗಗಳಿಗೆ ಹಾಗೂ ರಾಜ್ಯ ಪದಾಧಿಕಾರಿಗಳನ್ನು ಸಂಘಟನಾ ಜಿಲ್ಲೆಗಳಿಗೆ ಸಂಯೋಜಕರನ್ನಾಗಿ ನಿಯುಕ್ತಿ ಮಾಡಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶುಕ್ರವಾರ ಆದೇಶಿಸಿದ್ದಾರೆ.



ಮೈಸೂರು ವಿಭಾಗಕ್ಕೆ ಆರ್.ಅಶೋಕ, ಮಂಗಳೂರು ವಿಭಾಗಕ್ಕೆ ನಿರ್ಮಲ್ ಕುಮಾರ್ ಸುರಾಣಾ, ಶಿವಮೊಗ್ಗ ವಿಭಾಗಕ್ಕೆ ನಳಿನ್ ಕುಮಾರ್ ಕಟೀಲು, ಧಾರವಾಡ ವಿಭಾಗಕ್ಕೆ ಪ್ರಲ್ಹಾದ ಜೋಶಿ, ಬೆಳಗಾವಿ ವಿಭಾಗಕ್ಕೆ ಸಿ.ಟಿ. ರವಿ ಅವರನ್ನು ಸಂಯೋಜಕರನ್ನಾಗಿ ನಿಯುಕ್ತಿಗೊಳಿಸಲಾಗಿದೆ. ಕಲಬುರಗಿ ವಿಭಾಗಕ್ಕೆ ಗೋವಿಂದ ಕಾರಜೋಳ, ಬಳ್ಳಾರಿ ವಿಭಾಗಕ್ಕೆ ಬಸವರಾಜ ಬೊಮ್ಮಾಯಿ, ದಾವಣಗೆರೆ ವಿಭಾಗಕ್ಕೆ ಬಿ. ಶ್ರೀರಾಮುಲು, ಬೆಂಗಳೂರು ಗ್ರಾಮಾಂತರ ವಿಭಾಗಕ್ಕೆ ಡಾ. ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಬೆಂಗಳೂರು ವಿಭಾಗಕ್ಕೆ ಡಿ.ವಿ. ಸದಾನಂದ ಗೌಡ ಅವರನ್ನು ನಿಯುಕ್ತಿ ಮಾಡಲಾಗಿದೆ.

ಹಾಸನ ಮತ್ತು ಹಾವೇರಿ ಜಿಲ್ಲೆಗಳಿಗೆ ಎಸ್. ದತ್ತಾತ್ರಿ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ರೂಪಾಲಿ ನಾಯಕ್, ಕೊಡಗು ಮತ್ತು ಉಡುಪಿ ಜಿಲ್ಲೆಗಳಿಗೆ ಕ್ಯಾ. ಬ್ರಿಜೇಶ್ ಚೌಟ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡಕ್ಕೆ ಹರತಾಳು ಹಾಲಪ್ಪ, ಮೈಸೂರು ನಗರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಡಾ. ಲಕ್ಷ್ಮೀ ಅಶ್ವಿನ್ ಗೌಡ ಅವರನ್ನು ನಿಯೋಜಿಸಲಾಗಿದೆ. ಮೈಸೂರು ಗ್ರಾಮಾಂತರಕ್ಕೆ ಶರಣು ತಳ್ಳೀಕೇರಿ, ಮಂಡ್ಯ ಜಿಲ್ಲೆಗೆ ಎನ್. ಮಹೇಶ್, ಹುಬ್ಬಳ್ಳಿ-ಧಾರವಾಡ ಮತ್ತು ಧಾರವಾಡ ಗ್ರಾಮಾಂತರ ಜಿಲ್ಲೆಗಳಿಗೆ ಅನಿಲ್ ಬೆನಕೆ, ಗದಗ ಮತ್ತು ಚಿಕ್ಕೋಡಿ ಜಿಲ್ಲೆಗಳಿಗೆ ಮುರುಗೇಶ್ ನಿರಾಣಿ, ಬೆಳಗಾವಿ ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಬೈರತಿ ಬಸವರಾಜ್, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಿಗೆ ರಾಜುಗೌಡ ನಾಯಕ್ (ನರಸಿಂಹನಾಯಕ್) ಅವರನ್ನು ನಿಯುಕ್ತಿಗೊಳಿಸಲಾಗಿದೆ. ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಿಗೆ ಬಸವರಾಜ ಮತ್ತೀಮೋಡ್, ಕಲಬುರಗಿ ನಗರ ಮತ್ತು ಕಲಬುರಗಿ ಗ್ರಾಮಾಂತರ ಜಿಲ್ಲೆಗಳಿಗೆ ಡಾ. ಶೈಲೇಂದ್ರ ಬೆಲ್ದಾಳೆ ಅವರನ್ನು ನೇಮಿಸಲಾಗಿದೆ.

ವಿಧಾನಸಭೆ ಸಭಾಂಗಣ ವೀಕ್ಷಣೆ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಸಾಕ್ಷಿಯಾಗಲು ಹೊಸದಿಲ್ಲಿಯಿಂದ ಶುಕ್ರವಾರ ಆಗಮಿಸಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಧಾನಸಭೆ ಸಭಾಂಗಣವನ್ನು ತೋರಿಸಿದರು. ಸಚಿವ ಯು.ಟಿ. ಖಾದರ್ ಜತೆಗಿದ್ದರು.

ಜನರ ಸಮಸ್ಯೆ ಬಗ್ಗೆ ಕಾಳಜಿ ಇಲ್ಲ: ಛಲವಾದಿ ನಾರಾಯಣಸ್ವಾಮಿ

ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರ ನೇಮಕವು ಕೆಟ್ಟು ನಿಂತ ಬಸ್ಸಿಗೆ ಹೊಸ ಚಾಲಕನ ನೇಮಕ ಆದಂತಿದೆ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿಶ್ಲೇಷಿಸಿದ್ದಾರೆ.



ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೆಟ್ಟು ನಿಂತ ಬಸ್ಸಿಗೆ ಹೊಸ ಚಾಲಕ ನೇಮಕ ಆದ ತಕ್ಷಣ ಕೆಟ್ಟ ಬಸ್ಸು ಸರಿ ಆಗುವುದಿಲ್ಲ. ಬಸ್ಸನ್ನೇ ಬದಲಿಸಬೇಕಿತ್ತು. ಆದರೆ, ಆದರ ಸಮಯ ಬಂದಿಲ್ಲ ಎಂದು ಮುಖ್ಯ ಮಂತ್ರಿ ನೇಮಕ ಕುರಿತಂತೆ ವಿವರಿಸಿದರು. ಅದೇ ಕಾರಣಕ್ಕೆ ಚಾಲಕನನ್ನು ಬದಲಿಸಲಾಗಿದೆ. ಇದರಿಂದ ಅಷ್ಟೊಂದು ಪ್ರಯೋಜನ ಆಗುವುದೆಂದು ನನಗೆ ಅನಿಸುತ್ತಿಲ್ಲ ಎಂದರು. ವಿಪರ್ಯಾಸವೆಂದರೆ, ಗೃಹ ಪ್ರವೇಶದ 2ನೇ ದಿನವೇ ಛಾವಣಿ ಕುಸಿದು ಬಿದ್ದಿದೆ. ಇನ್ನೂ 48 ತಾಸು ಕಳೆದಿಲ್ಲ. ಆ ಮನೆಯಲ್ಲಿ ವಾಸ ಮಾಡಲು ಸಾಧ್ಯವೇ ಎಂಬುದರ ಪರೀಕ್ಷೆ ಆಗಬೇಕಿದೆ. ರಾಮಲಿಂಗಾರೆಡ್ಡಿ ಅವರು ರಾಜೀನಾಮೆ ನೀಡಿದ್ದಾರೆ. ಅದರೊಂದಿಗೆ ಕೆ.ಎಚ್. ಮುನಿಯಪ್ಪ ಅವರೂ ನನ್ನ ಹಿರಿತನಕ್ಕೆ ಗೌರವ ಸಿಕ್ಕಿಲ್ಲ. ಈ ಆಹಾರ ಇಲಾಖೆ ನನಗೆ ಬೇಕಾಗಿಲ್ಲ ಎಂದಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಇಲಾಖೆಗಳು ಮುಖ್ಯಮಂತ್ರಿ ಕೈಯಲ್ಲೇ ಇದೆ. ಇಷ್ಟಿದ್ದರೂ ಇಂಧನ ಇಲಾಖೆಯಲ್ಲಿ ಅಧಿಕಾರಿಗಳನ್ನು ಬದಲಾಯಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ ಎಂದರು.

ಜನರು ಏನೂ ನಿರೀಕ್ಷಿಸುವಂತಿಲ್ಲ: ಇದು ಜಾರ್ಜ್ ಅವರಿಗೂ ಇಷ್ಟವಾಗಿಲ್ಲ; ಇಂಥದ್ದು ಇನ್ನು ಮುಂದೆಯೂ ನಡೆಯಲಿದೆ. ಕಾಂಗ್ರೆಸ್ ಪಕ್ಷ ಲಂಬವಾಗಿ ಒಡೆದಿದೆ. ಡಿಕೆ ಕಾಂಗ್ರೆಸ್, ಬಿಕೆ ಕಾಂಗ್ರೆಸ್, ಎಂಕೆ ಕಾಂಗ್ರೆಸ್ ಎಂದು ಅದು ಒಡೆದುಹೋಗಿದೆ. ಬಿಕೆ ಕಾಂಗ್ರೆಸ್ ಪಕ್ಷ; ಡಿಕೆ ಕಾಂಗ್ರೆಸ್ ವಿಧಾನಸೌಧದಲ್ಲಿ ಕುಳಿತಿದೆ. ಎಂಕೆ ಕಾಂಗ್ರೆಸ್ ಕೇಂದ್ರದ್ದು. ಮೂರು ಪವರ್ ಸೆಂಟರ್‌ಗಳಾಗಿದ್ದು, ಇವರಿಂದ ಜನರು ಏನೂ ನಿರೀಕ್ಷಿಸುವಂತಿಲ್ಲ ಎಂದರು. ನಾಯಕತ್ವ, ಸಿಎಂ, ಅಧ್ಯಕ್ಷತೆ, ಖಾತೆಗಳ ಬದಲಾವಣೆಯಲ್ಲೇ ಕಾಂಗ್ರೆಸ್ಸಿಗರು ಕುಳಿತಿದ್ದಾರೆ. ಜನರ ಸಮಸ್ಯೆಗಳ ಬಗ್ಗೆ ಇವರಿಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿದರು.

ಕಿರುಸುದ್ದಿ

ಈ ಸರ್ಕಾರ 2 ವರ್ಷ ಇರುವ ವಿಶ್ವಾಸ ನನಗಿಲ್ಲ: ಈಶ್ವರಪ್ಪ

ಶಿವಮೊಗ್ಗ: ಈ ಸರ್ಕಾರ ಎರಡು ವರ್ಷ ಅಧಿಕಾರದಲ್ಲಿರುತ್ತದೆ ಎಂಬ ವಿಶ್ವಾಸ ನನಗಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಂಪುಟ ಘೋಷಣೆಯಾದ ಬಳಿಕ ಈಗಾಗಲೇ ಅಸಮಾಧಾನ ಭುಗಿಲೆದ್ದಿದೆ. ಮೊದಲ ವಿಕೆಟ್ ಪತನವಾಗಿದೆ ಎಂದು ನಾನು ಹೇಳುವುದಿಲ್ಲ. ರಾಮಲಿಂಗಾರೆಡ್ಡಿ ರಾಜೀನಾಮೆ ಅವರ ವೈಯಕ್ತಿಕ ನಿರ್ಧಾರ ಇರಬಹುದು. ಆದರೆ ಕಾಂಗ್ರೆಸ್‌ನಲ್ಲಿ ಅತೃಪ್ತ ಆತ್ಮಗಳೇ ತುಂಬಿದ್ದು ಅವರನ್ನು ತೃಪ್ತಿಪಡಿಸಲು ಆಗುವುದಿಲ್ಲ ಎಂದರು. ಕಾಂಗ್ರೆಸ್‌ನಲ್ಲಿ ಎಲ್ಲರೂ ಮಂತ್ರಿ ಪದವಿಯ ಆಕಾಂಕ್ಷಿಗಳೇ ಇದ್ದಾರೆ. ಅಭಿವೃದ್ಧಿ ಮರೀಚಿಕೆ ಆಗಿದೆ. ರಾಜ್ಯದಲ್ಲಿ ಹಲವಾರು ಗಂಭೀರ ಸಮಸ್ಯೆಗಳಿವೆ. ಈ ಸಂದರ್ಭದಲ್ಲಿ ಮಂತ್ರಿ ಪದವಿಯ ಕಿತ್ತಾಟ ಈ ಸರ್ಕಾರವನ್ನು ಉಳಿಸುವುದಿಲ್ಲ ಎಂದರು. ನೀವು ಯಾವಾಗ ಬಿಜೆಪಿ ಸೇರುತ್ತೀರಿ ಎಂಬ ಪ್ರಶ್ನೆಗೆ ಕಾಲ ಬರಲಿ ನೋಡೋಣ. ನಾನು ಕಾಯುತ್ತಾ ಇದ್ದೇನೆ ಎಂದರು.

ಮಹಿಳೆಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ: ಹೆಬ್ಬಾಳ್ಕರ್ ವಿಶ್ವಾಸ

ಬೆಂಗಳೂರು: ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಮಹಿಳೆಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎನ್ನುವ ವಿಶ್ವಾಸ ಇದೆ. ಪಕ್ಷದ ಹೈಕಮಾಂಡ್ ಏನು ನಿರ್ಧಾರ ತೆಗೆದುಕೊಳ್ಳುತ್ತೋ ಅದಕ್ಕೆ ಬದ್ಧರಾಗಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.



ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಸರ್ಕಾರದಲ್ಲಿ ಯಾವುದೇ ಗೊಂದಲಗಳಿಲ್ಲ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಿರಿಯರಿದ್ದಾರೆ ಮತ್ತು ಸಮರ್ಥರಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಡೆಸಲಿದ್ದಾರೆ ಎಂದು ಹೇಳಿದರು. ರಾಮಲಿಂಗಾರೆಡ್ಡಿ ರಾಜೀನಾಮೆ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಗಳಿಗೆ ಬೆಲೆ ಇರುತ್ತದೆ. ಪಕ್ಷದ ಹಿರಿಯರು ಇದರ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರು. ಬೆಳಗಾವಿ ಮೂರು ಜಿಲ್ಲೆಗಳಿಗೆ ಸಮನಾಗುವಷ್ಟು ದೊಡ್ಡದಿದೆ. ಹಾಗಾಗಿ ನಾವು ಹೆಚ್ಚುವರಿ ಸಚಿವ ಸ್ಥಾನ ಕೇಳಿದ್ದೇವೆ ಎಂದರು.

ಗ್ರಾಮೀಣ ಕುಡಿಯುವ ನೀರಿಗೆ ಆದ್ಯತೆ: ಈಶ್ವರ ಖಂಡ್ರೆ

ಬೆಂಗಳೂರು: ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವುದು ತಮ್ಮ ಪ್ರಥಮ ಆದ್ಯತೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಂದಿನ 25 ವರ್ಷಗಳ ದೀರ್ಘಾವಧಿಗೆ ಭೂಮೇಲ್ಮೈ ನೀರು ಬಳಸಿ ಗ್ರಾಮೀಣ ಭಾಗಕ್ಕೆ ಪೂರೈಕೆ ಮಾಡುವುದು ಸರ್ಕಾರದ ಸಂಕಲ್ಪವಾಗಿದ್ದು, ಇದರ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಗಾಂಧೀ ಅವರು ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದು ಹೇಳಿದ್ದಾರೆ. ಗ್ರಾಮಗಳ ಅಭಿವೃದ್ಧಿಗಾಗಿ ಮತ್ತು ಅಧಿಕಾರ ವಿಕೇಂದ್ರೀಕರಣಕ್ಕಾಗಿ ಮಾಜಿ ಪ್ರಧಾನಿ ರಾಜೀವ್ ಗಾಂಧೀ ಅವರು ಸಾಂವಿಧಾನಿಕ ತಿದ್ದುಪಡಿ ತಂದಿದ್ದರು. ಆ ಮಹತ್ವದ ಚಿಂತನೆಯ ಸಾಕಾರ ತಮ್ಮ ಗುರಿಯಾಗಿದೆ ಎಂದರು. ಗ್ರಾಮೀಣ ಭಾಗದ ಸ್ವಚ್ಛತೆ ಕಾಪಾಡಲು ಮತ್ತು ಹಳ್ಳಿಗಳಲ್ಲಿ ಗುಣಮಟ್ಟದ ಆಸ್ತಿಗಳ ಸೃಜನೆಗೆ ಆದ್ಯತೆ ನೀಡಿ ಕಾರ್ಯನಿರ್ವಹಿಸಲಾಗುವುದು ಎಂದರು.

60 ಸಾವಿರ ರೂ. ವೇತನ | ವಾರದೊಳಗೆ ನೇಮಕ ಪ್ರಕ್ರಿಯೆ: ಸಚಿವ ಖಾದರ್

ಯುವ ವೈದ್ಯರ ನೇರ ನೇಮಕ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಇಚ್ಛಿಸುವ ಎಂಬಿಬಿಎಸ್ ಪದವೀಧರರು ನೇರವಾಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಅನುಮತಿ ಪತ್ರ ರವಾನಿಸಿ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಒಂದು ವಾರದೊಳಗೆ ಅವರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಹೊಸದಾಗಿ ನೇಮಕಾತಿ ಆಗುವ ವೈದ್ಯರಿಗೆ ತಿಂಗಳಿಗೆ 60,000 ರೂ. ವೇತನ ನಿಗದಿಪಡಿಸಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.



ಸಚಿವರಾಗಿ ಅಧಿಕಾರವಹಿಸಿಕೊಂಡ ಬಳಿಕ ಶುಕ್ರವಾರ ಆರೋಗ್ಯಸೌಧದಲ್ಲಿ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬಳಿಕ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿಮಾಡಲು ತುರ್ತು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಲ್ಲದೇ, ಎಂಬಿಬಿಎಸ್ ಪದವಿ ಮುಗಿಸಿ ಬರುವ ಯುವ ವೈದ್ಯರನ್ನು ಸರ್ಕಾರಿ ಆಸ್ಪತ್ರೆಗೆ ನೇರ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಆರೋಗ್ಯ ಇಲಾಖೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಸಾರ್ವಜನಿಕರಿಂದ ಮತ್ತು ವೈದ್ಯರಿಂದ ಸಲಹೆಗಳನ್ನು ಆಹ್ವಾನಿಸುವುದಾಗಿಯೂ. ರಾಜ್ಯದಲ್ಲಿ ಆರೋಗ್ಯ ಇಲಾಖೆ ಬೃಹತ್ ವ್ಯಾಪ್ತಿಯನ್ನು ಹೊಂದಿದ್ದು, ವೈದ್ಯರ ನೇಮಕಾತಿಯಿಂದ ಹಿಡಿದು ಆರೋಗ್ಯ ಸೇವೆ ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ವಿಶೇಷ ಆದ್ಯತೆ ನೀಡುವುದಾಗಿ ತಿಳಿಸಿದರು.

ಸಭೆಯಲ್ಲಿ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತ್ವಿಕ್‌ರಂಜನ್ ಪಾಂಡೆ, ಆಯುಕ್ತ ಗುರುದತ್ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕ ಅವಿನಾಶ್ ಮೆನನ್ ರಾಜೇಂದ್ರನ್, ಔಷಧ ಹಾಗೂ ಆಹಾರ ಗುಣಮಟ್ಟದ ಆಯುಕ್ತ ಶ್ರೀನಿವಾಸನ್, ಆಯುಷ್ ಇಲಾಖೆಯ ಆಯುಕ್ತರಾದ ವಿಪಿನ್ ಸಿಂಗ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಹೆಚ್ಚುವರಿ ಶುಲ್ಕ ವಸೂಲಿ ಮಾಡುವಂತಿಲ್ಲ

ಆಯುಷ್ಮಾನ್ ಕರ್ನಾಟಕ ಯೋಜನೆಯ ಅನುಷ್ಠಾನದ ಬಗ್ಗೆ ವಿಮರ್ಶೆ ನಡೆಸಿದ್ದು, ಈ ಯೋಜನೆ ವ್ಯಾಪ್ತಿಯಲ್ಲಿರುವ ಯಾವುದೇ ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವಂತಿಲ್ಲ. ಇದರ ಬಗ್ಗೆ ಆರೋಗ್ಯ ಇಲಾಖೆಯಿಂದ ನಿಗಾ ಇಡಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಆಯುಷ್ಮಾನ್ ಕರ್ನಾಟಕ ಯೋಜನೆಯಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣ ಪಡೆಯಲು ಅವಕಾಶ ಇಲ್ಲ. ಒಂದು ವೇಳೆ ಖಾಸಗಿ ಆಸ್ಪತ್ರೆಗಳು ಹೆಚ್ಚುವರಿ ಹಣ ಪಡೆದರೆ, ಜಿಲ್ಲಾ ಮಟ್ಟದ ಆರೋಗ್ಯ ಮಿತ್ರರ ಮೂಲಕ ಸಾರ್ವಜನಿಕರು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ದೂರು ನೀಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

- ವೈದ್ಯರ ಹುದ್ದೆ ಭರ್ತಿ ಮಾಡಲು ತುರ್ತು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸಚಿವ ಯು.ಟಿ. ಖಾದರ್ ಸೂಚನೆ
- ಆರೋಗ್ಯ ಸೇವೆ ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ವಿಶೇಷ ಆದ್ಯತೆ

ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ: ಬಿವೈವಿ

ಬೆಂಗಳೂರು: ರಾಜ್ಯದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡಲು ಸರ್ಕಾರಕ್ಕೆ ಸಾಧ್ಯವಿಲ್ಲ ಎಂದಾದರೆ ಸ್ಥಳೀಯಾಡಳಿತ ಸಂಸ್ಥೆ ಚುನಾವಣೆ ಜತೆಗೆ ವಿಧಾನಸಭೆ ವಿಸರ್ಜನೆ ಮಾಡಿ ಚುನಾವಣೆ ಎದುರಿಸಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಸವಾಲು ಎಸೆದಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದರು. 2 ವರ್ಷದಿಂದ ಮುಖ್ಯಮಂತ್ರಿ ಕುರ್ಚಿಗೆ ಹಗ್ಗಜಗ್ಗಾಟ ನಡೆಯುತ್ತಿತ್ತು. ಸಿಎಂ ಆಗಿ ಶಿವಕುಮಾರ್ ಪ್ರಮಾಣವಚನ ಸ್ವೀಕರಿಸಿದ 48 ತಾಸಿನೊಳಗೆ ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ಏನೇನೂ ಅಭಿವೃದ್ಧಿ ಕಾರ್ಯ ಮಾಡದ ಕಾಂಗ್ರೆಸ್ ಸರ್ಕಾರ ಇನ್ನೂ ಕಚ್ಚಾಟದಿಂದ ಹೊರಗೆ ಬಂದಿಲ್ಲ. ಈ ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ. ರೈತರು ಬೀದಿದಿಳಿದು ಹೋರಾಟ ಮಾಡುತ್ತಿದ್ದಾರೆ. ಎಲ್ಲರನ್ನೂ ಸರಿದೂಗಿಸಿಕೊಂಡು ಹೋಗುವಲ್ಲಿ ಮುಖ್ಯಮಂತ್ರಿ ಶಿವಕುಮಾರ್ ವಿಫಲರಾಗಿದ್ದಾರೆ. ಡಿ.ಕೆ. ಶಿವಕುಮಾರ್, ಬಿ.ಕೆ. ಹರಿಪ್ರಸಾದ್, ಮಲ್ಲಿಕಾರ್ಜುನ ಖರ್ಗೆ ಮತ್ತು ಸಿದ್ದರಾಮಯ್ಯ ಹೀಗೆ ನಾಲ್ಕು ಪವರ್ ಸೆಂಟರ್ ನಡುವೆ ಕಾಂಗ್ರೆಸ್ ಒದ್ದಾಡುತ್ತಿದೆ. ಈ ಪವರ್ ಸೆಂಟರ್‌ಗಳು ಶಿವಕುಮಾರ್ ಅವರ ನಿದ್ದೆಗೆಡಿಸುತ್ತವೆ ಎಂದು ಟೀಕಿಸಿದರು.

ಸಿಎಂ ಶಿವಕುಮಾರ್ ಅವರಿಗೆ ಸಾಕಷ್ಟು ಅನುಭವವಿದೆ. ಕಸದಿಂದ ರಸ ತೆಗೆಯುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಹಿರಿಯ ಸಚಿವರನ್ನು ಕಡೆಗಣಿಸಿದ್ದಾರೆ ಎಂಬ ಚರ್ಚೆ ಆರಂಭವಾಗಿದೆ. ಇದು ಸರ್ಕಾರಕ್ಕೆ ಗೌರವ ತರುವುದಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ತೊಲಗಲಿ

ಇಂದು ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದಾರೆ. ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್ ಸಹ ತಮ್ಮ ಖಾತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಭಿವೃದ್ಧಿಗಿಂತ ಇವರಿಗೆ ಅಧಿಕಾರದ ಹಪಾಹಪಿ ಹೆಚ್ಚಾಗಿದೆ. ಇದರಿಂದ ಬೇಸತ್ತ ಜನ ವಿಧಾನ ಸಭಾ ಚುನಾವಣೆ ಆಗಿ ದರಿದ್ರ ಕಾಂಗ್ರೆಸ್ ಸರ್ಕಾರ ತೊಲಗಬೇಕು ಎಂದು ಬಯಸಿದ್ದಾರೆ. ಕಾಂಗ್ರೆಸ್‌ನವರಿಗೆ ಮಾನ ಮರ್ಯಾದೆ ಇಲ್ಲ ಎಂದು ರಾಜ್ಯದ ಜನ ಮಾತನಾಡುತ್ತಿದ್ದಾರೆ ಎಂದರು.

ನಕಲಿ ಛಾಪಾ ಕಾಗದ ಸೃಷ್ಟಿಸಿ ಸರ್ಕಾರಕ್ಕೆ ವಂಚನೆ: ಎಫ್‌ಐಆರ್

ಚಿಕ್ಕಮಗಳೂರು: ನಕಲಿ ಛಾಪಾ ಕಾಗದ ಸೃಷ್ಟಿಸಿ ಸರ್ಕಾರದ ಬೊಕ್ಕಸಕ್ಕೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಆರ್‌ಪುರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಜಲ್ ಜೀವನ್ ಮಿಷನ್ ಯೋಜನೆಯ ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದಂತೆ ನಕಲಿ ಛಾಪಾ ಕಾಗದಗಳನ್ನು ನೀಡಿ ಕರಾರು ಮಾಡಿಕೊಂಡ ಆರೋಪದ ಮೇಲೆ ಎನ್‌ಆರ್‌ಪುರದ ಎಸ್‌ಕೆಪಿ ಕನ್‌ಸ್ಟ್ರಕ್ಷನ್ಸ್ ಅಂಡ್ ಬೋರ್‌ವೆಲ್ಸ್ ಸಂಸ್ಥೆಯ ಗುತ್ತಿಗೆದಾರ ಹಾಗೂ ನಕಲಿ ಛಾಪಾಕಾಗದಗಳನ್ನು ಸೃಷ್ಟಿಸಿ ವಿತರಣೆ ಮಾಡಿದ ಆರೋಪದ ಮೇಲೆ ಎನ್‌ಆರ್‌ಪುರದ ಎಐಆರ್‌ಎ ಡಿಜಿಟಲ್‌ನ ದಸ್ತಗೀರ್ ಎಂಬಾತನ ವಿರುದ್ಧ ವಂಚನೆ ಪ್ರಕರಣ ದಾಖಲಿಸಲಾಗಿದೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜೆಎಂಎಂ ಯೋಜನೆಯಲ್ಲಿ ಗುತ್ತಿಗೆದಾರರು ಕೊರೆದಿರುವ ಕೊಳವೆಬಾವಿಗಳಿಗೆ ನಕಲಿ ಛಾಪಾ ಕಾಗದಗಳನ್ನು ನೀಡಿ ಕರಾರು ಒಪ್ಪಂದ ಮಾಡಿಕೊಂಡಿದ್ದ ಅಕ್ರಮವನ್ನು ಮೊದಲ ಬಾರಿಗೆ ಮಾಜಿ ಶಾಸಕ ಡಿ.ಎನ್.ಜೀವರಾಜ್ ಅವರು ಬಯಲಿಗೆಳೆದಿದ್ದರು. ಇದೊಂದು ಗಂಭೀರ ಪ್ರಕರಣವಾಗಿದ್ದು, ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನಲ್ಲೂ ಸುದ್ದಿಗೋಷ್ಠಿ ನಡೆಸಿ ಒತ್ತಾಯಿಸಿದ್ದರು.

ಕರಾವಳಿಗೆ ಬಂತು ಮುಂಗಾರು: ಮಳೆಯಾರ್ಭಟ

ಮಂಗಳೂರು: ಕರಾವಳಿಗೆ ಮುಂಗಾರು ಪ್ರವೇಶವಾಗಿದ್ದು, ಮೊದಲ ದಿನವೇ ಭಾರೀ ಮಳೆಯಾಗಿದೆ. ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡಿನಲ್ಲಿ ಎಡೆಬಿಡದ ಮಳೆ ಸುರಿದಿದೆ. ಕೊಡಗಿನಲ್ಲಿ ಸಾಧಾರಣ ಮಳೆಯಾಗಿದೆ. ಹಲವೆಡೆ ಗುಡುಗು ಸಿಡಿಲಿನ ಸಹಿತ ಮಳೆಯಾಗಿದ್ದು, ಮನೆಗಳಿಗೆ ಹಾನಿ ಉಂಟಾಗಿದೆ.

ಭಾರೀ ಮಳೆಯ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಇಂದು (ಜೂ.6) ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಮಂಗಳೂರಿನಲ್ಲಿ ಮೊದಲ ಮಳೆಗೆ ನಗರವಾಸಿಗಳು ತತ್ತರಿಸಿಹೋಗಿದ್ದಾರೆ. ರಸ್ತೆಗಳು ಜಲಾವೃತಗೊಂಡು ವಾಹನ ಮತ್ತು ಸಾರ್ವಜನಿಕರ ಸಂಚಾರ ಕಷ್ಟಕರವಾಗಿತ್ತು. ಸತತ ಮಳೆ ಪರಿಣಾಮವಾಗಿ ಮಂಗಳೂರಿನ ಕೊಡಿಯಾಲ್‌ಬೈಲ್, ಪಂಪ್ ವೆಲ್, ಜಪ್ಪಿನಮೊಗರು, ಕೊಟ್ಟಾರ, ಮಾಲೆಮಾರ್ ಮುಂತಾದ ಪ್ರದೇಶಗಳು ಜಲಾವೃತಗೊಂಡಿತ್ತು. ಉಡುಪಿ ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ.

ಕ್ರಿಯಾಶಕ್ತಿ ಸ್ವರೂಪಿಣಿ ಮಾ.ಕೃ.ರುಕ್ಮಿಣಿ: ವಿ.ಶಾಂತಾ

ಬೆಂಗಳೂರು: ಮಾ.ಕೃ.ರುಕ್ಮಿಣಿ ಅವರು ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಯ ಸ್ವರೂಪಿಣಿಯಾಗಿದ್ದರು. ಯಾವುದೇ ಸತ್ಕಾರ್ಯ ಅಥವಾ ಜವಾಬ್ದಾರಿಯನ್ನು ವಹಿಸಿಕೊಂಡಾಗ, ಅದರಲ್ಲಿ ಸಕಾರಾತ್ಮಕ ಪರಿವರ್ತನೆ ತರಬೇಕು ಮತ್ತು ಅಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಬೇಕು ಎಂಬುದು ಅವರ ಆಶಯವಾಗಿತ್ತು ಎಂದು ರಾಷ್ಟ್ರ ಸೇವಿಕಾ ಸಮಿತಿಯ ಪ್ರಮುಖ ಸಂಚಾಲಿಕಾ ವಿ.ಶಾಂತಾಕುಮಾರಿ ಹೇಳಿದರು.

ನಗರದ ಕೇಶವ ಶಿಲ್ಪ ಸಭಾಂಗಣದಲ್ಲಿ ನಡೆದ ರಾಷ್ಟ್ರ ಸೇವಿಕಾ ಸಮಿತಿಯ ಪೂರ್ವ ಅಖಿಲ ಭಾರತೀಯ ಸಹಕಾರ್ಯವಾಹಿಕಾ ಆಗಿದ್ದ ಮಾ. ಕೃ.ರುಕ್ಮಿಣಿಯವರಿಗೆ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ಸಮಿತಿಯಲ್ಲಿ ಪ್ರಚಾರಿಕಾ ಪದ್ಧತಿ ಆರಂಭವಾದಾಗ, ಅದರ ಮೊದಲ ಪ್ರಚಾರಿಕಾ ಪ್ರಮುಖರಾಗಿ ರುಕ್ಮಿಣಿ ಅವರು ಜವಾಬ್ದಾರಿ ವಹಿಸಿಕೊಂಡಿದ್ದರು. ಇಡೀ ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರಚಾರಿಕಾ ಅಭ್ಯಾಸ ವರ್ಗವನ್ನು ಆಯೋಜಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕೇವಲ ಭಾಷಣಕ್ಕೆ ಸೀಮಿತವಾಗದೆ, ತಮ್ಮ ಕೃತಿಯ ಮೂಲಕವೇ ವಸುಧೈವ ಕುಟುಂಬಕಂ ತತ್ವವನ್ನು ಬದುಕಿ ತೋರಿಸಿದ ಹೆಗ್ಗಳಿಕೆ ಅವರದ್ದಾಗಿದೆ. ಅತ್ಯಂತ ಪ್ರೀತಿಯಿಂದ ಮಾರ್ಗದರ್ಶನ ನೀಡುವ ವಿಶಿಷ್ಟ ಕಲೆ ಅವರಿಗೆ ಸಿದ್ಧಿಸಿತ್ತು. ಕಾರ್ಯಕ್ರಮದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಹೊಯ್ಸಳ ಪ್ರಾಂತದ ಕಾರ್ಯವಾಹಿಕ ವಸಂತಾ ಸ್ವಾಮಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಪರ್ಕ ಪ್ರಮುಖ್ ಟಿ.ಎಸ್.ವೆಂಕಟೇಶ್, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ, ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್ ಇದ್ದರು.



> ಮೊದಲ ಬಾರಿಗೆ ಬೆಂಗಳೂರಿಗೆ ಬಂದು ಪೂರ್ಣಾವಧಿ ಕಾರ್ಯಕರ್ತೆಯಾಗಿ ಜವಾಬ್ದಾರಿ ವಹಿಸಿಕೊಂಡಾಗ ತಮಗೆ ಆಶ್ರಯ ನೀಡಿದ್ದು ರುಕ್ಮಿಣಿ ಅವರ ಸುಕೃಪಾ ಮನೆ. ಹೆಣ್ಣುಮಕ್ಕಳು ಮಾನಸಿಕವಾಗಿ ಗಟ್ಟಿಯಾಗಬೇಕು. ಮನೆಯಿಂದ ಹೊರಬಂದ ತಕ್ಷಣ ಮನಸ್ಸನ್ನು ಗಟ್ಟಿ ಮಾಡಿಕೊಳ್ಳದಿದ್ದರೆ ಯಶಸ್ಸು ಸಿಗುವುದಿಲ್ಲ ಎಂದು ಪ್ರೇರೇಪಿಸುತ್ತಿದ್ದರು.
> ■ **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

ಚೈತನ್ಯದ ತವರೂರು ರುಕ್ಮಿಣಿ ಅವರ ಮನೆ

ರುಕ್ಮಿಣಿ ಅವರ ಇಡೀ ಕುಟುಂಬವೇ ದೇಶಸೇವೆ ಮತ್ತು ಸಂಘ ಕಾರ್ಯಕ್ಕೆ ಹೆಸರಾದದ್ದು. ನರಹರಿ ಹಾಗೂ ರುಕ್ಮಿಣಿ ಅವರನ್ನೊಳಗೊಂಡ ಇಡೀ ಕುಟುಂಬ, ಸಮಾಜದ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿತ್ತು. ಅವರ ಮನೆಗೆ ದೇಶದ ಯಾವುದೇ ಭಾಗದಿಂದ ಪರಿವಾರದ ಕಾರ್ಯಕರ್ತರು ಬಂದರೂ ಅವರಿಗೆ ಸದಾ ಆಶ್ರಯ ಸಿಗುತ್ತಿತ್ತು. ಬೆಂಗಳೂರಿನಲ್ಲಿ ಸಮಿತಿಯ ಮೊದಲ ಶಾಖೆ ಪ್ರಾರಂಭವಾದಾಗ ಇವರ ಇಡೀ ಕುಟುಂಬವೇ ಅದಕ್ಕೆ ಆಧಾರಸ್ತಂಭವಾಗಿ ನಿಂತಿತ್ತು. ಆ ಕಾಲದಲ್ಲಿ ಮಹಿಳೆಯರು ಮನೆಯಿಂದ ಹೊರಬಂದು ಸಾಮಾಜಿಕ ಕಾರ್ಯ ಮಾಡುವುದು ಸುಲಭವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ರುಕ್ಮಿಣಿ ಅವರು ಇಡೀ ಕರ್ನಾಟಕದ ಮೂಲೆ ಮೂಲೆಗಳಿಗೂ, ಹಳ್ಳಿ-ಜಿಲ್ಲೆಗಳಿಗೂ ಪ್ರವಾಸ ಮಾಡಿ ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯವನ್ನು ಕಟ್ಟಿ ಬೆಳೆಸಿದರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರ ಕಾರ್ಯಕಾರಿಣಿ ಸದಸ್ಯ ವಿ.ನಾಗರಾಜ್ ಸ್ಮರಿಸಿಕೊಂಡರು.

ಬಿಜಿಎಸ್ ಎಂಸಿಎಚ್ ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಸೇವೆಗಳ ಆರಂಭ

ಜಾಗತಿಕ ನಾಯಕತ್ವಕ್ಕೆ ಮನ್ನಣೆ: ಗಜೇಂದ್ರಸಿಂಗ್

ನೆಲಮಂಗಲ: 20ನೇ ಶತಮಾನವು ಭಾರತದ ರಾಜಕೀಯ ಸ್ವಾತಂತ್ರ್ಯದ ಹೋರಾಟಕ್ಕೆ ಸಾಕ್ಷಿಯಾಗಿದ್ದರೆ, 21ನೇ ಶತಮಾನವು ದೇಶದ ಅಭಿವೃದ್ಧಿ ಮತ್ತು ಜಾಗತಿಕ ನಾಯಕತ್ವವನ್ನು ನಿರ್ಧರಿಸುತ್ತದೆ ಎಂದು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ತಿಳಿಸಿದರು.

ನಗರದ ಅರಿಶಿನಕುಂಟೆ ಸಮೀಪದ ನಗರೂರಿನ ಬಿಜಿಎಸ್ ಎಂಸಿಎಚ್ ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಸೇವೆಗಳ ಆರಂಭ ಹಾಗೂ ಸಂಭ್ರಮ 2026ರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು. ಭೂಪ್ರದೇಶ, ಮಿಲಿಟರಿ ಪ್ರಾಬಲ್ಯ ಅಥವಾ ಕೈಗಾರಿಕಾ ಸಾಮರ್ಥ್ಯದ ಹಳೆಯ ಕಾಲ ಈಗ ಮುಗಿದಿದೆ. ದೇಶದ ಅಭಿವೃದ್ಧಿಗೆ ಯುವ ಪೀಳಿಗೆ ಶಕ್ತಿಯಾಗಿದ್ದು ಚಟಗಳಿಗೆ, ಆಮಿಷಗಳಿಗೆ ಬಲಿಯಾಗಬಾರದು. 2047ರ ವೇಳೆಗೆ ಭಾರತವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಗೆ ಯುವಪೀಳಿಗೆಯೇ ಪ್ರಮುಖ ಶಿಲ್ಪಿಗಳಾಗಿದ್ದಾರೆ ಎಂದರು.



ವಿದ್ಯಾರ್ಥಿಗಳ ಜತೆ ಸಂವಾದ: ವಿದ್ಯಾರ್ಥಿಗಳೊಂದಿಗಿನ ಪ್ರಶ್ನೋತ್ತರ ಸಂವಾದದಲ್ಲಿ ಶೇಖಾವತ್ ಅವರು ತಮ್ಮ ವೈಯಕ್ತಿಕ ಜೀವನದ ಅನುಭವಗಳನ್ನು ಹಂಚಿಕೊಂಡರು.

ಬಿಜಿಎಸ್ ಶಾಖಾ ಮಠದ ಶ್ರೀಸೌಮ್ಯನಾಥ ಸ್ವಾಮೀಜಿ, ಎಂಎಲ್‌ಸಿ ಗೋವಿಂದರಾಜು, ಸೈಬರ್ ವಿಭಾಗ ಡಿಜಿಪಿ ಡಾ.ಪ್ರಣಬ್ ಮಹಂತಿ ಐಪಿಎಸ್, ಮೆಡಿಕಲ್ ಇಲಾಖೆ ನಿರ್ದೇಶಕ ಡಾ.ಸುಜಾತ ರಾಥೋಡ್, ಟ್ರಸ್ಟಿ ದೇವರಾಜ್, ಉಪಕುಲಪತಿ ಡಾ.ಎಸ್.ಎನ್ ಶ್ರೀಧರ್, ಬಿಜಿಎಸ್ ಎಂಸಿಎಚ್ ಪ್ರಾಂಶುಪಾಲ ಡಾ.ಕೆ.ಎಸ್‌ಗಂಗಾಧರ್, ಮುಖ್ಯಸ್ಥರಾದ ಕೃಷ್ಣಮೂರ್ತಿ ಇದ್ದರು.

> ಗ್ರಾಮೀಣ ಜನರಿಗೆ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು ಆರಂಭಿಸಿದ್ದು, ಕೇಂದ್ರಸಚಿವರು ಉದ್ಘಾಟನೆ ಮಾಡಿದ್ದಾರೆ. ಬಹಳಷ್ಟು ಕಡಿಮೆ ಬೆಲೆಯಲ್ಲಿ ಸೇವೆಯನ್ನು ನೀಡಲಾಗುತ್ತಿದ್ದು, ಜನರು ಇದರ ಉಪಯೋಗ ಪಡೆದುಕೊಳ್ಳಬಹುದು. ಮುಂದಿನ ಯುವ ಪೀಳಿಗೆಯ ಮಹತ್ವವನ್ನು ತಿಳಿಸುವ ಮೂಲಕ ವಿಕಸಿತ ಭಾರತದ ಪರಿಕಲ್ಪನೆಯನ್ನು ಸಚಿವರು ತಿಳಿಸಿದ್ದಾರೆ. ಮುಂದಿನ ಅನೇಕ ಯೋಜನೆಗಳಿಗೆ ಸಚಿವರ ಸಹಕಾರ ಮುಖ್ಯವಾಗಿದೆ.
> ■ **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ,** ಪೀಠಾಧ್ಯಕ್ಷರು

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸರ್ಕಾರಕ್ಕೆ ಮನವಿ

ಭೋವಿ ಸಮಾಜ ಶಾಸಕರಿಗೆ ಸಚಿವ ಸ್ಥಾನ ನೀಡಲಿ

ಬೆಂಗಳೂರು: ಭೋವಿ ಸಮುದಾಯದ ಶಾಸಕ ಶಿವರಾಜ್ ತಂಗಡಗಿ, ಎ.ಸಿ.ಶ್ರೀನಿವಾಸ್, ಪಾವಗಡದ ವೆಂಕಟೇಶ್ ಅವರು ಪಕ್ಷದ ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ನೀಡುವಂತೆ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.



ಈ ಕುರಿತು ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಮುದಾಯದಿಂದ ಶಾಸಕರಾದ ಶಿವರಾಜ್ ತಂಗಡಗಿ, ಎ.ಸಿ. ಶ್ರೀನಿವಾಸ್, ವೆಂಕಟೇಶ್ ಅವರು ಪಕ್ಷದ ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯದ ಸಂದೇಶ ಸಾರಬೇಕು. ಇನ್ನು ಭೋವಿ ಸಮುದಾಯವು ರಾಜ್ಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು, ವಿಧಾನಸೌಧ ನಿರ್ಮಾಣದಿಂದ ಹಿಡಿದು ವಿವಿಧ ನೀರಾವರಿ ಯೋಜನೆಗಳ ಅಭಿವೃದ್ಧಿಯವರೆಗೆ ಸಮುದಾಯದ ಪಾತ್ರ ಗಮನಾರ್ಹವಾಗಿದೆ ಎಂದರು.

ವಿಧಾನ ಪರಿಷತ್ ನಾಮನಿರ್ದೇಶನ ಹಾಗೂ ನಿಗಮ-ಮಂಡಳಿಗಳ ನೇಮಕಾತಿಗಳಲ್ಲಿಯೂ ಭೋವಿ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮುದಾಯಕ್ಕೆ ಸಚಿವ ಸ್ಥಾನ ನೀಡುವ ಕುರಿತು ಮನವಿ ಸಲ್ಲಿಸಲಾಗಿದೆ. ಇಬ್ಬರು ನಾಯಕರು ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದರೆ ಮೊದಲ ಹಂತದ ಸಂಪುಟ ರಚನೆಯಲ್ಲಿ ಭೋವಿ ಸಮುದಾಯಕ್ಕೆ ಅವಕಾಶ ದೊರೆಯದಿರುವುದು ಸಮುದಾಯದಲ್ಲಿ ಬೇಸರ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ. ಪರಿಶಿಷ್ಟ ಜಾತಿಗಳಲ್ಲಿನ ಪ್ರಮುಖ ಸಮುದಾಯಗಳಲ್ಲಿ ಒಂದಾದ ಭೋವಿ ಸಮುದಾಯವನ್ನು ಅವಕಾಶ ವಂಚಿತಗೊಳಿಸಬಾರದು. ಸರ್ಕಾರ ಸಮುದಾಯದ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಮುಂದಿನ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕು ಎಂದರು.

ಸಂಪಾದಕೀಯ

ಸ್ವತಂತ್ರ ಹಾದಿ ತುಳಿದ ಅಣ್ಣಾಮಲೈ

ತಮಿಳ್ನಾಡು ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಪಕ್ಷಕ್ಕೆ ರಾಜೀನಾಮೆ ನೀಡಿರುವುದು ಬಿಜೆಪಿ ಪಾಲಿಗೆ ಆ ರಾಜ್ಯದಲ್ಲಿ ತುಸು ಹಿನ್ನಡೆಯೆಂದರೆ ತಪ್ಪಾಗದು. ಇತ್ತೀಚಿನ ತಮಿಳ್ನಾಡು ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಅಣ್ಣಾಮಲೈ ಬಿಜೆಪಿ ತ್ಯಜಿಸುವ ಕುರಿತಂತೆ ಮಾತುಗಳು ಕೇಳಿಬರುತ್ತಿದ್ದವಾದರೂ ಅದು ಅಧಿಕೃತ ರೂಪ ತಳೆದಿರಲಿಲ್ಲ. ಆದರೆ ಶುಕ್ರವಾರ ಅವರು ಅಧಿಕೃತವಾಗಿ ಪಕ್ಷವನ್ನು ತ್ಯಜಿಸಿದ್ದು ತಮ್ಮ ರಾಜೀನಾಮೆ ಪತ್ರವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ನೀಡಿದ್ದಾರೆ. ಆದರೆ ಅಣ್ಣಾಮಲೈಯವರು ಬಿಜೆಪಿಯೊಂದಿಗೆ ಸೈದ್ಧಾಂತಿಕ ಭಿನ್ನಮತದಿಂದ ಪಕ್ಷ ಬಿಟ್ಟಿರುವುದಿಲ್ಲ. ಅವರು ವ್ಯಾವಹಾರಿಕ ಭಿನ್ನಾಭಿಪ್ರಾಯದ ಕಾರಣಕ್ಕಾಗಿಯಷ್ಟೇ ಪಕ್ಷ ತ್ಯಜಿಸಿರುವುದು. ಅವರು ಬಿಜೆಪಿಯ ಹಿರಿಯ ನಾಯಕರೊಂದಿಗೆ ಮಾತುಕತೆ ನಡೆಸಿ, ಬಳಿಕ ಸೌಹಾರ್ದಯುತವಾಗಿಯೇ ಪಕ್ಷ ತ್ಯಜಿಸಿದ್ದಾರೆ.



ತಮಿಳ್ನಾಡು ಬಿಜೆಪಿ ಪಾಲಿಗೆ ಅಣ್ಣಾಮಲೈ ಅತ್ಯಂತ ಪ್ರಮುಖ ಮುಖವಾಗಿದ್ದರೆಂಬುದು ನಿರ್ವಿವಾದ. ತಮಿಳ್ನಾಡಿನ ದ್ರಾವಿಡ ರಾಜಕೀಯದ ಮಧ್ಯೆ ರಾಷ್ಟ್ರೀಯತೆಯ ರಾಜಕೀಯವನ್ನು ಬೆಳೆಸಲು ಅವರು ಪ್ರಯತ್ನಪಟ್ಟರು. ಅವರು ಆರಂಭಿಸಿದ 'ಎನ್ ಮಣ್ಣ್ ಎನ್ ಮಕ್ಕಳ್' ಪಾದಯಾತ್ರೆಯು ಬಿಜೆಪಿಯ ತಳಮಟ್ಟದಲ್ಲಿ ಬೆಳೆಸಲು ಸಹಕಾರಿಯಾಗಿತ್ತು. ಈ ಪಾದಯಾತ್ರೆಯಲ್ಲಿ ಅವರು 1700 ಕಿ.ಮೀ. ಕ್ರಮಿಸಿ 39 ಲೋಕಸಭಾ ಕ್ಷೇತ್ರಗಳಿಗೂ ಭೇಟಿ ನೀಡಿದ್ದರು. ಅದರ ಬೆನ್ನಿಗೇ ನಡೆದ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ ಗಳಿಕೆ ಪ್ರಮಾಣವು ಮೊದಲಿದ್ದ ಶೇ. 30ರಿಂದ ಶೇ.11.2ಕ್ಕೆ ಏರಿತ್ತು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಅಣ್ಣಾ ಎಡಿಎಂಕೆ ಜತೆಗೆ ಮೈತ್ರಿ ಸಾಧಿಸುವುದಕ್ಕೆ ಅಣ್ಣಾಮಲೈ ವಿರೋಧವಿತ್ತು. ದ್ರಾವಿಡ ರಾಜಕೀಯಕ್ಕೆ ಬೆಂಬಲ ನೀಡಬಾರದೆಂಬುದು ಅವರ ನಿಲುವಾಗಿತ್ತು. ಆದರೆ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಂಡ ಬಿಜೆಪಿ ಮತಗಳಿಕೆಯು ಮತ್ತೆ ಶೇ.3ಕ್ಕಿಳಿದುದು ಅಣ್ಣಾಮಲೈ ತಳೆದ ನಿಲುವನ್ನು ಸಮರ್ಥಿಸುವಂತಿತ್ತು.

ಅಣ್ಣಾಮಲೈ ಹೊಸ ರಾಜಕೀಯ ಜನಾಂದೋಲನವನ್ನು ಆರಂಭಿಸುವ ಸಂಕೇತವನ್ನು ನೀಡಿದ್ದಾರೆ. ಅಣ್ಣಾಮಲೈಯವರು ಈಗಾಗಲೇ ರಾಜ್ಯದ ಜನರ ಮನ ಗೆದ್ದಿರುವುದರಿಂದ, ವೈಯಕ್ತಿಕ ನೆಲೆಯಲ್ಲೂ ದಕ್ಷ ಹಾಗೂ ಸಜ್ಜನರಾಗಿರುವುದರಿಂದ ಮತ್ತು ತಮಿಳ್ನಾಡಿನ ಜನತೆ 'ಹೀರೋ ಆರಾಧನೆ'ಯ ಸ್ವಭಾವ ಹೊಂದಿರುವುದರಿಂದ ಅಣ್ಣಾಮಲೈಯವರ ನೂತನ ರಾಜಕೀಯ ಆಂದೋಲನವು ಯಶಸ್ಸು ಕಾಣುವುದರಲ್ಲಿ ಸಂದೇಹವಿಲ್ಲ. ವ್ಯಕ್ತಿ ಕೇಂದ್ರಿತ ಪಕ್ಷಗಳೇ ತಮಿಳ್ನಾಡಿನಲ್ಲಿ ಹೆಚ್ಚು ಯಶಸ್ಸು ಕಾಣುತ್ತಿರುವುದರಿಂದ ಅಣ್ಣಾಮಲೈ ಕೂಡಾ ಅದೇ ಯಶೋಪಥ ಹಿಡಿಯಬಹುದು. ಅಣ್ಣಾಮಲೈಯವರ ನೂತನ ರಾಜಕೀಯ ಆಂದೋಲನವು ಜನಪ್ರಿಯತೆ ಗಳಿಸಿದರೆ ಅದು ಸ್ವಾಗತಾರ್ಹವೇ. ಎಷ್ಟಿದ್ದರೂ ಅಣ್ಣಾಮಲೈಯವರು ರಾಷ್ಟ್ರೀಯತೆಯನ್ನು ಪ್ರತಿಪಾದಿಸುವವರೇ ಹೊರತು ದ್ರಾವಿಡ ಪಕ್ಷಗಳಂತೆ ಪ್ರಾದೇಶಿಕ ಸಂಕುಚಿತತೆಯನ್ನು ಪ್ರತಿಪಾದಿಸುವವರಲ್ಲ.

ಸೂರ್ಯ ರೇಖೆಯ ಕುರಿತಾದ ಪ್ರಶ್ನೆಗಳು

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ಹಿಂದಿನ ಅಂಕಣಗಳಲ್ಲಿ ವಿವರಿಸಿದ ಸೂರ್ಯ ರೇಖೆಯ ಕುರಿತಂತೆ ಓದುಗರಲ್ಲಿ ಮೂಡಿದ ಕೆಲವು ಅನುಮಾನಗಳಿಗೆ ಉತ್ತರಗಳು ಇಲ್ಲಿವೆ.

● **ಹಿಂದೆ ಒಮ್ಮೆ ಜಾತಕ ಕಳುಹಿಸಿದ್ದೆ. ನೀವು ಹೇಳಿದಂತೆ ಎಲ್ಲವನ್ನೂ ಮಾಡಿದ್ದೆವು. ನನಗೀಗ ಮದುವೆ ಆಗಿದೆ. ನಾವೀಗಲಾದರೂ ಹಸ್ತದ ಫೋಟೋ ಕಳಿಸಿದರೆ ನೀವು ನೋಡಿ ಮುಂದಿನ ನನ್ನ ಭವಿಷ್ಯದ ಕುರಿತು ಹೇಳುವಿರಾ?**

– ಸತೀಶ್, ಪೂಜಾ, ಸಿರಸಿ

ನೀವೀಗ ಮದುವೆಯಾಗಿ ಸುಖವಾಗಿ ಇದ್ದೀರಿ ಅಂದರೆ ಶುಭವಾಗಲಿ. ನಾನು ಹಿಂದೆಯೇ ಹೇಳಿದ್ದೆ; ಜಾತಕ, ನಾಡಿ, ಹಸ್ತ, ಮುಖ,ನಡೆ, ನುಡಿ, ಕುಂಡಲಿನಿ ಹೀಗೆ ಇವೆಲ್ಲವೂ ನಿಮ್ಮ ಕುರಿತಾಗಿ ಎಲ್ಲಾ ಮಾಹಿತಿಗಳನ್ನು ನೀಡುತ್ತವೆ. ಅದನ್ನು ಆಳವಾಗಿ ಅಭ್ಯಾಸ ಮಾಡಬೇಕು. ಈಗಾಗಲೇ ನಿಮಗೆ ಒಳಿತು ಆಗಿದೆ. ನೀವು ನಿಮ್ಮ ಮನೆ ದೇವರಿಗೆ ಅನುಷ್ಠಾನ ಮಾಡುವುದನ್ನು ಬಿಡಬೇಡಿ. ನಿಮ್ಮ ಪರಿಪೂರ್ಣತೆಯ ಮಾರ್ಗದರ್ಶನವನ್ನೂ ಸಹಾ ಪಡೆದುಕೊಳ್ಳಿ. ಮತ್ತು ನೀವು ಅಷ್ಟೂ ತೃಪ್ತರಾಗದಿದ್ದರೆ ನನ್ನ ವಾಟ್ಸಪ್ ನಂಬರ್‌ಗೆ ನಿಮ್ಮ ಮತ್ತು ನಿಮ್ಮ ಪತ್ನಿಯ ಜಾತಕ, ಹಸ್ತದ ಫೋಟೋಗಳನ್ನು ಕಳಿಸಿಕೊಡಿ. ಎಲ್ಲವನ್ನೂ ಹೋಲಿಸಿ ಮಾಡಿ ನೋಡಬೇಕಾಗುತ್ತದೆ.

● **ನನ್ನ ಕೈಯಲ್ಲಿ ಸೂರ್ಯ ರೇಖೆಯು ನದಿ ಹರಿದಂತೆ ಓರೆಕೋರೆಯಾಗಿದೆ. ಇದರ ಅರ್ಥ ಏನು?**

-ಪ್ರಶಾಂತ್, ಹುಬ್ಬಳ್ಳಿ


ನಿಮ್ಮ ಕೈಯಲ್ಲಿರುವ ಸೂರ್ಯ ರೇಖೆಯನ್ನು ವೇವಿ ಸನ್‌ಲೈನ್ ಅಥವಾ ಸರ್ಪೆಂಟೈನ್ ಸನ್‌ಲೈನ್ ಎನ್ನುತ್ತಾರೆ. ಇದರ ಅರ್ಥ ನಿಮ್ಮ ಬದುಕು ಯಾವಾಗಲೂ ಅಸ್ಥಿರತೆಯಿಂದ ಕೂಡಿರುತ್ತದೆ. ಒಮ್ಮೆ ಹಣ ಬರುತ್ತದೆ, ಹಾಗೇ ಕ್ಷಣ ಹೋಗುತ್ತದೆ. ಇಂದು ಅರಸ ನಾಳೆ ಆಳು ಆಗಿರುತ್ತೀರಿ. ಮನಸ್ಸು ತುಂಬಾ ಚಂಚಲ. ಒಂದು ಕೆಲಸದಲ್ಲಿ ನಿಲ್ಲುವುದಿಲ್ಲ. ನಿಮ್ಮಲ್ಲಿ ಪ್ರತಿಭೆ ಇರುತ್ತದೆ, ಆದರೆ ನಿಮ್ಮ ಸ್ವಭಾವದಿಂದ ನಿಮ್ಮನ್ನು ನಿಲ್ಲದಂತೆ ಓಡಿಸುತ್ತದೆ. ಇದರಿಂದಾಗಿ ನೀವು ಎಲ್ಲಿಯೂ ಯಶಸ್ಸನ್ನು ಪಡೆಯದೇ ಕೊನೆಯಲ್ಲಿ ಮನೆಯಲ್ಲೇ ಉಳಿಯುವಂತೆ ಆಗುತ್ತದೆ.

ನಿಮಗೆ ಗುಪ್ತ ಶತ್ರುಗಳು ಜಾಸ್ತಿ. ನೀವು ಮಾಡುವ ಕೆಲಸಕ್ಕೆ ಸದಾ ಇವರೇ ಅಡ್ಡಿ. ಆದರೆ ಅವರು ನಿಮಗೆ ಶತ್ರುಗಳು ಎಂದು ಅನಿಸುವುದೇ ಇಲ್ಲ. ಕಾರಣ ಅವರು ನಿಮ್ಮೊಂದಿಗೆ ಚಂದದ ಮಾತುಗಳನ್ನು ಆಡುತ್ತಾ ನಿಮ್ಮನ್ನು ಹಾದಿ ತಪ್ಪಿಸುತ್ತಾ ಇರುತ್ತಾರೆ. ಅವರೇ ಚಾಡಿ ಹೇಳುವುದು, ಅಪವಾದ ಹೊರಿಸುವುದೂ ಸಹಾ ಮಾಡುತ್ತಾರೆ.

ನರ ದೌರ್ಬಲ್ಯ, ಮಾನಸಿಕ ಒತ್ತಡ, ನಿದ್ರಾಹೀನತೆ ಹೀಗೆ ಎಲ್ಲಾ ಕಾಯಿಲೆಗಳು ಒಂದೊಂದಾಗಿ ನಿಮ್ಮನ್ನು ಕಾಡುತ್ತವೆ. ಸಾಲ ಹೆಚ್ಚುತ್ತಾ ಹೋಗುತ್ತದೆ. ದುಂದುವೆಚ್ಚ ಸಹಾ ಹೆಚ್ಚುತ್ತದೆ. ಕೂಡಿಟ್ಟ ಹಣ, ಆಸ್ತಿ ಎಲ್ಲವೂ ನಿಮ್ಮ ಸಾಲಕ್ಕೆ ವ್ಯಯವಾಗುತ್ತದೆ.

ಓರೆಕೋರೆಯು ಸ್ವಲ್ಪ ಇದ್ದರೆ: ಸಣ್ಣಪುಟ್ಟ ಅಡ್ಡಿಗಳು ಸದಾ ಕಾಡುತ್ತವೆ. ಆದರೂ ನೀವು ಗುರಿ ಮುಟ್ಟುತ್ತೀರಿ. ಆದರೆ ತುಂಬಾ ಇದ್ದರೆ ಜೀವನ ಪೂರ್ತಿ ಹೋರಾಟ ಮಾಡುವುದೇ ಆಗುತ್ತದೆ. ಒಂದರ ಬಳಿಕ ಮತ್ತೊಂದು ಸಮಸ್ಯೆಗಳು ಕಾಡುತ್ತಲೇ ಇರುತ್ತವೆ. ತಲೆ ರೋಗ ಹೋಗುವಷ್ಟು ತೊಂದರೆಗಳು ಪದೇ ಪದೇ ಕಾಡುತ್ತವೆ.

ನದಿ ಹರಿದಂತೆ ಸೂರ್ಯ ರೇಖೆ ಇದ್ದರೂ ಅದರ ಮೇಲೆ ಚೌಕಗಳು ಇದ್ದರೆ, ಅಥವಾ ಪಕ್ಕದಲ್ಲಿ ಮತ್ತೊಂದು ರೇಖೆ ಇದ್ದರೆ ಆಗ ನಿಮ್ಮ ಕಷ್ಟಗಳು ದೂರವಾಗುತ್ತವೆ. ದೊಡ್ಡ ನಷ್ಟದಿಂದ ಪಾರಾಗುತ್ತೀರಿ.



ಪರಿಹಾರ: ಯಾವುದೇ ಕೆಲಸವನ್ನೂ ಮಾಡಿ. ಎಷ್ಟೇ ಚಂಚಲತೆ ಕಾಡಿದರೂ ದೃಢವಾದ ಮನಸ್ಸಿನಿಂದ ಮಾಡುತ್ತಿರುವ ಕೆಲಸವನ್ನು ಬಿಡಬೇಡಿ. ದಿನಾಲೂ ಸೂರ್ಯ ನಮಸ್ಕಾರ ಮಾಡುವುದರಿಂದ ನಿಮ್ಮ ಸೂರ್ಯ ರೇಖೆಯು ನೇರವಾಗುತ್ತದೆ ಮತ್ತು ನಿಮ್ಮಲ್ಲೂ ಸ್ಥಿರತೆ ಬರುತ್ತದೆ. ಪ್ರಾಣಾಯಾಮ ಮಾಡಲೇಬೇಕು. ಅದರಿಂದ ನಿಮ್ಮ ನಾಡಿಗಳು ಸಮತೋಲನಗೊಳ್ಳುತ್ತವೆ. ಉಪ್ಪು ತಿನ್ನುವುದನ್ನು ಬಿಡಬೇಕು. ಪದಾರ್ಥಗಳಿಗೆ ಹಾಕುವ ಉಪ್ಪು ಬಿಟ್ಟು ಮೇಲಿನಿಂದ ಯಾವ ಕಾರಣಕ್ಕೂ ಉಪ್ಪನ್ನು ತಿನ್ನಬಾರದು. ಮೈಮೇಲೆ ಯಾವುದೇ ಹರಳುಗಳನ್ನು ಧರಿಸಬೇಡಿ. ಬಂಗಾರವನ್ನೂ ಹಾಕಿಕೊಳ್ಳಬೇಡಿ.

ನಿಮ್ಮ ಸೂರ್ಯ ರೇಖೆ ಹಾವು ಹರಿದಂತೆ (ನಿಮ್ಮ ಪ್ರಕಾರ ನದಿ ಹರಿದಂತೆ) ಇದ್ದರೂ ಪಕ್ಕದ ಹೃದಯ ರೇಖೆ ಮತ್ತು ಬುದ್ಧಿ ರೇಖೆ ಆಳವಾಗಿ ಚೆನ್ನಾಗಿ ಇದ್ದರೆ, ಗುರು ಪರ್ವತ ಉಬ್ಬಿ, ಗುಲಾಬಿ ಬಣ್ಣವಾಗಿದ್ದರೆ, ನೀವು ನಿಮ್ಮ ದುರದೃಷ್ಟವನ್ನು, ಅಸ್ಥಿರತೆಯನ್ನು ಬುದ್ಧಿಯಿಂದ ಗೆಲ್ಲಬಹುದು.

● **ನನ್ನ ಸೂರ್ಯ ರೇಖೆಯ ಮೇಲೆ ಗುಣಿಸು ಚಿಹ್ನೆಗಳಿವೆ. ನೀವು ಅದರ ಬಗ್ಗೆ ಹೇಳಿಲ್ಲ. ದಯವಿಟ್ಟು ತಿಳಿಸಿ.**

– ಶೃಂಗೇರಿ ಮೋಹನ್

ಮೊದಲೇ ಹೇಳಿದಂತೆ ಇದು ನಿಮ್ಮ ಎಲ್ಲಾ ಕೆಲಸಗಳಿಗೂ ಅಡೆತಡೆ ನೀಡುವ ಚಿಹ್ನೆ. ಇದೊಂದು ಎಚ್ಚರಿಕೆಯನ್ನು ನೀಡುವ ಕೆಂಪುದೀಪ!! ನಿಮ್ಮ ಪ್ರಯತ್ನವನ್ನೆಲ್ಲಾ ಕತ್ತರಿಸುವ ಕೆಲಸವನ್ನು ಇದು ಮಾಡುತ್ತದೆ. ಮಾಡುತ್ತಿರುವ ಕೆಲಸ ದಿಢೀರನೆ ನಿಂತು ಹೋಗುತ್ತದೆ. ಪ್ರಾಜೆಕ್ಟ್ ನಿಮ್ಮಿಂದ ಹೊರಟು ಹೋಗುತ್ತದೆ. ಉದ್ಯೋಗ ಸಹಾ ಕಳೆದುಕೊಳ್ಳಬಹುದು. ಹಣ ಬರುವುದು ನಿಂತು ಹೋಗುತ್ತದೆ.

ಮಾಡದ ಕೆಲಸಕ್ಕೆ ಅಪವಾದ ಬರುತ್ತದೆ. ನೀವು ಕೋರ್ಟ್, ಪೋಲೀಸ್ ಸ್ಟೇಶನ್ ಎಂದೆಲ್ಲಾ ಅಲೆಯಬೇಕಾಗಬಹುದು. ನಿಮ್ಮ ಬಗ್ಗೆ ಪತ್ರಿಕೆಗಳಲ್ಲಿ, ಟೀವಿಗಳಲ್ಲಿ ಅವಹೇಳನದ ಸುದ್ದಿಗಳು ಬರುತ್ತವೆ. ಜನ ನಿಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ. ದೈಹಿಕವಾಗಿ ಅಪಾಯ ಉಂಟಾಗಬಹುದು. ಆಸ್ಪತ್ರೆ ಸೇರುವಂತೆ ಆಗಬಹುದು.

ಆರಂಭದಲ್ಲಿಯೇ ಅಂದರೆ ಮಣಿಕಟ್ಟಿನ ಬಳಿ ಇದ್ದರೆ: ಬರುವ ಆಸ್ತಿಯನ್ನೂ ಸಹಾ ಕೋರ್ಟ್ ಅಲೆದು ಪಡೆಯುವಂತೆ ಆಗುತ್ತದೆ. ವೃತ್ತಿಯಲ್ಲಿ ಅವಮಾನ ಮತ್ತು ಕೆಲಸದಿಂದ ತೆಗೆದುಹಾಕಲಾಗುತ್ತದೆ. ಮಧ್ಯದಲ್ಲಿ ಇದ್ದರೆ ಮಧ್ಯ ವಯಸ್ಸಿನಲ್ಲಿ ನಿಮ್ಮ ವ್ಯಾಪಾರ ಬಿದ್ದು ಹೋಗುತ್ತದೆ. ಸಸ್ಪೆಂಡ್ ಆಗಿ ಮನೆಯಲ್ಲಿ ಕೂರುವಂತೆ ಆಗುತ್ತದೆ. ಬೆರಳುಗಳ ಸನಿಹ ಗುಣಿಸುವ ಚಿಹ್ನೆ ಇದ್ದರೆ; ನಿಮ್ಮನ್ನು ವೃದ್ಧಾಶ್ರಮಕ್ಕೆ ಸೇರಿಸುವುದು ಗ್ಯಾರಂಟಿ. ನಿಮ್ಮ ಸೋಲಿನ ಕುರಿತು ನಿಮಗೆ ನಿಮ್ಮ ಕುಟುಂಬದವರೇ ಅವಮಾನ ಮಾಡುತ್ತಾರೆ. ಸಮಾಜ ಸಹಾ ನಿಮ್ಮನ್ನು ಬಹಿಷ್ಕಾರ ಹಾಕುತ್ತದೆ.

ಗುಣಿಸುವ ಚಿಹ್ನೆಯ ಬಳಿಕ ಸೂರ್ಯ ರೇಖೆಯು ನೇರವಾಗಿ ಇದ್ದರೆ: ಪ್ರತಿ ಸಾರಿಯೂ ನೀವು ಸೋಲಿನಿಂದ ಚೇತರಿಸಿಕೊಳ್ಳುತ್ತೀರಿ. ಅದೇ ಚಿಹ್ನೆಯ ಬಳಿಕ ರೇಖೆಯು ಕತ್ತರಿಸಿ ಹೋಗಿದ್ದರೆ ನಿಮ್ಮ ದುರದೃಷ್ಟವನ್ನು ಸರಿಪಡಿಸಲು ತುಂಬಾ ಕಷ್ಟ ಪಡಬೇಕಾಗುತ್ತದೆ. ಗುಣಿಸುವ ಚಿಹ್ನೆಯ ಮೇಲೆ ಚೌಕ ಇದ್ದರೆ ಸೋಲು ತಪ್ಪುತ್ತದೆ.ತ್ರಿಕೋನ ಇದ್ದರೆ ಎಲ್ಲಾ ಕೇಸ್‌ಗಳಿಂದಲೂ ಮುಕ್ತರಾಗುತ್ತೀರಿ ಮತ್ತು ಆಸ್ತಿ, ಅಪವಾದಗಳನ್ನೂ ಸಹಾ ಜಯಿಸುತ್ತೀರಿ.

ಪರಿಹಾರ: ನೀವು ಯಾವ ಕೆಲಸವನ್ನು ಮಾಡುವಾಗಲೂ ಬುದ್ಧಿಪೂರ್ವಕವಾಗಿ ಮಾಡಿ. ಪೂರ್ವ ತಯಾರಿ ಇಲ್ಲದೇ ಮಾಡಬೇಡಿ. ಯಾರೊಂದಿಗಾದರೂ ಚರ್ಚಿಸಿ ತೀರ್ಮಾನವನ್ನು ಮಾಡಿ. ಯಾವುದೇ ಕೆಲಸವಾದರೂ ನೀವು ಸಾಕ್ಷಿ ಹಾಕುವುದು, ಅವರಿಗೆ ಜಾಮೀನು ನೀಡುವುದು. ಪರ ವಹಿಸಿಕೊಂಡು ಜವಾಬ್ದಾರಿ ವಹಿಸಿಕೊಳ್ಳುವುದು ಮಾಡಲೇಬೇಡಿ. ದಿನಾಲೂ ಸೂರ್ಯ ನಮಸ್ಕಾರ ಮಾಡಿ. ಆದಿತ್ಯ ಹೃದಯ ಪಾರಾಯಣ ಮಂತ್ರವನ್ನು ನೀವೇ ಕಲಿತು ನಿತ್ಯವೂ ಮಾಡಿ. ತಂದೆ ಅಥವಾ ಗುರುಗಳ ಸೇವೆ ಮಾಡಿ ಮತ್ತು ಗೋಧಿ ಹಾಗೂ ಬೆಲ್ಲವನ್ನೂ ಪ್ರತಿ ಭಾನುವಾರ ದಾನ ಮಾಡಿ.

● **ನನ್ನ ಸೂರ್ಯ ರೇಖೆ ಕತ್ತರಿಸಿ ಹೋಗಿದೆ ಮತ್ತು ಅಲ್ಲಲ್ಲಿ ಕೂಡುವ ಚಿಹ್ನೆ ಇದೆ. ನೀವು ಹಸ್ತದ ಚಿತ್ರವನ್ನು ಕಳಿಸು ಎಂದರೆ ಕಳಿಸುತ್ತೇನೆ. ದಯವಿಟ್ಟ ತಿಳಿಸಿ. ನನ್ನ ಭವಿಷ್ಯವು ಹೇಗಿದೆ ಹೇಳಿ.**

– ಚಂದ್ರಶೇಖರ್, ಕಳಸ

ಕೂಡುವ ಚಿಹ್ನೆ ಇದೆ ಎಂದಾದರೆ ನೀವು ಸದಾ ತ್ಯಾಗವನ್ನು ಮಾಡುತ್ತಾ ಇರುತ್ತೀರಿ ಅಥವಾ ಮಾಡುವುದು ಅನಿವಾರ್ಯವಾಗಿರುತ್ತದೆ. ಸೇವೆ, ಧರ್ಮ, ದಾನ, ಕೊಡುಗೈ, ಹೀಗೆ ನೀವು ಧರ್ಮದರ್ಶಿಗಳು ಆಗಬಹುದು. ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಮಯ ಬಂದಾಗಲೆಲ್ಲಾ ಎಲ್ಲರೂ ನಿಮ್ಮ ಕಡೆ ತೋರಿಸುತ್ತಾರೆ. ಕಾರಣ ಎಷ್ಟೆಲ್ಲಾ ಖರ್ಚು ಬಂದರೂ ನೀವು ಕೈಯಿಂದ ಹಾಕಿಯಾದರೂ ಆ ಕೆಲಸವನ್ನು ಪೂರೈಸುತ್ತೀರಿ. ನೀವು ಡಾಕ್ಟರ್, ನರ್ಸ್, ಸಮಾಜಸೇವಕ, ಪ್ರತಿಫಲ ಬಯಸದ ಕೆಲಸಗಳು ಯಾವುದೇ ಇದ್ದರೂ ಅದು ನಿಮ್ಮ ಪಾಲಿಗೆ ಬರುತ್ತದೆ. ಹೆಸರು ಬಂದರೂ ಹಣ ಹರಿದು ಹೋಗುತ್ತಿರುತ್ತದೆ.

ನಿಮ್ಮಲ್ಲಿ ಧರ್ಮ– ಅಧರ್ಮ, ಕುಟುಂಬ – ಸಮಾಜ, ಮನೆ –ಆಫೀಸ್, ಆಸೆ – ನೀತಿ, ಸೇವೆ – ಹಣ ಹೀಗೆ ದ್ವಂದ್ವ ಮತ್ತು ಜಗಳ ಎರಡೂ ನಡೆಯುತ್ತಿರುತ್ತವೆ. ಪರಿಣಾಮ ನಿಮ್ಮ ಕುಟುಂಬದವರು ನಿಮ್ಮಿಂದ ದೂರವಾಗುತ್ತಾರೆ. ಸ್ನೇಹಿತರು ಶತ್ರುಗಳಾಗುತ್ತಾರೆ. ಹಿಂಬಾಲಕರು ಕೈತುಂಬಾ ಗಳಿಸುತ್ತಾರೆ. ನೀವು ಮಾತ್ರ ಕೊನೆಗೂ ಯಾರಿಗೂ ಸಲ್ಲದವರಾಗುತ್ತೀರಿ.

ಸೂರ್ಯ ರೇಖೆಯ ತುದಿಯಾದ ಬೆರಳುಗಳ ಸನಿಹ ಇದ್ದರೆ, ನೀವು ನಿಮ್ಮದಾದ ಎಲ್ಲವನ್ನೂ ದಾನ ಮಾಡಿ ಸಂನ್ಯಾಸಿಗಳೋ, ಜಗದ್ಗುರುಗಳೋ, ಮಹಾನ್ ನೇತಾರರೋ ಆಗುತ್ತೀರಿ. ನಿಮ್ಮ ಯಶಸ್ಸು ಯಾವಾಗಲೂ ಲೋಕಕ್ಕೆ ಮೀಸಲಾಗಿರುತ್ತದೆ. ಇನ್ನು ಸೂರ್ಯ ರೇಖೆ ಕತ್ತರಿಸಿ ಹೋಗಿದ್ದರೆ ಯಾವುದೇ ಫಲ ಇರುವುದಿಲ್ಲ.

ಎಂತಹ ವೈದ್ಯರನ್ನು ಬಿಡಬೇಕು

ಅಜ್ಞಾತ ಶಾಸ್ತ್ರಸದ್ಭಾವಾನ್ ಶಸ್ತ್ರಮಾತ್ರ ಪರಾಯಣಾನ್।
ತ್ಯಜೇದ್ ದೂರಾದ್‌ಭಿಷಕ್‌ಪಾಶಾನ್ ವೈವಸ್ವತಾನಿವ **–ಸುಭಾಷಿತ ರತ್ನಭಾಂಡಾಗಾರ**

ಶಾಸ್ತ್ರವನ್ನು ವ್ಯಾವಹಾರಿಕವಾಗಿ ತಿಳಿಯದೆ ಶಸ್ತ್ರಗಳನ್ನು ಬಳಸುವುದರಲ್ಲಿ ಮಾತ್ರ ಆಸಕ್ತರಾದ ನೀಚ ವೈದ್ಯರುಗಳನ್ನು ಯಮಪಾಶವೆಂಬಂತೆ ದೂರದಿಂದಲೇ ಬಿಟ್ಟು ಬಿಡಬೇಕು – ಎಂಬುದು ಶ್ಲೋಕಾರ್ಥ.

ಸಮಾಜದಲ್ಲಿ ಸಾಕಷ್ಟು ಒಳ್ಳೆಯ ವೈದ್ಯರಿದ್ದಾರೆ. ಅತ್ಯಂತ ಕಡಿಮೆ ಹಣವನ್ನು ಪಡೆದು ಕೊಂಡು ಚಿಕಿತ್ಸೆ ನೀಡುವವರಿದ್ದಾರೆ. ಹಳ್ಳಿಗಳಿಗೆ ಭೇಟಿಯಿತ್ತು ಚಿಕಿತ್ಸೆ ಕೊಡುವ, ಉಚಿತ ಸೇವೆಮಾಡುವ ವೈದ್ಯರೂ ಇದ್ದಾರೆ. ಸಮೀಪಕ್ಕೆ ಬಂದ ರೋಗಿಗಳಿಗೆ ಭರವಸೆಯ ಮಾತುಗಳನ್ನು ಹೇಳಿ ಔಷಧವಿಲ್ಲದೇ ರೋಗಮುಕ್ತರನ್ನಾಗಿಸುವ ವೈದ್ಯರೂ ಇದ್ದಾರೆ.



ಕೇವಲ ನಾಡಿ ಹಿಡಿದು ರೋಗವನ್ನು ಪತ್ತೆ ಹಚ್ಚಿ ಔಷಧ ನೀಡಿ ರೋಗಗಳನ್ನು ಗುಣಪಡಿಸಿದವರೂ ಇದ್ದಾರೆ.

ಹಿಂದೆ ಇಂಥವರ ಸಂಖ್ಯೆ ಜಾಸ್ತಿಯಿತ್ತು. ಇಂದು ಇಲ್ಲವೆನ್ನುವಂತಿಲ್ಲ. ಅಂಥವರ ಸಂಖ್ಯೆ ತೀರಾ ಕಡಿಮೆ. ಇಂದು ಸರಿಯಾಗಿ ಪರೀಕ್ಷಿಸದೆ ಮದ್ದು ಕೊಡುವವರಿದ್ದಾರೆ. ತಮಗೆ ನೀಡಿದ ಔಷಧದ ಸ್ಯಾಂಪಲ್‌ಗಳನ್ನೇ ರೋಗಿಗೆ ನೀಡಿ ಹಣ ಮಾಡುವವರಿದ್ದಾರೆ. ಶಸ್ತ್ರಚಿಕಿತ್ಸೆಯ ಅಗತ್ಯ ಇಲ್ಲದಿದ್ದರೂ ಹೆದರಿಸಿ ಶಸ್ತ್ರಚಿಕಿತ್ಸೆಗೆ ಒಳಪಡಿಸುವವರೂ ಇದ್ದಾರೆ. ಒಂದಕ್ಕೆ ಎರಡು ಪಟ್ಟು ಹಣವನ್ನು ಅಪೇಕ್ಷಿಸುವವರೂ ಇದ್ದಾರೆ. ಶಾಸ್ತ್ರಜ್ಞಾನವಿಲ್ಲದಿದ್ದರೂ, ವ್ಯಾವಹಾರಿಕವಾಗಿ ಹಣ ವಸೂಲಿ ಮಾಡುವ ಕಲೆಯನ್ನು ಕರತಲಾಮಲಕ ಮಾಡಿಕೊಂಡ ವೈದ್ಯರಿದ್ದಾರೆ. ಇವರಿಗೆ ಹಣವೇ ಮುಖ್ಯ ವಿನಾ ಜೀವವಲ್ಲ. ಆದ್ದರಿಂದಲೇ ಇಂಥವರ ನಡೆ ನೋಡಿ ಕವಿಯು 'ಯಮೋ ಹರಿತಿ ಪ್ರಾಣಾನ್ ವೈದ್ಯೋ ಪ್ರಾಣಾನ್ ಧನಾನಿ ಚ' ಎಂದು ಟೀಕಿಸಿದ್ದಾನೆ. ಯಮನು ಪ್ರಾಣವನ್ನು ಮಾತ್ರ ಒಯ್ದರೆ ಕೆಟ್ಟ ವೈದ್ಯನು ಪ್ರಾಣಗಳನ್ನೂ, ಸಂಪತ್ತನ್ನೂ, ನೆಮ್ಮದಿಯನ್ನೂ ಒಯ್ಯುತ್ತಾನೆ.ಒಟ್ಟಿನಲ್ಲಿ ಹಣಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ವೈದ್ಯರಿದ್ದಾರೆ ಎಂಬುದು ಸತ್ಯ.

ಯಾವುದೇ ಶಾಸ್ತ್ರವನ್ನಾಗಲಿ ಶಾಸ್ತ್ರದೃಷ್ಟಿಯಿಂದ ನೋಡದೆ ವ್ಯಾವಹಾರಿಕವಾಗಿ ನೋಡಬೇಕು. ಶಾಸ್ತ್ರವು ಒಂದಿಷ್ಟು ವಿಧಿ–ವಿಧಾನಗಳನ್ನು ಹೇಳುತ್ತದೆ. ನಿಯಮವನ್ನು ವಿಧಿಸುತ್ತದೆ. ಹೀಗೆಂದ ಮಾತ್ರಕ್ಕೆ ಶಾಸ್ತ್ರ ನಿರ್ದೇಶನವೆಂದು ಹೇಳಿ ವ್ಯವಹಾರ ಪಥಕ್ಕೆ ಇಳಿಸಬಾರದು. ಹಾಗೆ ಇಳಿಸಿದರೆ ಪ್ರಮಾದವಾಗುತ್ತದೆ. 'ಸರ್ವೇ ನಿಯಮಾಃ ಪಾಪ ವಾದಾಃ' ಎಂಬ ಅನುಭವದ ಉಕ್ತಿಯಿದೆ. ಎಲ್ಲ ವಿಧಿ–ನಿಯಮಗಳು ದೇಶ–ಕಾಲ, ಸಂದರ್ಭ, ವ್ಯಕ್ತಿ... ಇವುಗಳನ್ನು ಅವಲಂಬಿಸುತ್ತ ತಜ್ಞನಾದವನು ಇವೆಲ್ಲವನ್ನೂ ಅರ್ಥೈಸಿಕೊಂಡು ವ್ಯವಹರಿಸಬೇಕು. ರೋಗ ಒಂದೇ ಆಗಿದ್ದರೂ, ನೀಡುವ ಔಷಧ ಒಂದೇ ಬಗೆಯಾಗಿದ್ದರೂ ರೋಗಿಯನ್ನು ಗಮನಿಸಿ, ಅವನ ಶರೀರ ಪ್ರಕೃತಿಯನ್ನು ಅನುಲಕ್ಷಿಸಿ ಔಷಧೋಪಚಾರವನ್ನು ನಡೆಸಬೇಕಾಗುತ್ತದೆ. ಇದನ್ನು ಅರಿತವನೇ ಸರಿಯಾದ ವೈದ್ಯ. ಶಾಸ್ತ್ರದ ಹಿನ್ನೆಲೆ, ಚಿಕಿತ್ಸಾ ನೈಪುಣ್ಯತೆ... ಇತ್ಯಾದಿ ತಿಳಿಯದೇ ಔಷಧ ನೀಡಲು ಮುಂದಾದ ವೈದ್ಯರನ್ನು ನೀಚರೆಂದೇ ಹೇಳಬೇಕು. ಇಂಥವರನ್ನು ದೂರ ಇಡುವುದೇ ವಾಸಿ. ಯಮ ಪಾಶದಿಂದ ದೂರ ಇರಲು ಬಯಸುವಂತೆ ಇಂಥಹ ವೈದ್ಯರಿಂದ ದೂರವಿರಬೇಕಾದುದು ಎಲ್ಲರ ಕರ್ತವ್ಯ. ಅದಿಲ್ಲದಿದ್ದರೆ ಯಮನ ಮನೆಯ ಅತಿಥಿಯಾಗಬೇಕಾದೀತು. ಒಟ್ಟಿನಲ್ಲಿ ಹೇಳುವುದಿಷ್ಟೆ! ಶಾಸ್ತ್ರಜ್ಞಾನಕ್ಕಿಂತಲೂ ಅನುಭವ ಮುಖ್ಯ. ವ್ಯವಹಾರ ಜ್ಞಾನ ಅತೀ ಮುಖ್ಯ.

ಜನ್ಮ, ಕರ್ಮ, ಪುನರ್ಜನ್ಮ

ದೃಷ್ಟಿಗೋಚರವಾದ ಈ ಭೌತಿಕ ಜಗತ್ತನ್ನು ನಡೆಸುವುದು ಇದರ ಹಿಂದಿರುವ ಅಗೋಚರವಾದ ಒಂದು ಸೂಕ್ಷ್ಮ ಶಕ್ತಿ. ಅದನ್ನೇ ಪರಮಾತ್ಮ, ಬ್ರಹ್ಮ, ದೇವರು ಎಂದೆಲ್ಲ ಕರೆದಿದ್ದಾರೆ.

ಒಳನೋಟ

• ಹೆ.ಬಾ. ಮಲ್ಯ



ಮನುಷ್ಯನ ಹುಟ್ಟು, ಸಾವು, ಪುನರ್ಜನ್ಮಗಳ ಬಗ್ಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಈ ರೀತಿಯಲ್ಲಿ ಬೋಧಿಸುತ್ತಾನೆ :–

ವಾಸಾಂಸಿ ಜೀರ್ಣಾನಿಯಥಾವಿಹಾಯ
ನವಾನಿಗೃಹ್ಣಾತಿ ನರೋಽಪರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾನ್
ಅನ್ಯಾನಿ ಸಂಯಾತಿ ನವಾನಿ ದೇಹೀ ।। ಅ2 ಶ್ಲೋ:22।।

"ಹೇಗೆ ಮನುಷ್ಯನು ಹಳೆಯದಾದ ವಸ್ತ್ರಗಳನ್ನು ಬಿಚ್ಚಿ ಹಾಕಿ ಬೇರೆಯ, ಹೊಸದಾದಬಟ್ಟೆಗಳನ್ನುಧರಿಸುತ್ತಾನೋಹಾಗೆಯೇಜೀವಾತ್ಮನುಹಳೆಯದಾದ ಶರೀರವನ್ನು ಕಳಚಿಟ್ಟು ಬೇರೆ ಹೊಸ ಶರೀರವನ್ನು ಪಡೆಯುತ್ತಾನೆ"

ಜಾತಸ್ಯಹಿ ಧ್ರುವೋಮೃತ್ಯುರ್ಧ್ರುವಂ ಜನ್ಮಮೃತಸ್ಯ ಚ।
ತಸ್ಮಾದ ಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ।।

"ಹುಟ್ಟಿದವನ ಮರಣವು ನಿಶ್ಚಿತವಾಗಿದೆ ಮತ್ತು ಸತ್ತವನ ಮರುಹುಟ್ಟು ಕೂಡ ನಿಶ್ಚಿತವಾಗಿದೆ. ಆದ್ದರಿಂದ ಈ ಪರಿಹಾರೋಪಾಯವಿಲ್ಲದ ವಿಷಯದಲ್ಲಿ ನೀನು ಶೋಕಿಸುವ ಅಗತ್ಯವಿಲ್ಲ."

ಹಿಂದು ಎನ್ನುವಾಗ ಅವನಲ್ಲಿ ಕೆಲವು ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು ಇರಬೇಕಾಗುತ್ತದೆ. ಅವೇ ಓರ್ವ ಹಿಂದುವಿನ ಅಸ್ಮಿತೆ ಅಥವಾ ಗುರುತು–ಪರಿಚಯ (Identity) ಎನಿಸಿಕೊಳ್ಳುತ್ತವೆ. ಹಿಂದುವಿನ ಅಥವಾ ಹಿಂದು ಧರ್ಮದ ವಿಶೇಷತೆಗಳೇನು ಎಂದು ವಿದೇಶಿಯರು, ಅನ್ಯಮತೀಯರು ಕೇಳಿದರೆ ಇಂದು ಅನೇಕ ಹಿಂದುಗಳೇ ಉತ್ತರಿಸುವ ಸ್ಥಿತಿಯಲ್ಲಿಲ್ಲ. ಆತ್ಮ ಶಾಶ್ವತ, ಅದಕ್ಕೆ ಅಳಿವಿಲ್ಲ, ಶರೀರಕ್ಕೆ ಅಳಿವಿದೆ. ಸಾವಿನ ನಂತರ ಜೀವಾತ್ಮ ತಾನು ಮಾಡಿರುವ ಪಾಪ–ಪುಣ್ಯಗಳ ಫಲವನ್ನನುಭವಿಸಲು ಬೇರೊಂದು ಶರೀರವನ್ನು ಧಾರಣೆ ಮಾಡುತ್ತದೆ. ಅಲ್ಲವಾದರೆ ಈ ಭೌತಿಕ ಜಗತ್ತಿನಲ್ಲಿ ಅನೇಕರು ಭೌತಿಕ ಸುಖವನ್ನನುಭವಿಸುವುದು, ಇನ್ನು ಕೆಲವರು ಭೌತಿಕ ಜೀವನದಲ್ಲಿ ಬಹಳ ಕಷ್ಟಗಳಲ್ಲಿ, ಬಡತನದಲ್ಲಿ ತೊಳಲಾಡುತ್ತಿರುವುದಕ್ಕೆ ಉತ್ತರ ಸಿಗುವುದಿಲ್ಲ. ತಾನು ಮಾಡಿದ ಪಾಪಕರ್ಮ–ಪುಣ್ಯಕರ್ಮಗಳನ್ನು ಭೋಗಿಸಲೆಂದೇ ಜೀವಾತ್ಮವು ಬೇರೆ ಬೇರೆ ಜನ್ಮಗಳನ್ನು ಪಡೆಯುತ್ತದೆ. ಬಸವಣ್ಣನವರು ಹೇಳುತ್ತಾರೆ "ಸ್ಥಾವರಕ್ಕಳಿವುಂಟು ಜಂಗಮಕೆ ಅಳಿವಿಲ್ಲ" ಹುಟ್ಟು ಸಾವು ಎಂಬುದು ಕೇವಲ ಮನುಷ್ಯ ಜೀವಿಗಳಿಗೆ ಮಾತ್ರ ಸೀಮಿತವಲ್ಲ. ಎಲ್ಲ ಮೃಗ, ಪಕ್ಷಿ, ಜಂತು, ಕೀಟ, ಸಸ್ಯವರ್ಗಗಳಿಗೂ ಅನ್ವಯಿಸುತ್ತದೆ. ಅದರೊಂದಿಗೆ ಕರ್ಮಸಿದ್ಧಾಂತವೂ ಅನ್ವಯಿಸುತ್ತದೆ. ಪ್ರತಿಯೊಂದು ಕ್ರಿಯೆಗೂ ಪ್ರತಿಕ್ರಿಯೆ ಎಂಬುದಿದೆ. ಇದು ನ್ಯೂಟನ್ ಹೇಳಿದ ವೈಜ್ಞಾನಿಕ ಸೂತ್ರ. ಇದು ಭೌತಿಕ ಲೋಕಕ್ಕೆ ಹೇಗೆ ಅನ್ವಯವಾಗುತ್ತದೋ ಹಾಗೆ ಆಧ್ಯಾತ್ಮಿಕ ಲೋಕಕ್ಕೂ ಅನ್ವಯವಾಗುತ್ತದೆ. ಕೆಟ್ಟ ಕರ್ಮಕ್ಕೆ ಕೆಟ್ಟ ಫಲ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ. ಬಿತ್ತಿದಂತೆ ಬೆಳೆ.

ದೃಷ್ಟಿಗೋಚರವಾದ ಈ ಭೌತಿಕ ಜಗತ್ತನ್ನು ನಡೆಸುವುದು ಇದರ ಹಿಂದಿರುವ ಅಗೋಚರವಾದ ಒಂದು ಸೂಕ್ಷ್ಮ ಶಕ್ತಿ. ಅದನ್ನೇ ಪರಮಾತ್ಮ, ಬ್ರಹ್ಮ, ದೇವರು ಎಂದೆಲ್ಲ ಕರೆದಿದ್ದಾರೆ. ಆ ಮೂಲಶಕ್ತಿ ಸ್ವತಃ ಏನು ಮಾಡುವುದಿಲ್ಲ. ಈ ಸೃಷ್ಟಿಯನ್ನು ಪಾಲಿಸಲು ಅನೇಕ ಅಗೋಚರ ಶಕ್ತಿಗಳನ್ನು ರಚಿಸಿಟ್ಟಿದ್ದಾನೆ. ಗುರುತ್ವಾಕರ್ಷಣ ಶಕ್ತಿ, ಅಣುಶಕ್ತಿ, ವಿದ್ಯುತ್ ಶಕ್ತಿ, ವಿಕಿರಣ, ಬೆಳಕು, ಉಷ್ಣ ಇತ್ಯಾದಿ. ಭೌತಿಕ ಜೀವನದಲ್ಲಿ ಇವುಗಳು ಅಗೋಚರವಾಗಿದ್ದರೂ ಅವುಗಳ ಅನುಭವ ಆಗುತ್ತದೆ. ಅದೇ ರೀತಿ ಜೀವಾತ್ಮದ ನಿಯಂತ್ರಣಕ್ಕಾಗಿ ಮನಸ್ಸು, ಬುದ್ಧಿ, ಪ್ರಾಣ ಎಂಬ ಶಕ್ತಿಗಳನ್ನು ದೇವರು ನೀಡಿದ್ದಾನೆ. ಇನ್ನು ಮಾನವನು ಮಾಡಿದ ಕರ್ಮಗಳಿಗೆ – ಅವುಗಳ ಫಲಗಳ ನಿಯಂತ್ರಣಕ್ಕಾಗಿ ವಿಧಿ ಎಂಬ ಶಕ್ತಿಯನ್ನು ಇಟ್ಟಿದ್ದಾನೆ. ಜೀವಿ ಮಾಡಿದ ಪ್ರತಿಯೊಂದು ಕರ್ಮವೂ ಆತನ ಒಳಮನಸ್ಸು ಅಥವಾ ಚಿಪ್ಸ್–ಹಾರ್ಡ್‌ಡಿಸ್ಕ್‌ನಲ್ಲಿ ದಾಖಲಾಗುತ್ತದೆ. ಒಳ್ಳೆ ಕರ್ಮಗಳ ಫೈಲ್ ಬೇರೆ, ಕೆಟ್ಟ ಕರ್ಮಗಳ ಫೈಲ್ ಬೇರೆ. ಇದನ್ನು ನಿಯಂತ್ರಿಸುವ ಶಕ್ತಿಗೆ ಚಿತ್ರಗುಪ್ತ ಎಂಬ ಹೆಸರು. ಪಾಪ–ಪುಣ್ಯಗಳ ಫಲಾಫಲಗಳನ್ನು ನೀಡುವ ಅಂದರೆ ನ್ಯಾಯ ದಾನ ಮಾಡುವ ಶಕ್ತಿಗೆ ಯಮಧರ್ಮ ಎಂದು ಹೆಸರು.



ಈ ಭೌತಿಕ ಜಗತ್ತಿನ ನ್ಯಾಯಾಲಯಗಳಲ್ಲಿ ನ್ಯಾಯ ಸಿಗದೇ ಹೋಗಬಹುದು. ನಿರಪರಾಧಿಗೆ ಶಿಕ್ಷೆ ಆಗಬಹುದು. ಅಪರಾಧಿಗೆ ನಿರಪರಾಧಿ ಎಂದು ಬಿಡುಗಡೆಯಾಗಬಹುದು. ಆದರೆ ಮೇಲಿನ ನ್ಯಾಯಾಲಯದಲ್ಲಿ ಕರ್ಮಗಳಿಗನುಗುಣವಾದ ಶಿಕ್ಷೆ–ರಕ್ಷೆ ಕರಾರುವಾಕ್ಕಾಗಿ ಲಭಿಸುತ್ತದೆ.

ಕೆಲವರು ಕೆಟ್ಟವರು, ಪಾಪಿಗಳು ತುಂಬ ಶ್ರೀಮಂತರಾಗಿ, ಶಾಸಕರು, ಸಚಿವರು, ಉದ್ಯಮಿಗಳು, ಅಧಿಕಾರಿಗಳು ಆಗಿ ಮೆರೆಯುವುದನ್ನು ಕಾಣುತ್ತೇವೆ. ಇನ್ನು ಕೆಲವರು ಹುಟ್ಟಿದಾರಭ್ಯ ಯಾವುದೇ ಕೆಟ್ಟ ಕರ್ಮಗಳನ್ನು ಮಾಡದೇ ಸಜ್ಜನರಾಗಿದ್ದರೂ ತುಂಬ ಕಷ್ಟ, ಬಡತನಗಳಿಂದ ತೊಳಲಾಡುತ್ತಿರುವುದನ್ನೂ ನೋಡುತ್ತೇವೆ. ಕೆಲವರು ನಿರಂತರ ಸಿಗರೇಟ್ –ಬೀಡಿ ಸೇದುತ್ತಿರುವವರಿಗೆ ಕ್ಯಾನ್ಸರ್ ಬರದೆ ಹಾಯಾಗಿರುವುದನ್ನು, ಯಾವುದೇ ಬೀಡಿ, ಸಿಗರೇಟು, ತಂಬಾಕು ಸೇದದವರಿಗೆ ಕ್ಯಾನ್ಸರ್ ಬರುವುದನ್ನು ನೋಡುತ್ತೇವೆ. ನಾವು ಅವರ ಈ ಪ್ರಸಕ್ತ ಜನ್ಮದ ಕರ್ಮಗಳನ್ನು ಮಾತ್ರ ಗಮನಿಸುವುದರಿಂದ ಈ ಅನುಮಾನ ಮೂಡುವುದು ಸಹಜ. ಆದರೆ ಆತನ ಹಿಂದಿನ ಜನ್ಮಗಳಲ್ಲಿ ಆತ ತುಂಬ ಸಿಗರೇಟ್ ಸೇದಿರಬಹುದು. ಅದೇರೀತಿ ಶ್ರೀಮಂತ ಹಿಂದಿನ ಜನ್ಮಗಳ ಪುಣ್ಯಕಾರ್ಯಗಳ ಫಲವನ್ನು ಈ ಜನ್ಮದಲ್ಲಿ ಕೆಟ್ಟವನಾದರೂ ಅನುಭವಿಸುತ್ತಾನೆ. ಆದರೆ ಈ ಜನ್ಮದಲ್ಲಿ ಆತ ಮಾಡಿದ ಕುಕರ್ಮಗಳು, ಸಿಗರೇಟ್ ಸೇವನೆ ಆತನ ಈ ಜನ್ಮದ ಅಂತ್ಯದೊಳಗೇ ಫಲ ನೀಡಬಹುದು ಅಥವಾ ಮುಂದಿನ ಜನ್ಮದಲ್ಲಿ ಖಂಡಿತ ಫಲ ನೀಡಿ ಆತ ಪಡಬಾರದ ಕಷ್ಟಗಳನ್ನು ಪಡುತ್ತಾನೆ. ಕ್ಯಾನ್ಸರ್‌ಗೆ ತುತ್ತಾಗುತ್ತಾನೆ. ಅನೇಕ ಪ್ರಜ್ಞಾವಂತ ವೈದ್ಯರು ಹೇಳುವುದುಂಟು "ನಮ್ಮ ಬಳಿ ಬರುವ ರೋಗಿಗಳ ಎಲ್ಲ ಖಾಯಿಲೆಗಳನ್ನು ನಾವು ಔಷಧಿ, ಚಿಕಿತ್ಸೆಗಳ ಮೂಲಕ ಗುಣಪಡಿಸಲಾಗುವುದಿಲ್ಲ. ಆತನ ಹಿಂದಿನ ಜನ್ಮದ ಪುಣ್ಯ– ಅದೃಷ್ಟವಿದ್ದರೆ ಆತನಿಗೆ ಯೋಗ್ಯ ಡಾಕ್ಟರ್, ಔಷಧಿ, ಚಿಕಿತ್ಸೆ, ಆಸ್ಪತ್ರೆ ಲಭ್ಯವಾಗುತ್ತದೆ. ಹಾಗೂ ಆತ ಆ ಪುಣ್ಯಬಲದಿಂದ ಗುಣಮುಖನಾಗುತ್ತಾನೆ. ಆದರೆ ಆತನ ಹಿಂದಿನ ಜನ್ಮದ ಪಾಪಕರ್ಮಗಳನ್ನು ಹೊತ್ತುಕೊಂಡು ಬಂದಿದ್ದರೆ ಆತನನ್ನು ಯಾವ ಔಷಧಿ, ವೈದ್ಯ, ಆಸ್ಪತ್ರೆ ಗುಣಪಡಿಸಲಾರದು. ಆತ ಸಾಯಲೂಬಹುದು. ಗುಣವಾದಾಗ ಎಲ್ಲರೂ ಹೊಗಳುತ್ತಾರೆ. ಗುಣವಾಗದೇ ಸತ್ತರೆ ಆ ವೈದ್ಯನ ಮೇಲೆ ಆಸ್ಪತ್ರೆ ಮೇಲೆ ಸಂಬಂಧಿಕರು ಹಲ್ಲೆ ಮಾಡುತ್ತಾರೆ. ನಾವು ವೈದ್ಯರು ಕೇವಲ ಆ ವಿಧಿಯ ಕೈಯಲ್ಲಿನ ಉಪಕರಣಗಳು ಮಾತ್ರ. ಅಂತಿಮವಾಗಿ ರೋಗಿಯ ಸಾವು–ಬದುಕು, ಗುಣ–ಅವಗುಣ ಎಲ್ಲವೂ ಅವನದೇ. ಅದೃಷ್ಟದಂತೆ ಆಗುತ್ತದೆ. ಈ ಸತ್ಯವನ್ನು ಅರಿಯದವರು ವೈದ್ಯರನ್ನು ದೂರುತ್ತಾರೆ".

ಗರುಡ ಪುರಾಣ ಎಂಬುದಿದೆ. ಅದರಲ್ಲಿ ಯಾವ್ಯಾವ ಪಾಪಕರ್ಮಗಳಿಗೆ ಯಾವ್ಯಾವ ಶಿಕ್ಷೆಗಳು ಎಂಬ ವಿವರಣೆ ಇದೆ. ಅದನ್ನು ಓದಿದರೆ ಭಯವಾಗುತ್ತದೆ. ಯಮಲೋಕ, ಅಲ್ಲಿನ ಕುಂಭೀಪಾಕ ನರಕ, ಬಿಸಿ ಕುದಿಯುವ ಎಣ್ಣೆಯಲ್ಲಿ ಮುಳುಗಿಸಿ ತೆಗೆಯುವುದು, ಯಮದೂತರು ಕಷ್ಟಕೊಡುವುದು ಎಲ್ಲವನ್ನೂ ಓದಿದಾಗ ಕೆಲವರಿಗೆ ಭಯವಾದರೆ, ಕೆಲವರು ಅದೆಲ್ಲ ಕಟ್ಟುಕಥೆ ಎಂದು ನಂಬದಿರುವವರೂ ಇದ್ದಾರೆ. ಗರುಡ ಪುರಾಣ ಇಂದಿನ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಂತೆ. ಯಾವ್ಯಾವ ಅಪರಾಧಕ್ಕೆ ಯಾವ್ಯಾವ ಶಿಕ್ಷೆ ಎಂದು ಬರೆಯಲಾಗಿದೆ. ಕೆಲವು ಅಪರಾಧಗಳಿಗೆ ಕಠಿಣ, ಸಶ್ರಮ ಶಿಕ್ಷೆ, ಕೆಲವು ಅಪರಾಧಿಗಳಿಗೆ ಮರಣದಂಡನೆ ಅಥವಾ ಗಲ್ಲು ಶಿಕ್ಷೆ, ಕೆಲವಕ್ಕೆ ಜೀವಾವಧಿ ಶಿಕ್ಷೆ ಇತ್ಯಾದಿ ಶಿಕ್ಷೆಗಳು. ಅದರಿಂದ ಕೆಲವರು ಭಯಪಟ್ಟು ಅಪರಾಧ ಮಾಡಲು ಹೆದರಿ ಅಪರಾಧಗಳಿಂದ ದೂರವಿರುತ್ತಾರೆ. ಯಾವುದೇ ಅಪರಾಧ ಮಾಡದ ಸಾತ್ವಿಕ –ಸಜ್ಜನರಿಗೆ ಇದರಿಂದ ಯಾವ ಭಯವೂ ಇರುವುದಿಲ್ಲ. ಪ್ರಾಯಶಃ ಗರುಡ ಪುರಾಣ ಮನುಷ್ಯರಲ್ಲಿ ಪಾಪಕರ್ಮಗಳನ್ನು ಮಾಡದಂತೆ ಭಯ ಹುಟ್ಟಿಸಲು ಬರೆದಿರುವ ಪುರಾಣ ಗ್ರಂಥವಾಗಿರಬಹುದು. ಅವರಲ್ಲಿರುವ ಘೋರ ಶಿಕ್ಷೆಗಳ ಬಗ್ಗೆ ಹೇಳಬೇಕೆಂದರೆ ಅದು ಅವರವರ ನಂಬಿಕೆಗೆ ಬಿಟ್ಟ ವಿಚಾರ. ಸತ್ತವರ್ಯಾರೂ ವಾಪಸ್ ಬಂದು ಹೇಳಿದವರಿಲ್ಲ.

ವಿಶ್ವಕಪ್ ಫುಟ್ಬಾಲ್ ಮೇಲೆ ಹಲವು ಬಿಕ್ಕಟ್ಟುಗಳ ಕಾರ್ಮೋಡ

▸ ಕೆ.ಆರ್. ಕಾಮತ್

ವಿಶ್ವದಾದ್ಯಂತ ಕೋಟ್ಯಂತರ ಫುಟ್ಬಾಲ್ ಕ್ರೀಡಾಪ್ರೇಮಿಗಳು ಅತ್ಯಂತ ಕಾತರದಿಂದ ಎದುರು ನೋಡುತ್ತಿರುವ 'ವಿಶ್ವಕಪ್ ಫುಟ್ಬಾಲ್–2026'ಗೆ ಕ್ಷಣಗಣನೆ ಆರಂಭಗೊಂಡಿದೆ. ಜೂನ್ 11ರಂದು ಪಂದ್ಯಾವಳಿಗೆ ಚಾಲನೆ ದೊರಕಲಿದೆ. ಪಂದ್ಯಕೂಟಗಳ ಆಯೋಜಕರು ದಾಖಲೆ ಮಟ್ಟದಲ್ಲಿ ಬಾರೀ ಆದಾಯ ನಿರೀಕ್ಷಿಸುತ್ತಿರುವ ಹೊತ್ತಲ್ಲಿ ಪಂದ್ಯಕೂಟದ ಸಿದ್ಧತೆಗಳ ಮೇಲೆ ರಾಜಕೀಯ ಆತಂಕ ಮತ್ತು ಪಶ್ಚಿಮ ಏಷ್ಯಾದ ಯುದ್ಧದ ಕಾರ್ಮೋಡಗಳು ಕವಿದಿರುವುದು ಮಾತ್ರ ವಿಪರ್ಯಾಸ.

ಈ ಬಾರಿಯ ವಿಶ್ವಕಪ್ ಪಂದ್ಯಕೂಟಗಳನ್ನು ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋ ದೇಶಗಳು ಜಂಟಿಯಾಗಿ ಆಯೋಜಿಸುತ್ತಿವೆ. ಆಡಲಿರುವ ಒಟ್ಟು ಪಂದ್ಯಗಳು 104. ಈ ಪೈಕಿ 78 ಪಂದ್ಯಗಳು ಅಮೆರಿಕದಲ್ಲಿ ನಡೆದರೆ, ಇನ್ನುಳಿದ 26 ಪಂದ್ಯಗಳು ಕೆನಡಾ ಮತ್ತು ಮೆಕ್ಸಿಕೋ ದೇಶಗಳಲ್ಲಿ ನಡೆಯಲಿವೆ. ಎಲ್ಲಾ ಪಂದ್ಯಗಳು ಮೂರು ದೇಶಗಳಲ್ಲಿನ 16 ಕ್ರೀಡಾಂಗಣಗಳಲ್ಲಿ ಆಡಲಾಗುತ್ತದೆ. ಮೊದಲ ಪಂದ್ಯವು ಜೂನ್ 11ರಂದು ಮೆಕ್ಸಿಕೋ ರಾಜಧಾನಿಯಲ್ಲಿ ಆತಿಥೇಯ ಮೆಕ್ಸಿಕೋ ಮತ್ತು ದಕ್ಷಿಣ ಆಫ್ರಿಕಾ ಮಧ್ಯೆ ನಡೆಯಲಿದೆ. ಫೈನಲ್ ಪಂದ್ಯವು ಜುಲೈ 19ರಂದು ಅಮೆರಿಕದ ಮೆಟ್‌ಲೈಫ್ ಸ್ಟೇಡಿಯಂನಲ್ಲಿ ಸಂಪನ್ನಗೊಳ್ಳಲಿದೆ.



ವಿಶ್ವಕಪ್ ಆರಂಭಕ್ಕೆ ಕೆಲವೇ ದಿನಗಳು ಉಳಿದಿರುವಂತೆಯೆ ಮೆಕ್ಸಿಕೋ ಆಂತರಿಕ ಬಿಕ್ಕಟ್ಟು ಎದುರಿಸುತ್ತಿದೆ. ಅಲ್ಲಿ ಟೀಚರ್‌ಗಳು ಮತ್ತು ಇನ್ನಿತರ ಕೆಲವು ಸಂಘಟನೆಗಳು ಕೆಲದಿನಗಳಿಂದ ಭಾರೀ ಪ್ರತಿಭಟನೆ ನಡೆಸುತ್ತಿವೆ. ತಮ್ಮ ಬೇಡಿಕೆ ಈಡೇರಿಸದಿದ್ದರೆ ವಿಶ್ವಕಪ್ ಆರಂಭದ ದಿನದಂದು ಭಾರೀ ಪ್ರಮಾಣದ ಪ್ರತಿಭಟನೆ ನಡೆಸುವುದಾಗಿ ಅವು ಸರಕಾರಕ್ಕೆ ಎಚ್ಚರಿಕೆ ನೀಡಿವೆ. ಬುಧವಾರ ನಡೆದ ಪ್ರತಿಭಟನೆಯ ವೇಳೆ ನಗರದಲ್ಲಿ ನಿಲ್ಲಿಸಿದ್ದ ಫುಟ್ಬಾಲ್ ಆಟಗಾರರ ಪ್ರತಿಕೃತಿಗಳನ್ನೆಲ್ಲ ಪ್ರತಿಭಟನೆಕಾರರು ನೆಲಕ್ಕುರುಳಿಸಿದ್ದಾರೆ.

ಇತ್ತೀಚೆಗೆ ಮೆಕ್ಸಿಕೋದಲ್ಲಿ ಮಾದಕಜಾಲ ವಿರೋಧಿ ಕಾರ್ಯಾಚರಣೆ ಸಂದರ್ಭದಲ್ಲಿ ಸುಮಾರು 24 ಮಂದಿ ಜೀವ ಕಳೆಕೊಂಡಿರುವ ಘಟನೆ ಕೂಡಾ ಮೆಕ್ಸಿಕೋದಲ್ಲಿ ಭದ್ರತೆಯ ಆತಂಕವನ್ನು ಹುಟ್ಟು ಹಾಕಿದೆ.

ಇದರ ಜತೆಗೇ ಇರಾನ್ ಸಮರ ನಡೆಯುತ್ತಿರುವುದು ಕೂಡಾ ವಿಶ್ವಕಪ್ ಫುಟ್ಬಾಲ್ ಮೇಲೆ ಕರಿನೆರಳು ಬೀರಿದೆ. ಇರಾನ್ ಕೂಡಾ ವಿಶ್ವಕಪ್‌ಗೆ ತೇರ್ಗಡೆ ಪಡೆದಿದೆಯಾದರೂ, ಅಮೆರಿಕವು ಆತಿಥೇಯ ರಾಷ್ಟ್ರವಾಗಿರುವುದರಿಂದ ವಿಶ್ವಕಪ್‌ನಲ್ಲಿ ಭಾಗವಹಿಸುವಲ್ಲಿ ಸಂಕಷ್ಟ ಎದುರಿಸುತ್ತಿದೆ.

ಇರಾನ್ ತಂಡವು ಅಮೆರಿಕದಲ್ಲಿ ಕೆಲವು ಪಂದ್ಯಗಳನ್ನು ಆಡಬೇಕಿದೆ. ತಂಡವು ಮೆಕ್ಸಿಕೋದಲ್ಲಿ ತಂಗಲಿದ್ದು ಅಲ್ಲಿಂದಲೇ ಅಮೆರಿಕಕ್ಕೆ ತೆರಳಿ ಆಟ ಮುಗಿದ ಕೂಡಲೇ ಮೆಕ್ಸಿಕೋಗೆ ಮರಳಲಿದೆ. ಆದರೆ ಇರಾನ್ ತಂಡದ ಸಹಸಿಬ್ಬಂದಿಗಳನ್ನು ಸಂಪೂರ್ಣ ತಪಾಸಣೆ ನಡೆಸಲಾಗುವುದು, ಇರಾನಿನ ಐಆರ್‌ಜಿಸಿ ಜತೆಗೆ ಸಂಪರ್ಕ ಇರುವ ಯಾರನ್ನೂ ಅಮೆರಿಕದೊಳಕ್ಕೆ ಬಿಟ್ಟುಕೊಡುವುದಿಲ್ಲ ಎಂದು ಅಮೆರಿಕ ತಿಳಿಸಿದೆ.

ಇದೇವೇಳೆ, ವಿಶ್ವಕಪ್–26ರ ಸಹ ಆಯೋಜಕ ದೇಶಗಳಾದ ಕೆನಡಾ ಮತ್ತು ಮೆಕ್ಸಿಕೋಗಳಿಗೆ ಕೂಡಾ ಅಮೆರಿಕದೊಂದಿಗೆ ಸಂಬಂಧ ಚೆನ್ನಾಗಿಲ್ಲ. ಟ್ರಂಪ್ ಈ ಎರಡು ದೇಶಗಳ ಮೇಲೆ ತೆರಿಗೆ ದಂಡ ವಿಧಿಸಿರುವುದು ಸಂಬಂಧವನ್ನು ಹದಗೆಡಿಸಿದೆ.

ಅಮೆರಿಕದಲ್ಲಿ ವಿದೇಶಗಳಿಂದ ಬರುವವರ ಮೇಲೆ ಹೆಚ್ಚಿನ ನಿಗಾ ಇಡುತ್ತಿರುವುದು, ವಿಮಾನನಿಲ್ದಾಣದಿಂದಲೇ ಕೆಲವರನ್ನು ವಾಪಸ್ ಕಳಿಸುತ್ತಿರುವುದು ನಡೆಯುತ್ತಿರುವುದರಿಂದ ಫುಟ್ಬಾಲ್ ವೀಕ್ಷಿಸಲೆಂದು ವಿದೇಶಗಳಿಂದ ಬರುವವರ ಸಂಖ್ಯೆ ಕಡಿಮೆಯಾಗುವುದು ಖಂಡಿತ. ವಿದೇಶಿ ಫುಟ್ಬಾಲ್ ಪ್ರೇಮಿಗಳಿಗೆ ಅಮೆರಿಕದ ವೀಸಾ ಸಿಗುವ ಕುರಿತಂತೆಯೂ ಅನಿಶ್ಚಿತತೆ ಉಂಟಾಗಿದೆ.

48 ರಾಷ್ಟ್ರಗಳು, 104 ಪಂದ್ಯಗಳು

ಇದೇ ಮೊದಲ ಬಾರಿಯಾಗಿ ವಿಶ್ವದ 48 ದೇಶಗಳ ತಂಡಗಳು ವಿಶ್ವಕಪ್ ಪಂದ್ಯಕೂಟಗಳಲ್ಲಿ ಸ್ಪರ್ಧಿಸುತ್ತಿವೆ. ಕಳೆದ ಬಾರಿ ಕತಾರ್‌ನಲ್ಲಿ ಜರುಗಿದ್ದ ವಿಶ್ವಕಪ್‌ನಲ್ಲಿ ವಿಶ್ವದ 32 ತಂಡಗಳು ಸ್ಪರ್ಧಿಸಿದ್ದವು. ಒಟ್ಟು ಪಂದ್ಯಗಳು 64ರಿಂದ 104ಕ್ಕೆ ಏರಿಕೆಯಾಗಿವೆ. ತಲಾ 4 ತಂಡಗಳ 12 ಗುಂಪುಗಳನ್ನು ಮಾಡಿ ಆರಂಭಿಕ ಪಂದ್ಯಗಳನ್ನು ಆಡಿಸಲಾಗುವುದು. ಏಷ್ಯಾದಿಂದ ಆಸ್ಟ್ರೇಲಿಯಾ, ಇರಾನ್, ಜಪಾನ್, ಜೋರ್ಡಾನ್, ಕತಾರ್, ಸೌದಿ ಅರೇಬಿಯಾ, ದಕ್ಷಿಣ ಕೊರಿಯಾ ಮತ್ತು ಉಜ್ಬೇಕಿಸ್ತಾನ ಮುಂತಾದ ಎಂಟು ದೇಶಗಳು 2026ರ ವಿಶ್ವಕಪ್‌ನಲ್ಲಿ ಆಡಲು ನೇರ ಅರ್ಹತೆ ಪಡೆದುಕೊಂಡಿವೆ. ಈ ಪೈಕಿ ಜೋರ್ಡಾನ್ ಮತ್ತು ಉಜ್ಬೇಕಿಸ್ತಾನ್ ಮೊದಲ ಬಾರಿ ಫಿಫಾದಲ್ಲಿ ಪದಾರ್ಪಣೆ ಮಾಡುತ್ತಿವೆ.

2022ರಲ್ಲಿ ಕತಾರ್‌ನಲ್ಲಿ ಜರುಗಿದ್ದ ವಿಶ್ವಕಪ್ ಪಂದ್ಯಕೂಟಗಳ ಸಮಯದಲ್ಲಿ ಫಿಫಾ 7 ಬಿಲಿಯ ಡಾಲರ್ ಆದಾಯ ಗಳಿಸಿದ್ದರೆ, ಅದು ಈ ಬಾರಿ 11 ಬಿಲಿಯ ಡಾಲರ್ ಆದಾಯ ನಿರೀಕ್ಷಿಸುತ್ತಿದೆ. ಆದರೆ ಟಿಕೆಟ್ ಬೆಲೆಗಳನ್ನು ಹತ್ತಾರು ಪಟ್ಟು ಹೆಚ್ಚಿಸಿರುವುದು ಫುಟ್ಬಾಲ್ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಜುಲೈ 19ರಂದು ಮೆಟ್‌ಲೈಫ್ ಸ್ಟೇಡಿಯಂನಲ್ಲಿ ಜರಗಲಿರುವ ಫೈನಲ್ ಪಂದ್ಯದ ಟಿಕೆಟ್ ದರಗಳು 2,030 ಡಾಲರ್‌ನಿಂದ 6,370 ಡಾಲರ್‌ಗಳಷ್ಟಿವೆ. 2022ರಲ್ಲಿ ಕತಾರ್‌ನಲ್ಲಿ ಜರುಗಿದ ಫೈನಲ್ ಪಂದ್ಯದ ಟಿಕೆಟಿನ ದರ ಕೇವಲ 206 ಡಾಲರ್‌ನಿಂದ 1067 ಡಾಲರ್ ತನಕ ಇದ್ದವು. ಮೆಕ್ಸಿಕೊದಲ್ಲಿ ಜರಗಲಿರುವ ಆರಂಭಿಕ ಪಂದ್ಯದ ಟಿಕೆಟ್‌ನ ದರ 1,500 ಡಾಲರ್‌ನಿಂದ 2,735 ಡಾಲರ್. ಇನ್ನು ಗ್ರೂಪ್ ಸ್ಟೇಜ್ ಪಂದ್ಯಗಳಿಗೆ 100 ಡಾಲರ್‌ನಿಂದ 575 ಡಾಲರ್ ತನಕದ ಟಿಕೆಟ್‌ಗಳು ಲಭ್ಯ ಇವೆ. ಸೆಮಿ ಫೈನಲ್ಸ್ ಟಿಕೆಟಿನ ದರ 2780 ಡಾಲರ್! ಫಿಫಾದ ಟಿಕೆಟ್ ದರ ನೀತಿಯನ್ನು ಅನೇಕ ಫುಟ್ಬಾಲ್ ಅಭಿಮಾನಿ ಸಂಘಟನೆಗಳು ಟೀಕಿಸಿವೆ. ಇಂತಹ ಫುಟ್ಬಾಲ್ ಬೆಂಬಲ ಗುಂಪುಗಳಿಗೆ ಸೀಮಿತ ಸಂಖ್ಯೆಯಲ್ಲಿ 60 ಡಾಲರ್ ದರದ ಟಿಕೆಟ್ ನೀಡಲು ಫಿಫಾ ನಿರ್ಧರಿಸಿದೆ.

ಇರಾನ್ ಸಮರ, ಇಂಧನ ಬಿಕ್ಕಟ್ಟು ಮೊದಲಾದವು ವಿಶ್ವಕಪ್ ಫುಟ್ಬಾಲ್ ಮೇಲೆ ಪರಿಣಾಮ ಬೀರುವುದೆ ಎಂದು ಕಾದು ನೋಡಬೇಕು.


ಕಾಲ್ಪನಿಕ ವಾರ್ಷಿಕ ವೇತನ ಬಡ್ತಿ ಮಂಜೂರಿಗೆ ಆದೇಶ

• **ಬೆಂಗಳೂರು:** ವಾರ್ಷಿಕ ವೇತನ ಬಡ್ತಿಯನ್ನು ಗಳಿಸಿದ ದಿನಾಂಕದಂದು ವಯೋನಿವೃತ್ತಿ ಅಥವಾ ಸ್ವಯಂ ನಿವೃತ್ತಿ ಹೊಂದುವ ರಾಜ್ಯ ಸರ್ಕಾರಿ ನೌಕರರಿಗೆ ಅವರ ಮಾಸಿಕ ಪಿಂಚಣಿ ನಿಗದಿಪಡಿಸುವ ಉದ್ದೇಶಕ್ಕಾಗಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಕಾಲ್ಪನಿಕವಾಗಿ ಮಂಜೂರು ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕಾಲ್ಪನಿಕ ವಾರ್ಷಿಕ ವೇತನ ಬಡ್ತಿಯನ್ನು ನೌಕರರು ಕೊನೆಯದಾಗಿ ಪಡೆದ ವೇತನಕ್ಕೆ ಸೇರಿಸಿ ಕೇವಲ ಮಾಸಿಕ ಪಿಂಚಣಿ ಲೆಕ್ಕಾಚಾರದ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಲಾಗುತ್ತದೆ. ಆದರೆ ನಿವೃತ್ತಿ ಉಪದಾನ, ಪರಿವರ್ತಿತ ಪಿಂಚಣಿ, ಗಳಿಕೆ ರಜೆ ನಗದೀಕರಣ ಸೇರಿದಂತೆ ಇತರ ಯಾವುದೇ ನಿವೃತ್ತಿ ಅಥವಾ ಸೇವಾಂತ್ಯ ಸೌಲಭ್ಯಗಳ ಲೆಕ್ಕಾಚಾರಕ್ಕೆ ಇದನ್ನು ಪರಿಗಣಿಸುವುದಿಲ್ಲ. ಅಂತಹ ಸೌಲಭ್ಯಗಳನ್ನು ನೌಕರರು ವಾಸ್ತವವಾಗಿ ಪಡೆದ ಅಂತಿಮ ವೇತನದ ಆಧಾರದ ಮೇಲೆಯೇ ಲೆಕ್ಕ ಹಾಕಲಾಗುತ್ತದೆ ಎಂದು ಆರ್ಥಿಕ ಇಲಾಖೆ ಉಪ ಕಾರ್ಯದರ್ಶಿ ಎನ್. ವನಿತಾ ತಿಳಿಸಿದ್ದಾರೆ.

ನೌಕರರ ಸಂಘದಿಂದ ಸ್ವಾಗತ

ರಾಜ್ಯ ಸರ್ಕಾರದ ಈ ನಿರ್ಧಾರವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸ್ವಾಗತಿಸಿದ್ದು, ವಾರ್ಷಿಕ ವೇತನ ಬಡ್ತಿ ಪ್ರಾಪ್ತವಾಗುವ ದಿನಾಂಕದಂದು ನಿವೃತ್ತಿಯಾಗುವ ನೌಕರರಿಗೆ ಕಾಲ್ಪನಿಕ ವೇತನ ಬಡ್ತಿ ಮಂಜೂರು ಮಾಡುವಂತೆ ಸಂಘವು ಸಲ್ಲಿಸಿದ್ದ ಮನವಿಗೆ ಸರ್ಕಾರ ಸ್ಪಂದಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದೆ. ಸಂಘವು ಈ ಸಂಬಂಧ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದು, ವಿಷಯದ ಕುರಿತು ಸಕಾರಾತ್ಮಕ ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದೆ.

ರಾಮ ಬಾಣ



ಸಚಿವರ 2ನೇ ಪಟ್ಟಿಯಲ್ಲಿ ನನ್ನ ಹೆಸರಿರಲಿದೆ: ಹ್ಯಾರಿಸ್

• **ಬೆಂಗಳೂರು:** ನೂತನ ಸರ್ಕಾರದ ಸಚಿವರ ಎರಡನೇ ಪಟ್ಟಿಯಲ್ಲಿ ನನ್ನ ಹೆಸರಿರಲಿದೆ ಎಂದು ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಆಶಯ ವ್ಯಕ್ತಪಡಿಸಿದರು.

ಬಿಡಿಎ ಆವರಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ನಮ್ಮ ಪಕ್ಷದಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ತೀರ್ಮಾನವನ್ನು ಪ್ರತಿಯೊಬ್ಬರೂ ಪಾಲಿಸಲೇಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಥಾನ ಬಿಟ್ಟುಕೊಡುವ ವಿಚಾರ ಸೇರಿದಂತೆ ಯಾವುದೇ ವಿಷಯದಲ್ಲೂ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದರು. ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಮುನಿಯಪ್ಪ ಅವರ ಅಸಮಾಧಾನದ ಕುರಿತು ಪ್ರತಿಕ್ರಿಯಿಸಿ, ರಾಮಲಿಂಗಾರೆಡ್ಡಿ ಹಿರಿಯ ನಾಯಕರು. ಅವರಿಗೆ ನೀರಾವರಿಯಂತಹ ಪ್ರಮುಖ ಖಾತೆಯನ್ನು ನೀಡಲಾಗಿದೆ. ಅವರ ಸೀನಿಯಾರಿಟಿಗೆ ತಕ್ಕಂತೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಆದಾಗ್ಯೂ, ಬೆಂಗಳೂರು ನಗರದ ಅಭಿವೃದ್ಧಿ ಕುರಿತು ಅವರಿಗೆ ಆಸಕ್ತಿ ಇರುವುದು ತಪ್ಪಲ್ಲ. ಆದರೆ, ಇಂತಹ ಆಂತರಿಕ ವಿಷಯಗಳನ್ನು ಮುಚ್ಚಿದ ಬಾಗಿಲ ಹಿಂದೆ ಚರ್ಚಿಸಿ ಮುಗಿಸಿಕೊಳ್ಳಬೇಕು ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಹೋರಾಟದ ಹಿನ್ನೆಲೆಯಿಂದ ಬಂದವರು. ಪಕ್ಷದಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಯನ್ನು ನಿವಾರಿಸುವ ಶಕ್ತಿ ಅವರಿಗಿದೆ. ಎಲ್ಲರನ್ನೂ ಸಮಾಧಾನಪಡಿಸಿ ಒಟ್ಟಿಗೆ ಕರೆದುಕೊಂಡು ಹೋಗುವ ವಿಶ್ವಾಸವಿದೆ ಎಂದರು. ಪಕ್ಷ ನನಗೆ ಇಂದು ಬಿಡಿಎ ಜವಾಬ್ದಾರಿ ನೀಡಿದೆ. ಬೆಂಗಳೂರು ನಗರಕ್ಕೆ 15 ಲಕ್ಷ ಗಿಡ ನೆಡುವಂತಹ ದೊಡ್ಡ ಕಾರ್ಯಕ್ರಮವನ್ನು ರೂಪಿಸಿ, ಅನುಷ್ಠಾನಕ್ಕೆ ತರುತ್ತಿದ್ದೇವೆ. ಬೆಂಗಳೂರಿಗೆ ನಾನೂ ಏನೋ ಕೊಡುಗೆ ನೀಡುತ್ತಿದ್ದೇನೆ ಎಂಬ ಸಂತೋಷ ನನಗಿದೆ. ಇದರ ಮುಂದೆ ಸಚಿವ ಸ್ಥಾನವೆಲ್ಲಾ ಏನೂ ಅಲ್ಲ. ಆದರೂ ಸಚಿವರ ಎರಡನೇ ಪಟ್ಟಿಯಲ್ಲಿ ನನ್ನ ಹೆಸರು ಖಂಡಿತ ಇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಿಡಿ ನುಡಿ

• **ವಾಸುದೇವರಾವ್ ಕಕ್ಕೆನೇಜಿ**

◈ ಕರ್ನಾಟಕದಲ್ಲಿ ನವ ಯುವ ಯುಗ ಆರಂಭವಾಗಲಿದೆ – **ಡಿಕೆಶಿ**
– ಹಾಗಾಗಲೆಂದು ಹಾರೈಸೋಣ, ಹಾಗಾಗದಿದ್ದಲ್ಲಿ ಹೊಸ ಬಾಟ್ಲಿಯಲ್ಲಿ ಹಳೇ ಮದ್ಯ ಅಂತ ಭಾವಿಸೋಣ!

ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ

ಪುಟ 1 ➡ ಆದರೀಗ ಜಲಸಂಪನ್ಮೂಲ ಖಾತೆ ಕೊಟ್ಟಿದ್ದಾರೆ. ನಮ್ಮ ಆಸಕ್ತಿಯಾಗಿ ಕೆಲಸ ಮಾಡಲು ಆಗಲ್ಲ. ಹೀಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದರು.

ನಾನು 53 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಪಕ್ಷ ಸಾಕಷ್ಟು ಅವಕಾಶ ನೀಡಿದೆ. 9 ಬಾರಿ ಶಾಸಕನಾಗಲು ಅವಕಾಶ ನೀಡಿದೆ. ವೀರಪ್ಪ ಮೊಯ್ಲಿ ಅವರೇ ಕರೆದು ನನಗೆ ಟಿಕೆಟ್ ನೀಡಿದ್ದರು.

ವೀರಪ್ಪ ಮೊಯ್ಲಿ, ಎಸ್.ಎಂ.ಕೃಷ್ಣ ಧರಂಸಿಂಗ್, ಸಿದ್ದರಾಮಯ್ಯ ಸರ್ಕಾರಗಳಲ್ಲಿ ಸಚಿವನಾಗಿರುವೆ. ನಾನು ಯಾರಲ್ಲೂ ಸಚಿವ ಸ್ಥಾನ ಕೇಳಿರಲಿಲ್ಲ ಎಂದು ಹಳೆಯ ಘಟನೆಗಳನ್ನು ಸ್ಮರಿಸಿದರು.

ಸಿದ್ದರಾಮಯ್ಯ ಸರ್ಕಾರದಲ್ಲಿಯೂ ತಪ್ಪಿತ್ತು: 2023ರಲ್ಲಿ ಸಿದ್ದರಾಮಯ್ಯ ಅವರು ಕಳೆದ ಬಾರಿ ಸಚಿವ ಸ್ಥಾನ ನೀಡಿದ್ದರು. ಅವತ್ತು ಭೈರತಿ ಸುರೇಶ್ ನನಗೆ ಕರೆ ಮಾಡಿ ಕರೆದು ಸಿದ್ದರಾಮಯ್ಯ ನಿಮ್ಮ ಜತೆ ಮಾತನಾಡಬೇಕು ಎಂದು ಕರೆಸಿ ಸಭೆ ಮಾಡಿದ್ದರು. ನಿಮಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡುತ್ತೇವೆ ಎಂದು ಹೇಳಿದ್ದರು.

ನಾನೇನು ಆ ಖಾತೆಯನ್ನು ಅವತ್ತು ಕೇಳಿರಲಿಲ್ಲ. ಆದರೆ, ಬಳಿಕ ಖಾತೆ ಹಂಚಿಕೆ ವೇಳೆ ಸಾರಿಗೆ ಇಲಾಖೆ ಕೊಟ್ಟಿದ್ದರು. ಆಗ ಮತ್ತೆ ಭೈರತಿ ಸುರೇಶ್ ಕರೆ ಮಾಡಿ ಸ್ವಲ್ಪ ಬದಲಾವಣೆ ಆಯಿತು ಎಂದಿದ್ದರು ಎಂದು ವಿವರಿಸಿದರು.

ನಾನು ಶಾಸಕನಾಗಿ ಮುಂದುವರಿಯುತ್ತೇನೆ. ಕಾಂಗ್ರೆಸ್ ಪಕ್ಷದಲ್ಲೇ ಇರುತ್ತೇನೆ. ಕೈಯಲ್ಲಿ ಹೋಗಿ ರಾಜೀನಾಮೆ ಕೊಟ್ಟು ಬರಲು ನನಗೆ ಇಷ್ಟ ಇಲ್ಲ. ಸಿಎಂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್‌ಗೆ ನಮ್ಮ ಕಚೇರಿ ಸಿಬ್ಬಂದಿ ರಾಜೀನಾಮೆ ಪತ್ರ ಕೊಟ್ಟು ಬರುತ್ತಾರೆ. ನಾನು ಖಾತೆಗಾಗಿ ರಾಜೀನಾಮೆ ಕೊಡುತ್ತಿಲ್ಲ.

ಯಾಕೆ ರಾಜೀನಾಮೆ ಕೊಡುತ್ತಿದ್ದೇನೆ ಎಂದು ಮಾಧ್ಯಮದ ಮುಂದೆ ಬಂದು ಹೇಳುತ್ತಿರುವೆ. ಎಸ್.ಎಂ ಕೃಷ್ಣ ಅವರು ತಮ್ಮ ಸಂಪುಟದಲ್ಲಿ ಒಂದೇ ವರ್ಷ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡಿದ್ದರು. ನಾನು ಎಲ್ಲಾ ಇಲಾಖೆಗಳಲ್ಲಿ ಚೆನ್ನಾಗಿ ಕೆಲಸ ಮಾಡಿದ್ದೇನೆ ಎಂದರು.

ರಾಮಲಿಂಗಾರೆಡ್ಡಿ ಮನವೊಲಿಸುವೆ: ಸಿಎಂ



• ಬೆಂಗಳೂರು: ರಾಮಲಿಂಗಾ ರೆಡ್ಡಿ ಅವರು ಕಾಂಗ್ರೆಸ್‌ನ ಪ್ರಮುಖ ನಾಯಕರು ಹಾಗೂ ನನಗೆ ಬಹಳ ಆತ್ಮೀಯರಾಗಿದ್ದು, ಅವರೊಂದಿಗೆ ನಾನು ಮಾತನಾಡುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಶುಕ್ರವಾರ ವಿಧಾನಸೌಧದಲ್ಲಿ ಮಾತನಾಡಿದ ಅವರು, ಈ ಹಿಂದೆ ನಾನು ಹಾಗೂ ನನ್ನ ಸಹೋದರ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿದ್ದು ನಿಜ. ನಾನು ಸಿಎಂ ಆದರೆ ನಿಮಗೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡುತ್ತೇನೆ ಎಂದು ಹೇಳಿದ್ದೂ ನಿಜ. ಆದರೆ, ಖಾತೆ ಹಂಚಿಕೆ ನನ್ನ ಕೈಯಲ್ಲಿ ಇಲ್ಲ. ಹೈಕಮಾಂಡ್ ಖಾತೆ ಹಂಚಿಕೆ ಬಗ್ಗೆ ನಿರ್ಧಾರ ಕೈಗೊಂಡಿದೆ. ಆದರೂ ನಾನು ರಾಮಲಿಂಗಾರೆಡ್ಡಿ ಅವರ ಮನವೊಲಿಸುತ್ತೇನೆ ಎಂದರು. ರಾಮಲಿಂಗಾರೆಡ್ಡಿ ಅವರ ಸಂಪರ್ಕಕ್ಕೆ ಪ್ರಯತ್ನಿಸುತ್ತಿದ್ದೇನೆ. ಆದರೆ, ಅವರು ಬೆಂಗಳೂರಿನಲ್ಲಿಲ್ಲ. ಹೀಗಾಗಿ ಬೆಂಗಳೂರಿಗೆ ಆಗಮಿಸಿದ ನಂತರ ಅವರ ಜತೆ ಮಾತನಾಡುತ್ತೇನೆ ಎಂದು ಶಿವಕುಮಾರ್ ತಿಳಿಸಿದರು.

ಮುನಿದು ತಣ್ಣಗಾದ ಸಚಿವ ಕೆ.ಎಚ್.ಮುನಿಯಪ್ಪ

• ದೇವನಹಳ್ಳಿ: ಖಾತೆ ಹಂಚಿಕೆ ಕುರಿತು ಹಿರಿಯ ನಾಯಕ, ಸಚಿವ ಕೆ.ಎಚ್. ಮುನಿಯಪ್ಪ ಅವರ ಅಸಮಾಧಾನವನ್ನು ತಣಿಸುವಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಯಶಸ್ವಿಯಾಗಿದ್ದಾರೆ. ದಿಲ್ಲಿಗೆ ವಾಪಸ್ ತೆರಳುವ ಮುಂಚೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಚಿವ ಮುನಿಯಪ್ಪ ಅವರ ಜತೆಗೆ ಚರ್ಚಿಸಿದ ರಾಹುಲ್ ಗಾಂಧಿ ಅವರು, ಮುಂದಿನ ದಿನಗಳಲ್ಲಿ ತಮಗೆ ಖಾತೆ ಹಂಚಿಕೆಯಲ್ಲಿ ಪ್ರಾಧಾನ್ಯತೆ ನೀಡುತ್ತೇನೆ. ಈಗ ನೀಡಿರುವ ಖಾತೆಯನ್ನು ಚೆನ್ನಾಗಿ ನಿಭಾಯಿಸಿದ್ದೀರಿ, ಮುಂದೆಯೂ ಚೆನ್ನಾಗಿ ನಿಭಾಯಿಸುತ್ತೀರಿ ಎನ್ನುವ ಭರವಸೆ ಇದೆ. ಖಾತೆ ಬದಲಾವಣೆ ಕುರಿತಂತೆ ಮುಖ್ಯಮಂತ್ರಿಗಳ ಜತೆಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ ಎಂದು ತಿಳಿಸಿದ್ದಾರೆ. ಇದಕ್ಕೆ ಮುನಿಯಪ್ಪ ಕೂಡ ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಇದಕ್ಕೂ ಮುಂಚೆ ದೇವನಹಳ್ಳಿಯಲ್ಲಿ ಮಾತನಾಡಿದ್ದ ಅವರು, ಸುಮಾರು 50 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ ನಾನು. ಖಾತೆಗಳ ಹಂಚಿಕೆಯಲ್ಲಿ ಹಿರಿತನ ಕಾಪಾಡಬೇಕು. ಶಾಸಕರಲ್ಲಿ ಆರ್.ವಿ. ದೇಶಪಾಂಡೆ, ರಾಮಲಿಂಗಾರೆಡ್ಡಿ ಹಾಗೂ ನಾನು ಹೆಚ್ಚು ಬಾರಿ ಗೆದ್ದಿದ್ದೇವೆ. ಹಿರಿತನದ ಆಧಾರದ ಮೇಲೆ ಸಮಾಜಕ್ಕೆ ಉಪಯೋಗವಾಗುವ ಖಾತೆಗಳನ್ನು ಹಂಚಿಕೆ ಆಗಬೇಕಿತ್ತು ಎಂದರು.



ರಾಮಲಿಂಗಾರೆಡ್ಡಿ ರಾಜೀನಾಮೆ ವಿಚಾರ ನನಗೆ ಸಂಬಂಧಿಸಿದ್ದಲ್ಲ. ಅದನ್ನು ನೋಡಿಕೊಳ್ಳಲು ಸಿಎಂ ಇದ್ದಾರೆ. ಅವರೇ ರಾಜೀನಾಮೆ ಸಮಸ್ಯೆ ಬಗೆಹರಿಸುತ್ತಾರೆ.
■ **ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ**



ಬೆಂ. ನಗರಾಭಿವೃದ್ಧಿ ನಿಮಗೆ ಕೊಡುತ್ತೇನೆ ಅಂದಿದ್ದರು. ಆದರೀಗ ಜಲಸಂಪನ್ಮೂಲ ಖಾತೆ ಕೊಟ್ಟಿದ್ದಾರೆ. ನಮ್ಮ ಆಸಕ್ತಿಯಾಗಿ ಕೆಲಸ ಮಾಡಲು ಆಗಲ್ಲ. ಹೀಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ.
■ **ರಾಮಲಿಂಗಾರೆಡ್ಡಿ, ಸಚಿವ**

ಖಾತೆ ಹಂಚಿಕೆ ವಿಚಾರವನ್ನು ಹಾಗೂ ಹಂಚಿಕೆಯಲ್ಲಿ ನನಗಾಗಿರುವ ಅನ್ಯಾಯವನ್ನು ರಾಹುಲ್ ಗಾಂಧಿ ಅವರ ಗಮನಕ್ಕೆ ತಂದಿದ್ದೇನೆ. ಸಿಎಂ ಜತೆ ಚರ್ಚಿಸಿ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ. ನನಗೆ ರಾಹುಲ್ ಗಾಂಧಿ ಅವರ ಜತೆಗಿನ ಮಾತುಕತೆ ತೃಪ್ತಿ ತಂದಿದೆ.
■ **ಕೆ.ಎಚ್.ಮುನಿಯಪ್ಪ, ಸಚಿವ**

ಪಕ್ಷದ ಹಿತದೃಷ್ಟಿಯಿಂದ ತಮ್ಮ ರಾಜೀನಾಮೆ ನಿರ್ಧಾರವನ್ನು ಪುನರ್ ಪರಿಶೀಲಿಸಲು ಸ್ನೇಹಿತರಾದ ರಾಮಲಿಂಗಾರೆಡ್ಡಿ ಅವರನ್ನು ವಿನಂತಿಸುತ್ತೇನೆ. ಅವರ ರಾಜೀನಾಮೆಯು ಒಂದು ಎಚ್ಚರಿಕೆ ಗಂಟೆಯಾಗಿದೆ. ಈ ವಿಷಯವನ್ನು ನ್ಯಾಯಯುತ ವಾಗಿ ಬಗೆಹರಿಸಲು ಎಲ್ಲ ಸಂಬಂಧಿತ ನಾಯಕರು ತಕ್ಷಣ ಗಂಭೀರ ವಾಗಿ ಪರಿಗಣಿಸಬೇಕೆಂದು ಬಯಸುವೆ.
■ **ಎಚ್.ಕೆ.ಪಾಟೀಲ, ಶಾಸಕ**

ದಿಲ್ಲಿ ಡಿಜಿಪಿ ಪತ್ನಿ ಕಾಡಾನೆ ದಾಳಿಗೆ ಬಲಿ

ಪುಟ 1 ➡ ಶುಕ್ರವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ನೋಡಲೆಂದು ತೆರಳಿದ್ದ ವೇಳೆ ಕಾಡಾನೆ ಅವರ ಮೇಲೆ ದಾಳಿ ಮಾಡಿದೆ.

ಈ ವೇಳೆ ಗಂಭೀರವಾಗಿ ಗಾಯಗೊಂಡ ಅವರನ್ನು ಗೋಣಿಕೊಪ್ಪದ ಲೋಪಮುದ್ರಾ ಆಸ್ಪತ್ರೆಗೆ ಸಾಗಿಸ ಲಾಯಿತಾದರೂ, ಆ ವೇಳೆಗಾಗಲೇ ಅವರು ಸಾವಿಗೀಡಾಗಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ತೋಟದ ಕೆಲಸದಲ್ಲಿ ನಿರತರಾಗಿದ್ದ ತಿತಿಮತಿಯ ಇಬ್ಬರು ಕಾರ್ಮಿಕರು ಕೂಡ ಕಾಡಾನೆಯಿಂದ ತಪ್ಪಿಸಿಕೊಳ್ಳಲು ಯತ್ನಿಸುವಾಗ ಗಾಯಗೊಂಡಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿರುವುದಾಗಿ ಹೇಳಲಾಗಿದೆ.

ಸಿಎಂ ಸಂತಾಪ

• ಬೆಂಗಳೂರು: ಕಾಡಾನೆ ದಾಳಿಗೆ ಬಲಿಯಾಗಿರುವ ಐಪಿಎಸ್ ಅಧಿಕಾರಿ ಪತ್ನಿ ಸಂಧ್ಯಾ ಅಚ್ಚಯ್ಯ ಸಾವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಆನೆ ದಾಳಿಗೆ ಬಲಿಯಾಗಿರುವ ಸಂಧ್ಯಾ ಅಚ್ಚಯ್ಯ ಅವರ ನಿಧನ ತೀವ್ರ ದಿಗ್ಭ್ರಮೆ ಮೂಡಿಸಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬಸ್ಥರಿಗೆ ಹಾಗೂ ಅವರ ಆಪ್ತರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಸಂತಾಪ ಸೂಚಿಸಿದ್ದಾರೆ. ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಅರಣ್ಯ ಇಲಾಖೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ. ಅಲ್ಲದೇ, ಆನೆ ಮತ್ತು ಮಾನವನ ಸಂಘರ್ಷಕ್ಕೆ ತಡೆಹಾಕಲು ಕೂಡಲೇ ಕಾರ್ಯಪ್ರವೃತ್ತರಾಗಬೇಕು, ಅರಣ್ಯ ಇಲಾಖೆಗೆ ಸೂಚಿಸಿದ್ದಾರೆ.

ದಿನ ಭವಿಷ್ಯ

ಮೇಷ
ಆರ್ಥಿಕ ಉನ್ನತಿ. ಮನೆಯಲ್ಲಿ ಶಾಂತ ವಾತಾವರಣ. ವೃತ್ತಿ ಕ್ಷೇತ್ರದಲ್ಲಿ ಕೆಲವರು ನಿಮ್ಮ ವಿರುದ್ಧವಾಗಿ ವರ್ತಿಸುವ ಸಾಧ್ಯತೆಯಿದೆ.

ವೃಷಭ
ಹೆಚ್ಚು ಹಣ ತರುವ ಯೋಜನೆಗೆ ಕೈಹಾಕುವ ಮುನ್ನ ಸರಿಯಾಗಿ ವಿವೇಚಿಸಿ. ಆತುರದ ತೀರ್ಮಾನ ಬೇಡ. ಕೌಟುಂಬಿಕ ಬಿಕ್ಕಟ್ಟು ನೆಮ್ಮದಿ ಕೆಡಿಸಬಹುದು.

ಮಿಥುನ
ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಿ. ಹೊಟ್ಟೆ ಕೆಡುವ ಸಾಧ್ಯತೆ ಕಾಣುತ್ತಿದೆ. ಸಂಗಾತಿ ಜತೆ ಭಿನ್ನಾಭಿಪ್ರಾಯ ಉಂಟಾಗಬಹುದು.

ಕಟಕ
ಆಪ್ತರ ನಡುವೆ ಭಿನ್ನಮತ, ವಾಗ್ವಾದ ಉಂಟಾದೀತು. ಸಹನೆಯಿಂದ ವರ್ತಿಸಿ. ಆರ್ಥಿಕ ಒತ್ತಡ ಹೆಚ್ಚಲಿದೆ, ಖರ್ಚು ಅಧಿಕ.

ಸಿಂಹ
ಮನೆಯಲ್ಲಿ ಅಶಾಂತಿ ಮೂಡಿದರೂ ನಿಮ್ಮ ಪ್ರಯತ್ನದಿಂದ ಸಹಜ ಸ್ಥಿತಿ ನೆಲೆಸಲಿದೆ. ಮನಸ್ಸು ಕೆಡಿಸುವ ಪ್ರಸಂಗ ಸಂಭವಿಸಬಹುದು.

ಕನ್ಯಾ
ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸ ನಿರ್ವಹಿಸುವಿರಿ. ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ಸಾಧ್ಯತೆ. ವೃತ್ತಿಯಲ್ಲಿ ಹೆಚ್ಚುವರಿ ಹೊಣೆಗಾರಿಕೆ.

ತುಲಾ
ಸಣ್ಣಪುಟ್ಟ ಜಗಳದಿಂದ ದೂರವಿರಿ. ಹೆಚ್ಚು ಕೆಲಸದಿಂದ ಮಾನಸಿಕ ಒತ್ತಡ. ಆರ್ಥಿಕ ಸಂಪಾದನೆ ಸುಲಭಸಾಧ್ಯ. ಖರ್ಚೂ ಹೆಚ್ಚಲಿದೆ.

ವೃಶ್ಚಿಕ
ಆತ್ಮೀಯರ ಜತೆ ಕಾಲ ಕಳೆಯಿರಿ. ಅವರನ್ನು ಕಡೆಗಣಿಸಬೇಡ. ವೃತ್ತಿ ಚಿಂತೆಯನ್ನು ಮನೆಗೆ ತರಬೇಡಿ. ಖರ್ಚು ಹೆಚ್ಚಳದ ಚಿಂತೆ.

ಧನು
ಮೇಲಧಿಕಾರಿ ಜತೆ ವಾಗ್ವಾದ ನಡೆದೀತು. ಕೋಪದಿಂದ ಪ್ರತಿಕ್ರಿಯೆ ನೀಡಬೇಡಿ. ಹಿತಶತ್ರುಗಳ ಕುರಿತು ಎಚ್ಚರಿಕೆಯಿಂದ ಇರಿ. ಧನವ್ಯಯ.

ಮಕರ
ಮನೆಯಲ್ಲಿ ಶಾಂತಿಯ ವಾತಾವರಣ ಇಟ್ಟುಕೊಳ್ಳಿ. ಸಣ್ಣ ವಿಷಯಕ್ಕೆ ದುಡುಕಿ ಪ್ರತಿಕ್ರಿಯಿಸಬೇಡಿ. ವೃತ್ತಿಯಲ್ಲಿ ಒತ್ತಡ ಹೆಚ್ಚು..

ಕುಂಭ
ಸರಿಯಾದ ಸಮಯಕ್ಕೆ ಕೆಲಸ ಪೂರೈಸಲು ಸಾಧ್ಯವಾಗದು. ಹಲವಾರು ಅಡ್ಡಿಗಳು. ಆತ್ಮೀಯರಿಂದ ಟೀಕೆ ಕೇಳುವಿರಿ.

ಮೀನ
ನಿಮ್ಮ ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಲಿ. ಇಲ್ಲವಾದರೆ ಸಮಸ್ಯೆಗೆ ಸಿಲುಕುವಿರಿ. ನಯವಂಚಕರ ಮಾತು ನಂಬಬೇಡಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 3,0,6,2

ಮಲ್ಲಿಕಾರ್ಜುನ ಖರ್ಗೆ ನಾಮಪತ್ರ ಸಲ್ಲಿಕೆ

ಪುಟ 1 ➡ ಈ ಬಾರಿ ರಾಜ್ಯಸಭಾ ಚುನಾವಣೆಗೆ ತಮ್ಮನ್ನು ಎಲ್ಲಾ ಕಾಂಗ್ರೆಸ್ ಶಾಸಕರು ಹಾಗೂ ನಾಯಕರು ಒಗ್ಗಟ್ಟಿನಿಂದ ಆಯ್ಕೆ ಮಾಡಿದ್ದಾರೆ. ನನ್ನ ಮೇಲಿರುವ ವಿಶ್ವಾಸಕ್ಕೆ ಧನ್ಯವಾದ ತಿಳಿಸುತ್ತೇನೆಂದರು. ಜೂ.18ರಂದು ರಾಜ್ಯಸಭಾ ಚುನಾವಣೆ ಇದೆ. ಅವತ್ತು ಎಲ್ಲರೂ ಒಗ್ಗಟ್ಟಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಾರೆಂಬ ವಿಶ್ವಾಸವಿದೆ. ಪಕ್ಷದ ಶಾಸಕರು ಹಾಗೂ ಬೆಂಬಲಿಗರು ಒಟ್ಟಾಗಿ ಕಾರ್ಯನಿರ್ವಹಿಸಿದರೆ ಗೆಲುವು ಖಚಿತ ಎಂದು ಹೇಳಿದರು.

ರಾಜ್ಯದ ನಾಲ್ಕು ಸ್ಥಾನಗಳಿಗೆ ಚುನಾವಣೆ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಬಿಜೆಪಿಯ ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರ ಅವಧಿ ಜೂ.25ಕ್ಕೆ ಮುಕ್ತಾಯವಾಗಲಿದೆ. ಕರ್ನಾಟಕದಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಡೆಯಲಿದೆ. ವಿಧಾನಸಭೆಯಲ್ಲಿ ಈಗಿರುವ ಸದಸ್ಯರ ಬಲದಲ್ಲಿ ಕಾಂಗ್ರೆಸ್ 3 ಹಾಗೂ ಪ್ರತಿಪಕ್ಷ ಬಿಜೆಪಿ ಒಂದು ಸ್ಥಾನ ಗೆಲ್ಲಬಹುದಾಗಿದೆ. ಕಾಂಗ್ರೆಸ್‌ನಿಂದ ರಾಜ್ಯಸಭೆಯ ಮೂರು ಸ್ಥಾನಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಕ್ತಾರ ಪವನ್ ಖೇರಾ ಮತ್ತು ಮನ್ಸೂರ್ ಅಲಿಖಾನ್ ಅವರ ಹೆಸರುಗಳನ್ನು ಕಾಂಗ್ರೆಸ್ ಅಂತಿಮಗೊಳಿಸಿತ್ತು. ನಾಮಪತ್ರ ಸಲ್ಲಿಸಲು ಜೂ.8 ಕೊನೆ ದಿನವಾಗಿದ್ದು, ನಾಮಪತ್ರಗಳ ಪರಿಶೀಲನೆ ಜೂ.9ರಂದು ನಡೆಯಲಿದೆ. ನಾಮಪತ್ರ ಹಿಂಪಡೆಯಲು ಜೂ.10 ಕೊನೆ ದಿನವಾಗಿದೆ. ಮತದಾನ ನಡೆದ ಜೂ.18 ಹಾಗೂ ಅದೇ ದಿನ ಸಂಜೆ 5 ಗಂಟೆಗೆ ಮತ ಎಣಿಕೆಯೂ ನಡೆಯಲಿದೆ.



ರಾಜ್ಯದಲ್ಲೂ ಮಿಯಾವಾಕಿ ಕಾಡು

ಪುಟ 1 ➡ ವಿಜಯನಗರದ ಗತ ವೈಭವವನ್ನು ಮರುಕಳಿಸುವಂತೆ ಮಾಡಲು ಮತ್ತೆ ಈ ಭಾಗದಲ್ಲಿ ಹಸಿರೀಕರಣಕ್ಕೆ ಹಿರಿ–ಕಿರಿಯರೆಲ್ಲರೂ ಕೈಜೋಡಿಸಬೇಕು ಎಂದು ಕರೆನೀಡಿದರು. ಕೂಡ್ಲಿಗಿ ತಾಲೂಕಿನಲ್ಲಿ ಜಲಮೂಲ ವೃದ್ಧಿಸಲು ಮತ್ತು ಅಂತರ್ಜಲ ಮಟ್ಟ ಹೆಚ್ಚಿಸಲು ಕೆರೆಗಳನ್ನು ಅಭಿವೃದ್ಧಿಪಡಿಸುವ ಜಲಸಂರಕ್ಷಣಾ ಕಾರ್ಯ ಕೈಗೊಳ್ಳಲಾಗಿದೆ. ಇದರಿಂದ ಪ್ರೇರಿತರಾದ ಸ್ಥಳೀಯ ರೈತರೊಬ್ಬರು ತಮ್ಮ ಸ್ವಂತ ಜಮೀನನ್ನು ಈ ಹಸಿರು ಯೋಜನೆಯೊಂದಿಗೆ ಜೋಡಿಸಲು ಮುಂದೆ ಬಂದಿರುವುದು ಶ್ಲಾಘನೀಯ.

ಹಿಂದೆ ಗುಜರಾತ್‌ನ ಕಚ್ ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ಭೂಕಂಪದ ದುರಂತದಲ್ಲಿ ಮಡಿದ ಅಮಾಯಕ ಮಕ್ಕಳ ನೆನಪಿಗಾಗಿ ಡಾ.ನಾಯರ್ ಅವರು ಭಾರತದ ಕಚ್ ಪ್ರದೇಶದಲ್ಲಿ ಅತ್ಯಂತ ದೊಡ್ಡದಾದ ಮಿಯಾವಾಕಿ ಮಾದರಿಯ ದಟ್ಟ ಅರಣ್ಯ ನಿರ್ಮಿಸಿರುವುದು ಶ್ಲಾಘನೀಯ. ಅದೇ ಮಾದರಿಯಲ್ಲಿ ಚಿಕ್ಕಜೋಗಿಹಳ್ಳಿಯಲ್ಲೂ ಸ್ಥಳೀಯ ಹವಾಮಾನಕ್ಕೆ ಹೊಂದುವ ವೈವಿಧ್ಯಮಯ ಸಸಿಗಳನ್ನು ವೈಜ್ಞಾನಿಕ ಪದ್ಧತಿಯಲ್ಲಿ ನೆಡಲಾಗುತ್ತಿದೆ. ಇದು ಅತ್ಯಂತ ಕಡಿಮೆ ಅವಧಿಯಲ್ಲಿ ದಟ್ಟ ಅರಣ್ಯವಾಗಿ ಪರಿವರ್ತನೆಗೊಳ್ಳಲಿದ್ದು, ಮುಂದಿನ 50 ವರ್ಷಗಳ ಕಾಲ ಈ ಭಾಗದ ತಾಯಂದಿರ ನೆನಪನ್ನು ಜೀವಂತವಾಗಿರಿಸಲಿದೆ. ಆದ್ದರಿಂದ ಗಿಡ ನೆಟ್ಟ ಪ್ರತಿ ಮಗುವಿನ ಹೆಸರನ್ನು ಕಲ್ಲಿನ ಫಲಕದ ಮೇಲೆ ಕೆತ್ತಿ ಆಯಾ ಗಿಡದ ಪಕ್ಕದಲ್ಲಿ ಅಳವಡಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದರು.

ಪರಿಸರ ಪ್ರೇಮಿ ಆರ್.ಕೆ.ನಾಯರ್ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದ ಅಮ್ಮನಿಗಾಗಿ ಒಂದು ಗಿಡ ಯೋಜನೆ ಅಡಿಯಲ್ಲಿ ಭಾರತ ವನದ ವರ್ಟಿಕಲ್ ಆರ್ಗಾನಿಕ್ ಹಾರ್ಟಿಕಲ್ಚರ್ (ಸಾವಯವ ತೋಟಗಾರಿಕೆ) ಯೋಜನೆಯ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಯೋಜನೆಯ ಮೊದಲ ಹಂತದಲ್ಲಿ 40 ಎಕರೆ ಜಾಗದಲ್ಲಿ ಈ ವರ್ಷ 50 ಸಾವಿರ ಹಾಗೂ ಮುಂದಿನ ವರ್ಷ 50 ಸಾವಿರ ಸೇರಿದಂತೆ ಒಟ್ಟು 1 ಲಕ್ಷ ಸಸಿ ನೆಡಲಾಗುವುದು. ಯೋಜನೆಗೆ ಸಿಎಸ್‌ಆರ್ ನಿಧಿಯಿಂದ ಸುಮಾರು 3 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದ್ದು, 5 ವರ್ಷಗಳ ನಿರ್ವಹಣೆಯ ವೆಚ್ಚವೂ ಸೇರಿದೆ. ಇದಕ್ಕೆ ರೈತರು, ಸರ್ಕಾರ ಹಾಗೂ ಇತರೆ ಸಂಸ್ಥೆಗಳಿಂದ ಒಂದೇ ಒಂದು ರೂಪಾಯಿ ಕೂಡ ಪಡೆಯುತ್ತಿಲ್ಲ. ರೈತರು ತಮ್ಮ ಜಮೀನನ್ನು ತೋಟಗಾರಿಕೆ ಇಲಾಖೆಯ ಮೂಲಕ ಯೋಜನೆಗೆ ಒಳಪಡಿಸಿ, ತನು–ಮನದಿಂದ ಗಿಡಗಳನ್ನು ಪೋಷಿಸಬೇಕು. 3ನೇ ವರ್ಷದಿಂದಲೇ ರೈತರಿಗೆ ಆದಾಯ ಬರಲಿದೆ ಎಂದು ಯೋಜನೆಯನ್ನು ವಿವರಿಸಿದರು.

ವಿಜಯನಗರ ಜಿಲ್ಲೆ ಬದ್ಧತೆ ಕೊಂಡಾಡಿದ ಸಚಿವೆ

ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ಅನಿರುದ್ಧ ಶ್ರವಣ್ ಅವರ ವಿಜಯನಗರದ ಅಭಿವೃದ್ಧಿ ಪರ ಬದ್ಧತೆಯನ್ನು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮುಕ್ತ ಕಂಠದಿಂದ ಕೊಂಡಾಡಿದರು. ಅನಿರುದ್ಧ ಶ್ರವಣ್ ಅವರ ಒತ್ತಾಸೆಯಿಂದಲೇ ಜಿಲ್ಲೆಯಲ್ಲಿ ಹುಣಸೆ ಸಂಸ್ಕರಣಾ ಘಟಕ ಸ್ಥಾಪನೆ, ಕೆರೆಗಳ ಪುನಶ್ಚೇತನ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಅದಕ್ಕೆ ಈಗಿನ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಅವರ ಸಹಕಾರವಿದೆ. ಜಿಲ್ಲಾಡಳಿತ ಮತ್ತು ಸರ್ಕಾರ ಒಟ್ಟಾಗಿ ಪ್ರಯತ್ನಿಸಿದರೆ, ಈ ಭಾಗ ನಿಶ್ಚಿತವಾಗಿ ಮತ್ತೆ ಸಮೃದ್ಧ ನಾಡು ಆಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಹಸಿರು ಅಭಿವೃದ್ಧಿಯತ್ತ ಹೆಜ್ಜೆ

ಪುಟ 1 ➡ ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಗುಜರಾತ್ ಪ್ರಮುಖ ಪಾತ್ರ ವಹಿಸುತ್ತಿದ್ದು, ದೇಶದ ಒಟ್ಟು 250 ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಸುಮಾರು 50 ಗಿಗಾವ್ಯಾಟ್ ಗುಜರಾತ್ ನ ಕೊಡುಗೆಯಾಗಿದೆ ಎಂದರು. ಸೂರತ್ ನಗರವು ಕೈಗಾರಿಕಾ ಅಭಿವೃದ್ಧಿ, ಪರಿಸರ ಸಂರಕ್ಷಣೆ ಸಮತೋಲನಗೊಳಿಸಿರುವ ಉತ್ತಮ ಉದಾಹರಣೆಯಾಗಿದೆ ಎಂದು ಶ್ಲಾಘಿಸಿದರು.

ಉಗ್ರರ ಜತೆ ಸಂಪರ್ಕ: ರಾಜ್ಯದ ಇಬ್ಬರ ಸೆರೆ

ಪುಟ 1 ➡ ಮುಂಬೈ ಮೂಲದ ಉದ್ಯಮಿಯೊಬ್ಬರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಕುರಿತು ಆರೋಪಿಗಳಿಗೆ ಸೂಚನೆ ನೀಡಲಾಗಿತ್ತು ಎಂಬ ಮಾಹಿತಿಯನ್ನೂ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಭಾರತದಲ್ಲಿ ವಿಧ್ವಂಸಕ ಕೃತ್ಯ ನಡೆಸುವ ಸಂಚು ರೂಪಿಸಿರುವ ಶಂಕೆಯ ಮೇರೆಗೆ ಈ ಕಾರ್ಯಾಚರಣೆ ನಡೆಸಿದ್ದು, ಅಂತಹ ಕೃತ್ಯ ನಡೆಯುವ ಮುನ್ನವೇ ಇಬ್ಬರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಪ್ರಕರಣ ಕುರಿತು ಹೆಚ್ಚಿನ ವಿಚಾರಣೆ ಪ್ರಗತಿಯಲ್ಲಿದ್ದು, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಕೇಂದ್ರ ತನಿಖಾ ಸಂಸ್ಥೆಗಳ ನಿಗಾ

ಪುಟ 1 ➡ **ಅಲ್ಲಾಭಕ್ಷು ಜತೆ ನಿಕಟ ಸಂಪರ್ಕದಲ್ಲಿದ್ದ ದಾವಣಗೆರೆ ಮೂಲದ ಜಮೀರ್ ಖಾನ್‌ನನ್ನೂ ತುಮಕೂರು ನಗರ ಪೊಲೀಸರು ಬಂಧಿಸಿದ್ದಾರೆ. ಈ ಕುರಿತು ತುಮಕೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.**

ಭಾರತದಲ್ಲಿ ₹3 ಲಕ್ಷ ಕೋಟಿ ಹೂಡಿಕೆ: ಏರ್‌ಟ್ರಂಕ್ ಘೋಷಣೆ

ಪುಟ 1 ➡ ಭಾರತದ ಡಿಜಿಟಲ್ ಮೂಲಸೌಕರ್ಯ ಕ್ಷೇತ್ರದಲ್ಲಿ ಇದು ಅತಿದೊಡ್ಡ ಹೂಡಿಕೆಗಳಲ್ಲಿ ಒಂದಾಗಿದ್ದು, ದೇಶವನ್ನು ಕ್ಲೌಡ್ ಕಂಪ್ಯೂಟಿಂಗ್ ಹಾಗೂ ಎಐ ಕ್ಷೇತ್ರದ ಜಾಗತಿಕ ಕೇಂದ್ರವನ್ನಾಗಿ ರೂಪಿಸಲು ನೆರವಾಗಲಿದೆ ಎಂದು ಮೋದಿ ಹೇಳಿದರು.

ಜನಾಕ್ರೋಶ ಹಿನ್ನೆಲೆ ಕರ್ನಾಟಕದಲ್ಲಿ ಸಿಎಂ ಬದಲಾವಣೆ: ಕಾಂಗ್ರೆಸ್ ಅಧಿಕಾರದಲ್ಲಿರುವ ಎಲ್ಲೆಡೆ ಜನರು ಅಸಂತುಷ್ಟರಾಗಿದ್ದಾರೆ. ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರದ ವಿರುದ್ಧವೂ ಅಪಾರ ಜನಾಕ್ರೋಶವಿದೆ, ಆದಕ್ಕಾಗಿಯೇ ಪಕ್ಷವು ತನ್ನ ಮುಖ್ಯಮಂತ್ರಿಯನ್ನು ಬದಲಾಯಿಸಬೇಕಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ದೇಶದಲ್ಲಿ ಅರಾಜಕತೆ, ಅನಿಶ್ಚಿತತೆ ಮತ್ತು ನಿರಾಶೆಯ ರಾಜಕಾರಣಕ್ಕೆ ಜನರು ಬೆಂಬಲ ನೀಡುವುದಿಲ್ಲ ಎಂದ ಪ್ರಧಾನಿ ಮೋದಿ, ಕಳೆದ 12 ವರ್ಷಗಳಿಂದ ಕಾಂಗ್ರೆಸ್ ಗೊಂದಲ ಸೃಷ್ಟಿಸುವ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಜನರು ನಿರಂತರ ಬೆಂಬಲ ನೀಡುತ್ತಿದ್ದಾರೆ ಎಂದು ಹೇಳಿದ ಮೋದಿ, ವಿವಿಧ ರಾಜ್ಯಗಳು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶಗಳು ಇದಕ್ಕೆ ಸಾಕ್ಷಿಯಾಗಿದೆ ಎಂದರು.

ನೈಸರ್ಗಿಕ ಅನಿಲ ಭಂಡಾರ ಪತ್ತೆ

• **ಹೊಸದಿಲ್ಲಿ:** ಅಂಡಮಾನ್ ಸಮುದ್ರದ ಆಳಸಮುದ್ರ ಪ್ರದೇಶದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮತ್ತು ಅನಿಲ ಸಂಸ್ಥೆ ಆಯಿಲ್ ಇಂಡಿಯಾ ಲಿಮಿಟೆಡ್ ಮತ್ತೊಂದು ನೈಸರ್ಗಿಕ ಅನಿಲ ಭಂಡಾರವನ್ನು ಪತ್ತೆಹಚ್ಚಿದ್ದು, ದೇಶದ ಇಂಧನ ಭದ್ರತೆ ಹಾಗೂ ಸ್ವಾವಲಂಬನೆಯ ಪ್ರಯತ್ನಗಳಿಗೆ ಮಹತ್ವದ ಉತ್ತೇಜನ ಸಿಕ್ಕಿದೆ.


ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಈ ಕುರಿತು ಮಾಹಿತಿ ನೀಡಿದ್ದು, ಅಂಡಮಾನ್ ಸಮುದ್ರವು ಇಂಧನ ಅವಕಾಶಗಳ ಮಹಾಸಾಗರ ಎಂಬುದನ್ನು ಈ ಹೊಸ ಅನಿಲ ಪತ್ತೆ ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಹೇಳಿದ್ದಾರೆ.ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯ ಸಮೀಪದ ಸಮುದ್ರ ಪ್ರದೇಶದಲ್ಲಿ ಕೊರೆಯಲಾದ ಶ್ರೀ ವಿಜಯಪುರಂ3 ಪರಿಶೋಧನಾ ಬಾವಿಯಲ್ಲಿ ನೈಸರ್ಗಿಕ ಅನಿಲದ ಅಸ್ತಿತ್ವ ದೃಢಪಟ್ಟಿದೆ. ಸುಮಾರು 355 ಮೀಟರ್ ಆಳದ ಸಮುದ್ರದಲ್ಲಿ ಕೊರೆಯಲಾದ ಈ ಬಾವಿಯಲ್ಲಿ 1,900 ಮೀಟರ್‌ಗಿಂತ ಹೆಚ್ಚಿನ ಆಳದಲ್ಲಿ ಅನಿಲದ ಸುಳಿವು ದೊರೆತಿದ್ದು, ಪರೀಕ್ಷಾ ಹಂತದಲ್ಲಿ ನಿರಂತರವಾಗಿ ಅನಿಲ ಹೊರಹೊಮ್ಮಿರುವುದು ದೃಢಪಟ್ಟಿದೆ.

ಈಗ ಅನಿಲದ ಗುಣಮಟ್ಟ, ಉಷ್ಣಮೌಲ್ಯ ಮತ್ತು ವಾಣಿಜ್ಯ ಉತ್ಪಾದನೆಯ ಸಾಧ್ಯತೆಗಳ ಕುರಿತು ಹೆಚ್ಚಿನ ಪರೀಕ್ಷೆಗಳು ನಡೆಯುತ್ತಿವೆ. ಅಂಡಮಾನ್ ಕಣಿವೆಯಲ್ಲಿ ಆಯಿಲ್ ಇಂಡಿಯಾ ಇದುವರೆಗೆ ತೋಡಿರುವ ಮೂರು ಪರಿಶೋಧನಾ ಬಾವಿಗಳ ಪೈಕಿ ಎರಡರಲ್ಲಿ ಹೈಡ್ರೋಕಾರ್ಬನ್‌ಗಳ ಅಸ್ತಿತ್ವ ಪತ್ತೆಯಾಗಿರುವುದು ವಿಶೇಷವಾಗಿದೆ. ಈ ಹೊಸ ಪತ್ತೆಯು ದೇಶೀಯ ನೈಸರ್ಗಿಕ ಅನಿಲ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ, ವಿದೇಶಿ ಇಂಧನ ಆಮದು ಮೇಲಿನ ಅವಲಂಬನೆಯನ್ನು ತಗ್ಗಿಸಲು ಸಹಕಾರಿಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸುಸ್ಥಿರ ಅಭಿವೃದ್ಧಿ ಹೊಣೆ: ನ್ಯಾ.ವಿಭು ಬಕ್ರು

• **ಬೆಂಗಳೂರು:** ಹವಾಮಾನ ಬದಲಾವಣೆಯ ಪರಿಣಾಮಗಳು ಇಂದು ಜಾಗತಿಕ ಮಟ್ಟದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದು, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಹೈಕೋರ್ಟ್ ಮುಖ್ಯ ನ್ಯಾ.ವಿಭು ಬಕ್ರು ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಅರಣ್ಯ ಇಲಾಖೆ, ಕರ್ನಾಟಕ ಪಶುವೈದ್ಯ ಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಪಶುವೈದ್ಯಕೀಯ ಮಂಡಳಿ ಹಾಗೂ ಧರೆ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಹೆಬ್ಬಾಳದ ಕರ್ನಾಟಕ ಪಶುವೈದ್ಯಕೀಯ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ–2026ನ್ನು ಉದ್ಘಾಟಿಸಿ ಮಾತನಾಡಿದರು. ಅನಿಯಮಿತ ಮಳೆ, ಹೆಚ್ಚುತ್ತಿರುವ ಉಷ್ಣಾಂಶ, ಜಲಕ್ಷಾಮ, ಅರಣ್ಯ ನಾಶ ಹಾಗೂ ಜೀವ ವೈವಿಧ್ಯದ ಕುಸಿತವು ಮಾನವ ಸಮುದಾಯದ ಮುಂದಿರುವ ಗಂಭೀರ ಸವಾಲುಗಳಾಗಿದ್ದು, ಇವುಗಳನ್ನು ಎದುರಿಸಲು ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ ಎಂದರು.



ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ನ್ಯಾ.ಅನು ಶಿವರಾಮನ್, ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಸಿ. ವೀರಣ್ಣ, ಕರ್ನಾಟಕ ಅರಣ್ಯ ಪಡೆಯ ಮುಖ್ಯಸ್ಥರು ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್ ಎಂ. ಚಂದ್ರಶೇಖರ್ ರೆಡ್ಡಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ, ಧರೆ ಫೌಂಡೇಶನ್ ನಿರ್ದೇಶಕ ಡಿ.ಎಂ. ಪೂರ್ಣೇಶ್ ಇದ್ದರು.

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗ

• **ಬೆಂಗಳೂರು:** ರಾಜ್ಯ ಸರ್ಕಾರ ಶುಕ್ರವಾರ ಮತ್ತೆ ನಾಲ್ವರು ಐಎಎಸ್ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಯಾಗುವಂತೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿಯಾಗಿದ್ದ ಡಾ. ಮಂಜುಳಾ ಎನ್. ಅವರನ್ನು ವರ್ಗಾವಣೆ ಮಾಡಿ ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರಾಗಿ ನಿಯುಕ್ತಿ ಮಾಡಲಾಗಿದೆ. ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರಾಗಿದ್ದ ಡಾ. ರಾಮ್ ಪ್ರಸಾತ್ ಮನೋಹರ್ ಅವರನ್ನು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ನಿಯುಕ್ತಿಗೊಳಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಯಾಗಿದ್ದ ಜಗದೀಶ ಜಿ. ಅವರನ್ನು ವರ್ಗಾವಣೆ ಮಾಡಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರನ್ನಾಗಿ ನೇಮಿಸಲಾಗಿದೆ. ಸಹಕಾರ ಸಂಘಗಳ ಉಪ ನಿಬಂಧಕರಾಗಿದ್ದ ಆಗಿದ್ದ ಕಾಂತರಾಜು ಪಿ.ಎಸ್. ಅವರನ್ನು ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಯಾಗಿ ನಿಯುಕ್ತಿ ಮಾಡಲಾಗಿದೆ.

ಹೆಸರು ಬದಲಾವಣೆ

ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕು, ಖಾಸಗಿ ಬಸ್‌ನಿಲ್ದಾಣದ ರಸ್ತೆ ಪಕ್ಕ, ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರ ವಾಸ್ತವ್ಯವಿರುವ ತೇಜಸ್ ವಿ.ಎನ್. ರವರ ಪತ್ನಿ 29 ವರ್ಷ ಪ್ರಾಯದ **ಭಾವನ ಓ.ಆರ್.** ಆದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಮಗಳ ಮೊದಲಿನ ಹೆಸರು **ಯಾನ ಶ್ರೀ ಸಾಯಿ ಟಿ. ವೆನ್ನಲ್** ಎಂಬುದಾಗಿದ್ದು, ಮುಂದಿನ ಎಲ್ಲಾ ದಾಖಲಾತಿಗಳಿಗೆ **ಯಾನ ವಿ.ಟಿ.** ಎಂದು ಬದಲಾವಣೆಗೊಳಿಸಿ ದಿನಾಂಕ 05.06.2026ರಂದು ಅಫಿದವಿತ್ ಮೂಲಕ ವಕೀಲರು ಮತ್ತು ನೋಟರಿಯವರಾದ ಕೆ.ಎಸ್. ಚಂದ್ರಶೇಖರ್, ಕೊಡಗು ಇವರ ಮುಂದೆ ಪ್ರಮಾಣೀಕರಿಸಿರುತ್ತೇನೆ.

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಬಂಟ್ವಾಳ

ಕ್ರಿ.ಎಮ್.ಸಿ.: 198/2026

ಇವರೊಳಗೆ:

ಚಂದ್ರಾವತಿ ಮತ್ತು ಇನ್ನೊಬ್ಬರು ...ಅರ್ಜಿದಾರರು

ಮತ್ತು

ತಹಶೀಲ್ದಾರರು, ಬಂಟ್ವಾಳ ತಾಲೂಕು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೆ ಒಳಪಟ್ಟ ಬಂಟ್ವಾಳ ತಾಲೂಕಿನ ಕೆದಿಲ ಗ್ರಾಮದ ಕುದುಂಬ್ಲಾಡಿ ಎಂಬಲ್ಲಿ ವಾಸವಾಗಿರುವ ದಿ। ಧರ್ಣಪ್ಪ ಗೌಡರವರ ಮಗ **ಜಯಪ್ರಕಾಶ್** ಇವರು ದಿನಾಂಕ:13-04-2020ರಂದು ಮೃತಪಟ್ಟಿದ್ದು, ಅವರ ಮರಣವನ್ನು ಮರಣ ನೋಂದವಣಾ ಪತ್ರದಲ್ಲಿ ದಾಖಲಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ ದಿನಾಂಕ **04-07-2026ರಂದು ಬೆಳಿಗ್ಗೆ 11 ಗಂಟೆಗೆ** ನ್ಯಾಯಾಲಯದಲ್ಲಿ ವಿಚಾರಣೆಗಿದ್ದು, ಆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆ ದಿನ ವೈಯಕ್ತಿಕ ಅಥವಾ ವಕೀಲರ ಮೂಲಕ ಹಾಜರಾಗಬಹುದಾಗಿದೆ.

ನನ್ನ ಸಹಿ & ನ್ಯಾಯಾಲಯದ ಮೊಹರಿನೊಂದಿಗೆ 04-06-2026ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/- ಶಿರಸ್ತೇದಾರರು

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಬಂಟ್ವಾಳ

ಸಹಿ/- ದೀಪಕ್ ಪೆರಾಜೆ

ವಕೀಲರು, ಬಂಟ್ವಾಳ

ಕರ್ನಾಟಕ ಸರ್ಕಾರ — ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ-6/ಜೆಇ/2026-27 ದಿನಾಂಕ:- 05.06.2026

ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 6/ಜೆಇ/2026-27 ದಿನಾಂಕ: 05.06.2026.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ: 4059-80-051-0-29-386 – ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿಗೆ ಮೊತ್ತ ರೂ. 300.00 ಲಕ್ಷ. (ಇಂಡೆಂಟ್ ಸಂಖ್ಯೆ 35696) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 20.06.2026 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 22.06.2026 ಸಂಜೆ 4.30 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜ/129/ಕೆಎಸ್‌ಎಂಸಿಎ/2026-27

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಅರಣ್ಯ ಇಲಾಖೆ

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಸಾಮಾಜಿಕ ಅರಣ್ಯ ಉಪ-ವಿಭಾಗ, ಗದಗ

dcfsf.gadag@gmail.com

ಕಡತ ಸಂಖ್ಯೆ: ಎ2/ಬಿಜೆಟಿ/Work Tender/ಸಿಆರ್-/2026-27 ದಿನಾಂಕ: 03-06-2026

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2026-27 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ, ಮುಂಗಡ ಕಾಮಗಾರಿ, ಸಸಿಗಳನ್ನು ಬೆಳೆಸುವುದು, ಸಸಿಗಳ ನಿರ್ವಹಣೆ ಮತ್ತು ಇತರೆ ಕಾಮಗಾರಿಗಳ ಸಂಬಂಧ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ.

ಆದ್ದರಿಂದ ಇ-ಟೆಂಡರ್‌ನ್ನು ಪಾರದರ್ಶಕತೆ ನಿಯಮ ಹಾಗೂ ಅಧಿನಿಯಮಗಳನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದ ಪ್ರಕಾರ ಈ ಕೆಳಗಿನ ವೇಳಾಪಟ್ಟಿಗಳನ್ವಯ **ದಿನಾಂಕ: 03-06-2026** ರಂದು ಟೆಂಡರ್ ಆಹ್ವಾನಿಸಲಾಗಿದೆ. ಆದ್ದರಿಂದ ಸದರಿ ಪ್ರಕಟಣೆಯನ್ನು ಸ್ಥಳೀಯ ಕನ್ನಡ ದಿನಪತ್ರಿಕೆಗಳಲ್ಲಿ ಈ ಕೆಳಗಿನಂತೆ ಪ್ರಕಟಿಸಲು ಮತ್ತು ಪ್ರಕಟಣೆಗೊಂಡ ಪ್ರತಿಯನ್ನು ಪೂರೈಸಲು ಕೋರಲಾಗಿದೆ.

ಟೇಬಲ್-1

ಕ್ರ.ಸಂ	ವಿವರ	ದಿನಾಂಕ
1	ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ.	10-06-2026 ಬೆಳಿಗ್ಗೆ 11.00 ಗಂಟೆವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	11-06-2026 ಮಧ್ಯಾಹ್ನ 12.00 ಗಂಟೆಗೆ
3	ಆರ್ಥಿಕ ಬಿಡ್ ಟೆಂಡರ್ ಪರಿಶೀಲನೆ ದಿನಾಂಕ & ಸಮಯ	12-06-2026 ಮಧ್ಯಾಹ್ನ 01.00 ಗಂಟೆಗೆ

ಮೇಲಿನ ದಿನಾಂಕಗಳಂದು ಸಾರ್ವತ್ರಿಕೆ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು

ಇ-ಟೆಂಡರ್ ಶರತ್ತು ಹಾಗೂ ಹೆಚ್ಚಿನ ವಿವರಗಳನ್ನು ಸಾರ್ವಜನಿಕರ ತಿಳುವಳಿಕೆಗೋಸ್ಕರ ಇ-ಪೋರ್ಟಲ್ ವೆಬ್‌ಸೈಟ್‌ದಲ್ಲಿ ಇಡಲಾಗಿದೆ.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ-ವಿಭಾಗ, ಗದಗ.

ವಾ.ಸಾ.ಸಂ.ಇ/ಗದಗ/103/ದೇಶಪಾಂಡೆಪಬ್ಲಿಸಿಟಿ/2026-27

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಅಲ್ಪಾವಧಿ/ಟೆಂಡರ್ ಪ್ರಕಟಣೆ ಸಂ. 03/2026-27 ದಿನಾಂಕ : 05-06-2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	2ಕೆ ಪಿಯು ಪೇಂಟ್ಸ್ ಮತ್ತು ಪೂರಕ ಸಾಮಗ್ರಿಗಳು.	ರೂ. 550.00 ಲಕ್ಷ
2	ಈಟಿಎಂ ಗಳಲ್ಲಿ ಬಳಸುವ ಥರ್ಮಲ್ ಪೇಪರ್ ರೋಲ್‌ಗಳು.	ರೂ. 133.00 ಲಕ್ಷ
3	ಲೀಕ್ ಆಫ್ ಪೈಪಗಳು	ರೂ. 102.00 ಲಕ್ಷ
4	ಕೋಲ್ಡ್ ಅಪ್ಲೈಡ್ ಸೇಲ್ಫ್ ಅಡೆಸಿವ ಪೋಲಿಮರ್ ಮೋಡಿಫೈಡ್ ಬಿಟುಮಿನಿಯಸ್ ಕಂಪೋಸಿಟ್ ಮೇಮಬ್ರೇನ್ ವಿತ್ ಅಲ್ಯೂಮಿನಿಯಂ ಫಾಯಿಲ್	ರೂ. 80.00 ಲಕ್ಷ
5	ಜಿಪಿ ಕಾಯಿಲ್‌ಗಳು	ರೂ. 45.00 ಲಕ್ಷ
6	ಪ್ರಾದೇಶಿಕ ಕಾರ್ಯಾಗಾರ, ಹುಬ್ಬಳ್ಳಿಯಲ್ಲಿ ವಿವಿಧ ಪ್ಲ್ಯಾಂಟ್ ಮತ್ತು ಮಶೀನರಿಗಳನ್ನು ಸರಬರಾಜು ಮಾಡಿ ಕಾರ್ಯಾರಂಭಗೊಳಿಸುವ ಕುರಿತು.	ರೂ. 40.00 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : **22-06-2026** ಘಂಟೆ: 17:30 ವರೆಗೆ.

ವಿವರಗಳಿಗಾಗಿ ವೆಬ್ ಸೈಟ್ : **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂ. **7022009113** ಗೆ ಸಂಪರ್ಕಿಸಿ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಕರೆಯುವ ಪ್ರಾಧಿಕಾರ)

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/262/2026-27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಜಿಲ್ಲಾ ಪಂಚಾಯತ್ ಕೊಪ್ಪಳ, ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ : ಗ್ರಾ.ಕು.ನೀ. & ನೈ./ವಿ.ಕೊ./ಟೆಂಡರ್/2026-27/295 ದಿನಾಂಕ : 04-06-2026

ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.ರ ನಿಯಮಗಳನ್ವಯ **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ** ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ **http://kppp.karnataka.gov.in** ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ **2025-26 ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ.** ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು.

1) ಟೆಂಡರ್ ಪ್ರೋಸೆಸಿಂಗ್ ಶುಲ್ಕ : kppp.karnataka.gov.in ನಲ್ಲಿರುವಂತೆ, 2) ಟೆಂಡರ್ ಡೌನ್ ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ : 06-06-2026 ರ ಬೆಳಿಗ್ಗೆ 10.00 ಗಂಟೆಯಿಂದ 20-06-2026 ರ ಸಂಜೆ 4.00 ಗಂಟೆವರೆಗೆ, 3) ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : 06-06-2026 ರ ಸಂಜೆ 4.00 ಗಂಟೆಯಿಂದ 20-06-2026 ರ ಸಂಜೆ 4.00 ಗಂಟೆವರೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : 22-06-2026 ರ ಸಂಜೆ 4.30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : 24-06-2026 ರ ಬೆಳಿಗ್ಗೆ 11.00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ.

ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾದ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ **http://kppp.karnataka.gov.in** ದ್ವಾರ ಮಾಹಿತಿ ಪಡೆಯಬಹುದು. **ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ : 06-06-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/135/ಮಣಿಪಾಲ್/2026-27

ಬಜಪೆ ಪಟ್ಟಣ ಪಂಚಾಯತ್ ಕಾರ್ಯಾಲಯ, ಬಜಪೆ, ದ.ಕ.

ಸಂ: ಬಪಪಂ/ಜೆಇ/ಟೆಂಡರ್/12/2026-27 ದಿನಾಂಕ: 05-06-2026

ಟೆಂಡರ್ ಪ್ರಕಟಣೆ (ಇ-ಟೆಂಡರಿಂಗ್ ಮುಖಾಂತರ)

ಬಜಪೆ ಪಟ್ಟಣ ಪಂಚಾಯತ್‌ನ 2024-25ನೇ ಸಾಲಿನ ಪಟ್ಟಣ ಪಂಚಾಯತ್ ಸಾಮಾನ್ಯ ನಿಧಿ ಅನುದಾನದಡಿ 05 ಕಾಮಗಾರಿ ಹಾಗೂ 2026-27ನೇ ಸಾಲಿನ ಪಟ್ಟಣ ಪಂಚಾಯತ್ ಸಾಮಾನ್ಯ ನಿಧಿ ಅನುದಾನದಡಿ 04 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗು 01 ಕಾಮಗಾರಿಗೆ ಮೆಸ್ಕಾಂ ಇಲಾಖೆಯಲ್ಲಿ ನೊಂದಯಿತ ಅರ್ಹ ಗುತ್ತಿಗೆದಾರರಿಂದ ನಿರ್ಧಿಷ್ಟ ಟೆಂಡರು ದಸ್ತಾವೇಜಿನಲ್ಲಿ (KW1 tender document) ಇ-ಟೆಂಡರಿಂಗ್ ಮುಖಾಂತರ ಐಟಂವಾರು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಬಹುದು / ಪಡೆಯಬಹುದು.

Indent No.: DMA/2026-27/BD/WORK_INDENT59311
DMA/2026-27/RD/WORK_INDENT59312
DMA/2026-27/OW/WORK_INDENT59313
DMA/2026-27/OW/WORK_INDENT59314
DMA/ 2026-27/OW/WORK_INDENT59317
DMA/2026-27/OW/WORK_ INDENT59320
DMA/2026-27/OW/WORK_INDENT59323
DMA/2026-27/OW/WORK_INDENT59324
DMA/2026-27/EL/ WORK_INDENT59412

(1) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 05-06-2026 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 20-06-2026 ಸಂಜೆ 04:30 ಗಂಟೆಗೆ (3) ಸ್ವೀಕೃತವಾದ ಟೆಂಡರು ತೆರೆಯುವ ದಿನಾಂಕ ಮತ್ತು ವೇಳೆ: 22-06-2026 ಸಂಜೆ 11:00 ಗಂಟೆಗೆ

ಸಹಿ/- ಅಧ್ಯಕ್ಷರು, ಬಜಪೆ ಪಟ್ಟಣ ಪಂಚಾಯತ್

ಸಹಿ/- ಮುಖ್ಯಾಧಿಕಾರಿ, ಬಜಪೆ ಪಟ್ಟಣ ಪಂಚಾಯತ್

DIPR/DK/KSMCA/320/26-27 dt: 05.06.2026

ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441) ಸೌಹಾರ್ದ ಸಹಕಾರಿಗಳ ದಾವಾಪಂಚಾಯ್ತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ
ಸೌಹಾರ್ದ ಸಹಕಾರಿ ಸೌಧ #68,1ನೇ ಮಹಡಿ 17 &18 ಅಡ್ಡರಸ್ತೆ ಮಧ್ಯೆ ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

ವಾದಿ: ಮುಖ್ಯ ಕಾರ್ಯನಿರ್ವಾಹಕರು
ಮಾತೃಭೂಮಿ ಸೌಹಾರ್ದ ಸಹಕಾರಿ ಸಂಘ ನಿಯಮಿತ
ಮಾತೃಧಾಮ, ಗುರುಪುರ-ಕೈಕಂಬ, ಮಂಗಳೂರು-574151

ಪ್ರತಿವಾದಿಗಳು:

ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/2176/2025-26



ಸುಕುಮಾರ್ ವಿ.ಸಾಲಿಯಾನ್
ಬಿನ್.ದಿ.ವಾಸು ಶೇರಿಗಾರ್ ಅಲಿಯಾಸ್ ವಿ.ಸಿ.ಸಂಜೀವ
19-107/3, ಶ್ರೀ ಕಲ್ಯಾಣಿ ಕುಲಾಲ ಭವನದ ಹಿಂಬದಿ ತಡಂಬೈಲು ಗ್ರಾಮ ಸುರತ್ಕಲ್ ಅಂಚೆ, ಮಂಗಳೂರು ತಾಲೂಕು ದ.ಕ.-575014



ಕರುಣಾಕರನ್ ಅಮಿನ್
ಬಿನ್.ನಾರಾಯಣ ಅಮಿನ್
1-55, ಶ್ರೀವಾಸ್ತಂ, ಜಳಕದ ಕಟ್ಟೆ, ಕೊಂಡೆಮೂಲ ಗ್ರಾಮ ಮತ್ತು ಅಂಚೆ, ಕಟೀಲು, ಮಂಗಳೂರು, ದ.ಕ.-574149

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ:ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/2176/2025-26ರಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441) ಸೌಹಾರ್ದ ಸಹಕಾರಿಗಳ ದಾವಾಪಂಚಾಯ್ತಿ ನ್ಯಾಯಾಲಯದಲ್ಲಿ ವಾದಿ ಸಹಕಾರಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997 ಕಲಂ-39ರಡಿಯಲ್ಲಿ ಸಾಲ ವಸೂಲಾತಿಗಾಗಿ ದಾವೆ ದಾಖಲಿಸಿರುತ್ತಾರೆ.ಈ ಪ್ರಕರಣದಲ್ಲಿ ತಾವುಗಳು ಪ್ರತಿವಾದಿಯಾಗಿರುತ್ತೀರಿ.ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ **ದಿನಾಂಕ 19-06-2026 ರಂದು ಬೆಳಿಗ್ಗೆ 11-30 ಗಂಟೆಗೆ** ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸಿದೆ.ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ 04-06-2026ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-ಸಹಕಾರ ಸಂಘಗಳ ಜಂಟಿ ನಿಬಂಧಕರು(ನಿ.441)
ದಾವಾಪಂಚಾಯ್ತಿ ನ್ಯಾಯಾಲಯ
ಕ.ರಾ.ಸೌ.ಸಂ.ಸ.ನಿ.ಬೆಂಗಳೂರು.
(ನ್ಯಾಯಾಲಯದ ಆದೇಶದ ಮೇರೆಗೆ)

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಡಳಿತ ವೈದ್ಯಾಧಿಕಾರಿಯವರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ, 576201

ದೂರವಾಣಿ ಸಂಖ್ಯೆ: (08254) 230333/234808 ಇ-ಮೇಲ್: ghkundapura@yahoo.com

ಟೆಂಡರ್ ಪ್ರಕಟಣೆ

(1) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ:ತಾಸಾಆಕು/ಟೆಂಡರ್: ಗ್ರೂಪ್ ಡಿ ಹೊರಗುತ್ತಿಗೆ/4/2026-27 2026-27ನೇ ಸಾಲಿನಲ್ಲಿ ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ವಿವರ: 2026-27ನೇ ಸಾಲಿನಲ್ಲಿ ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ ಕುಂದಾಪುರ ಇಲ್ಲಿಯ ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ಅಂದಾಜು ಮೊತ್ತ: ರೂ. 23,00,000/-, ಇ.ಎಂ.ಡಿ ಮೊತ್ತ: ರೂ.57,500/-, ಟೆಂಡರ್ ಆರಂಭ ದಿನಾಂಕ: 08-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07-07-2026 ಅಪರಾಹ್ನ 4.30 ರ ವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 09-07-2026 ಪೂರ್ವಾಹ್ನ 11.30 ಗಂಟೆಗೆ

(2) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ:ತಾಸಾಆಕು/ಟೆಂಡರ್: ಗ್ರೂಪ್ ಡಿ ಹೊರಗುತ್ತಿಗೆ/5/2026-27 2026-27ನೇ ಸಾಲಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕುಂದಾಪುರ ಇಲ್ಲಿಯ ಸಿಬ್ಬಂದಿ / ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ವಿವರ: 2026-27ನೇ ಸಾಲಿನಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕುಂದಾಪುರ ಇಲ್ಲಿಯ ಸಿಬ್ಬಂದಿ / ಗ್ರೂಪ್ ಡಿ ಹೊರಗುತ್ತಿಗೆ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2027, ಟೆಂಡರ್ ಅಂದಾಜು ಮೊತ್ತ: ರೂ. 16,00,000/-, ಇ.ಎಂ.ಡಿ ಮೊತ್ತ: ರೂ. 40,000/-, ಟೆಂಡರ್ ಆರಂಭ ದಿನಾಂಕ: 08-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07-07-2026 ಅಪರಾಹ್ನ 4.30 ರ ವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 09-07-2026 ಪೂರ್ವಾಹ್ನ 11.30 ಗಂಟೆಗೆ

(3) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ:ತಾಸಾಆಕು/ನಾಕ್ಲಿಸೇ: /6/2026-27 2026-27ನೇ ಸಾಲಿನಲ್ಲಿ ನಾನ್ ಕ್ಲೀನಿಕಲ್ ಸೇವಾ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ವಿವರ: 2026-27ನೇ ಸಾಲಿನಲ್ಲಿ ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ ಕುಂದಾಪುರ ಇಲ್ಲಿಯ ನಾನ್ ಕ್ಲೀನಿಕಲ್ ಸೇವಾ ನಿರ್ವಹಣೆಗಾಗಿ ಇ-ಟೆಂಡರ್ ಆಹ್ವಾನ ದಿನಾಂಕ 08-06-2026, ಟೆಂಡರ್ ಅಂದಾಜು ಮೊತ್ತ: ರೂ. 28,00,000/-, ಇ.ಎಂ.ಡಿ ಮೊತ್ತ: ರೂ. 70,000/-, ಟೆಂಡರ್ ಆರಂಭ ದಿನಾಂಕ: 08-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07-07-2026 ಅಪರಾಹ್ನ 4.30 ರ ವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 09-07-2026 ಅಪರಾಹ್ನ 12.00 ಗಂಟೆಗೆ. ಟೆಂಡರ್ ತೆರೆಯಲು ಸ್ಥಳ: ಆಡಳಿತ ವೈದ್ಯಾಧಿಕಾರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ.

ಸಹಿ/- ಆಡಳಿತ ವೈದ್ಯಾಧಿಕಾರಿ,
ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ,
ಕುಂದಾಪುರ-576201, ಉಡುಪಿ ಜಿಲ್ಲೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/148/26-27 ದಿ: 04.06.2026

ಕರ್ನಾಟಕ ಸರಕಾರ

(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ) ಕರ್ನಾಟಕ ಜಲಸಾರಿಗೆ ಮಂಡಳಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ

ಕ್ರ.ಸಂ.ಕಜಮಂ-09/ಕಾಮಗಾರಿ-II/2026-27 ದಿನಾಂಕ: 04.06.2026

ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST)

"Relocating of 2.6m dia Red and Green Navigation channel marking UV Stabilized Polyethylene Buoys at desired location in the sea at Karwar Port in Uttara Kannada District" ಕಾಮಗಾರಿಯನ್ನು ಕೈಗೊಳ್ಳಲು ಪೂರ್ವ ಅನುಭವ ಹೊಂದಿರುವ ಹೆಸರಾಂತ, ವಿಶ್ವಾಸಾರ್ಹ, ಸಂಪನ್ಮೂಲ ಮತ್ತು ಅನುಭವಿ ಮತ್ತು ಸಮರ್ಥ ಸಲಹೆಗಾರ ಆಸಕ್ತ ಸಂಸ್ಥೆಗಳಿಂದ ಕೆಳ ಸಹಿದಾರರು ಕೊಟೇಶನ್‌ನ್ನು ಇ-ಪ್ರೊಕ್ಯೂರ್ಮೆಂಟ್(**KPP Portal**) ನಲ್ಲಿ ಆಹ್ವಾನಿಸಿದ್ದಾರೆ.

Sl. No.	Description Of the Work	Qty	Unit	Rate Excluding GST	
				Figures	words
1	2	3	4	5	6
1.	**RELOCATINGOF EXISTING/DEPLOYED 2.6 MTR DIA RED BUOY** Relocating of Existing/Deployed Navigational channel marking 2.6 Mtr Dia Red Buoy to the original position of Latitude 14° 48' 45.7880" NLongitude 074° 05' 40.0010" E without any damage to the existing structure of Buoy with necessary cleaning.	01	No		
2.	**RELOCATING OF EXISTING/DEPLOYED 2.6 MTR DIA GREEN BUOY** Relocating of Existing/Deployed Navigational channel marking 2.6 Mtr Dia Green Buoy to the original position of Latitude 14° 48' 38.5628" NLongitude 074° 05' 40.0010" E without any damage to the existing structure of Buoy with necessary cleaning.	01	No		

ಜಿಎಸ್‌ಟಿಯನ್ನು ಹೊರತುಪಡಿಸಿ ಅನ್ವಯವಾಗುವ ಎಲ್ಲಾ ತೆರಿಗೆಗಳು ಹಾಗೂ ಸುಂಕಗಳನ್ನು ಒಳಗೊಂಡತೆ ಸಂಪೂರ್ಣವಾಗಿ ಪೂರ್ಣಗೊಂಡ ದರಗಳನ್ನು ದಿನಾಂಕ: **09.06.2026** ರಂದು ಅಥವಾ ಮುಂಚಿತವಾಗಿ ಕೆಳಸಹಿದಾರರಿಗೆ ಇ-ಪ್ರೊಕ್ಯೂರ್ಮೆಂಟ್‌ನಲ್ಲಿ ಸಲ್ಲಿಸುವುದು. ಈ ಕೊಟೇಶನ್ ದರಗಳು ಅಂದಾಜು ಪಟ್ಟಿ ತಯಾರಿಸಲು / ಇಲಾಖೆಯ ಅನುದಾನ ಹಾಗೂ ಟೆಂಡರ್ ಉದ್ದೇಶದ ಮೌಲ್ಯಮಾಪನಗಳನ್ನು ಪಡೆಯುವ ಸಲುವಾಗಿ ಮಾತ್ರ ಸೀಮಿತವಾಗಿರುತ್ತದೆ. ವಿವರವಾದ ವಿವರಣೆಯು ಅನುಬಂಧ-I ರಲ್ಲಿ ನೀಡಲಾಗಿದೆ. ದಯವಿಟ್ಟು ದರಗಳನ್ನು ಸಲ್ಲಿಸುವ ಮೊದಲು ಇದನ್ನು ಪರಿಶೀಲಿಸಿ. ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. **(1) E-mail: piwtdev.wks@gmail.com (2) Phone No. 08382 -221494**

DIPR/KWR/KSMCA/178/26-27 dt. 04.06.2026

ಸಹಿ/- ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ-591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026-27/402-411 ದಿನಾಂಕ:05.06.2026.

"ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ" (ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ
1	Providing Infrastructure facility to HireBagewadi Village coming under the jurisdiction of Belagavi Rural Constituency under Bagewadi TFS in Belagavi Taluka Belagavi District. (W.I.No.KNNL/2026-27/RD/ WORK_INDENT4440)	338.71	ದರ್ಜೆ 2 ಮತ್ತು ಮೇಲ್ಪಟ್ಟು
2	Providing Infrastructure facility to Modaga, Honnihal, Balekundri KH, Mavinakatti Villages coming under the jurisdiction of Bagewadi TFS in Belagavi taluka Belagavi District. (W.I. No.KNNL/2026-27/RD/ WORK_INDENT4441)	422.85	ದರ್ಜೆ 2 ಮತ್ತು ಮೇಲ್ಪಟ್ಟು
3	Improvements to roads in Basurte Konewadi and Turmari Villages in Belagavi Taluka Belagavi District. (W.I.No.KNNL/2026-27/RD/ WORK_ INDENT 4442)	422.63	ದರ್ಜೆ 2 ಮತ್ತು ಮೇಲ್ಪಟ್ಟು
4	Providing Infrastructure facility to Ranakunde, Attiwad, Navage and Kangrali BK Villages coming under the jurisdiction of Hangaraga TFS in Belagavi Taluka Belagavi District. (W.I. No. KNNL/2026-27/RD/ WORK_INDENT4443)	422.66	ದರ್ಜೆ 2 ಮತ್ತು ಮೇಲ್ಪಟ್ಟು
5	Improvements to road from Yelebail village to Markandeya river (near surute village) in Belagavi Taluka. (KNNL/2025-26/ RD/WORK_INDENT4181/Call-2)	127.09	ದರ್ಜೆ 3 ಮತ್ತು ಮೇಲ್ಪಟ್ಟು
6	Providing infrastructure facilities to Hirebagewadi, Mutanal, Kalarkoppa and Siddanabhavi villages coming under the jurisdiction of Belagavi Rural Constituency under Bagewadi TFS in Belagavi Tulaka. (W.I.No.KNNL/2026-27/RD/WORK_INDENT4332/ Call-2)	207.38	ದರ್ಜೆ 2 ಮತ್ತು ಮೇಲ್ಪಟ್ಟು
7	Providing Infrastructure facility to Bendigeri Village coming under the jurisdiction of Belagavi Rural Constituency under Bagewadi TFS in Belagavi Taluka. (W.I.No.KNNL/2026-27/RD/WORK_INDENT4334/ Call-2)	338.76	ದರ್ಜೆ 2 ಮತ್ತು ಮೇಲ್ಪಟ್ಟು
8	Providing infrastructure facilities to Karadiguddi, Marihal, Tumaraguddi, Siddanahalli, Karikatti and Balekundri KH villages coming under the jurisdiction of Belagavi Rural Constituency under Bagewadi TFS in Belagavi Taluka. (W.I.No.KNNL/2026-27/RD/ WORK_ INDENT4338/Call-2)	207.40	ದರ್ಜೆ 2 ಮತ್ತು ಮೇಲ್ಪಟ್ಟು
9	Providing Infrastructure facility to Gajapati Village coming under the jurisdiction of Belagavi Rural Constituency under Bagewadi TFS in Belagavi Taluka. (W.I.No.KNNL/2026-27/RD/WORK_INDENT4343/ Call-2)	169.32	ದರ್ಜೆ 3 ಮತ್ತು ಮೇಲ್ಪಟ್ಟು
10	Providing Infrastructure facility to Chandan Hosur and Bastwad Villages coming under Bagewadi TFS in Belagavi Taluka. (W.I. No.KNNL/2026-27/RD/ WORK_INDENT4346/ Call-2)	422.60	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15.06.2026ರಂದು ಸಂಜೆ 4.00ಘಂಟೆ ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು ದಿನಾಂಕ:10.06.2026ರಂದು ಮುಂಜಾನೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:16.06.2026 ಸಂಜೆ 4.30 ಘಂಟೆಗೆ. ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08336-222163 ಸಂಪರ್ಕಿಸುವದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

DIPR/BGM/RO-NO-374/KSMCA/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-55) ಡ್ರಾ ಜೂನ್ 05ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RJ 587609 (THIRUVANANTHAPURAM)

Consolation Prize Rs.5,000/-
RA 587609 RB 587609 RC 587609 RD 587609
RE 587609 RF 587609 RG 587609 RH 587609
RK 587609 RL 587609 RM 587609

2nd Prize Rs.30,00,000/- [30 Lakhs]
RC 541496 (KOLLAM)

3rd Prize Rs.5,00,000/- [5 Lakhs]
RK 893093 (IRINJALAKKUDA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0014 0806 2140 2527 3314 3871 4023 4378 4998 5162 5319 6017 6295 7942 7975 8989 9377 9645 9837

5th Prize Rs.2,000/-
3401 4668 6068 6454 6969 9456

6th Prize Rs.1,000/-
0210 0810 0916 1048 1283 2125 2366 2842 3226 3369 3586 4791 5670 6041 6404 7214 7775 8456 8527 8656 9261 9264 9321 9680 9731

7th Prize Rs.500/-
0041 0087 0178 0223 0742 0749 0817 0977 1116 1129 1312 1316 1481 1497 1822 2154 2172 2618 2746 2867 3353 3359 3386 3824 3874 4061 4157 4279 4379 4433 4492 4578 4688 5261 5299 5404 5576 5748 5759 5964 6102 6176 6225 6296 6335 6641 6718 6973 7344 7358 7460 7474 7641 7671 7693 7803 7827 7919 7985 8110 8252 8473 8494 8592 8608 9092 9103 9191 9306 9343 9397 9560 9743 9847 9873 9893

8th Prize Rs.200/-
0083 0094 0202 0221 0245 0357 0436 0492 0552 0586 0850 0873 1079 1381 1512 1753 1942 1949 1950 1968 2003 2043 2221 2297 2309 2459 2581 2655 2718 3213 3272 3332 3367 3412 3464 3538 3664 3710 3739 3787 3829 3862 4016 4079 4240 4592 4610 4620 4797 4919 5137 5315 5317 5489 5504 5586 5646 5725 5770 5829 5854 6076 6152 6258 6407 6479 6562 6617 6625 6761 6812 7224 7423 7433 7479 7486 7750 7799 8001 8031 8207 8319 8406 8434 8495 8553 8937 9304 9311 9481 9567 9915

9th Prize Rs.100/-
0006 0007 0019 0100 0103 0179 0225 0248 0386 0507 0527 0555 0686 0909 0963 1084 1142 1162 1191 1445 1457 1579 1650 1681 1799 1842 1852 1854 2070 2119 2160 2314 2353 2435 2558 2876 2945 3062 3343 3385 3592 3708 3716 3755 3801 3866 3875 3938 4208 4267 4276 4311 4348 4377 4391 4421 4487 4511 4512 4514 4544 4698 4740 5009 5025 5047 5149 5174 5335 5433 5495 5500 5831 5898 5960 6000 6028 6116 6146 6174 6259 6285 6292 6382 6385 6388 6527 6658 6688 6691 6738 6811 6823 6899 6906 6958 7060 7103 7245 7442 7505 7758 7760 7816 7850 7879 7934 8014 8096 8330 8339 8345 8413 8474 8544 8691 8763 8850 8945 8987 8992 9022 9026 9048 9112 9132 9240 9298 9353 9380 9408 9411 9428 9431 9525 9526 9550 9739 9758 9788 9851 9857 9858 9990

ಕಿರುಸುದ್ದಿ

ಕಳ್ಳತನ ಪ್ರಕರಣ: ಇಬ್ಬರು ಆರೋಪಿಗಳ ಬಂಧನ




ಕುಂದಾಪುರ : ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕಕುರ್ಂಜೆ ಗ್ರಾಮದ ನೇರಳಕಟ್ಟೆ ಎಂಬಲ್ಲಿರುವ ನಿರಂಜನ್ ಭಟ್ ಎಂಬವರ ಮನೆಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿ ಲಕ್ಷಾಂತರ ಮೌಲ್ಯದ ಕಳವಾದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬ್ರಹ್ಮಾವರ ತಾಲೂಕಿನ ಕಾಡೂರು ಗ್ರಾಮದ ವಿಜಯ ಶೆಟ್ಟಿ (32) ಮತ್ತು ಕಾರ್ಕಳ 5 ಸೆಂಟ್ಸ್ ನಿವಾಸಿ ಅರ್ಜುನ್ ಪೂಜಾರಿ (29) ಬಂಧಿತ ಆರೋಪಿಗಳು. ಕಳ್ಳತನ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಅಶ್ರಫ್ ತಲೆಮರೆಸಿಕೊಂಡಿದ್ದು, ಆರೋಪಿ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.ಬಂಧಿತ ವಿಜಯ ಶೆಟ್ಟಿ ಎಂಬುವರಿಂದ ಕಳವಾದ ಸ್ವತ್ತುಗಳಲ್ಲಿ ಸುಮಾರು 9 ಲಕ್ಷ ಮೌಲ್ಯದ 66.22 ಗ್ರಾಂ ಚಿನ್ನ ಮತ್ತು 175.4 ಗ್ರಾಂ ಬೆಳ್ಳಿಯನ್ನು ಹಾಗೂ ಅರ್ಜುನ ಪೂಜಾರಿ ಎಂಬುವರಿಂದ ಕಳವಾದ ಸ್ವತ್ತುಗಳಲ್ಲಿ ಸುಮಾರು 2 ಲಕ್ಷ ಮೌಲ್ಯದ 18.200 ಗ್ರಾಂ ಚಿನ್ನವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಪ್ರಕರಣದ ವಿವರ

ಮೇ.23ರಂದು ಕಕುರ್ಂಜೆ ಗ್ರಾಮದ ನೇರಳಕಟ್ಟೆ ಎಂಬಲ್ಲಿರುವ ನಿರಂಜನ್ ಭಟ್ ಎಂಬವರ ಮನೆಯಲ್ಲಿ ಕಳ್ಳರು ಮನೆಯ ಬಾಗಿಲಿನ ಬೀಗ ಒಡೆದು ಮನೆಯಲ್ಲಿದ್ದ ಚಿನ್ನ, ಬೆಳ್ಳಿ ಹಾಗೂ ಹಣವನ್ನು ಕಳವು ಮಾಡಿಕೊಂಡು ಹೋಗಿದ್ದರು. ಈ ಬಗ್ಗೆ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದ ತನಿಖೆಯನ್ನು ಕುಂದಾ ಪುರ ಉಪ ವಿಭಾಗದ ಪೊಲೀಸ್ ಉಪಾ ಧೀಕ್ಷಕ ಎಚ್.ಡಿ. ಕುಲಕರ್ಣಿ ಹಾಗೂ ಕುಂದಾಪುರ ವೃತ್ತ ಪೊಲೀಸ್ ನಿರೀಕ್ಷಕ ಸಂತೋಷ್ ಎ. ಕಾಯ್ಕಿಣಿ ನೇತೃತ್ವದಲ್ಲಿ ಪೊಲೀಸ್ ಉಪನಿರೀಕ್ಷಕರಾದ ನಿರಂಜನ್ ಗೌಡ (ಕಾ.ಸು), ಚಂದ್ರಕಲಾ ಪತ್ತಾರ (ತನಿಖೆ) ಮತ್ತು ಸಿಬ್ಬಂದಿಗಳಾದ ರಾಜು ಬಿ., ಮೌನೇಶ್, ಶ್ರೀಧರ್ ಪಾಟೀಲ್, ಕಿರಣ ಬಿ. ಪಾಟೀಲ್, ಜಯರಾಮ, ಸುಧಾಕರ, ಚಂದ್ರ ಹಾಗೂ ಸಂತೋಷ್, ಪ್ರಿನ್ಸ್, ನಾಗೇಂದ್ರ, ಚಿದಾನಂದ, ಮಾಳಪ್ಪರವರ ತಂಡ ಕಾರ್ಯಾಚರಣೆ ನಡೆಸಿತ್ತು.

ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ಸಭೆ : ನೂತನ ಪದಾಧಿಕಾರಿಗಳ ಆಯ್ಕೆ

ಮಡಿಕೇರಿ:ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ನ ಮೊದಲ ಸಭೆ ಕೊಡಗು ಜಿಲ್ಲಾ ಕಾಂಗ್ರೆಸ್ ನ ಪ್ರಧಾನ ಕಚೇರಿಯಲ್ಲಿ ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಶಶಿಕಲಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಕೊಡಗು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಟಿ.ಪಿ.ರಮೇಶ್ ಅವರು ಮಹಿಳಾ ಘಟಕವನ್ನು ಮತ್ತಷ್ಟು ಸದೃಢಗೊಳಿಸಿ ಪಕ್ಷ ಸಂಘಟನೆಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ನೂತನ ಪದಾಧಿಕಾರಿಗಳ ಆಯ್ಕೆ

ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನಗರ ಪ್ರಧಾನ ಕಾರ್ಯದರ್ಶಿಯಾಗಿ ಪವಿತ್ರ ಎಸ್., ಉಪಾಧ್ಯಕ್ಷರಾಗಿ ಧನಲಕ್ಷ್ಮೀ (ಪೊನ್ನು), ಶ್ರೀಮತಿ ಬಂಗೇರ, ರೇವತಿ ರಮೇಶ್, ತಾಜುನ್ನಿಸ, ಹರಿಣಾಕ್ಷಿ, ಕಾರ್ಯದರ್ಶಿಯಾಗಿ ಕೆ.ಎಸ್.ಕುಸುಮ, ರೈಸಾಖಾನಂ, ಸುನಂದ, ವಿಮಲ, ಪ್ರೇಮ ನಿಂಗಪ್ಪ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಮುಮ್ತಾಜ್ ಬೇಗಂ ಆಯ್ಕೆಯಾದರು. ಈ ಸಂದರ್ಭ ಪಕ್ಷದ ಜಿಲ್ಲಾ ಗೌರವ ಪ್ರಧಾನ ಕಾರ್ಯದರ್ಶಿ ವಿ.ಪಿ.ಸುರೇಶ್ , ಮಡಿಕೇರಿ ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ , ಮಹಿಳಾ ಅಧ್ಯಕ್ಷೆ ಶಶಿಕಲಾ, ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ, ಜುಲೇಕಾಬಿ, ಫಾತಿಮಾ ಪ್ರಧಾನ ಕಾರ್ಯದರ್ಶಿಗಳಾದ ಕೋಚನ ಚೇತನ್, ಸಂಪತ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ ಸಾಧಕಿ ಅನಿಶಾ ಆಚಾರ್ಯಗೆ ಅಭಿನಂದನೆ



ಪಡುಬಿದ್ರಿ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರು ಇದರ ವತಿಯಿಂದ ರಾಜ್ಯಾಧ್ಯಕ್ಷರಾದ ಕೆ ಪಿ. ನಂಜುಂಡಿ ವಿಶ್ವಕರ್ಮ ಅವರ ಸಾರಥ್ಯದಲ್ಲಿ ಸಮಾಜದ ಸ್ವಾಮೀಜಿಗಳು ಹಾಗೂ ಮುಖಂಡರ ಸಹಭಾಗಿತ್ವದಲ್ಲಿ ಬೆಂಗಳೂರಿನ ಟೌನ್ ಹಾಲ್ (ಪುಟ್ಟಣ್ಣ ಚೆಟ್ಟಿ) ಭವನದಲ್ಲಿ ರಾಜ್ಯಮಟ್ಟದ ಮಕ್ಕಳ ಪ್ರತಿಭಾ ಪುರಸ್ಕಾರದಡಿ ಎಸ್ಸೆಸ್ಸೆಲ್ಸಿ ಸಾಧಕಿ ಅನಿಶಾ ಆಚಾರ್ಯ ಉಚ್ಚಿಲ ಅವರನ್ನು ಗೌರವಿಸಿ ಅಭಿನಂದಿಸಲಾಯಿತು.ಪ್ರಸ್ತುತ ಅದಮಾರು ಪೂರ್ಣಪ್ರಜ್ಞ ಕಾಲೇಜು ವಿಜ್ಞಾನ (ಪಿಸಿಎಂಬಿ) ವಿಭಾಗದ ಪ್ರಥಮ ಪಿಯುಸಿ ವಿದ್ಯಾರ್ಥಿನಿಯಾಗಿದ್ದು, ಪತ್ರಕರ್ತ ವಿಜಯ ಆಚಾರ್ಯ ಉಚ್ಚಿಲ, ಬೆಳಪು ಗ್ರಾ. ಪಂ. ಕಾರ್ಯದರ್ಶಿ ಚಂದ್ರಾವತಿ ವಿ. ಆಚಾರ್ಯ ದಂಪತಿ ಪುತ್ರಿ.



ಮಡಿಕೇರಿಯ ತಿತಿಮತಿ ಸಮೀಪದ ಕೋಣನಕಟ್ಟೆಯಲ್ಲಿ ಆನೆ ದಾಳಿಗೆ ಒಳಗಾಗಿ ಗಾಯಗೊಂಡಿರುವ ಕಾರ್ಮಿಕರ ಯೋಗಕ್ಷೇಮವನ್ನು ಶಾಸಕ ಎ.ಎಸ್.ಪೊನ್ನಣ್ಣ ವಿಚಾರಿಸಿದರು. ಆಸ್ಪತ್ರೆಯಲ್ಲಿದ್ದ ಅರಣ್ಯ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಕಾಸರಗೋಡಿನಲ್ಲಿ ಮೂರು ಆರ್‌ಟಿಒ ಕಚೇರಿಗಳಿಗೆ ವಿಜಿಲೆನ್ಸ್ ದಾಳಿ: ನಗದು ವಶ

- ಹೂವಿನ ಕುಂಡದಲ್ಲಿ ಹಣ ಪತ್ತೆ
- ಹೊಸದುರ್ಗ ಮತ್ತು ವೆಳ್ಳರಿಕುಂಡು ಆರ್‌ಟಿಒ ಕಚೇರಿಗಳಿಗೂ ವಿಜಿಲೆನ್ಸ್ ದಾಳಿ

ಕಾಸರಗೋಡು: ರಾಜ್ಯ ಮೋಟಾರು ವಾಹನ ಇಲಾಖೆಯ ಜಿಲ್ಲೆಯ ಮೂರು ಆರ್‌ಟಿಒ ಕಚೇರಿಗಳಿಗೆ ವಿಜಿಲೆನ್ಸ್ ತಂಡವು ಏಕಕಾಲದಲ್ಲಿ ದಾಳಿ ನಡೆಸಿದೆ.

ಕಾಸರಗೋಡು ವಿಜಿಲೆನ್ಸ್ ಆ್ಯಂಡ್ ಆ್ಯಂಟಿ ಕರಪ್ಶನ್ ಬ್ಯೂರೋದ ಡಿವೈಎಸ್‌ಪಿ ಉಣ್ಣಿಕೃಷ್ಣನ್ ನೇತೃತ್ವದ ತಂಡಗಳು ಈ ದಾಳಿ ನಡೆಸಿವೆ. ಈ ದಾಳಿಯಲ್ಲಿ ಕಾಸರಗೋಡು ಆರ್‌ಟಿಒ ಕಚೇರಿಯ ಆವರಣದ ಹೂವಿನ ಕುಂಡದಲ್ಲಿ ಬಚ್ಚಿಡಲಾಗಿದ್ದ 17,150 ರೂ.ವನ್ನು ವಿಜಿಲೆನ್ಸ್ ತಂಡವು ಪತ್ತೆಹಚ್ಚಿ ವಶಕ್ಕೆ ತೆಗೆದುಕೊಂಡಿದೆ. ಕಾಸರಗೋಡು ಮಾತ್ರವಲ್ಲದೆ ಹೊಸದುರ್ಗ ಮತ್ತು ವೆಳ್ಳರಿಕುಂಡು ಆರ್‌ಟಿಒ ಕಚೇರಿಗಳಿಗೂ ವಿಜಿಲೆನ್ಸ್ ದಾಳಿ ಮತ್ತು ಪರಿಶೀಲನೆ ನಡೆಸಿದ್ದ, ಅದರಲ್ಲಿ ಹಣ ಮಾತ್ರವಲ್ಲದೆ ಹಲವು ಅವ್ಯವಹಾರಗಳು ಪತ್ತೆಯಾಗಿವೆ ಎಂದು ವಿಜಿಲೆನ್ಸ್ ಅಧಿಕಾರಿಗಳು ತಿಳಿಸಿದ್ದಾರೆ. ಹೊಸದುರ್ಗ ಆರ್‌ಟಿಒ ಕಚೇರಿಯಲ್ಲಿ ನಡೆಸಿದ ದಾಳಿಯಲ್ಲಿ ಆ ಕಚೇರಿಯ ಸಿಬ್ಬಂದಿಯೋರ್ವರ ಕೈಯಲ್ಲಿ ವಾಹನಕ್ಕೆ ಸಂಬಂಧಿಸಿದ ಅರ್ಜಿಗಳು, ದಾಖಲೆಪತ್ರಗಳು ಹಾಗೂ ಏಜೆಂಟರುಗಳಿಗೆ ನೀಡಬೇಕಾಗಿದ್ದ 24ರಷ್ಟು ಅನುಮತಿ ಪತ್ರಗಳು ಪತ್ತೆಯಾಗಿವೆ ಎಂದು ವಿಜಿಲೆನ್ಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಜಿಲ್ಲೆಯ ಆರ್‌ಟಿಒ ಕಚೇರಿಗಳನ್ನು ಕೇಂದ್ರೀಕರಿಸಿ ವ್ಯಾಪಕವಾಗಿ ಭ್ರಷ್ಟಾಚಾರ ಹಾಗೂ ಅವ್ಯವಹಾರಗಳು ನಡೆಯುತ್ತಿವೆ ಎಂದು ಆರೋಪಿಸಿ ವಿಜಿಲೆನ್ಸ್ ವಿಭಾಗಕ್ಕೆ ಹಲವು ದೂರುಗಳು ಲಭಿಸಿದ್ದವು. ಅದರ ಆಧಾರದಲ್ಲಿ ವಿಜಿಲೆನ್ಸ್ ತಂಡವು ದಾಳಿ ನಡೆಸಿದೆ.

ಹೊಸದುರ್ಗ ಆರ್‌ಟಿಒ ಕಚೇರಿಗೆ ವಿಜಿಲೆನ್ಸ್ ಇನ್ಸ್‌ಪೆಕ್ಟರ್ ನಾರಾಯಣನ್ ಮತ್ತು ವೆಳ್ಳರಿಕುಂಡು ಆರ್‌ಟಿಒ ಕಚೇರಿಗೆ ಕಣ್ಣೂರು ವಿಜಿಲೆನ್ಸ್ ಇನ್‌ಸ್ಪೆಕ್ಟರ್ ಸುನೀಲ್ ಕುಮಾರ್ ನೇತೃತ್ವದಲ್ಲಿ ವಿಜಿಲೆನ್ಸ್ ತಂಡ ದಾಳಿ ಮತ್ತು ತಪಾಸಣೆ ನಡೆಸಲಾಯಿತು.

ಕೊಡಗಿನಲ್ಲಿ ರದ್ದಾಗಬೇಕಿದೆ ಅಕ್ರಮ ಮತದಾರರ ಚೀಟಿ | ವಿಶೇಷ ತೀವ್ರ ಪರಿಷ್ಕರಣೆ ಜಾರಿಗೆ ಆಗ್ರಹ

ಮಡಿಕೇರಿಯಲ್ಲಿ ಶಾಂತಿಯುತ ಸತ್ಯಾಗ್ರಹ



ಮಡಿಕೇರಿ: ಅಕ್ರಮ ಮತದಾರರ ಗುರುತಿನ ಚೀಟಿಗಳನ್ನು ರದ್ದುಗೊಳಿಸಲು 'ವಿಶೇಷ ತೀವ್ರ ಪರಿಷ್ಕರಣೆ' ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು, ಸ್ಥಳೀಯ ಆದಿಮ ಸಂಜಾತ ಕೊಡವರ ಚುನಾವಣಾ ಹಕ್ಕುಗಳ ರಕ್ಷಣೆ ಮಾಡಬೇಕು, 2027ರ ಜನಗಣತಿ ಹಾಗೂ ರಾಷ್ಟ್ರೀಯ ಜಾತಿ ಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಒದಗಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಡಿಕೇರಿಯಲ್ಲಿ ಶಾಂತಿಯುತ ಸತ್ಯಾಗ್ರಹ ನಡೆಸಿತು.

ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆದ ಸತ್ಯಾಗ್ರಹದ ನೇತೃತ್ವ ವಹಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಮತದಾರರ ಪಟ್ಟಿಯಲ್ಲಿ ಸಂಶಯಾಸ್ಪದ ಪೌರತ್ವ ಹೊಂದಿರುವವರನ್ನು ಸೇರ್ಪಡೆಗೊಳಿಸುತ್ತಿರುವುದರಿಂದ ಕೊಡವ ಭೂಮಿಯು ದೊಡ್ಡ ಪ್ರಮಾಣದ ಜನಸಂಖ್ಯಾ ಬದಲಾವಣೆಯನ್ನು ಎದುರಿಸುತ್ತಿದೆ. ಈ ಅಕ್ರಮ ಮತದಾರರ ಗುರುತಿನ ಚೀಟಿಗಳೇ ಕೊಡವರ ರಾಜಕೀಯ ಅಸ್ತಿತ್ವದ ವಿರೂಪಕ್ಕೆ ಮೂಲ ಕಾರಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಭಾರತದ ಇತರ ರಾಜ್ಯಗಳ ಜನರು ತಮ್ಮ ತವರು ಜಿಲ್ಲೆಯಲ್ಲಿ ಮಾತ್ರವಲ್ಲದೆ ಕೊಡಗು ಜಿಲ್ಲೆಯಲ್ಲೂ ಮತದಾರರ ಗುರುತಿನ ಚೀಟಿ ಮತ್ತು ಆಧಾರ್ ಹೊಂದಿದ್ದಾರೆ. ಚುನಾವಣೆಯ ಸಮಯದಲ್ಲಿ, ಕೊಡಗಿನಲ್ಲಿ ಮತ ಚಲಾಯಿಸುತ್ತಾರೆ. ಅಲ್ಲದೆ ತಮ್ಮ ತವರು ರಾಜ್ಯಕ್ಕೆ ಪ್ರಯಾಣಿಸಿ ಅಲ್ಲಿಯೂ ಮತದಾನ ಮಾಡುತ್ತಾರೆ. ಲೋಕಸಭಾ ಚುನಾವಣೆ ಭಾರತದಾದ್ಯಂತ 5ರಿಂದ 6 ಹಂತಗಳಲ್ಲಿ ನಡೆಯುತ್ತದೆ ಮತ್ತು ರಾಜ್ಯ ಚುನಾವಣೆಗಳು ಸಹ ವಿಭಿನ್ನ ಸಮಯಗಳಲ್ಲಿ ನಡೆಯುತ್ತವೆ. ವಿವಿಧ ಮತದಾನದ ವೇಳಾಪಟ್ಟಿಯು ಅಂತಹ ದ್ವಿ-ಐಡಿ ಹೊಂದಿರುವವರಿಗೆ ಹಲವು ಬಾರಿ ಮತ ಚಲಾಯಿಸಲು ಅನಗತ್ಯ ಅನುಕೂಲವನ್ನು ನೀಡುತ್ತದೆ. ಇದು 'ಒಬ್ಬ ವ್ಯಕ್ತಿ, ಒಂದು ಮತ' ತತ್ವವನ್ನು ಬುಡಮೇಲು ಮಾಡುತ್ತದೆ ಮತ್ತು ಕೊಡವರ ರಾಜಕೀಯ ಪ್ರಾತಿನಿಧ್ಯವನ್ನು ವಿರೂಪಗೊಳಿಸುತ್ತದೆ ಎಂದು ಗಮನ ಸೆಳೆದರು.

ಕೇಂದ್ರ ಗೃಹ ಸಚಿವಾಲಯವು ಸ್ಥಾಪಿಸಿರುವ ಜನಸಂಖ್ಯಾ ಬದಲಾವಣೆ ಕುರಿತ ಉನ್ನತ ಮಟ್ಟದ ಸಮಿತಿಯು ಇದನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಅಂತಹ ಜನರನ್ನು ಪಟ್ಟಿಯಿಂದ ತೆಗೆದು ಹಾಕಬೇಕು ಮತ್ತು ಭಾರತದ ಈಶಾನ್ಯ ವಲಯದಲ್ಲಿ ಜಾರಿಗೊಳಿಸಿರುವಂತೆ ಲೇಖನ 371 ರಲ್ಲಿ ಅಳವಡಿಸಲಾಗಿರುವ ಇನ್ನರ್ ಲೈನ್ ಪರ್ಮಿಟ್ ಅಡಿಯಲ್ಲಿ ಕೊಡವ ಪ್ರದೇಶವನ್ನು ತರಬೇಕು. ಕೊಡಗಿನ ಮತದಾರರ ಪಟ್ಟಿಯನ್ನು ನೆರೆಯ ಜಿಲ್ಲೆಗಳಾದ ಚಾಮರಾಜನಗರ, ಮೈಸೂರು, ಹಾಸನ, ದಕ್ಷಿಣ ಕನ್ನಡ ಮತ್ತು ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಉತ್ತರ ಪ್ರದೇಶ, ಒಡಿಶಾ, ಬಿಹಾರ, ಅಸ್ಸಾಂ, ಪಶ್ಚಿಮ ಬಂಗಾಳ, ಜಮ್ಮು ಮತ್ತು ಕಾಶ್ಮೀರ ಮುಂತಾದ ರಾಜ್ಯಗಳೊಂದಿಗೆ ತಪಾಸಣೆಗೆ ಒಳಪಡಿಸಿ ದ್ವಿಮುಖ ನಮೂದುಗಳನ್ನು ರದ್ದುಗೊಳಿಸಬೇಕು. ಹಾಗೆಯೇ ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಮ್ಯಾನ್ಮಾರ್‌ನ ರೋಹಿನ್ ಪ್ರಾಂತ್ಯದ (ರೋಹಿಂಗ್ಯಾ) ವಿದೇಶಗಳಿಂದ ರಹಸ್ಯ ವಾಗಿ ಪೌರತ್ವ ಪಟ್ಟಿಗೆ ಸೇರಿದ ಅಕ್ರಮ ವಲಸಿಗರನ್ನು ತೆಗೆದು ಹಾಕಬೇಕು. ಏಜೆಂಟರು, ದಲ್ಲಾಳಿಗಳು ಹಾಗೂ ಸಹಕರಿ ಸುವವರ ವಿರುದ್ಧ ಐಪಿಸಿ 420, 468, 471 ಮತ್ತು ಆರ್‌ಪಿ ಕಾಯ್ದೆ 1950ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಬೇಕು. ಇದೇ ಜೂ. 20ರಿಂದ ಎಸ್‌ಐಆರ್ ಪ್ರಾರಂಭಕ್ಕೂ ಮುನ್ನ ಸುಂಟಿಕೊಪ್ಪ, ಮತ್ತಿಕಾಡು, ಸಿದ್ದಾಪುರ ಮತ್ತು ಕುಟ್ಟ ಮತ್ತಿತರ ತೋಟದ ವಲಯಗಳಲ್ಲಿ ಪರಿಶೀಲನೆಗಾಗಿ ವಿಶೇಷ ಕಾರ್ಯಪಡೆಯನ್ನು ರಚಿಸಬೇಕು ಎಂದು ಒತ್ತಾಯಿಸಿದರು.

ಅಕ್ರಮ ಮತದಾರರು

ಸುಂಟಿಕೊಪ್ಪ ಮತ್ತಿಕಾಡು, ಸಿದ್ದಾಪುರ, ಕುಟ್ಟ ಮುಂತಾದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ವ್ಯಕ್ತಿಗಳು ವಿವಿಧ ರಾಜ್ಯಗಳು ಮತ್ತು ವಿದೇಶಗಳಿಂದ ಕಾರ್ಮಿಕರನ್ನು ದೊಡ್ಡ ಕಾರ್ಪೊರೇಟ್ ತೋಟಗಳಿಗೆ ಪೂರೈಸುತ್ತಿರುವುದು ಗಮನಕ್ಕೆ ಬಂದಿದೆ. ವಲಸೆ ಕಾರ್ಮಿಕರಿಗೆ ನಕಲಿ ಆಧಾರ್ ಮತ್ತು ಮತದಾರರ ಗುರುತಿನ ಚೀಟಿಗಳ ವ್ಯವಸ್ಥೆ ಮಾಡಲಾಗುತ್ತಿದೆ. ಪ್ರತಿ ಆಧಾರ್‌ಗೆ ರೂ.2 ಸಾವಿರ ವಸೂಲಿ ಮಾಡಲಾಗುತ್ತಿದೆ. ಈ ಜಾಲವು ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಸೇರ್ಪಡೆಗೊಳ್ಳಲು ಅನುಕೂಲ ಮಾಡಿ ಕೊಡುತ್ತಿದೆ ಎಂದು ಎನ್.ಯು.ನಾಚಪ್ಪ ಆರೋಪಿಸಿದರು.

ವಿವಿಧ ಹಕ್ಕೊತ್ತಾಯಗಳನ್ನೊಳಗೊಂಡ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ಗೃಹ ಸಚಿವರು, ಅಧ್ಯಕ್ಷರು, ಜನಸಂಖ್ಯಾ ಬದಲಾವಣೆ ಕುರಿತ ಉನ್ನತ ಮಟ್ಟದ ಸಮಿತಿ, ಜನಗಣತಿ ಆಯುಕ್ತರು ಹಾಗೂ ಮುಖ್ಯ ಚುನಾವಣಾಧಿಕಾರಿಗಳಿಗೆ ಸಲ್ಲಿಸಿದರು. ಚೋಳಪಂಡ ಜ್ಯೋತಿ ನಂಜಪ್ಪ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಮುದ್ದಿಯಡ ಲೀಲಾವತಿ, ಮೇ. ಅಳಮಂಡ ಜೈ ಗಣಪತಿ, ಪಟ್ಟಮಾಡ ಕುಶ, ನಂದೇಟಿರ ರವಿ ಸುಬ್ಬಯ್ಯ, ಮಂದಪಂಡ ಮನೋಜ್ ಮಂದಣ್ಣ, ಕಿರಿಯಮಾಡ ಶರಿನ್, ಅರೆಯಡ ಗಿರೀಶ್, ಅಪ್ಪಾರಂಡ ಪ್ರಸಾದ್ ಕುಶಾಲಪ್ಪ, ಪುದಿಯೊಕ್ಕಡ ಕಾಶಿ ಕರುಂಬಯ್ಯ, ಮಣವಟ್ಟಿರ ಚಿಣ್ಣಪ್ಪ, ಪುದಿಯೊಕ್ಕಡ ಪೃಥ್ವಿ, ಪುಟ್ಟಿಚಂಡ ಡಾನ್ ದೇವಯ್ಯ, ಬೇಪಡಿಯಂಡ ಬಿದ್ದಪ್ಪ, ಸಾದೆರ ರಮೇಶ್, ಪಾಲೇಕಂಡ ಪ್ರಧಾನ್ ಪೊಣಚ್ಚ, ಚೋಳಪಂಡ ನಾಣಯ್ಯ,ನಂದಿನೆರವಂಡ ಅಯ್ಯಣ್ಣ, ಚೊಕ್ಕಂಡ ಕಟ್ಟಿ, ಅಚ್ಚಕಾಳೇರ ನವೀನ್ ಮೊಣ್ಣಪ್ಪ, ಕೂತಂಡ ರೋಷನ್ ಮತ್ತಿತರರು ಪಾಲ್ಗೊಂಡಿದ್ದರು. ಜಿಲ್ಲಾಡಳಿತದ ಪರವಾಗಿ ಅಪರ ಜಿಲ್ಲಾಧಿಕಾರಿ ಡಾ.ಸಹನಾ ಹಾದಿಮನಿ ಅವರು ಜ್ಞಾಪನಾ ಪತ್ರ ಸ್ವೀಕರಿಸಿದರು.

ಶ್ರೀ ರಾಮಕುಂಜೇಶ್ವರ ವಿದ್ಯಾಸಂಸ್ಥೆಯಲ್ಲಿ ಪ್ರತಿಭಾ ಪುರಸ್ಕಾರ

ಉತ್ತಮ ಉದ್ಯೋಗಕ್ಕೆ ಕೌಶಲ್ಯ ಮುಖ್ಯ



ಕಡಬ: ವಿದ್ಯಾರ್ಥಿಗಳ ಅಂಕ ಪರಿಗಣಿಸಿ ಯಾರೂ ಉದ್ಯೋಗ ಕೊಡುವುದಿಲ್ಲ. ಕೌಶಲ್ಯ ಮುಖ್ಯ. ಆದ್ದರಿಂದ ಒಳ್ಳೆಯ ಉದ್ಯೋಗ ಪಡೆಯಲು ವಿದ್ಯಾರ್ಥಿಗಳು ಕೌಶಲ್ಯ ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಹಲವು ಅವಕಾಶಗಳಿವೆ. ತಮ್ಮ ಸಾಮರ್ಥ್ಯ ಅರಿತುಕೊಂಡು ಮುಂದುವರಿಯಬೇಕೆಂದು ಉಡುಪಿ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ನುಡಿದರು.

ಅವರು ಗುರುವಾರ ರಾಮಕುಂಜದ ಶ್ರೀರಾಮಕುಂಜೇಶ್ವರ ಪ.ಪೂ.ಕಾಲೇಜು ಮತ್ತು ಪ್ರೌಢಶಾಲೆಯಲ್ಲಿ 2025-26ನೇ ಸಾಲಿನ ದ್ವಿತೀಯ ಪಿಯುಸಿ ಹಾಗೂ ಎಸ್ಎಸ್‌ಎಲ್‌ಸಿ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಿ ಆಶೀರ್ವಚನ ನೀಡಿದರು.

ವ್ಯಕ್ತಿತ್ವ ಮುಖ್ಯ

ಮುಖ್ಯ ಅತಿಥಿಯಾಗಿದ್ದ ಮೆಸ್ಕಾಂ ದ.ಕ.ಜಿಲ್ಲಾ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ ಕಲ್ಲೂರಾಯ ಮಾತನಾಡಿ, ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವರ ಆಸಕ್ತಿಗೆ ಸರಿಯಾದ ಅನೇಕ ದಾರಿಗಳಿವೆ. ಇಂದಿನ ಕಾಲದಲ್ಲಿ ಪ್ರತಿಭೆಗಿಂತ ಸ್ಕಿಲ್ ಡೆವಲಪ್‌ಮೆಂಟ್‌ಗೆ ಹೆಚ್ಚು ಮಹತ್ವವಿದೆ. ಆದ್ದರಿಂದ ವಿದ್ಯಾರ್ಥಿಯ ಪರಿಶ್ರಮ, ವ್ಯಕ್ತಿತ್ವ ಭವಿಷ್ಯವನ್ನು ನಿರ್ಣಯಿಸಲಿದೆ ಎಂದರು.

ವಿದ್ಯಾರ್ಥಿಗಳಿಗೆ ಗೌರವಾರ್ಪಣೆ

ಕಲಿಕೆಯಲ್ಲಿ ಹಿಂದುಳಿದ, ಎಸ್‌ಎಸ್‌ಎಲ್‌ಸಿಯ ಮಧ್ಯವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೂ ಬಳಿಕ ವಿಶೇಷ ತರಗತಿಗಳಿಗೆ ಹಾಜರಾಗಿ ವಾರ್ಷಿಕ ಪರೀಕ್ಷೆಯಲ್ಲಿ 400ಕ್ಕಿಂತ ಹೆಚ್ಚು ಅಂಕ ಪಡೆದುಕೊಂಡ 9 ವಿದ್ಯಾರ್ಥಿಗಳನ್ನು ಸ್ವಾಮೀಜಿ ಗೌರವಿಸಿದರು. ಎನ್‌ಎಂಎಂಎಸ್ ಸಾಧಕ ವಿದ್ಯಾರ್ಥಿಗಳು, ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ವಿಶಿಷ್ಠ ಶ್ರೇಣಿಯಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಶಾಲು ಹಾಕಿ, ಪ್ರಶಂಸಾ ಪತ್ರ ನೀಡಿ ಗೌರವಿಸಿದರು.

ಸೇನೆಗೆ ನೇಮಕ ವಿದ್ಯಾರ್ಥಿಗಳಿಗೆ ಸನ್ಮಾನ

ಭಾರತೀಯ ಭೂ ಸೇನೆಗೆ ಅಗ್ನಿವೀರ್ ಆಗಿ ಆಯ್ಕೆಗೊಂಡಿರುವ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಾದ ಪ್ರಫುಲ್ ಕೇಪುಂಜ ಹಾಗೂ ಸಂದೇಶ್ ಕೊಯ್ಲ ಅವರನ್ನು ಗೌರವಿಸಲಾಯಿತು.

ಮುಖ್ಯಶಿಕ್ಷಕ ಸತೀಶ್ ಭಟ್, ಶಿಕ್ಷಕರಾದ ದಿನೇಶ್ ಬಿ., ಉಷಾ ಹಾಗೂ ಉಪನ್ಯಾಸಕ ಚೇತನ್‌ಕುಮಾರ್ ವಿದ್ಯಾರ್ಥಿಗಳ ಹೆಸರು ವಾಚಿಸಿದರು. ಶಿಕ್ಷಕ ಪ್ರವೀಣ್‌ಕುಮಾರ್ ಅತಿಥಿಗಳನ್ನು ಪರಿಚಯಿಸಿದರು.

ಆಲಂಕಾರು ಶ್ರೀ ಭಾರತಿ ಆಂಗ್ಲ ಮಾಧ್ಯಮ ಶಾಲಾ ಮುಖ್ಯಶಿಕ್ಷಕ ಸತೀಶ್ ಕುಮಾರ್ ಜಿ.ಆರ್., ತುಳುಚಲನಚಿತ್ರ ನಟ ರವಿ ರಾಮಕುಂಜ, ಶ್ರೀ ರಾಮಕುಂಜೇಶ್ವರ ವಿದ್ಯಾವರ್ಧಕ ಸಭಾದ ಸಂಚಾಲಕ ಟಿ.ನಾರಾಯಣ ಭಟ್, ಸದಸ್ಯ ಲಕ್ಷ್ಮೀನಾರಾಯಣ ರಾವ್, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅಶೋಕ್ ಕೊಯ್ಲ, ಪ್ರಾಂಶುಪಾಲ ಚಂದ್ರಶೇಖರ ಕೆ., ಮುಖ್ಯಶಿಕ್ಷಕ ಸತೀಶ್ ಭಟ್ ಉಪಸ್ಥಿತರಿದ್ದರು. ಶ್ರೀ ರಾಮಕುಂಜೇಶ್ವರ ವಿದ್ಯಾವರ್ಧಕ ಸಭಾದ ಕಾರ್ಯದರ್ಶಿ ರಾಧಾಕೃಷ್ಣ ಕೆ.ಎಸ್. ಪ್ರಸ್ತಾವನೆಗೈದರು. ಉಪನ್ಯಾಸಕ ಬಿ.ಸುಬ್ರಹ್ಮಣ್ಯ ಕಾರಂತ ಸ್ವಾಗತಿಸಿ, ಶಿಕ್ಷಕ ವೆಂಕಟೇಶ್ ದಾಮ್ಲೆ ವಂದಿಸಿದರು. ಲೋಹಿತ್‌ಕುಮಾರ್ ನಿರೂಪಿಸಿದರು.

ಡಿ.ಕೆ. ಶಿವಕುಮಾರ್ ಸಿಎಂ ಆಗಿರುವ ಸಮಯ ಸಮರ್ಪಕವಾಗಿಲ್ಲ: ಡಿ.ವಿ. ಸದಾನಂದ ಗೌಡ

ಪುತ್ತೂರು: ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಿರುವ ಸಮಯ ಸಮರ್ಪಕವಾಗಿದೆಎಂದುನನಗೆಅನಿಸುತ್ತಿಲ್ಲ. ಮೂರು ವರ್ಷ ನಡೆದು ಬಂದ ಹಾದಿಯನ್ನು ಮೀರಿ ಅವರು ಹೋದರೆ ಮಾತ್ರ ಅವರು ಯಶಸ್ವಿಯಾಗುತ್ತಾರೆ. ಈಗ ಅವರು ಮುಳ್ಳಿನ ಹಾಸಿಗೆಯಲ್ಲಿ ಮಲಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ವಿಶ್ಲೇಷಿಸಿದ್ದಾರೆ.

ಪುತ್ತೂರು ಎವಿಜಿ ಇಂಗ್ಲಿಷ್ ಮಿಡಿಯಂ ಸ್ಕೂಲ್ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ ಅವರು ಮಾಧ್ಯಮದ ಜೊತೆ ಮಾತನಾಡಿದರು. ಕಾಂಗ್ರೆಸ್ ಸರಕಾರದ ಮೊದಲ ಅವಧಿಯಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಭಿವೃದ್ಧಿ ಕುಂಠಿತ, ಗುಂಪು ರಾಜಕೀಯವನ್ನು ಕಂಡಿದ್ದೇವೆ. ಈಗಾಗಲೇ ರಾಮಲಿಂಗರೆಡ್ಡಿ ರಾಜೀನಾಮೆ ಕೊಟ್ಟಿರುವುದು ನೋಡಿದರೆ ಮುಖ್ಯಮಂತ್ರಿಯವರು ಮುಳ್ಳಿನ ಹಾಸಿಗೆಯಲ್ಲಿ ಮಲಗಿದ್ದಾರೆ. ಇದು ಭೀಷ್ಮನ ಕೊನೆಯ ದಿನದಂತೆ ಆಗುತ್ತದೆ ಎಂದು ನಾನು ಭಾವಿಸಿದ್ದೇನೆ. ಒಬ್ಬ ಒಕ್ಕಲಿಗ ಸಮಾಜದ ವ್ಯಕ್ತಿ ಮುಖ್ಯಮಂತ್ರಿ ಆಗಿರುವುದು ನಮಗೆ ಗೌರವ ಇದೆ. ಆದರೆ ಅವರ ಯೋಚನೆ ಯಶಸ್ವಿಯಾಗಿ ಪೂರೈಸಲು ಈಗಿನ ದಿನದಲ್ಲಿ ಅಸಾಧ್ಯವೆಂಬಂತೆ ಅನಿಸುತ್ತಿದೆ ಎಂದರು.



ಲಾಬಿ ಮಾಡುವುದಿಲ್ಲ

ಚುನಾವಣಾ ರಾಜಕಾರಣಕ್ಕೆ ನಾನು ಸ್ಪರ್ಧಿಯಲ್ಲ, ನಾನೊಬ್ಬ ಸಂತೃಪ್ತಿ ರಾಜಕಾರಣಿ, ಆದರೆ ರಾಜ್ಯಸಭಾ ಚುನಾವಣೆಯಲ್ಲಿ ಅಪೇಕ್ಷಿತ ಹೌದು. ಹಾಗೆಂದು ಲಾಬಿ ಮಾಡುವುದಿಲ್ಲ. ಮೊನ್ನೆ ಕೋರ್ ಕಮಿಟಿ ಮೀಟಿಂಗ್‌ನಲ್ಲಿ ಎಲ್ಲಾ 13 ಮಂದಿ ನನ್ನ ಹೆಸರನ್ನೇ ಉಲ್ಲೇಖಿಸಿದ್ದಾರೆ. ಇನ್ನು ರಾಷ್ಟ್ರೀಯ ನಾಯಕರ ತೀರ್ಮಾಣಕ್ಕೆ ನಾನು ಬದ್ಧ. ರಾಜ್ಯ ಅಧ್ಯಕ್ಷರ ಬದಲಾವಣೆ ಕುರಿತು ಕೇಂದ್ರ ಕೈಗೊಳ್ಳುವ ತೀರ್ಮಾಣ ಅಂತಿಮ ಎಂದು ಡಿವಿಎಸ್ ಹೇಳಿದರು.

ಪುತ್ತೂರು ಮಾರುಕಟ್ಟೆ ಧಾರಣೆ

05-06-2026 ಅಡಿಕೆ ಧಾರಣೆ ಕೆ.ಜಿ.ಗೆ


ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	340 - 390
ಹಳೆ ಪಟೋರ	360 - 390
ಹೊಸ ಉಳ್ಳಿ	140 - 285
ಹಳೆ ಉಳ್ಳಿ	130 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ	
ಕಾಳುಮೆಣಸು	450 - 670

ರಬ್ಬರ್ ಧಾರಣೆ : ಗ್ರೇಡ್	
ಆರ್‌ಎಸ್‌ಎಸ್ 1	258.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	148.50
ಸ್ಕ್ರಾಪ್ 2	140.00

ನುಳ್ಳಿಪ್ಪಾಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಗೆ ವಾಹನ ಪ್ರವೇಶ ವ್ಯವಸ್ಥೆ | ಉನ್ನತ ಮಟ್ಟದ ತಂಡ ಭೇಟಿ, ಪರಿಶೀಲನೆ

ಸುಗಮ ಸಂಚಾರದ ನಿರೀಕ್ಷೆಯಲ್ಲಿ ವಾಹನ ಸವಾರರು!



ಕಾಸರಗೋಡು: ಕಾಸರಗೋಡಿನಿಂದ ವಿದ್ಯಾನಗರ ವರೆಗಿನ 3 ಕಿಲೋ ಮೀಟರ್‌ಗಳಷ್ಟು ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯು ತೀವ್ರವಾದ ಸಂಚಾರ ದಟ್ಟಣೆಯನ್ನು ಅನುಭವಿಸುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಲು ನುಳ್ಳಿಪ್ಪಾಡಿಯಲ್ಲಿ ಸರ್ವೀಸ್ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗೆ ವಾಹನಗಳು ಪ್ರವೇಶಿಸಲು ಅವಕಾಶ ಮಾಡಿ ಕೊಡಲಾಗುವುದು ಎಂದು ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದರಂತೆ ಬುಧವಾರ ಮಧ್ಯಾಹ್ನ ಉನ್ನತ ಮಟ್ಟದ ತಂಡವು ನುಳ್ಳಿಪ್ಪಾಡಿಗೆ ಭೇಟಿ ಮಾಡಿ ಜನಪ್ರತಿನಿಧಿಗಳೊಂದಿಗೆ ಈ ಕುರಿತು ಸಮಾಲೋಚನೆ ನಡೆಸಿತು.

ಕಾಸರಗೋಡು ನಗರದಿಂದ ಚೆರ್ಕಳ ಭಾಗಕ್ಕೆ ತೆರಳುವ ವಾಹನಗಳಿಗೆ ಪ್ರಸ್ತುತ ಮೂರು ಕಿಲೋ ಮೀಟರ್ ದೂರದಲ್ಲಿ ಜಿಲ್ಲಾಧಿಕಾರಿ ಕಚೇರಿ ಜಂಕ್ಷನ್ ಬಳಿಕ ಹಳೆಯ ಸಿಪಿಎಂ ಜಿಲ್ಲಾ ಸಮಿತಿ ಕಚೇರಿ ಸಮೀಪ ರಾಷ್ಟ್ರೀಯ ಹೆದ್ದಾರಿ ಪ್ರವೇಶಿಸಲು ಪ್ರಸ್ತುತ ದಾರಿ ಮಾಡಿಕೊಡಲಾಗಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಸರಗೋಡಿನಲ್ಲಿರುವ ಮೇಲ್ಸೇತುವೆಯ ಮೂಲಕ ಚೆರ್ಕಳ ಭಾಗಕ್ಕೆ ಬರುವ ವಾಹನಗಳಿಗೆ ಸರ್ವೀಸ್ ರಸ್ತೆಗೆ ಇಳಿಯಲು ಅಣಂಗೂರಿನಲ್ಲಿ ಸೌಕರ್ಯವಿದೆ. ಕಾಸರಗೋಡಿನಿಂದ ಬಿ.ಸಿ.ರೋಡ್‌ವರೆಗಿನ ಮೂರು ಕಿಲೋ ಮೀಟರ್‌ನೊಳಗೆ ಮೂರು ಅಂಡರ್‌ಪಾಸ್‌ಗಳಿವೆ. ಇದರ ಮೂಲಕ ಹಾಗೂ ಕೆಎಸ್‌ಟಿಪಿ ರಸ್ತೆ ಮೂಲಕ ಬರುವ ವಾಹನಗಳು ಕೂಡಾ ಸರ್ವೀಸ್ ರಸ್ತೆಗೆ ಪ್ರವೇಶಿಸುವುದರಿಂದ ವಿದ್ಯಾನಗರ ವರೆಗಿನ ಭಾಗದಲ್ಲಿ ಸಂಚಾರ ದಟ್ಟಣೆ ದಿನ ಕಳೆದಂತೆ ಬಿಗಡಾಯಿಸುತ್ತಿದೆ. ಆ್ಯಂಬುಲೆನ್ಸ್ ಹಾಗೂ ಅಗ್ನಿಶಾಮಕ ದಳದ ವಾಹನಗಳು ಸಂಚಾರ ದಟ್ಟಣೆಗೆ ಒಳಗಾಗುತ್ತವೆ.

ಹೆದ್ದಾರಿಗೆ ನುಳ್ಳಿಪ್ಪಾಡಿಯಿಂದ ಪ್ರವೇಶಿಸಲು ಸೌಕರ್ಯ ಮಾಡಿಕೊಟ್ಟರೆ ಸಂಚಾರ ಸುಗಮವಾಗುವ ಜೊತೆಗೆ ವಾಹನ ದಟ್ಟಣೆಗೆ ಪರಿಹಾರವಾಗಲಿದೆ. ಈ ಕುರಿತು ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ನಾಯಾನ್ಮಾರಮೂಲೆ ಘಟಕದ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ, ಹೆದ್ದಾರಿ ಪ್ರಾಧಿಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಲಾಗಿದೆ.

ಲೋಕೋಪಯೋಗಿ ಇಲಾಖೆಯ ರಸ್ತೆ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಶಾಜಿ ತಯ್ಯಲ್, ಆರ್‌ಟಿಒ ಜೆ.ಜೆರಾರ್ಡ್, ಎಂವಿಐಎಂ ವಿಜಯನ್, ರಾಷ್ಟ್ರೀಯ ಹೆದ್ದಾರಿ ಮೆನೇಜರ್ ಸಿ.ಈಶ್ವು , ರಾಷ್ಟ್ರೀಯ ಹೆದ್ದಾರಿ ವಿಭಾಗದ ಇಂಜಿನಿಯರ್ ವಿನಯ್ ನೇತೃತ್ವದಲ್ಲಿ ತಪಾಸಣೆ ನಡೆಸಲಾಯಿತು.

ನಗರಸಭೆಯ ಕೌನ್ಸಿಲರ್‌ಗಳಾದ ಹಮೀದ್ ಬೆದಿರ, ಅನಿಲ್ ಚೆನ್ನಿಕೆರೆ, ನಗರಸಭೆ ಕಾರ್ಯದರ್ಶಿ ಸಾಜು, ನಗರಸಭೆ ಇಂಜಿನಿಯರ್ ಆ್ಯಂಟನಿ ವಟ್ಟೋಳಿ, ಕಾಸರಗೋಡು ಛೇಂಬರ್ ಆಫ್ ಕಾಮರ್ಸ್ ಪದಾಧಿಕಾರಿಗಳಾದ ಎ.ಕೆ.ಶ್ಯಾಮಪ್ರಸಾದ್, ಎಂ.ಎಲ್.ಪ್ರಸಾದ್, ಆಟೋ ಕಾರ್ಮಿಕರ ಸಂಘಟನೆಯ ನೇತಾರ ಎ.ಆರ್.ಧನ್ಯವಾದ್ ಮತ್ತಿತರರು ಸ್ಥಳದಲ್ಲಿ ಹಾಜರಿದ್ದರು. ಈ ಕುರಿತು ಸಮಗ್ರವಾದ ವರದಿಯನ್ನು ಜಿಲ್ಲಾಧಿಕಾರಿಗೆ ನೀಡಲಾಗುವುದು ಎಂದು ಆರ್‌ಟಿಒ ಜೆ.ಜೆರಾರ್ಡ್ ಹೇಳಿದ್ದಾರೆ.

ಚೆಂಗಳ ಇಂದಿರಾನಗರದಲ್ಲಿ ತಿಂಗಳುಗಳ ಹಿಂದೆ ಹೆದ್ದಾರಿಯ ಸಂರಕ್ಷಣಾ ಗೋಡೆ ತೆರವುಗೊಳಿಸಿ ಸರ್ವೀಸ್ ರಸ್ತೆಗೆ ಇಳಿಯಲು ಸೌಕರ್ಯ ಮಾಡಲಾಗಿತ್ತು. ಚೆರ್ಕಳ ಕ್ರಿಯಾ ಸಮಿತಿ ಮತ್ತು ವಿವಿಧ ಸಂಘಟನೆಗಳ ಒತ್ತಡದ ಫಲವಾಗಿ ರಾಷ್ಟ್ರೀಯ ಹೆದ್ದಾರಿ ಮೂಲಕ ಬರುವ ವಾಹನಗಳಿಗೆ ಚೆರ್ಕಳ ಪೇಟೆಗೆ ಹಾಗೂ ಎರಡು ಅಂತಾರಾಜ್ಯ ಹೆದ್ದಾರಿಗಳಿಗೆ ತೆರಳಲು ಸೌಕರ್ಯ ಮಾಡಿಕೊಡಲಾಗಿತ್ತು.



ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗ ವತಿಯಿಂದ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಪ್ರಯಾಣಿಕರಿಗೆ ಬಟ್ಟೆ ಚೀಲಗಳನ್ನು ವಿತರಿಸಿ, ವೃಕ್ಷಾರೋಪಣಾ ಕಾರ್ಯಕ್ರಮಗಳು ಮತ್ತು ಜಾಗೃತಿ ಅಭಿಯಾನಗಳ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಈವೇಳೆ ಬೆಂಗಳೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಆಶುತೋಷ್ ಕುಮಾರ್ ಸಿಂಗ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರಿಕ್ಷಿತ್ ಮೋಹನ್ಪೂರಿಯಾ ಉಪಸ್ಥಿತರಿದ್ದರು.

ಯೋಜನೆಗಳ ಅನುಷ್ಠಾನಕ್ಕೆ ಚರ್ಚೆ

• **ಬೆಂಗಳೂರು:** ಉತ್ತರ ನಗರ ಪಾಲಿಕೆಯಲ್ಲಿ ಬಜೆಟ್ ಟು ಆ್ಯಕ್ಷನ್ ಯೋಜನೆಗಳ ಅನುಷ್ಠಾನಕ್ಕೆ ವೇಗ ನೀಡಲು ನಗರಾಭಿವೃದ್ಧಿ ಮತ್ತು ನಾಗರಿಕ ಸಂಸ್ಥೆಗಳ ತಜ್ಞರು ರೂಪಿಸಿರುವ ಯೋಜನಾ ಪ್ರಸ್ತಾವನೆಗಳ ಕುರಿತು ಚರ್ಚೆ ನಡೆಸಲಾಯಿತು.

ಪಾಲಿಕೆ ಆಯುಕ್ತ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ ಚರ್ಚೆ ನಡೆದಿದ್ದು, ಈಗಾಗಲೇ ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಬಜೆಟ್ ಟು ಆ್ಯಕ್ಷನ್ ಯೋಜನೆಯ ಕುರಿತು ಅಗತ್ಯ ಅರಿವು ಮೂಡಿಸಲಾಗಿದ್ದು, ಮುಂದಿನ ಹಂತದಲ್ಲಿ ಸಂಬಂಧಿತ ಕ್ಷೇತ್ರಗಳ ಶಾಸಕರು ಹಾಗೂ ಸಚಿವರೊಂದಿಗೆ ಚರ್ಚಿಸಿ, ಅವರ ಸಲಹೆಗಳನ್ನು ಪಡೆದು ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಆಯುಕ್ತರು ಅಧಿಕಾರಿಗಳಿಗೆ ತಿಳಿಸಿದರು.



ಕೆಲವು ಯೋಜನೆಗಳನ್ನು ಪಾಲಿಕೆಯ ಸ್ವಂತ ಅನುದಾನದಿಂದ ಅನುಷ್ಠಾನಗೊಳಿಸಬಹುದಾದರೆ, ಕೆಲವು ಯೋಜನೆಗಳಿಗೆ ಸಚಿವರು ಹಾಗೂ ಶಾಸಕರ ವಿಶೇಷ ಅನುದಾನದ ಅಗತ್ಯವಿದ್ದು, ಇನ್ನೂ ಕೆಲವು ಬೃಹತ್ ಯೋಜನೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಕಾರ ಮತ್ತು ಅನುದಾನ ಅವಶ್ಯಕವಾಗಲಿದೆ ಎಂದು ತಿಳಿಸಿದರು.

ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ನಾಗರಿಕ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರ ಭಾಗೀದಾರ ಸಂಸ್ಥೆಗಳ ಸಹಭಾಗಿತ್ವ ಅತ್ಯಗತ್ಯವಾಗಿದೆ ಎಂದು ಆಯುಕ್ತರು ಅಭಿಪ್ರಾಯಪಟ್ಟರು. ಯೋಜನೆಗಳ ಪ್ರಗತಿಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಡಿಜಿಟಲ್ ಡ್ಯಾಶ್‌ಬೋರ್ಡ್, ವರ್ಕ್ ಚಾರ್ಟ್, ಪೈ ಚಾರ್ಟ್ ಸೇರಿದಂತೆ ವಿವಿಧ ತಂತ್ರಜ್ಞಾನ ಆಧಾರಿತ ವ್ಯವಸ್ಥೆಗಳನ್ನು ಬಳಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಅಭಿಯಂತರರಿಗೆ ಯೋಜನೆಗಳ ಸಂಪೂರ್ಣ ಮಾಹಿತಿ ಲಭ್ಯವಾಗುವಂತೆ ಸಮಗ್ರ ಸಾಫ್ಟ್‌ವೇರ್ ವೇದಿಕೆಯನ್ನು ಅಭಿವೃದ್ಧಿಪಡಿಸುವ ಅಗತ್ಯವಿದ್ದು, ಕಾಮಗಾರಿಗಳ ಪ್ರಗತಿ, ದಾಖಲೆಗಳು ಹಾಗೂ ಮಾಹಿತಿಯನ್ನು ಸಂಬಂಧಿತ ಸಿಬ್ಬಂದಿ ನಿಯಮಿತವಾಗಿ ಅಪ್‌ಲೋಡ್ ಮಾಡುವ ವ್ಯವಸ್ಥೆ ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸಸಿ ನೆಡುವಿಕೆ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆಯಲ್ಲಿ ಭಾಗವಹಿಸಲು ಶುಕ್ರವಾರ ಆಗಮಿಸಿದ್ದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಸಿ ನೆಟ್ಟು ನೀರೆರೆದರು. ಈ ವೇಳೆ ಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಸಚಿವ ಎಂ. ಬಿ. ಪಾಟೀಲ್ ಇದ್ದರು.

ಕಿರುಸುದ್ದಿ

ಪರಿಸರ ಜಾಗೃತಿ ಜಾಥಾ



• **ಬೆಂಗಳೂರು:** ಬಿಡದಿ ಪುರಸಭೆಯಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಶುಕ್ರವಾರ ನಮ್ಮ ಕಸ ನಮ್ಮ ಜವಾಬ್ದಾರಿ ಘೋಷಣಾ ವಾಕ್ಯದಲ್ಲಿ ಸಸಿ ನೆಟ್ಟು ಪರಿಸರ ಜಾಗೃತಿ ಜಾಥಾ ಮತ್ತು ಬೀದಿ ನಾಟಕಕ್ಕೆ ಬಿಡದಿ ಪುರಸಭೆ ಅಧ್ಯಕ್ಷ ಭಾಮಿಪ್ರಿಯಾ ಸಂಪತ್ತು ಚಾಲನೆ ನೀಡಿದರು. ನಂತರ ಮಾತನಾಡಿ ಅವರು, ಪ್ರತಿವರ್ಷ ಜೂ.5 ರಂದು ಎಲ್ಲೆಡೆ ಪರಿಸರ ದಿನಾಚರಣೆ ಆಚರಿಸುತ್ತೇವೆ. ಅದರ ಪ್ರತೀಕ ನಾವು ಪರಿಸರ ಸಮತೋಲನಕ್ಕೆ ಪೂರಕವಾದ ವಾತಾವರಣವನ್ನು ನಮ್ಮ ಸಮುದಾಯಕ್ಕೆ ಕಟ್ಟಿಕೊಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಪುರಸಭೆ ಮುಖ್ಯಾಧಿಕಾರಿ ಎಂ.ಮೀನಾಕ್ಷಿ ಮಾತನಾಡಿ, ಪುರಸಭೆಯ ವತಿಯಿಂದ ಸ್ವಚ್ಛತೆ, ಪರಿಸರ ಜಾಗೃತಿ ಜಾಥಾ ಮತ್ತು ಬೀದಿ ನಾಟಕ ಪ್ರದರ್ಶನವನ್ನು ಚುನಾಯಿತ ಪ್ರತಿನಿಧಿಗಳ ಮಾರ್ಗದರ್ಶನದಂತೆ ಕಾರ್ಯಕ್ರಮ ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ ಎಂದರು. ಜವಾಬ್ದಾರಿಯುತ ಎಲ್ಲಿ ನಾಗರೀಕರು ನಾವುಗಳು ಘನತ್ಯಾಜ್ಯ ನಿರ್ವಹಣಾ ನಿಯಮ 2026 ಅನ್ವಯ ಹೊಸ ಪದ್ಧತಿಯಲ್ಲಿ ಹಸಿಕಸ, ಒಣಕಸ, ಸ್ಯಾನಿಟರಿ ಕಸ ಹಾಗೂ ವಿಶೇಷ ಕಾಳಜಿ ಕಸ ವಿಂಗಡಣಾ 4 ಬಿನ್ ಪದ್ಧತಿಯನ್ನು ರೂಡಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಕರೆ ನೀಡಿದರು. ಪುರಸಭೆ ಬಳಿಯಿಂದ ವಿವಿಧ ವಾರ್ಡ್‌ಗಳಲ್ಲಿ ಶಾಲಾ ಮಕ್ಕಳು, ಪುರಸಭೆ ಅಧಿಕಾರಿಗಳು, ಪೌರ ಕಾರ್ಮಿಕರಿಂದ ಪರಿಸರ ಜಾಗೃತಿ ಜಾಥಾ ನಡೆಯಿತು. ಬಿಜಿಎಸ್ ವೃತ್ತದಲ್ಲಿ ಸಾರ್ವಜನಿಕರು ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಸ್ನೇಹಿ ವಾತಾವರಣ ನಿರ್ಮಾಣ ಕ್ರಮಗಳ ಬಗ್ಗೆ ಬೀದಿ ನಾಟಕ ಪ್ರದರ್ಶನ ನಡೆಯಿತು. ಈ ವೇಳೆ ಪುರಸಭೆ ಸ್ಥಾಯಿಸಮಿತಿ ಅಧ್ಯಕ್ಷ ಆರ್.ದೇವರಾಜು, ವಿಪಕ್ಷ ನಾಯಕ ಸಿ.ಉಮೇಶ್, ಸದಸ್ಯರಾದ ಹೊಂಬಯ್ಯ, ನಾಗರಾಜು, ಹರಿಪ್ರಸಾದ್, ನವೀನ್ ಕುಮಾರ್ ಮತ್ತಿತರರು ಇದ್ದರು.

ಪರಿಸರ ದಿನಾಚರಣೆ

• **ಬೆಂಗಳೂರು:** ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಿವಿಧ ಪಾಲಿಕೆಗಳಲ್ಲಿ ವಿವಿಧ ಕಾರ್ಯಕ್ರಮದ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.ಬೆಂಗಳೂರು ದಕ್ಷಿಣ ನಗರ ಪಾಲಿಕೆ ವತಿಯಿಂದ ಸ್ವಚ್ಛ ಭಾರತ್ ಮಿಷನ್ ಅರ್ಬನ್ 2.0 ಅಡಿಯಲ್ಲಿ ಸಾರಕ್ಕಿ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಶಾಲಾ ಆವರಣದಲ್ಲಿ ಸಸಿಗಳನ್ನು ನೆಡುವುದರ ಮೂಲಕ ಪರಿಸ ದಿನಾಚರಣೆಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಕೆ.ಎನ್. ರಮೇಶ್,ಶಾಲಾ ದಿನಗಳಲ್ಲಿ ಬೆಳೆಯುವ ಭಾವನಾತ್ಮಕ ಸಂಬಂಧಗಳನ್ನು ಜೀವನದಲ್ಲಿ ಎಂದಿಗೂ ಕಳೆದುಕೊಳ್ಳಲು ಸಾಧ್ಯವಿಲ್ಲ. ವಯಸ್ಸಾದಂತೆ ಇಂತಹ ಸಂಬಂಧಗಳು ಕಡಿಮೆಯಾಗುತ್ತಾ ಹೋಗುತ್ತವೆ. ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ದೊಡ್ಡದಾಗಿದೆ. ಸರ್ಕಾರಿ ಶಾಲೆಯ ಶಿಕ್ಷಕರಲ್ಲಿ ಅಪಾರ ಜ್ಞಾನವಿದ್ದು, ವಿದ್ಯಾರ್ಥಿಗಳು ಅದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಯುಬಿ100 ವಿಶೇಷ ಅಭಿಯಾನ: ಬೆಂಗಳೂರು ಉತ್ತರ ನಗರ ಪಾಲಿಕೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಉತ್ತರ ಬೆಂಗಳೂರು(ಯುಬಿ)100 ಎಂಬ ವಿಶೇಷ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಗಿಡ ನೆಟ್ಟು, ಬಳಿಕ ಆಯೋಜಿಸಲಾಗಿದ್ದ ಸಿಗ್ನೇಚರ್ ಕ್ಯಾಂಪೇನ್‌ನಲ್ಲಿ ಸ್ಥಳೀಯ ನಿವಾಸಿಗಳೊಂದಿಗೆ ಸಹಿ ಹಾಕುವ ಮೂಲಕ ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಮನೆ–ಮನೆಯಿಂದ ಮತದಾರರ ಮಾಹಿತಿ ಸಂಗ್ರಹ: ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ.

ಮತದಾರರ ಮ್ಯಾಪಿಂಗ್ ಶೇ.80 ಪೂರ್ಣ

• **ಬೆಂಗಳೂರು:** ಚುನಾವಣಾ ಆಯೋಗದ ನಿರ್ದೇಶನದಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್–2026) ಕಾರ್ಯ ಆರಂಭಗೊಂಡಿದ್ದು, ಜಿಲ್ಲೆಯಲ್ಲಿ ಈಗಾಗಲೇ ಶೇ.80ರಷ್ಟು ಮತದಾರರ ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ. ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಗೆ ಜ.1 ಅನ್ನು ಅರ್ಹತಾ ದಿನಾಂಕವಾಗಿ ನಿಗದಿಪಡಿಸಲಾಗಿದೆ ಎಂದರು.

ಜೂ.20ರಿಂದ 29ರವರೆಗೆ ಪರಿಷ್ಕರಣೆ ಕಾರ್ಯದ ಸಿದ್ಧತೆ, ತರಬೇತಿ ಮತ್ತು ಮುದ್ರಣಾ ಕಾರ್ಯಗಳು ನಡೆಯಲಿದ್ದು, ಜೂ.30 ರಿಂದ ಜು.29 ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ–ಮನೆಗೆ ನಡೆ ಮತದಾರರ ಮಾಹಿತಿ ಸಂಗ್ರಹ ಸಮೀಕ್ಷೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಬಿಎಲ್‌ಒಗಳು ಮನೆಗಳಿಗೆ ಭೇಟಿ ನೀಡಿದಾಗ ಮತದಾರರು ನೀಡುವ ಅರ್ಜಿ ನಮೂನೆಗಳನ್ನು ನಿಖರ ಮಾಹಿತಿಯನ್ನು ಭರ್ತಿ ಮಾಡಿ ಹಿಂದಿರುಗಿಸಬೇಕು. ಮ್ಯಾಪಿಂಗ್ ಆಗದ ಮತದಾರರು ಸರ್ಕಾರ ಗುರುತಿಸಿರುವ 12 ದಾಖಲೆಗಳ ಪೈಕಿ ಯಾವುದಾದರೂ ಒಂದು ದಾಖಲೆಯನ್ನು ಸಲ್ಲಿಸಬಹುದು ಎಂದು ತಿಳಿಸಿದರು.



ಬೆಂಗಳೂರು ನಗರ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 40,17,275 ಮತದಾರರಿದ್ದು, ವಿಶೇಷ ಸಮಗ್ರ ಪರಿಷ್ಕರಣೆಗಾಗಿ 3,320 ಬಿಎಲ್‌ಒಗಳನ್ನು ನಿಯೋಜನೆ ಮಾಡಲಾಗಿದೆ. ರಾಜಕೀಯ ಪಕ್ಷಗಳು ಈಗಾಗಲೇ 5 ಸಾವಿರ ಬೂತ್ ಮಟ್ಟದ ಏಜೆಂಟ್ ಅವರನ್ನು (ಬಿಎಲ್‌ಎ) ನೇಮಕ ಮಾಡಿಕೊಂಡಿದ್ದು, ಪರಿಷ್ಕರಣೆ ಕಾರ್ಯಕ್ಕೆ ಸಹಕಾರ ನೀಡುವಂತೆ ಕೋರಲಾಗಿದೆ ಎಂದು ಹೇಳಿದರು.

ಜು.29ರೊಳಗೆ ಮತಗಟ್ಟೆಗಳ ಪುನರ್‌ವಿಂಗಡಣೆ ಪೂರ್ಣಗೊಳ್ಳಲಿದ್ದು, ಆ. 5ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಆ. 5ರಿಂದ ಸೆ. 4ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದು. ಅವುಗಳ ವಿಲೇವಾರಿಯನ್ನು ಆ. 3ರೊಳಗೆ ಪೂರ್ಣಗೊಳಿಸಿ, ಆ. 7ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ವೇಳಾಪಟ್ಟಿಯನ್ನು ವಿವರಿಸಿದರು.

ಭಾರತದ ಅರ್ಹ ನಾಗರಿಕರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಹಾಗೂ ಒಬ್ಬ ಮತದಾರರು ಒಂದೇ ಸ್ಥಳದಲ್ಲಿ ಮತದಾನದ ಹಕ್ಕು ಹೊಂದುವಂತೆ ಪಾರದರ್ಶಕವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಅಗತ್ಯ ಪರಿಶೀಲನೆ ಮತ್ತು ದಾಖಲೆಗಳ ಆಧಾರದ ಮೇಲೆ ಮಾತ್ರ ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾಗುವುದು ಎಂದು ಜಗದೀಶ್ ಜಿ. ಸ್ಪಷ್ಟಪಡಿಸಿದರು.

ಸಾರ್ವಜನಿಕರು ನಮೂನೆಗಳನ್ನು ಕಡ್ಡಾಯವಾಗಿ ಭರ್ತಿ ಮಾಡಿ

ಮತದಾರರಿಗೆ ಎನ್ಯುಮರೇಷನ್ ಫಾರಂ ಭರ್ತಿ ಮಾಡಲು ನೆರವಾಗುವ ಉದ್ದೇಶದಿಂದ ಜಿಲ್ಲೆಯ ಗ್ರಾಮ ಪಂಚಾಯಿತಿ ಕಟ್ಟಡಗಳು ಹಾಗೂ ವಾರ್ಡ್ ಕಚೇರಿಗಳಲ್ಲಿ 250 ಮತದಾರರ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಬಿಎಲ್‌ಒಗಳು ಕನಿಷ್ಠ ಮೂರು ಬಾರಿ ಮನೆಗಳಿಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂಗಳನ್ನು ವಿತರಿಸಿ, ಮತದಾರರಿಂದ ಸಹಿ ಪಡೆದು ಮರಳಿ ಸಂಗ್ರಹಿಸಲಿದ್ದಾರೆ. ಸಾರ್ವಜನಿಕರು ನಮೂನೆಗಳನ್ನು ಕಡ್ಡಾಯವಾಗಿ ಭರ್ತಿ ಮಾಡಿ ಬಿಎಲ್‌ಒಗಳಿಗೆ ಹಿಂತಿರುಗಿಸಬೇಕು. ಇಲ್ಲದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವ ಸಾಧ್ಯತೆ ಇರುವುದಾಗಿ ಜಗದೀಶ್ ಜಿ. ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಜಗದೀಶ್ ಕೆ. ನಾಯಕ್, ವಿಶೇಷ ಜಿಲ್ಲಾಧಿಕಾರಿ ಹಾಗೂ ರಾಷ್ಟ್ರೀಯ ಮಟ್ಟದ ಮಾಸ್ಟರ್ ಟ್ರೈನರ್ ಜಯಮಾಧವ್ ಪಿ, ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ವಿಶ್ವನಾಥ್ ಆರ್. ಸೇರಿದಂತೆ ಇತರರು ಇದ್ದರು.

ಗಿಡ ನೆಟ್ಟು ಪೋಷಿಸಲು ಮುನಿರಾಜು ಕರೆ



• **ಪೀಣ್ಯ ದಾಸರಹಳ್ಳಿ:** ವಿಶ್ವ ಪರಿಸರ ದಿನವನ್ನು ಅತ್ಯಂತ ಸಡಗರ ಮತ್ತು ಜವಾಬ್ದಾರಿಯಿಂದ ಶಾಲೆಯಲ್ಲಿ ಆಚರಿಸಬೇಕು. ಅದೇ ರೀತಿ ತಮ್ಮ ಮನೆಯ ಮುಂಭಾಗ ಗಿಡಗಳನ್ನು ನೆಟ್ಟು ಪೋಷಿಸಬೇಕು ಎಂದು ಶಾಸಕ ಎಸ್.ಮುನಿರಾಜು ತಿಳಿಸಿದ್ದಾರೆ.

ಶೆಟ್ಟಿಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಸಸಿ ನೆಟ್ಟು ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಮತ್ತು ಸ್ಥಳೀಯರಲ್ಲಿ ಪರಿಸರ ಸಂರಕ್ಷಣೆ ಹಾಗೂ ಪ್ರಕೃತಿಯ ಮಹತ್ವದ ಬಗ್ಗೆ ಅರಿವು ಮೂಡಿಸುವುದು ಈ ದಿನದ ವಿಶೇಷವಾಗಿದೆ. ಅದೇ ರೀತಿ ಶಾಲಾ ಹಂತದಲ್ಲಿ ಶಾಲಾ ಮುಖ್ಯಸ್ಥರು ಶಾಲಾ ಪರಿಸರವು ಶಿಕ್ಷಣದ ಅವಿಭಾಜ್ಯ ಅಂಗವೆಂದು ಭಾವಿಸಿ ವಿಶೇಷ ಗಮನಹರಿಸಬೇಕು ಎಂದು ತಿಳಿಸಿದ್ದಾರೆ.

ನಮಗಾಗಿ ಇರುವ ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶುದ್ಧ ಗಾಳಿ, ಶುದ್ಧ ನೀರು, ಶುದ್ಧ ಪರಿಸರ ರಕ್ಷಣೆ ನಮ್ಮೆಲ್ಲರ ಜೀವ ಹಾಗೂ ಜೀವನಕ್ಕೆ ಆಮ್ಲಜನಕವಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ಶೆಟ್ಟಿಹಳ್ಳಿ ವಾರ್ಡ್ ಅಧ್ಯಕ್ಷ ಬಿ.ಸುರೇಶ್, ಎಸ್.ಆರ್ ಮಂಜುನಾಥ್ ಉಪಸ್ಥಿತರಿದ್ದರು.



ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೆಜೆಸ್ಟಿಕ್ ಬಳಿಯಿರುವ ನಗರ ದೇವತೆ ಅಣ್ಣಮ್ಮ ದೇವಿ ದೇವಾಲಯಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದುಕೊಂಡರು. ಈ ವೇಳೆ ಶಾಸಕರಾದ ದಿನೇಶ್ ಗುಂಡೂರಾವ್, ಶ್ರೀನಿವಾಸ್ ಮಾನೆ ಇದ್ದರು.

ಸಾರ್ವಜನಿಕರಿಗೆ 2800 ಗಿಡ ವಿತರಣೆ

• **ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಅದಮ್ಯ ಚೇತನ ಸಂಸ್ಥೆಯು ಬೆಂಗಳೂರು ಮಹಾನಗರದ 4 ಸ್ಥಳಗಳಲ್ಲಿ, ಸಾರ್ವಜನಿಕರಿಗೆ 2800 ಗಿಡಗಳನ್ನು ವಿತರಿಸುವ ಮೂಲಕ ವಿಶ್ವಪರಿಸರ ದಿನವನ್ನು ಆಚರಿಸಿತು.

ಈ ಕಾರ್ಯಕ್ರಮದ ನೇತೃತ್ವ ಮತ್ತು ನಿರ್ವಹಣೆಯನ್ನು ಅದಮ್ಯ ಚೇತನ ಮತ್ತು ಅನಂತಕುಮಾರ ಪ್ರತಿಷ್ಠಾನದ ಮುಖ್ಯಸ್ಥೆ ಡಾ. ತೇಜಸ್ವಿನಿ ಅನಂತಕುಮಾರ್ ವಹಿಸಿದ್ದರು. ಗವಿಪುರದ ಅದಮ್ಯ ಚೇತನ ಸಂಸ್ಥೆಯ ಆವರಣ, ಸೌತ್ ಎಂಡ್ ಸರ್ಕಲ್‌ಲ್ಲಿರುವ ಅನಂತ ಪ್ರೇರಣಾ ಕೇಂದ್ರ, ಲಾಲ್ ಬಾಗ್ ಪಶ್ಚಿಮ ದ್ವಾರದ ಬಳಿ ಮತ್ತು ಜಯನಗರ 4ನೇ ಬ್ಲಾಕ್‌ನ ಕನ್ನಡ ಕಟ್ಟೆ ಬಳಿ ಹಾಗೂ ಬಿಎಂಎಸ್ ಕಾಲೇಜಿನ ಆವರಣದಲ್ಲಿ ಮನೆ ಅಂಗಳದಲ್ಲಿ



ಬೆಳೆಯಬಹುದಾಂತಹ ಮಲ್ಲಿಗೆ, ನಿಂಬೆಹುಲ್ಲಿನ ಗಿಡ, ದಾಸವಾಳ, ರೋಸಮರಿ, ಅಲೂವೆರಾ ಮತ್ತು ಇತರೆ ಗಿಡಗಳನ್ನು ವಿತರಿಸಲಾಯಿತು.

ಜೂ.27 ರಂದು ಬೃಹತ್ ವೃಕ್ಷಾರೋಪಣ ಅಭಿಯಾನ: ಜೂ.27ರಂದು ಬನಶಂಕರಿ 6ನೇ ಹಂತದಲ್ಲಿ (ತುರಹಳ್ಳಿಯ ಪಕ್ಕದ ಸ್ಥಳ) ನಡೆಯಲಿರುವ ಬೃಹತ್ ವೃಕ್ಷಾರೋಪಣ ಅಭಿಯಾನ ನಡೆಯಲಿದ್ದು, ಒಂದೇ ದಿನದಲ್ಲಿ 30 ಸಾವಿರ ಗಿಡಗಳನ್ನು ನೆಡುವ ಈ ಮಹತ್ತರ ಸೇವಾ ಕಾರ್ಯವನ್ನು ಅದಮ್ಯ ಚೇತನ ಸಂಸ್ಥೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಕೈಗೊಳ್ಳುತ್ತಿದೆ. ಜತೆಗೆ ನೆಟ್ಟ ಪ್ರತಿಯೊಂದು ಸಸಿಯನ್ನು ಮುಂದಿನ ಮೂರು ವರ್ಷಗಳ ಪೋಷಿಸಿ, ಸಂರಕ್ಷಿಸಿ, ಬೆಳೆಸುವ ಕಾರ್ಯವನ್ನು ಅದಮ್ಯ ಚೇತನ ಸಂಸ್ಥೆಯು ನಿರ್ವಹಿಸುತ್ತಿದೆ. ಒಂದು ಸಸಿ ನೆಟ್ಟು, ಪೋಷಿಸುವ ಖರ್ಚು 380 ರೂ.ಗಳಾಗಿದ್ದು, ಅಂದಾಜು ಒಂದು ಕೋಟಿ ರೂಪಾಯಿ ವೆಚ್ಚದ ಖರ್ಚು ಹೊಂದಿದೆ.

ಹೆಚ್ಚಿನ ಮಾಹಿತಿಗೆ: www.adamyachetana.org ಸಂಪರ್ಕಿಸಬಹುದು.

ಬೆಸ್ಕಾಂ ಲೈನ್ ಸ್ಥಳಾಂತರಿಸಲು ಸೂಚನೆ

• **ಬೆಂಗಳೂರು:** ವೃಷಭಾವತಿ ವ್ಯಾಪ್ತಿಯಲ್ಲಿ 66 ಕೆ.ವಿ. ಬೆಸ್ಕಾಂ ಲೈನ್ ಸ್ಥಳಾಂತರಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಗಾಳಿ ಆಂಜನೇಯ ದೇವಸ್ಥಾನದ ಬಳಿ ವೃಷಭಾವತಿ ವ್ಯಾಲಿಯಲ್ಲಿ ಬೆಸ್ಕಾಂ ವಿದ್ಯುತ್ ಲೈನ್ ಅಡ್ಡಲಾಗಿರುವುದರಿಂದ ಮಳೆನೀರಿನ ಹರಿವಿನ ಮಟ್ಟ ಹೆಚ್ಚಾದಾಗ ತ್ಯಾಜ್ಯ ಅಡ್ಡಿಯಾಗಿ ನಿಂತು ನೀರು ಹಿಮ್ಮುಖವಾಗಿ ಹರಿಯುವ ಸಾಧ್ಯತೆ ಹೆಚ್ಚಿರುತ್ತದೆ. ಈ ಸಂಬಂಧ ಕೂಡಲೇ ವಿದ್ಯುತ್ ಲೈನ್ ಅನ್ನು ಮೇಲ್ಭಾಗಕ್ಕೆ ಸ್ಥಳಾಂತರಿಸಬೇಕು ಎಂದು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು. ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ರಸ್ತೆಯ ಭಾಗ ಜಲಾವೃತವಾಗುವುದನ್ನು ತಪ್ಪಿಸುವ ಸಲುವಾಗಿ ತಾತ್ಕಾಲಿಕವಾಗಿ ಕ್ಯಾಚ್ಮೆಂಟ್ ಪಿಟ್ ನಿರ್ಮಿಸಿ ಪಂಪ್ ವ್ಯವಸ್ಥೆ ಕಲ್ಪಿಸಬೇಕು. ಮಳೆಗಾಲದ ವೇಳೆ ಪಂಪ್ ಮೂಲಕ ನೀರನ್ನು ವ್ಯಾಲಿಗೆ ಹರಿಸುವ ವ್ಯವಸ್ಥೆ ಮಾಡಿ, ರಸ್ತೆ ಮೇಲೆ ಯಾವುದೇ ರೀತಿಯ ಜಲಾವೃತವಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶನ ನೀಡಿದರು. ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಿ:ರಸ್ತೆ ಬದಿಯಲ್ಲಿ ಅಳವಡಿಸಲಾಗಿದ್ದ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಸೂಚನೆ ನೀಡಿದರು. ಭವಿಷ್ಯದಲ್ಲಿ ಅನಧಿಕೃತ ಜಾಹೀರಾತುಗಳನ್ನು ಅಳವಡಿಸದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.




- ವಿಜಯನಗರ ಮೆಟ್ರೋ ನಿಲ್ದಾಣದ ಬಳಿಯಿರುವ ಬುಲೇ ಪಾರ್ಕ್ ಸಮರ್ಪಕ ನಿರ್ವಹಣೆ ಮಾಡಲು ಸೂಚನೆ
- ಮೈಸೂರು ರಸ್ತೆ-ಕೆಂಗೇರಿ ಬಳಿಯ ಪ್ರವಾಹ ಪೀಡಿತ ಪ್ರದೇಶದಲ್ಲಿ ಜಲಮಂಡಳಿ ಹಾಗೂ ನಗರ ಪಾಲಿಕೆ ಅಧಿಕಾರಿಗಳು ಸಮನ್ವಯದಿಂದ ಯೋಜನೆ ರೂಪಿಸಲು ಸೂಚನೆ

ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ

• **ಯಲಹಂಕ:** ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಯಲಹಂಕ ವಿಧಾನಸಭಾ ಕ್ಷೇತ್ರದ ಯಲಹಂಕ ಕೆರೆ ಮತ್ತು ಗಂಟಿಗಾನಹಳ್ಳಿ ಹಾಗೂ ನಾಗದಾಸನಹಳ್ಳಿ ಗ್ರಾಮಗಳಲ್ಲಿ ಆಯೋಜಿಸಲಾಗಿದ್ದ ಪರಿಸರ ದಿನಾಚಾರಣೆ ಕಾರ್ಯಕ್ರಮದಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಈ ಸಂರ್ಭದಲ್ಲಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಹೆಚ್ಚುತ್ತಿರುವ ನಾಗರೀಕರಣ ಮತ್ತು ಪರಿಸರ ಮಾಲಿನ್ಯದ ನಡುವೆ ಹಸಿರು ಪರಿಸರವನ್ನು ಉಳಿಸಿಕೊಳ್ಳುವುದು



ಅತ್ಯಗತ್ಯವಾಗಿದೆ. ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ತಾಯಿಯ ಹೆಸರಿನಲ್ಲಿ ನೆಟ್ಟು ಅದರ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಾವು ಪ್ರಕೃತಿಯನ್ನು ಉಳಿಸಿದರೆ ಪ್ರಕೃತಿ ನಮ್ಮನ್ನು ಉಳಿಸುತ್ತದೆ. ಭವಿಷ್ಯದ ಪೀಳಿಗೆಗೆ ಉತ್ತಮ ಪರಿಸರವನ್ನು ನೀಡುವ ಉದ್ದೇಶದಿಂದ ಗಿಡ ನೆಡುವ ಅಭಿಯಾನವನ್ನು ಮತ್ತಷ್ಟು ವ್ಯಾಪಕಗೊಳಿಸುವ ಅಗತ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಶವ ಪ್ರಸಾದ್, ಬಿಜೆಪಿ ನಗರ ಅಧ್ಯಕ್ಷ ಮುನಿರಾಜು, ವೈ. ಜಿ. ವಸಂತ್ ಕುಮಾರ್, ಸೋಮಶೇಖರ್, ಮುಖಂಡ ಕೃಷ್ಣಮೂರ್ತಿ ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಪರಿಸರ ಪ್ರೇಮಿಗಳು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿ, ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ. ಭಗವಾನ್ ಬಿ.ಸಿ. ಸಲಹೆ

ಪರಿಸರ ಉಳಿಸಲು ಪ್ರತಿಯೊಬ್ಬರೂ ಶ್ರಮಿಸಿ

• **ಬೆಂಗಳೂರು:** ಈ ವರ್ಷದ ವಿಶ್ವ ಪರಿಸರ ದಿನದ ಪ್ರಯುಕ್ತ ಒಬ್ಬ ವಿದ್ಯಾರ್ಥಿಗೆ ಒಂದು ಸಸಿ ಎಂಬ ಅರ್ಥಪೂರ್ಣ ಅಭಿಯಾನವನ್ನು ಆರಂಭಿಸಿದ್ದೇವೆ. ಪ್ರತಿಯೊಬ್ಬ ವಿದ್ಯಾರ್ಥಿಯು ಕನಿಷ್ಠ ಒಂದು ಸಸಿ ನೆಟ್ಟು ಅದರ ಪೋಷಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ. ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ರೋಟರಿ ಬೆಂಗಳೂರು ಸಮೃದ್ಧಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ – 2026 ವಾಕಥಾನ್‌ನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಶಿಕ್ಷಣದ ಜತೆಗೆ ಸಾಮಾಜಿಕ ಜವಾಬ್ದಾರಿ, ಆರೋಗ್ಯಕರ ಜೀವನಶೈಲಿ ಮತ್ತು ಪರಿಸರ ಸುಸ್ಥಿರತೆಗೆ ವಿಶೇಷ ಆದ್ಯತೆ ನೀಡುತ್ತಿದೆ. ಹಸಿರು ಉಪಕ್ರಮಗಳು, ತ್ಯಾಜ್ಯ ನಿರ್ವಹಣೆ, ಪರಿಸರ ಸ್ನೇಹಿ ಮೂಲಸೌಕರ್ಯಗಳ ನಿರ್ಮಾಣ ಹಾಗೂ ಹವಾಮಾನ ಜವಾಬ್ದಾರಿಯಂತಹ ಕಾರ್ಯಕ್ರಮಗಳ ಮೂಲಕ ಸುಸ್ಥಿರ ಭವಿಷ್ಯದತ್ತ ಹೆಜ್ಜೆ ಇಡುತ್ತಿದೆ ಎಂದರು.



ವಿಶ್ವವು ಹವಾಮಾನ ಬದಲಾವಣೆ, ಜಾಗತಿಕ ತಾಪಮಾನ ಏರಿಕೆ, ನೀರಿನ ಕೊರತೆ ಹಾಗೂ ಮಾಲಿನ್ಯದಂತಹ ಗಂಭೀರ ಸವಾಲುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಒಬ್ಬ ವಿದ್ಯಾರ್ಥಿ ಒಂದು ಸಸಿ ನೆಡುವ ಇಂತಹ ಕಾರ್ಯಕ್ರಮ ಅತ್ಯಗತ್ಯ ಮತ್ತು ಅತ್ಯುಪಯುಕ್ತ ಎಂದು ಹೇಳಿದರು.

ಪರಿಸರ ಪ್ರೇಮವನ್ನು ಜಾಗೃತಗೊಳಿಸದ ಹೊರತು ನಮ್ಮ ನಾಳೆಗಳನ್ನು ನಾವು ಸುಂದರಗೊಳಿಸಲು ಸಾಧ್ಯವಿಲ್ಲ. ಅಭಿವೃದ್ಧಿ, ತಂತ್ರಜ್ಞಾನ ಮತ್ತು ಆಧುನಿಕತೆಯತ್ತ ಶರವೇಗದಲ್ಲಿ ಸಾಗುತ್ತಿರುವ ನಾವು ಪ್ರಕೃತಿಯೊಂದಿಗೆ ಬಾಂಧವ್ಯವನ್ನು ಮರೆಯುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಶುದ್ಧ ಗಾಳಿ, ಶುದ್ಧ ನೀರು, ಫಲವತ್ತಾದ ಭೂಮಿ ಮತ್ತು ಸಮತೋಲಿತ ಹವಾಮಾನವು ಮುಂದಿನ ಪೀಳಿಗೆಗೆ ದೊರೆಯಬೇಕಾದರೆ, ನಾವು ಪ್ರಕೃತಿಯೊಂದಿಗಿನ ಬಾಂಧವ್ಯವನ್ನು ಇನ್ನೂ ಗಟ್ಟಿಗೊಳಿಸಿಕೊಳ್ಳಬೇಕಾಗುತ್ತದೆ. ಪ್ರಕೃತಿಯನ್ನು ಪ್ರೀತಿಸುವ ಮನಸ್ಸು ಬೆಳೆದಾಗ ಮಾತ್ರ ಹಸಿರು, ಸ್ವಚ್ಛತೆ, ಆರೋಗ್ಯಕರ ಮತ್ತು ಸುಸ್ಥಿರ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ನಗರದ ದಕ್ಷಿಣ ವಿಭಾಗದ ಡಿಸಿಪಿ ಡಾ. ಕೋನಾ ವಂಸಿ ಕೃಷ್ಣ ಮಾತನಾಡಿ, ಪರಿಸರ ದಿನಾಚರಣೆ ಕೇವಲ ಒಂದು ದಿನದ ಆಚರಣೆಯಾಗಬಾರದು. ಮನಸ್ಸಿನಿಂದ ಬರಬೇಕು. ಪರಿಸರವನ್ನು ಪ್ರೀತಿಸುವ, ಬೆಳೆಸುವ ಹಾಗೂ ಕಾಪಾಡುವ ಕೆಲಸ ಮನೆಯಿಂದ ಆರಂಭವಾಗಬೇಕು. ಇದು ಕೇವಲ ಕಾಯ್ದೆ–ಕಾನೂನುಗಳಿಂದ ಆಗುವುದಿಲ್ಲ. ಪ್ರತಿಯೊಬ್ಬರ ಸಹಭಾಗಿತ್ವದಿಂದ ಮಾತ್ರ ಇದು ಯಶಸ್ವಿಯಾಗಲು ಸಾಧ್ಯ ಎಂದು ಹೇಳಿದರು.

ಇದೇ ವೇಳೆ ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಪ್ರಾರಂಭವಾದ ವಾಕಥಾನ್, ಆರ್.ವಿ. ಶಿಕ್ಷಕರ ಕಾಲೇಜು, ಅಶೋಕ ಪಿಲ್ಲರ್ ವೃತ್ತ, ಸಿದ್ದಾಪುರ ರಸ್ತೆ ಸಿದ್ದಾಪುರ ವೃತ್ತ ಮರಿಗೌಡ ರಸ್ತೆ, ಕೆ.ಎಚ್. ವೃತ್ತದ ಮೂಲಕ ಲಾಲ್‌ಬಾಗ್ ಕೆಂಪೇಗೌಡ ಗೋಪುರದ ಬಳಿ ಮುಕ್ತಾಯಗೊಂಡಿತು.

ಕಾರ್ಯಕ್ರಮದಲ್ಲಿ ರೋ. ನಾಗೇಂದ್ರ ಪ್ರಸಾದ್ ಬಿ.ಎಲ್, ಕುಲಸಚಿವ (ಮೌಲ್ಯಮಾಪನ) ಡಾ. ರಿಯಾಜ್ ಭಾಷ ಎಸ್, ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ ಸೇರಿದಂತೆ ಇತರರಿದ್ದರು.

ಮಮತಾ ಸಭೆಗೆ ಕೇವಲ 8 ಶಾಸಕರ ಹಾಜರಿ

ತೃಣಮೂಲದಲ್ಲಿ ನಿಲ್ಲದ ಬಂಡಾಯದ ಬಿರುಗಾಳಿ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸೋಲಿನ ಬಳಿಕ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದೊಳಗೆ ಉಂಟಾಗಿರುವ ಬಂಡಾಯದ ಬಿರುಗಾಳಿ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿರುವ ಲಕ್ಷಣಗಳು ಗೋಚರಿಸುತ್ತಿವೆ. ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಕಲಿಘಾಟ್ ನಿವಾಸದಲ್ಲಿ ಶುಕ್ರವಾರ ನಡೆದ ಮಹತ್ವದ ಸಭೆಗೆ ಕೇವಲ 8 ಶಾಸಕರು, 6 ಸಂಸದರು ಮಾತ್ರ ಹಾಜರಾಗಿದ್ದು, ಪಕ್ಷದೊಳಗಿನ ಅಸಮಾಧಾನ ಬಹಿರಂಗವಾಗಿದೆ.

ಈ ಹಿಂದೆ ನಡೆದ ಮಹತ್ವದ ಸಭೆಗೆ 80 ಶಾಸಕರ ಪೈಕಿ 60 ಮಂದಿ ಗೈರಾಗಿದ್ದರು. ಇದೀಗ ನಡೆದ ಸಭೆಯಲ್ಲಿಯೂ ಅತ್ಯಲ್ಪ ಸಂಖ್ಯೆಯ ಶಾಸಕರು ಭಾಗವಹಿಸಿರುವುದು ಮಮತಾ ನಾಯಕತ್ವದ ವಿರುದ್ಧದ ಅಸಮಾಧಾನ ಇನ್ನಷ್ಟು ಗಾಢವಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.



ಇದಕ್ಕಿಂತಲೂ ಹೆಚ್ಚು ಆತಂಕಕಾರಿ ಸಂಗತಿಯೆಂದರೆ, ಟಿಎಂಸಿಯ ಸಂಸದರೂ ಸಭೆಯಿಂದ ದೂರ ಉಳಿದಿದ್ದಾರೆ. ಲೋಕಸಭೆಯಲ್ಲಿ ಪಕ್ಷದ 28 ಸಂಸದರಲ್ಲಿ ಕೇವಲ ನಾಲ್ವರು ಮಾತ್ರ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ರಾಜ್ಯಸಭೆಯ 13 ಸದಸ್ಯರಲ್ಲಿ ಕೇವಲ ಇಬ್ಬರು ಮಾತ್ರ ಹಾಜರಾಗಿ, ಉಳಿದ 11 ಮಂದಿ ಗೈರಾಗಿದ್ದಾರೆ. ಮಮತಾ ಬ್ಯಾನರ್ಜಿ ಅವರ ಸೋದರಳಿಯ ಹಾಗೂ ಪಕ್ಷದ ಪ್ರಮುಖ ನಾಯಕ ಅಭಿಷೇಕ್ ಬ್ಯಾನರ್ಜಿ ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯಸಭಾ ಸದಸ್ಯರಾದ ಡೆರೆಕ್ ಓ'ಬ್ರಿಯನ್ ಮತ್ತು ಡೋಲಾ ಸೇನ್ ಮಾತ್ರ ಹಾಜರಾಗಿದ್ದರು.

> ಬಹುತೇಕ ಸಂಸದರು ಗೈರು!

ಶಾಸಕರ ಪೈಕಿ ಮದನ್ ಮಿತ್ರಾ, ಬೀನಾ ಮಂಡಲ್, ಅಶಿಮಾ ಪಾತ್ರಾ, ಫಿರ್ಹಾದ್ ಹಕೀಂ, ಕುನಾಲ್ ಘೋಷ್, ಸೋವಂದೇಬ್ ಚಟರ್ಜಿ, ಬಿಮಾನ್ ಬ್ಯಾನರ್ಜಿ ಮತ್ತು ಅಶೋಕ್ ದೇಬ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಬಂಡಾಯಗಾರರ ಸಂಖ್ಯೆ ಹೆಚ್ಚಳ: ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕನಾಗಿ ಹೊರಹೊಮ್ಮಿರುವ ಬಂಡಾಯ ನಾಯಕ ರಿತಬ್ರತ ಬ್ಯಾನರ್ಜಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಸಕರು ತಮ್ಮ ಬಣಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದ್ದಾರೆ.

ಬಿಜೆಪಿ ಸಂಪರ್ಕದಲ್ಲಿರುವ 20-22 ಸಂಸದರು?

ಬಂಡಾಯದ ಮುಂದಿನ ಹಂತವಾಗಿ ಹಲವರು ಪಕ್ಷ ತೊರೆಯುವ ಸಾಧ್ಯತೆಗಳಿವೆ ಎನ್ನಲಾಗಿದೆ. ಕನಿಷ್ಠ 20ರಿಂದ 22 ಟಿಎಂಸಿ ಸಂಸದರು ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಎಂಬ ಮಾಹಿತಿ ಮೂಲಗಳಿಂದ ಹೊರಬಿದ್ದಿದೆ. ಆದರೆ, ಈ ಕುರಿತು ಪ್ರತಿಕ್ರಿಯಿಸಿದ ರಿತಬ್ರತ ಬ್ಯಾನರ್ಜಿ, ಕಳೆದ ಏಳು ದಿನಗಳಿಂದ ಯಾವುದೇ ಸಂಸದರೊಂದಿಗೆ ಮಾತನಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಮ್ಮ ಬೆಂಬಲಿಗರ ಸಂಖ್ಯೆ ನಿರಂತರವಾಗಿ ಹೆಚ್ಚಾಗಲಿದೆ. ಈಗಾಗಲೇ ಮೂರನೇ ಎರಡರಷ್ಟು ಸಂಖ್ಯೆಯನ್ನು ನಾವು ತೋರಿಸಿದ್ದೇವೆ. ವಿಧಾನಸಭೆ ಅಧಿವೇಶನದ ವೇಳೆ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುವುದನ್ನು ನೀವು ಕಾಣುತ್ತೀರಿ ಎಂದು ಅವರು ಹೇಳಿದ್ದಾರೆ. ನಮ್ಮನ್ನು ಬೆಂಬಲಿಸುವ ಶಾಸಕರ ಸಂಖ್ಯೆ ಕಡಿಮೆಯಾಗುವುದಿಲ್ಲ. ಮುಂದಿನ ಬೆಳವಣಿಗೆಗಳನ್ನು ಗಮನಿಸಿ, ಇನ್ನಷ್ಟು ಮಂದಿ ನಮ್ಮೊಂದಿಗೆ ಬರಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸೋಲಿನ ಬಳಿಕ ಭಿನ್ನಮತ ತೀವ್ರ: ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಟಿಎಂಸಿ ಹೀನಾಯ ಸೋಲು ಅನುಭವಿಸಿದ ಬಳಿಕ ಪಕ್ಷದೊಳಗಿನ ಅಸಮಾಧಾನ ತೀವ್ರಗೊಂಡಿದೆ. ಭವಾನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ಸೋಲು ಕಂಡ ನಂತರ ಹಲವು ನಾಯಕರು ಅವರ ನಾಯಕತ್ವ ಶೈಲಿಯನ್ನೇ ಪ್ರಶ್ನಿಸಲು ಆರಂಭಿಸಿದ್ದರು. ಪಕ್ಷದ ಇತಿಹಾಸದಲ್ಲೇ ಅತ್ಯಂತ ಗಂಭೀರ ರಾಜಕೀಯ ಬಿಕ್ಕಟ್ಟನ್ನು ಎದುರಿಸುತ್ತಿರುವ ಮಮತಾ ಬ್ಯಾನರ್ಜಿ, ಈಗಾಗಲೇ 80 ಶಾಸಕರ ಪೈಕಿ ಇಬ್ಬರನ್ನು ಪಕ್ಷದಿಂದ ಉಚ್ಚಾಟಿಸಿದ್ದಾರೆ. ಆದರೆ ಅದರಿಂದ ಬಂಡಾಯದ ಅಲೆ ತಗ್ಗುವ ಲಕ್ಷಣಗಳು ಕಾಣುತ್ತಿಲ್ಲ. ಮುಂದಿನ ದಿನಗಳಲ್ಲಿ ಟಿಎಂಸಿಯೊಳಗಿನ ಬೆಳವಣಿಗೆಗಳು ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಮಹತ್ವದ ತಿರುವು ನೀಡುವ ಸಾಧ್ಯತೆ ಇದೆ.

ಶೀಘ್ರ ಬರಲಿದೆ ಪ್ಲಾಸ್ಟಿಕ್ ಕರೆನ್ಸಿ?

> ನಕಲಿ ನೋಟು ತಡೆ, ದೀರ್ಘಾವಧಿ ಬಳಕೆ ಪ್ರಮುಖ ಉದ್ದೇಶ
>
> ಪಾಲಿಮರ್ ನೋಟುಗಳ ಜಾರಿಗೆ ಆರ್‌ಬಿಐ ಚಿಂತನೆ

ಮುಂಬೈ: ದೇಶದಲ್ಲಿ ಶೀಘ್ರದಲ್ಲೇ ಪ್ಲಾಸ್ಟಿಕ್ ಆಧಾರಿತ ಪಾಲಿಮರ್ ಕರೆನ್ಸಿ ನೋಟುಗಳು ಚಲಾವಣೆಗೆ ಬರಬಹುದಾದ ಸಾಧ್ಯತೆ ಕಾಣಿಸಿಕೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದೇಶದಲ್ಲಿ ಪಾಲಿಮರ್ ಕರೆನ್ಸಿ ನೋಟುಗಳನ್ನು ಪರಿಚಯಿಸುವ ಪ್ರಸ್ತಾವನೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದು, ಈ ಕುರಿತು ಪ್ರಾಥಮಿಕ ಹಂತದ ಚರ್ಚೆಗಳು ನಡೆಯುತ್ತಿವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಶುಕ್ರವಾರ ನಡೆದ ಹಣಕಾಸು ನೀತಿ ಸಮಿತಿ(ಎಂಪಿಸಿ) ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಲಿಮರ್ ನೋಟುಗಳ ಜಾರಿಗೆ ಸಂಬಂಧಿಸಿದ ಪ್ರಸ್ತಾವನೆ ಇನ್ನೂ ಆರಂಭಿಕ ಹಂತದಲ್ಲಿದ್ದು, ಅಂತಿಮ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ವಿಶೇಷತೆ ಏನು?: ಪಾಲಿಮರ್ ನೋಟುಗಳು ಸಾಮಾನ್ಯ ಕಾಗದದ ನೋಟುಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ. ತೇವಾಂಶ, ಮಡಚುವಿಕೆ ಹಾಗೂ ದೈನಂದಿನ ಬಳಕೆಯಿಂದ ಉಂಟಾಗುವ ಹಾನಿಯನ್ನು ಇವು ಹೆಚ್ಚು ಪರಿಣಾಮಕಾರಿಯಾಗಿ ತಡೆದುಕೊಳ್ಳುತ್ತವೆ. ಇದರಿಂದ ನೋಟುಗಳ ಆಯುಷ್ಯ ಹೆಚ್ಚಾಗುವುದರ ಜೊತೆಗೆ ಮರುಮುದ್ರಣ ವೆಚ್ಚವೂ ಕಡಿಮೆಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದರ ಜತೆಗೆ, ಸುಧಾರಿತ ಭದ್ರತಾ ವೈಶಿಷ್ಟ್ಯಗಳನ್ನು ಅಳವಡಿಸಲು ಸಾಧ್ಯವಾಗುವುದರಿಂದ ನಕಲಿ ನೋಟುಗಳ ಹಾವಳಿಯನ್ನು ನಿಯಂತ್ರಿಸಲು ಸಹ ಪಾಲಿಮರ್ ನೋಟುಗಳು ನೆರವಾಗಲಿವೆ.



ದೇಶದ ಭದ್ರತೆಗೆ ಮತ್ತಷ್ಟು ಬಲ

ಭಾರತ- ಪಾಕಿಸ್ತಾನ ಗಡಿಯಲ್ಲಿ ಭದ್ರತೆ ಮತ್ತು ಕಣ್ಗಾವಲು ಬಲಪಡಿಸಲು ಗುಜರಾತ್ ಸರ್ಕಾರವು ಗಡಿ ಪ್ರದೇಶಗಳನ್ನು ವಿಭಜಿಸಿ ಹೊಸ ಬನಸ್ಕಾಂತ ಪೊಲೀಸ್ ವಲಯವನ್ನು ರಚಿಸಲು ಅನುಮೋದನೆ ನೀಡಿದೆ. ಹೊಸದಾಗಿ ರೂಪುಗೊಂಡ ಪೊಲೀಸ್ ವಲಯದ ಪ್ರಧಾನ ಕಚೇರಿ ಪಾಲನ್ಪುರದಲ್ಲಿರುತ್ತದೆ. ಗುಜರಾತ್‌ನ ಪೊಲೀಸ್ ಮಹಾ ನಿರ್ದೇಶಕರ(ಡಿಜಿಪಿ) ಕಚೇರಿಯು ಸಲ್ಲಿಸಿದ ಪ್ರಸ್ತಾವನೆ ಅನುಸರಿಸಿ, ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಸ್ತಿತ್ವದಲ್ಲಿರುವ ಗಡಿ ವ್ಯಾಪ್ತಿಯು ಸುಮಾರು 550 ಕಿಮೀ ವಿಶಾಲವಾದ ಭೌಗೋಳಿಕ ಪ್ರದೇಶ ಒಳಗೊಂಡಿದೆ. ಪಶ್ಚಿಮ ಕಛ್, ಪೂರ್ವ ಕಛ್, ಪಟಾನ್ ಮತ್ತು ಬನಸ್ಕಾಂತ ಜಿಲ್ಲೆಗಳನ್ನು ಒಳಗೊಂಡಿದೆ, ಇವೆಲ್ಲವೂ ಪಾಕಿಸ್ತಾನದೊಂದಿಗೆ ಅಂತಾರಾಷ್ಟ್ರೀಯ ಭೂ ಗಡಿ ಹಂಚಿಕೊಳ್ಳುತ್ತವೆ. ಇದು ದೇಶದ ಆಂತರಿಕ ಭದ್ರತೆ ಹೇಗೆ ಸಹಕಾರಿಯಾಗಲಿದೆ ಎಂಬುದರ ಮಾಹಿತಿ ಇಲ್ಲಿದೆ.

ಪಾಕಿಸ್ತಾನ ಗಡಿಯಲ್ಲಿ ಗುಜರಾತ್‌ನ ಹೊಸ ಪೊಲೀಸ್ ವಲಯ ರಚನೆ

ಪ್ರಮುಖ ಗಡಿ ವಿಭಜನೆ

ಗುಜರಾತ್ ತನ್ನ ಪಾಕಿಸ್ತಾನದ ಗಡಿ ಪೊಲೀಸಿಂಗ್ ಅನ್ನು ಎರಡು ವಲಯಗಳನ್ನಾಗಿ ವಿಂಗಡಿಸಿದೆ. ಇದು ಗಡಿ ವ್ಯಾಪ್ತಿ ವಿಶಾಲ ಜವಾಬ್ದಾರಿಗಳನ್ನು ಸರಾಗಗೊಳಿಸುವ ಸಲುವಾಗಿ ಬನಸ್ಕಾಂತ ವಲಯ ಸೃಷ್ಟಿಸಿದೆ.

ಕಾರ್ಯಾಚರಣೆಯ ದಕ್ಷತೆ: ಪುನಾರಚನೆಯು 645 ಕಿಮೀ. ಉದ್ದದ ಗಡಿ ಮತ್ತು ಕರಾವಳಿಯಲ್ಲಿ ಮೇಲ್ವಿಚಾರಣಾ ಸವಾಲುಗಳನ್ನು ಪರಿಹರಿಸುತ್ತದೆ. ತ್ವರಿತ ಪ್ರತಿಕ್ರಿಯೆ ಮತ್ತು ನಿಕಟ ಮೇಲ್ವಿಚಾರಣೆಗೆ ಅನುವು ಮಾಡಿಕೊಡುತ್ತದೆ.

ಕಾರ್ಯತಂತ್ರದ ಸಮನ್ವಯ: ಹೊಸ ವ್ಯಾಪ್ತಿ ಬಿಎಸ್‌ಎಫ್, ಐಸಿಜಿ ಮತ್ತು ಐಎಎಫ್‌ನೊಂದಿಗಿನ ಸಹಯೋಗವನ್ನು ಬಲಪಡಿಸುತ್ತದೆ. ವಲಸೆ, ಮಾದಕವಸ್ತು ಕಳ್ಳಸಾಗಣೆ ಮತ್ತು ಇಂಧನ ವಲಯದ ಭದ್ರತೆಯಂತಹ ಸಮಸ್ಯೆಗಳನ್ನು ನಿಭಾಯಿಸುತ್ತದೆ.

ಗುಪ್ತಚರ, ಭದ್ರತಾ ಸಂಸ್ಥೆ ಜತೆ ಸಮನ್ವಯಕ್ಕೆ ಅನುಕೂಲ

ಇಲ್ಲಿನ ಕೆಲವು ಪ್ರಮುಖ ಸವಾಲುಗಳೆಂದರೇ ಗಡಿಗೆ ಹತ್ತಿರವಿರುವ ಇಂಧನ ಮತ್ತು ಸೌರ ಉದ್ಯಾನವನಗಳಲ್ಲಿ ಕೆಲಸ ಮಾಡುವ ಹೆಚ್ಚಿನ ಸಂಖ್ಯೆ ಕಾರ್ಮಿಕರ ಸುರಕ್ಷತೆಯಾಗಿದೆ. ಅಲ್ಲಿನ ಪೊಲೀಸರು ಗಡಿ ಗ್ರಾಮಗಳನ್ನು, ದೇಶದೊಳಗಿನ ಮತ್ತು ಹೊರಗಿನ ವಲಸೆ ನಿರ್ವಹಿಸಬೇಕು, ಅಂತಾರಾಷ್ಟ್ರೀಯ ಗಡಿಯಲ್ಲಿ ಗಸ್ತು ತಿರುಗಬೇಕು ಮತ್ತು ಮಾದಕವಸ್ತು ಕಳ್ಳಸಾಗಣೆಯ ಭೀತಿ ನಿಭಾಯಿಸಬೇಕು. ಈ ಮರುಸಂಘಟನೆಯು ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಭಾರತೀಯ ಕರಾವಳಿ ಕಾವಲು ಪಡೆ(ಐಸಿಜಿ) ಮತ್ತು ಭಾರತೀಯ ವಾಯುಪಡೆ(ಐಎಎಫ್) ಗುಪ್ತಚರ ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯಕ್ಕೆ ಸಹಾಯ ಮಾಡುತ್ತದೆ.

ಹೊಸ ಜಿಲ್ಲೆ ರಚನೆ

2025ರ ಮೇನಲ್ಲಿ ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರ್ ನಂತರ, ಆ ವರ್ಷ ಅಕ್ಟೋಬರ್‌ನಲ್ಲಿ ವಾವ್-ತರಾದ್ ಅನ್ನು ಬನಸ್ಕಾಂತದಿಂದ ಹೊಸ ಜಿಲ್ಲೆಯಾಗಿ ರಚಿಸಲಾಯಿತು. ಈ ನಿರ್ಧಾರವು ಆಡಳಿತವನ್ನು ಸರಾಗಗೊಳಿಸುವ ಗುರಿ ಹೊಂದಿದೆ ಎಂದು ಸರ್ಕಾರ ಹೇಳಿತ್ತು. ಬನಸ್ಕಾಂತವು ಪ್ರದೇಶದ ದೃಷ್ಟಿಯಿಂದ ರಾಜ್ಯದ ಎರಡನೇ ಅತಿದೊಡ್ಡ ಜಿಲ್ಲೆಯಾಗಿದೆ.

ಶಾ ಘೋಷಣೆ ಬೆನ್ನಲ್ಲೆ ನಿರ್ಧಾರ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೇ ತಿಂಗಳ ಕೊನೆಯಲ್ಲಿ ರಾಜಸ್ಥಾನಕ್ಕೆ ಭೇಟಿ ನೀಡಿ, ದೇಶದ ಗಡಿಯ 15 ಕಿಮೀ ವ್ಯಾಪ್ತಿಯೊಳಗೆ ಅಕ್ರಮ ನಿರ್ಮಾಣಗಳ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಮತ್ತು ಅಂತಹ ಎಲ್ಲಾ ಕಟ್ಟಡಗಳನ್ನು ಕೆಡವಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ರಾಜ್‌ಕೋಟ್ ಶ್ರೇಣಿ ವಿಭಜನೆ

1995 ಮೇ 20ರಂದು, ರಾಜ್‌ಕೋಟ್ ವ್ಯಾಪ್ತಿ ವಿಭಜಿಸಿ ಗಡಿ ವಲಯ ರಚಿಸಲಾಯಿತು. ಎರಡನೆಯದು ಕಛ್(ಪಶ್ಚಿಮ), ಕಛ್(ಪೂರ್ವ), ಪಟಾನ್ ಮತ್ತು ಬನಸ್ಕಾಂತ ಜಿಲ್ಲೆಗಳ (ಪಾಕಿಸ್ತಾನದೊಂದಿಗಿನ ಸಂಪೂರ್ಣ ಅಂತಾರಾಷ್ಟ್ರೀಯ ಗಡಿಯನ್ನು ಒಳಗೊಂಡ) ಮೇಲೆ ಅಧಿಕಾರ ವ್ಯಾಪ್ತಿ ಹೊಂದಿತ್ತು. ಇದರಲ್ಲಿ 406.87 ಕಿಮೀ. ಭೂ ಗಡಿ ಮತ್ತು 238 ಕಿಮೀ. ಸಮುದ್ರ ಗಡಿ, ಒಟ್ಟು 645 ಕಿಮೀ ಸೇರಿವೆ.

310 ಚದರ ಕಿಮೀ ಪ್ರದೇಶದ ವ್ಯಾಪ್ತಿ: 310 ಚದರ ಕಿಮೀ. ಪ್ರದೇಶದಲ್ಲಿ ಹರಡಿರುವ ಮತ್ತು ಎರಡು ಪೊಲೀಸ್ ವ್ಯಾಪ್ತಿಗಳನ್ನು (ಪೂರ್ವ ಮತ್ತು ಪಶ್ಚಿಮ) ಒಳಗೊಂಡಿರುವ ಕಛ್ ಜಿಲ್ಲೆ ಗಡಿ ವ್ಯಾಪ್ತಿಯಲ್ಲಿ ಮುಂದುವರಿಯುತ್ತದೆ. ಇದಲ್ಲದೆ, 1995ರ ಅಧಿಸೂಚನೆಯ ಪ್ರಕಾರ ರಾಜ್‌ಕೋಟ್ ವ್ಯಾಪ್ತಿಯಲ್ಲಿದ್ದ ಮೊರ್ಬಿ ಜಿಲ್ಲೆಯನ್ನು ಈಗ ಗಡಿ ವ್ಯಾಪ್ತಿಯೊಳಗೆ ಸೇರಿಸಲಾಗಿದೆ. ಗಮನಾರ್ಹವಾಗಿ, ಮೊರ್ಬಿ ಯಾವುದೇ ಭೂ ಅಥವಾ ಸಮುದ್ರ ಗಡಿಯೊಂದಿಗೆ ಸಂಪರ್ಕ ಹೊಂದಿಲ್ಲ. ಆದರೆ, ಮೇಲ್ಭಾಗದ ಸೌರಾಷ್ಟ್ರದಲ್ಲಿರುವ ಲಿಟಲ್ ರಾನ್ ಆಫ್ ಕಛ್‌ನ ಪ್ರವೇಶದ್ವಾರವಾಗಿದೆ.

ಗಡಿ ಭದ್ರತಾ ಮೇಲ್ವಿಚಾರಣೆಗೆ ಬಲ

ಪಾಲನ್ಪುರದಲ್ಲಿ ಪ್ರಧಾನ ಕಚೇರಿ ಹೊಂದಿರುವ ಹೊಸದಾಗಿ ರಚಿಸಲಾದ ಬನಸ್ಕಾಂತ ವ್ಯಾಪ್ತಿಯು ಬನಸ್ಕಾಂತ(ಪಾಲನ್ಪುರ), ಪಟಾನ್ ಮತ್ತು ವಾವ್-ತರಾದ್ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಹೊಸ ವ್ಯವಸ್ಥೆ ಆಡಳಿತಾತ್ಮಕ ದಕ್ಷತೆ ಸುಧಾರಿಸುತ್ತದೆ. ಗಡಿ ಭದ್ರತಾ ಮೇಲ್ವಿಚಾರಣೆ ಬಲಪಡಿಸುತ್ತದೆ. ಉತ್ತರ ಗುಜರಾತ್ ಮತ್ತು ಕಛ್‌ನ ಗಡಿ ಜಿಲ್ಲೆಗಳಲ್ಲಿ ಉತ್ತಮ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ.

ಮೂರು ಜಿಲ್ಲೆ ಒಳಗೊಂಡ ವಲಯ

ಯಾವುದೇ ಪೊಲೀಸ್ ವ್ಯಾಪ್ತಿ ಸಾಮಾನ್ಯವಾಗಿ ಮೂರು ಪೊಲೀಸ್ ಜಿಲ್ಲೆಗಳನ್ನು ಹೊಂದಿರುತ್ತದೆ ಅಹಮದಾಬಾದ್, ವಡೋದರಾ, ಗಾಂಧಿನಗರ, ಸೂರತ್, ರಾಜ್‌ಕೋಟ್, ಜುನಾಗಢ, ಭಾವನಗರ, ದಾಹೋದ್ ಪಂಚಮಹಲ್ ಮತ್ತು ಬಾರ್ಡರ್ ರೇಂಜ್ ನಂತರ ಬನಸ್ಕಾಂತ ಗುಜರಾತಿನ 10ನೇ ಪೊಲೀಸ್ ವಲಯವಾಗಿರುತ್ತದೆ.



ಕಿರು ಸುದ್ದಿ

ತ.ನಾಡಲ್ಲಿ ಅಣ್ಣಾಮಲೈ ರಾಜಕೀಯ ಚಳವಳಿ

ಚೆನ್ನೈ: ಬಿಜೆಪಿಯಿಂದ ಗೌರವಪೂರ್ಣವಾಗಿ ನಿರ್ಗಮಿಸಿದ್ದೇನೆ ಎಂದು ಪಕ್ಷದ ತಮಿಳುನಾಡು ಮಾಜಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಶುಕ್ರವಾರ ಔಪಚಾರಿಕವಾಗಿ ಘೋಷಿಸಿದ್ದಾರೆ. ಅದೇ ರೀತಿ 2031ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಹೊಸ ರಾಜಕೀಯ ಚಳವಳಿ ಪ್ರಾರಂಭಿಸುವ ನಿರ್ಧಾರವನ್ನೂ ಘೋಷಿಸಿದರು. ಈ ಚಳವಳಿ ಮೂಲಕ ರಾಜ್ಯದಲ್ಲಿ ರಾಜಕೀಯ ಸಂಸ್ಕೃತಿಗೆ ಹೊಸ ರೂಪ ನೀಡುತ್ತೇನೆ. ವ್ಯಕ್ತಿ ಪೂಜೆ ಹಾಗೂ ಕುಟುಂಬ ರಾಜಕಾರಣಕ್ಕೆ ಪರ್ಯಾಯವಾಗಿ ರಾಜ್ಯದಲ್ಲಿ ಸಾಮರ್ಥ್ಯ ಹಾಗೂ ಮನೋಭಾವ ಆಧಾರಿತ ನಾಯಕತ್ವ ಬೆಳೆಸುವ ಕನಸನ್ನು ಈ ವೇಳೆ ಅವರು ಹಂಚಿಕೊಂಡಿದ್ದಾರೆ. ಈ ಚಳವಳಿಯನ್ನು ಭವಿಷ್ಯದಲ್ಲಿ ಕಾರ್ಯಕರ್ತರ ಬಲವನ್ನು ನಿರ್ಮಿಸಿ, ನಾಯಕತ್ವ ತರಬೇತಿ ನೀಡಿದ ಬಳಿಕ ರಾಜಕೀಯ ಪಕ್ಷವಾಗಿ ಪರಿವರ್ತಿಸಲಾಗುವುದು ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಅತ್ಯಂತ ಗೌರವ ಹೊಂದಿರುವುದಾಗಿಯೂ ಹೇಳಿದ್ದಾರೆ. ಅಲ್ಲದೆ ತಮಿಳುನಾಡಿನ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸ್ಪರ್ಧಿಸಲಿದೆ ಎಂದೂ ತಿಳಿಸಿದ್ದಾರೆ. ಚಳವಳಿಯನ್ನು ಬೆಂಬಲಿಸಲು ಆಸಕ್ತಿ ಹೊಂದಿರುವವರು ನೋಂದಾಯಿಸಿಕೊಳ್ಳುವಂತೆ ಅಣ್ಣಾಮಲೈ ವಿಡಿಯೋ ಮೂಲಕ ಜನತೆಗೆ ಆಹ್ವಾನ ನೀಡಿದ್ದಾರೆ. ಜತೆಗೆ, ಚುನಾವಣಾ ರಾಜಕೀಯಕ್ಕೆ ಆಸಕ್ತಿ ಹೊಂದಿರುವ ನಾಯಕರಿಗೆ ತರಬೇತಿ ನೀಡಲು ಎಪಿಜೆ ಅಬ್ದುಲ್ ಕಲಾಂ ನೈತಿಕ ಮತ್ತು ರಾಜಕೀಯ ಕೇಂದ್ರವನ್ನು ಸ್ಥಾಪಿಸಿರುವುದಾಗಿ ಘೋಷಿಸಿದ್ದಾರೆ.

ಒತ್ತಡಕ್ಕೆ ಬಗ್ಗುವವರಲ್ಲ ಪಿಎಂ ಮೋದಿ: ಪುಟಿನ್

ಸೈಂಟ್ ಪೀಟ್ಸ್‌ಬರ್ಗ್: ಭಾರತದೊಂದಿಗಿನ ರಷ್ಯಾದ ಬಂಧ ಕಾಲನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವಂಥದ್ದು ಎಂದು ಶ್ಲಾಘಿಸಿರುವ ಅಧ್ಯಕ್ಷ ವ್ಲಾಡಿಮೀರ್ ಪುಟಿನ್, ರಷ್ಯಾದೊಂದಿಗಿನ ನಂಟನ್ನು ತಗ್ಗಿಸುವಂತೆ ಪಾಶ್ಚಾತ್ಯರು ಪ್ರಧಾನಿ ನರೇಂದ್ರ ಮೋದಿಯವರ ಮೇಲೆ ಒತ್ತಡ ಹೇರುತ್ತಿರುವುದರಿಂದ ಜಾಗತಿಕ ಸ್ಥಿರತೆಗೆ ಹಾನಿ ಉಂಟಾಗಲಿದೆ ಎಂದು ಎಚ್ಚರಿಸಿದ್ದಾರೆ. ಭಾರತದ ಬೆಳವಣಿಗೆ ದಿಢೀರ್ ಉಂಟಾಗಿರುವಂಥದ್ದಲ್ಲ, ಬದಲಿಗೆ ಇದು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಕಠಿಣ ಪರಿಶ್ರಮದಿಂದ ಆಗಿರುವಂಥದ್ದು ,ಮೋದಿಯವರು ಯಾವುದೇ ಒತ್ತಡ ಸವಾಲುಗಳಿಗೆ ಬಗ್ಗುವವರೂ ಅಲ್ಲ, ಹೆದರುವವರೂ ಅಲ್ಲ. ಎಂದು ಅವರು ಒತ್ತಿ ಹೇಳಿದ್ದಾರೆ. ಪಿಟಿಐ ಸೇರಿದಂತೆ ಜಾಗತಿಕ ಸುದ್ದಿ ಸಂಸ್ಥೆಗಳ ಮುಖ್ಯಸ್ಥರ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಶ್ಲಾಘಿಸಿದರು. ರಷ್ಯಾ ಭಾರತದೊಂದಿಗಿನ ಸಮಗ್ರ ಬಾಂಧವ್ಯವನ್ನು ವಿಸ್ತರಿಸಲು ರಷ್ಯಾ ದೃಢ ನಿಶ್ಚಯ ಮಾಡಿದೆ. ಈಗಿರುವ 60 ಬಿ.ಡಾ.ಗಳ ದ್ವಿಪಕ್ಷೀಯ ವ್ಯಾಪಾರವು 100 ಬಿ.ಡಾ.ಗೇರುವ ನಿರೀಕ್ಷೆಯಿದೆ ಎಂದರು. ಸಂವಾದದಲ್ಲಿ ಪಾಲ್ಗೊಂಡಿದ್ದ ಭಾರತದ ಏಕೈಕ ಪತ್ರಕರ್ತರಾದ ಪಿಟಿಐಯ ಸಿಇಒ ಮತ್ತು ಪ್ರಧಾನ ಸಂಪಾದಕ ವಿಜಯ್ ಜೋಷಿ ಅವರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಪುಟಿನ್, ಭಾರತವು ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ. ವಿಶ್ವದಲ್ಲೇ ಅತ್ಯಧಿಕ ಆರ್ಥಿಕ ಬೆಳವಣಿಗೆ ದರವನ್ನು ಹೊಂದಿರುವ ಭಾರತದ ಬೆಳವಣಿಗೆ ಹಠಾತ್ ಆಗಿ ಉಂಟಾಗಿರುವಂಥದ್ದಲ್ಲ. ಇದು ಪ್ರಧಾನಿ ಮೋದಿ ನಾಯಕತ್ವದಲ್ಲಿ ಸರಕಾರದ ಕಠಿಣ ಪರಿಶ್ರಮದಿಂದ ಆಗಿರುವಂಥದ್ದು ಎಂದರು.

ಕೇರಳದಲ್ಲಿ ಭಾರೀ ಮಳೆ 5 ಜಿಲ್ಲೆಗೆ ರೆಡ್‌ಅಲರ್ಟ್

ಹೊಸದಿಲ್ಲಿ/ತಿರುವನಂತಪುರಂ: ನೈಋತ್ಯ ಮುಂಗಾರು ಕೇರಳದ ಕೆಲವು ಭಾಗಗಳಲ್ಲಿ ತನ್ನ ಪ್ರಕೋಪವನ್ನು ಉಂಟುಮಾಡುತ್ತಿದೆ. ಕಳೆದ ಎರಡು ದಿನಗಳಿಂದ ಮಧ್ಯ ಮತ್ತು ಉತ್ತರ ಕೇರಳದ ಹಲವಾರು ಜಿಲ್ಲೆಗಳಲ್ಲಿ ತೀವ್ರ ಮಳೆಯಾಗುತ್ತಿದೆ. ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಕಾಸರಗೋಡು, ಕಣ್ಣೂರು, ಕೋಝಿಕ್ಕೋಡ್, ವಯನಾಡು ಮತ್ತು ಮಲಪ್ಪುರಂ ಜಿಲ್ಲೆಗಳಿಗೆ ಶನಿವಾರ ರೆಡ್ ಅಲರ್ಟ್ ನೀಡಿದೆ. ಮುಂದಿನ 24 ಗಂಟೆಗಳಲ್ಲಿ 204 ಮಿಮೀಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ. ಜತೆಗೆ ಮುಂದಿನ ಏಳು ದಿನಗಳಲ್ಲಿ ಅಂದರೆ ಗುರುವಾರದವರೆಗೆ ಕೇರಳ ಮತ್ತು ಕರ್ನಾಟಕದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿದೆ. ರೆಡ್ ಅಲರ್ಟ್ ಹಿನ್ನಲ್ಲೆ ವಯನಾಡು, ಕೋಝಿಕ್ಕೋಡ್ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಪ್ರವಾಸಿ ಚಾರಣ ಸ್ಥಳಗಳಿಗೆ ಪ್ರವೇಶ ಮತ್ತು ಗುಡ್ಡಗಾಡು ರಸ್ತೆಗಳಲ್ಲಿ ರಾತ್ರಿ ಪ್ರಯಾಣ ಮತ್ತು ಗಣಿಗಾರಿಕೆ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ವಯನಾಡು ಮತ್ತು ಕಾಸರಗೋಡು ಜಿಲ್ಲೆಗಳ ಶೈಕ್ಷಣಿಕ ಸಂಸ್ಥೆಗಳಿಗೆ ಶನಿವಾರ ರಜೆ ಘೋಷಿಸಲಾಗಿದೆ. ಈ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಗುಡುಗು ಸಹಿತ ಭಾರೀ ಮಳೆ ಮತ್ತು ಗಂಟೆಗೆ 40 ಕಿಮೀ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ.

> ಕರ್ನಾಟಕದಲ್ಲಿ ಮುಂದಿನ 7 ದಿನ ಭಾರೀ ಮಳೆ ಸಾಧ್ಯತೆ: ಐಎಂಡಿ

ಸಿಬಿಎಸ್‌ಇ ಪೋರ್ಟಲ್‌ಗೆ ಸೈಬರ್ ದಾಳಿ : ತನಿಖೆ

ಹೊಸದಿಲ್ಲಿ: ಸಿಬಿಎಸ್‌ಇ 12ನೇ ತರಗತಿ ಫಲಿತಾಂಶಾನಂತರದ ಸೇವೆಗಳ ಪೋರ್ಟಲ್ ಮೇಲೆ ಕಳೆದ ಮೂರು ದಿನಗಳಿಂದ ನಿರಂತರ ಸೈಬರ್ ದಾಳಿಗಳು ನಡೆದಿರುವ ಹಿನ್ನೆಲೆಯಲ್ಲಿ ದಿಲ್ಲಿ ಪೊಲೀಸರಿಗೆ ಅಧಿಕೃತ ದೂರು ನೀಡಿದೆ. ಆದರೆ ಯಾವುದೇ ವಿದ್ಯಾರ್ಥಿಯ ವೈಯಕ್ತಿಕ ಮಾಹಿತಿ ಸೋರಿಕೆಯಾಗಿಲ್ಲ ಹಾಗೂ ಡೇಟಾ ಸಂಪೂರ್ಣ ಸುರಕ್ಷಿತವಾಗಿದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ. ಮಾರ್ಕ್ಸ್ ಪರಿಶೀಲನೆ, ಮೌಲ್ಯಮಾಪನಗೊಂಡ ಉತ್ತರಪತ್ರಿಕೆಗಳ ಪ್ರತಿಗಳನ್ನು ಪಡೆಯುವುದು ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಬಳಸುವ ಪೋಸ್ಟ್-ರಿಸಲ್ಟ್ ಸರ್ವಿಸಸ್ ಪೋರ್ಟಲ್ ಗುರಿಯಾಗಿಸಿಕೊಂಡು ಸಂಯೋಜಿತ ಸೈಬರ್ ದಾಳಿಗಳು ನಡೆದಿವೆ ಎಂದು ಸಿಬಿಎಸ್‌ಇ ತಿಳಿಸಿದೆ. ಈ ಕುರಿತು ದೆಹಲಿ ಪೊಲೀಸರ ಇಂಟೆಲಿಜೆನ್ಸ್ ಫ್ಯೂಷನ್ ಆ್ಯಂಡ್ ಸ್ಟ್ರಾಟೆಜಿಕ್ ಆಪರೇಷನ್ಸ್ ಘಟಕಕ್ಕೆ ದೂರು ಸಲ್ಲಿಸಲಾಗಿದೆ. 24 ಗಂಟೆಗಳ ನಿಗಾ ವ್ಯವಸ್ಥೆಯ ಮೂಲಕ ಎಲ್ಲ ದಾಳಿಗಳನ್ನು ಯಶಸ್ವಿಯಾಗಿ ತಡೆಗಟ್ಟಲಾಗಿದೆ. ಪೋರ್ಟಲ್‌ನ ಕಾರ್ಯಾಚರಣೆಗೆ ಯಾವುದೇ ಧಕ್ಕೆಯಾಗಿಲ್ಲ ಮತ್ತು ವಿದ್ಯಾರ್ಥಿಗಳ ಸೂಕ್ಷ್ಮ ಮಾಹಿತಿಯೂ ಸುರಕ್ಷಿತವಾಗಿದೆ ಎಂದು ಮಂಡಳಿ ಹೇಳಿದೆ. ಇದಕ್ಕೂ ಮುನ್ನ ಮರುಮೌಲ್ಯಮಾಪನ ಪೋರ್ಟಲ್ ಮೇಲೆ ನಡೆದ ದಾಳಿಯಲ್ಲಿ ಕೇವಲ ಎರಡು ನಿಮಿಷಗಳಲ್ಲಿ ಸುಮಾರು 15 ಲಕ್ಷ ಹಿಟ್‌ಗಳು ದಾಖಲಾಗಿದ್ದವು. ಆದಾಗ್ಯೂ ಪೋರ್ಟಲ್ ಕಾರ್ಯ ನಿರ್ವಹಣೆಯನ್ನು ಮುಂದುವರಿಸಿ ಸಾವಿರಾರು ವಿದ್ಯಾರ್ಥಿಗಳ ಅರ್ಜಿಗಳನ್ನು ಯಶಸ್ವಿಯಾಗಿ ಸ್ವೀಕರಿಸಿತ್ತು. ಸೈಬರ್ ದಾಳಿಗಳ ಮೂಲವನ್ನು ಪತ್ತೆಹಚ್ಚಲು ಹಾಗೂ ಹೊಣೆಗಾರರ ವಿರುದ್ಧ ಕ್ರಮ ಕೈಗೊಳ್ಳಲು ದಿಲ್ಲಿ ಪೊಲೀಸರು ತನಿಖೆ ಆರಂಭಿಸುವ ಸಾಧ್ಯತೆ ಇದೆ.

ದೇಶದಲ್ಲಿ ಇ-85 ಇಂಧನಕ್ಕೆ ಚಾಲನೆ

ಹೊಸದಿಲ್ಲಿ: ಫ್ಲೆಕ್ಸ್-ಫ್ಯುಯೆಲ್ ವಾಹನಗಳಿಗಾಗಿ ರೂಪಿಸಲಾದ ಹೆಚ್ಚಿನ ಎಥೆನಾಲ್ ಮಿಶ್ರಿತ ಇ-85 ಇಂಧನಕ್ಕೆ ಕೇಂದ್ರ ಸರ್ಕಾರ ಶುಕ್ರವಾರ ಚಾಲನೆ ನೀಡಿದೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ದಿಲ್ಲಿಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಇಂಧನವನ್ನು ಅನಾವರಣಗೊಳಿಸಿದರು. ಇ-85 ಇಂಧನವು ಶೇ.80-85 ಎಥೆನಾಲ್ ಹಾಗೂ ಶೇ.14-19 ಪೆಟ್ರೋಲ್ ಮಿಶ್ರಣ ಹೊಂದಿದ್ದು, ಫ್ಲೆಕ್ಸ್-ಫ್ಯುಯೆಲ್ ವಾಹನಗಳಲ್ಲಿ ಮಾತ್ರ ಬಳಸಬಹುದು. ಇದರ ದರ ಸಾಮಾನ್ಯ ಪೆಟ್ರೋಲ್‌ಗಿಂತ ಲೀಟರ್‌ಗೆ ಸುಮಾರು 20 ರೂ. ಕಡಿಮೆಯಾಗಿದೆ. ಪ್ರಾರಂಭಿಕ ಹಂತದಲ್ಲಿ ದೇಶದ 48 ಪೆಟ್ರೋಲ್ ಬಂಕ್‌ಗಳಲ್ಲಿ ಲಭ್ಯವಾಗಲಿರುವ ಈ ಇಂಧನವನ್ನು 2026ರ ಅಂತ್ಯದೊಳಗೆ 500 ಹಾಗೂ 2027ರೊಳಗೆ 5,000 ಕೇಂದ್ರಗಳಿಗೆ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆ. ಎಥೆನಾಲ್ ಬಳಕೆಯಿಂದ ವಿದೇಶಿ ವಿನಿಮಯ ಉಳಿತಾಯ, ಕಚ್ಚಾ ತೈಲ ಆಮದು ಕಡಿತ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ನೆರವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ. ಎಥೆನಾಲ್‌ನ ಪ್ರತಿಯೊಂದು ಲೀಟರ್ ಆಮದು ಇಂಧನಕ್ಕೆ ಪರ್ಯಾಯ ಎಂದು ಅವರು ಹೇಳಿದರು.

ಜಾಗತಿಕ ಬಿಕ್ಕಟ್ಟು, ಯುದ್ಧಾತಂಕ ಹೊರತಾಗಿಯೂ ಜಿಡಿಪಿ ಜಿಗಿತ

ಭಾರತದ ಆರ್ಥಿಕ ಬೆಳವಣಿಗೆ ಶೇ.7.7ಕ್ಕೆ

ಹೊಸದಿಲ್ಲಿ: ಜಾಗತಿಕ ಅನಿಶ್ಚಿತತೆ ಮತ್ತು ಭೌಗೋಳಿಕ ರಾಜಕೀಯ ಉದ್ವಿಗ್ನತೆ ಮತ್ತು ಹೆಚ್ಚಿದ ಇಂಧನ ಬೆಲೆಗಳ ಹೊರತಾಗಿಯೂ 2025-26ನೇ ಹಣಕಾಸು ವರ್ಷದಲ್ಲಿ ಭಾರತದ ನೈಜ ಆರ್ಥಿಕ ಬೆಳವಣಿಗೆಯು ಹಿಂದಿನ ವರ್ಷದಲ್ಲಿನ ಶೇ.7.1ರಿಂದ ಶೇ.7.7ಕ್ಕೇರಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಅಂಕಿ-ಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ(ಎಂಎಸ್‌ಪಿಐ) ಸಚಿವಾಲಯವು ಶುಕ್ರವಾರ ಬಿಡುಗಡೆಗೊಳಿಸಿದ ಅಂಕಿ-ಅಂಶಗಳ ಪ್ರಕಾರ ಜನವರಿಯಿಂದ-ಮಾರ್ಚ್ ನಡುವಣ 4ನೇ ತ್ರೈಮಾಸಿಕದಲ್ಲಿ ಶೇ.7.8ರ ಆರ್ಥಿಕ ಬೆಳವಣಿಗೆ ತೋರಿಸಿದೆ. ಇದು ಈ ಹಣಕಾಸು ವರ್ಷದ ಅಂತ್ಯವರೆಗೂ ಬೆಳವಣಿಗೆ ದೃಢವಾಗಿ ಮುಂದುವರಿದಿರುವುದನ್ನು ತೋರಿಸಿದೆ.

2022-23ರ ಸ್ಥಿರ ಬೆಲೆಗಳಲ್ಲಿ ಅಳೆಯಲಾದ ನೈಜ ಜಿಡಿಪಿಯು 2026ನೇ ಹಣಕಾಸು ವರ್ಷದಲ್ಲಿ 323.12 ಲಕ್ಷ ಕೋಟಿ ರೂ.ಗಳನ್ನು ತಲುಪಿದೆ. ಇದು 2025ನೇ ಹಣಕಾಸು ವರ್ಷದಲ್ಲಿ 299.89 ಕೋಟಿ ರೂ.ಗಳಾಗಿತ್ತು. ಹಣದುಬ್ಬರದ ಪರಿಣಾಮವನ್ನು ಒಳಗೊಂಡ ಪ್ರಸ್ತುತ ವರ್ಷದ ಜಿಡಿಪಿ ಹಿಂದಿನ ವರ್ಷದಲ್ಲಿದ್ದ 318.07 ಲಕ್ಷ ಕೋಟಿ ರೂ.ಗಳಿಂದ 346ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ಶೇ.8.9ರ ಬೆಳವಣಿಗೆ ದರವನ್ನು ದಾಖಲಿಸಿದೆ. ಇತ್ತೀಚಿನ ಅಂದಾಜುಗಳಂತೆ, ಭಾರತದ ಹಣಕಾಸು ಚಟುವಟಿಕೆಗಳು 2026-27ನೇ ಸಾಲಿನ ಹಣಕಾಸು ವರ್ಷದಲ್ಲಿ ಚೇತರಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಜಿಡಿಪಿ ಮತ್ತು ಒಟ್ಟು ಮೌಲ್ಯವರ್ಧನೆ(ಜಿವಿಎ) ಗಳೆರಡರಲ್ಲೂ ಬೆಳವಣಿಗೆಯ ಸುಧಾರಣೆ ತೋರಿಸಿದೆ. ತೆರಿಗೆಗಳು ಮತ್ತು ಸಬ್ಸಿಡಿಗಳನ್ನು ಹೊರತುಪಡಿಸಿದ ಆರ್ಥಿಕ ಉತ್ಪಾದನೆಯನ್ನು ಅಳೆಯುವ ನೈಜ ಜಿವಿಎ 2026ನೇ ಸಾಲಿನಲ್ಲಿ ಶೇ.7.9ರ ಬೆಳವಣಿಗೆಯನ್ನು ದಾಖಲಿಸಿದೆ. ಇದು ಕಳೆದ ವರ್ಷದಲ್ಲಿ ಶೇ.7.3ಆಗಿತ್ತು. ಪ್ರಚಲಿತ ಬೆಲೆಗಳು, ಪ್ರಸಕ್ತ ಜಿವಿಎ ಹಿಂದಿನ ವರ್ಷದಲ್ಲಿದ್ದ 288.54 ಲಕ್ಷ ಕೋಟಿ ರೂ.ಗಳಿಂದ 314.87 ಲಕ್ಷ ಕೋಟಿ ರೂ.ಗಳಿಗೆ ಅಂದರೆ ಶೇ.9.1ರ ಹೆಚ್ಚಳ ಕಂಡಿದೆ.

ಆರ್ಥಿಕತೆಯ ಎಲ್ಲ ನೆಲೆಗಳಲ್ಲೂ ವಿಶಾಲ ನೆಲೆಯ ಬೆಳವಣಿಗೆಯಾಗಿರುವುದನ್ನು ಅಂಕಿ-ಅಂಶಗಳು ಎತ್ತಿತೋರಿದ್ದು, ಸೇವಾ ಕ್ಷೇತ್ರವು ಆರ್ಥಿಕ ಚಟುವಟಿಕೆಗಳ ಅತಿದೊಡ್ಡ ಪಾಲಿನೊಂದಿಗೆ ಮುನ್ನಡೆಯನ್ನು ಕಾಯ್ದುಕೊಂಡಿದೆ. ಉತ್ಪಾದನೆ , ನಿರ್ಮಾಣ ಮತ್ತು ಇತರ ಕೈಗಾರಿಕಾ ಕ್ಷೇತ್ರಗಳು ಕೂಡ ಈ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಿದೆ.

> ಭಾರತದ ಆರ್ಥಿಕತೆ ಕುಸಿತದತ್ತ ಸಾಗುತ್ತಿದೆ ಎಂಬ ರಾಹುಲ್ ಗಾಂಧಿ ಹೇಳಿಕೆಗೆ ಇತ್ತೀಚಿನ ಜಿಡಿಪಿ ಅಂಕಿ-ಅಂಶಗಳೇ ತಕ್ಕ ಉತ್ತರ ನೀಡಿವೆ. ಮೋದಿ ಅವರ ನೇತೃತ್ವದಲ್ಲಿ ದೇಶದ ಆರ್ಥಿಕತೆ ನಿರಂತರ ಪ್ರಗತಿ ಸಾಧಿಸುತ್ತಿದೆ.
>
> ■ ನಿತಿನ್ ನವೀನ್, ಬಿಜೆಪಿ ರಾಷ್ಟ್ರಾಧ್ಯಕ್ಷ

> ಜಾಗತಿಕ ಪರಿಸ್ಥಿತಿಗಳು ಸುಧಾರಿಸಿದರೆ 2027-28ನೇ ಹಣಕಾಸು ವರ್ಷದಲ್ಲಿ ಭಾರತ ಮತ್ತೆ ಶೇ.7ಕ್ಕಿಂತ ಹೆಚ್ಚಿನ ಬೆಳವಣಿಗೆ ದರ ಸಾಧಿಸಲಿದೆ.
>
> ■ ವಿ. ಅನಂತ ನಾಗೇಶ್ವರನ್, ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ

5ನೇ ತಲೆಮಾರಿನ ಯುದ್ಧ ವಿಮಾನ | ರಷ್ಯಾ ಅಧ್ಯಕ್ಷ ಪುಟಿನ್ ಪ್ರಸ್ತಾಪ

ಭಾರತದಲ್ಲೇ ಫೈಟರ್ ಜೆಟ್ ಉತ್ಪಾದನೆ

ಹೊಸದಿಲ್ಲಿ: 5ನೇ ತಲೆಮಾರಿನ ಫೈಟರ್ ಜೆಟ್ ಹುಡುಕಾಟದಲ್ಲಿರುವ ಭಾರತಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪ್ರಸ್ತಾವನೆ ಮುಂದಿಟ್ಟಿದ್ದಾರೆ. ಎಸ್ ಯು-57 ಸ್ಟೆಲ್ತ್ ಯುದ್ಧ ವಿಮಾನ ಜಂಟಿ ಉತ್ಪಾದನೆಗೆ ಪುಟಿನ್ ಆಸಕ್ತಿ ತೋರಿದ್ದಾರೆ. ಪ್ರಮುಖ ರಕ್ಷಣಾ ವೇದಿಕೆಗಳು ಮತ್ತು ಶಸ್ತ್ರಾಸ್ತ್ರಗಳಿಗಾಗಿ ನಿರ್ಣಾಯಕ ತಂತ್ರಜ್ಞಾನಗಳನ್ನು ಭಾರತಕ್ಕೆ ಒದಗಿಸಲು ರಷ್ಯಾ ಸಿದ್ಧವಾಗಿದೆ ಎಂದು ಪುಟಿನ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಸ್ಥಳೀಯ 5ನೇ ತಲೆಮಾರಿನ ಜೆಟ್ (ಅಡ್ವಾನ್ಸ್ಡ್ ಮೀಡಿಯಂ ಕಾಂಬ್ಯಾಟ್ ಏರ್‌ಕ್ರಾಫ್ಟ್) ಅನ್ನು ಅಭಿವೃದ್ಧಿಪಡಿಸುವ ಭಾರತದ ಯೋಜನೆಯೂ ಸದ್ಯ ಅಭಿವೃದ್ಧಿ ಹಂತದಲ್ಲಿದೆ. ಇದು 2030ರ ವೇಳೆಗೆ ಸೇವೆಗೆ ಬರುವ ಸಾಧ್ಯತೆಯಿದೆ.

ಈ ಬಗ್ಗೆ ಮಾತನಾಡಿದ ಪುಟಿನ್, 2018ರಲ್ಲಿ ಭಾರತ ಈ ಉದ್ಯಮದಿಂದ ಹೊರನಡೆಯುವ ಮುನ್ನ ರಷ್ಯಾ ತನ್ನ ಐದನೇ ತಲೆಮಾರಿನ ಫೈಟರ್ ಏರ್‌ಕ್ರಾಫ್ಟ್(ಎಫ್‌ಜಿಎಫ್‌ಎ) ಕಾರ್ಯಕ್ರಮದಲ್ಲಿ ಸಹ-ಅಭಿವೃದ್ಧಿಗೆ ಭಾರತವ ಆಹ್ವಾನಿಸಿತ್ತು ಎಂಬುದನ್ನು ಉಲ್ಲೇಖಿಸಿದ್ದಾರೆ. ವೆಚ್ಚ ಹಂಚಿಕೆ ಯೋಜನೆಗಳು, ತಂತ್ರಜ್ಞಾನ ವರ್ಗಾವಣೆ ಮತ್ತು ತಾಂತ್ರಿಕ ಸಾಮರ್ಥ್ಯಗಳ ಬಗ್ಗೆ ಭಿನ್ನಾಭಿಪ್ರಾಯಗಳ ಬಗ್ಗೆ ಪ್ರಾಥಮಿಕ ವಿನ್ಯಾಸಗಳಲ್ಲಿ ಸುಮಾರು 300 ಮಿಲಿಯನ್ ಹೂಡಿಕೆ ಮಾಡಿದ ನಂತರ ಸ್ಟೆಲ್ತ್ ಫೈಟರ್ ಜೆಟ್ ಅನ್ನು ಅಭಿವೃದ್ಧಿಪಡಿಸುವ 11 ವರ್ಷಗಳ ಸಹಯೋಗದ ಕಾರ್ಯಕ್ರಮದಿಂದ ಭಾರತವು ಹಿಂದೆ ಸರಿದಿತ್ತು.



ಸ್ವಾವಲಂಬನೆಗಾಗಿ ಕೆಲ ಬದಲಾವಣೆ : ಆದಾಗ್ಯೂ, ಅಂದಿನಿಂದ ರಷ್ಯಾದ ಸರ್ಕಾರಿ ಸ್ವಾಮ್ಯದ ರಕ್ಷಣಾ ರಫ್ತುದಾರ ರೊಸೊಬೊರೊನೆಕ್ಸ್ಪೋರ್ಟ್, ಭಾರತದ ಮೇಕ್ ಇನ್ ಇಂಡಿಯಾ ಯೋಜನೆಯೊಂದಿಗೆ ಹೆಚ್ಚು ಹೊಂದಾಣಿಕೆ ಮಾಡಿಕೊಳ್ಳಲು ತನ್ನ ನಿಯಮಗಳನ್ನು ಬದಲಾಯಿಸಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದರು. ಆದರೆ ಅಮೆರಿಕದ ಐದನೇ ತಲೆಮಾರಿನ ಯುದ್ಧವಿಮಾನಗಳು ನಿಗದಿಪಡಿಸಿದ ಸ್ಟೆಲ್ತ್ ಮಾನದಂಡಗಳಿಗೆ ಇದು ನಿಜವಾಗಿಯೂ ಹೊಂದಿಕೆಯಾಗುತ್ತದೆಯೇ ಎಂಬುದು ಭಾರತದ ಅತಿದೊಡ್ಡ ಕಾಳಜಿಯಾಗಿತ್ತು. ಈ ಹಿನ್ನೆಲೆ ಈ ಮಾತುಕತೆಗಳು ನಿಂತು ಹೋಗಿತ್ತು. ಕೆಲವು ರಕ್ಷಣಾ ವಿಶ್ಲೇಷಕರ, ಸು-57 ಗರಿಷ್ಠ ರಹಸ್ಯಕ್ಕಿಂತ ಕುಶಲತೆ ಮತ್ತು ವಾಯುಬಲ ವೈಜ್ಞಾನಿಕ ಕಾರ್ಯಕ್ಷಮತೆಗೆ ಆದ್ಯತೆ ನೀಡುತ್ತದೆ ಎಂದು ವಿಶ್ಲೇಷಿಸಿದ್ದಾರೆ.

ಕಿರುಸುದ್ದಿ

ಅಪಘಾತದಿಂದ ವ್ಯಕ್ತಿ ಸಾವು: ಕಾರು ಚಾಲಕನಿಗೆ ಶಿಕ್ಷೆ

• **ಮಂಗಳೂರು:** ರಸ್ತೆ ಅಪಘಾತದಿಂದ ಸಾವನ್ನಪ್ಪಿದ ಪ್ರಕರಣವೊಂದಕ್ಕೆ ಸಂಬಂಧಿಸಿ ತೀರ್ಪು ನೀಡಿರುವ ಮಂಗಳೂರಿನ 8ನೇ ಜೆಎಂಎಫ್‌ಸಿ ನ್ಯಾಯಾಲಯ ಒಂದು ತಿಂಗಳ ಜೈಲು ಶಿಕ್ಷೆ ಮತ್ತು 5 ಸಾವಿರ ರೂ. ದಂಡ ವಿಽಸಿ ತೀರ್ಪು ನೀಡಿದೆ. ಬಜಪೆ ಸಿದ್ಧಾರ್ಥ ನಗರದ ಸತೀಶ್ ಶಿಕ್ಷೆಗೊಳಗಾದಾತ. 2023ರ ಏ.23ರಂದು ಯೆಯ್ಯಾಡಿ ಜಂಕ್ಷನ್‌ನಲ್ಲಿ ಅಪಘಾತ ಸಂಭವಿಸಿತ್ತು. ಪ್ರಕರಣದಲ್ಲಿ ಕಾರೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದು ಸಹ ಸವಾರ ಮೃತಪಟ್ಟಿದ್ದರು. ಆದರೆ ಕಾರು ಚಾಲಕನಾಗಿದ್ದ ಸತೀಶ್ ಅಪಘಾತ ನಡೆದ ಬಳಿಕ ಪರಾರಿಯಾಗಿದ್ದಾರೆ. ತನಿಖೆ ನಡೆಸಿದ ಅಂದಿನ ಕದ್ರಿ ಸಂಚಾರ ಠಾಣೆಯ ಪೊಲೀಸ್ ನಿರೀಕ್ಷಕ ಗೋಪಾಲಕೃಷ್ಣ ಭಟ್ ಅವರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ವಿಚಾರಣೆಯನ್ನು ಕೈಗೆತ್ತಿ ಕೊಂಡ 8ನೇ ಜೆಎಂಎಫ್ ಸಿ ನ್ಯಾಯಾಲಯದ ನ್ಯಾಯಾಧೀಶರಾದ ಫವಾಜ್ ಪಿ.ಎ. ಅವರು ಸಾಕ್ಷಿ ವಿಚಾರಣೆ ನಡೆಸಿ ವಾದ ಪ್ರತಿವಾದಗಳನ್ನು ಆಲಿಸಿ, ಕಾರು ಚಾಲಕ ಗಾಯಾಳು ಗಳಿಗೆ ಯಾವುದೇ ವೈದ್ಯಕೀಯ ನೆರವು ನೀಡದೆ ಸ್ಥಳದಿಂದ ಪರಾರಿಯಾಗಿರುವುದು ಸಾಬೀತಾದ ಹಿನ್ನಲೆಯಲ್ಲಿ ಶಿಕ್ಷೆ ವಿಧಿಸಿದ್ದಾರೆ. ಚಾಲಕನಿಗೆ ಐಎಂವಿ ಕಾಯ್ದೆ ಕಲಂ 187 ಅಡಿ ಯಲ್ಲಿ 1 ತಿಂಗಳ ಸಾದಾ ಸಜೆ ಮತ್ತು 5,000 ರೂ ದಂಡ ವಿಧಿಸಿದ್ದಾರೆ. ದಂಡ ಕಟ್ಟಲು ತಪ್ಪಿದಲ್ಲಿ 10 ದಿನಗಳ ಸಾದಾ ಸಜೆ ಯನ್ನು ವಿಧಿಸಿ ತೀರ್ಪು ನೀಡಿದ್ದಾರೆ. ಸರಕಾರದ ಪರವಾಗಿ ಆರೋನ್ ಡಿ'ಸೋಜಾ ವಿಟ್ಲ ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.


ಜೂ.7ರಿಂದ ಯೋಗ ತರಗತಿ ಆರಂಭ

• **ಕೋಟ:** ಜೂನ್ 21 ರಂದು ನಡೆಯಲಿರುವ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಕೋಟದ ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್‌ನಲ್ಲಿ ಸಾರ್ವಜನಿಕರಿಗೆ ಪೂರ್ವಭಾವಿ ಉಚಿತ ಯೋಗ ತರಗತಿಗಳನ್ನು ಜೂ.7ರಿಂದ ಜೂನ್ 21ರವರೆಗೆ ಬೆಳಗ್ಗೆ 5.15ರಿಂದ6.30ರ ತನಕ ಆಯೋಜಿಸಲಾಗಿದೆ. ಈ ಕಾರ್ಯಕ್ರಮವನ್ನು ಕೋಟ–ಸಾಲಿಗ್ರಾಮದ ರೋಟರಿ ಕ್ಲಬ್, ಕೋಟತಟ್ಟು ಗ್ರಾಮ ಪಂಚಾಯತ್, ಕೋಟ ಪಂಚವರ್ಣ ಸಂಘಟನೆ, ಡಾ. ಶಿವರಾಮ ಕಾರಂತ ಪ್ರತಿಷ್ಠಾನ ಮತ್ತು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಕೋಟ ಶಾಖೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ.ಪ್ರಸ್ತುತ ಕೋಟದ ರಾಜಶೇಖರ ದೇಗುಲದ ಸಭಾಂಗಣದಲ್ಲಿ ಯೋಗ ತರಬೇತಿ ಜರಗುತ್ತಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಶಿರ್ವ: ಕಾನೂನು ಬಾಹಿರ ಜಾನುವಾರು ವಧೆ ಪ್ರಕರಣ; ಓರ್ವ ಆರೋಪಿಯ ಸೆರೆ, ಸೊತ್ತುಗಳ ವಶ

• **ಶಿರ್ವ:** ಜಾನುವಾರೊಂದನ್ನು ಕಾನೂನು ಬಾಹಿರವಾಗಿ ವಧೆ ಮಾಡಿ, ಅದರ ಅವಶೇಷಗಳನ್ನು ಹೊಳೆಗೆ ಎಸೆದಿದ್ದ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿರ್ವ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಓರ್ವ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶಿರ್ವ ಗ್ರಾಮದ ಪದವು ಬಬ್ಬುಸ್ವಾಮಿ ದೈವಸ್ಥಾನದ ಬಳಿಯ ನಿವಾಸಿ ಅಶೋಕ (52) ಬಂಧಿತ ಆರೋಪಿ.

ಪಾಪನಾಶಿನಿ ಹೊಳೆಯಲ್ಲಿ ಪತ್ತೆಯಾಗಿದ್ದ ಅವಶೇಷಗಳು: ಜೂನ್ 1 ರಂದು ಕಾಪು ತಾಲೂಕಿನ ಶಿರ್ವ ಗ್ರಾಮದ ಕಲ್ಲೊಟ್ಟು ಸೇತುವೆಯ ಕೆಳಗಿನ ಪಾಪನಾಶಿನಿ ಹೊಳೆಯಲ್ಲಿ ಜಾನುವಾರಿನ ಅವಶೇಷಗಳು ತೇಲುತ್ತಿರುವುದು ಪತ್ತೆಯಾಗಿದ್ದವು. ಈ ಬಗ್ಗೆ ಲಭ್ಯವಾದ ಖಚಿತ ಮಾಹಿತಿಯ ಮೇರೆಗೆ ಶಿರ್ವ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ ಮರಬದ ಅವರು ಕಾಪು ಪಶು ವೈದ್ಯಕೀಯ



ಆಸ್ಪತ್ರೆಯ ಸಹಾಯಕ ನಿರ್ದೇಶಕರು ಹಾಗೂ ಜಿಲ್ಲಾ ಅಪರಾಧ ಪರಿಶೀಲನಾ ಅಧಿಕಾರಿಗಳ ಸಮಕ್ಷಮದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿದ್ದರು. ಈ ವೇಳೆ ಜಾನುವಾರಿನ ಮೇಲ್ದವಡೆ, ಎರಡು ಗೆರಸುಗಳು, ಮಾಂಸ ಹಾಗೂ ಹೊಟ್ಟೆಯ ಒಳಗಿನ ಭಾಗಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿತ್ತು. ಈ ಸಂಬಂಧ ಶಿರ್ವ ಪೊಲೀಸ್ ಠಾಣೆಯಲ್ಲಿ ಅಧಿಕೃತ ಪ್ರಕರಣ ದಾಖಲಾಗಿತ್ತು.

ಆರೋಪಿಯ ಬಂಧನ, ಮಾರಕಾಸ್ತ್ರಗಳ ಜಪ್ತಿ: ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿದ ಪೊಲೀಸರು, ಜಾನುವಾರನ್ನು ಕಡಿದು ಮಾಂಸ ಮಾಡಿ ಅವಶೇ?ಗಳನ್ನು ಹೊಳೆಗೆ ಎಸೆದಿದ್ದ ಕೃತ್ಯದ ಆರೋಪಿ ಅಶೋಕನನ್ನು ಜೂನ್ 5 ರಂದು ಶಿರ್ವ ಗ್ರಾಮದ ಪದವು ಎಂಬಲ್ಲಿ ವಶಕ್ಕೆ ಪಡೆದಿದ್ದಾರೆ. ಬಂಧಿತ ಆರೋಪಿಯ ಬಳಿಯಿಂದ ಜಾನುವಾರಿನ ಚರ್ಮ ಹಾಗೂ ಕೃತ್ಯ ಎಸಗಲು ಬಳಸಿದ್ದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಉಡುಪಿ ಪೊಲೀಸ್ ಉಪಾಧೀಕ್ಷಕ (ಡಿವೈಎಸ್ಪಿ) ವಿಜಯ ಪ್ರಸಾದ್ ಹಾಗೂ ಕಾಪು ವೃತ್ತ ನಿರೀಕ್ಷಕ ಅಝುಮತ್ ಅಲಿ ನೇತೃತ್ವದಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆದಿದೆ. ಕಾರ್ಯಾಚರಣೆಯಲ್ಲಿ ಶಿರ್ವ ಠಾಣಾ ಉಪ ನಿರೀಕ್ಷಕರಾದ ಮಂಜುನಾಥ ಮರಬದ, ಲೋಹಿತ್ ಕುಮಾರ್ ಸಿ.ಎಸ್., ಸಿಬ್ಬಂದಿಗಳಾದ ಮಂಜುನಾಥ ಅಡಿಗ, ಕಿರಣ್, ಯಲ್ಲಾಲಿಂಗ, ಕಾಪು ಠಾಣೆಯ ರಘು ಹಾಗೂ ಪಡುಬಿದ್ರಿ ಠಾಣೆಯ ರಹಿಮಾನ್ ಮತ್ತು ಸಂದೇಶ್ ಪಾಲ್ಗೊಂಡಿದ್ದರು.

ಕ್ರೈಸ್ಟ್‌ಕಿಂಗ್: ವಿಶ್ವ ಪರಿಸರ ದಿನಾಚರಣೆ

• **ಕಾರ್ಕಳ:** ಇಲ್ಲಿನ ಕ್ರೈಸ್ಟ್‌ಕಿಂಗ್ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಸಂಸ್ಥೆಯ ಫಾ.ಎಫ್.ಪಿ.ಎಸ್. ಮೋನಿಸ್ ಸಭಾಂಗಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯರಾದ ಐ.ಕ್ರಿಸ್ಟೋಫರ್ ಕೋಟ್ಯಾನ್‌ರವರು ಅವರು ಮಾತನಾಡಿದರು. ಸಂಸ್ಥೆಯ ಪ್ರಾಥಮಿಕ ವಿಭಾಗದ ಶಿಕ್ಷಕಿ ಶ್ರೀಮತಿ ದೀಪ್ತಿ, ಏಳನೇ ತರಗತಿಯ ವಿದ್ಯಾರ್ಥಿಯಾದ ಆಶ್ಲಿನ್ ಡಿಸೋಜಾ ತಮ್ಮ ಅಭಿಪ್ರಾಯ ಹಂಚಿಕೊಂಡರು.

ನಿಧನ ಸುದ್ದಿ

ಪಾಂಗಾಳ ಗಿರಿಜಾ ಪೂಜಾರ್ತಿ



ಕಾಪು: ಹೆರ್ಗ ದೇಜು ಜತ್ತನ್ನ ಅವರ ಪತ್ನಿ ಪಾಂಗಾಳ ಆರ್ಯಾಡಿ ಗ್ರಾಮದ ಗಂಗೆ ನಿವಾಸದ ಗಿರಿಜಾ ಪೂಜಾರ್ತಿ (72) ಅವರು ಜೂ. 4ರಂದು ಹೃದಯಾಘಾತದಿಂದ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರು ಪ್ರಗತಿಪರ ಕೃಷಿಕರಾಗಿದ್ದರು.



ಮೂಡುಬಿದರೆ ವ್ಯಾಪ್ತಿಯಲ್ಲಿ ಭಾರೀ ಪ್ರಮಾಣದಲ್ಲಿ ಮಳೆ ಸುರಿಯುತ್ತಿದ್ದು, ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಹೆದ್ದಾರಿಯಲ್ಲಿ ಹಲವು ತೊಂದರೆಗಳು ಉಂಟಾಗುತ್ತಿದೆ. ಅವೈಜ್ಞಾನಿಕ ಕಳಪೆ ಹೆದ್ದಾರಿ ಕಾಮಗಾರಿಯಿಂದಲೇ ಈ ಸಮಸ್ಯೆಯಾಗುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ತೆಂಕ ಮಿಜಾರು ಪರಿಸರದಲ್ಲಿ ಒಂದೇ ಮಳೆಗೆ ರಸ್ತೆಯ ಅಂಚು ಕೊಚ್ಚಿ ಹೋಗಿದ್ದು ವಾಹನ ಸವಾರರು ಸವಾಲಿನ ಪ್ರಯಾಣ ಮಾಡಬೇಕಾಗಿದೆ.

ನೂತನ ಮುಖ್ಯಮಂತ್ರಿ ಉತ್ತಮ ಆಡಳಿತ ನೀಡಲಿ: ಸತೀಶ್ ಕುಂಪಲ

• **ಮಂಗಳೂರು:** ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭ್ರಷ್ಟಾಚಾರ, ತುಷ್ಟೀಕರಣ, ದ್ವೇಷ ರಾಜಕಾರಣ ಮಾಡದೆ ಉತ್ತಮ ಆಡಳಿತ ನೀಡಲಿ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದರು.



136 ಶಾಸಕರ ಬೆಂಬಲದಲ್ಲಿ ಸಿಎಂ ಆದ ಡಿಕೆಶಿ ಅವರು, ಮುಂದೆ ಒಳ್ಳೆಯ ಆಡಳಿತ ಇರಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದಾರೆ. ಇನ್ನುಮುಂದೆ ಎಲ್ಲವನ್ನೂ ಸರಿ ಮಾಡುತ್ತೇನೆ ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ. ಅಂದರೆ ಇದರ ಅರ್ಥ ಸಿದ್ದರಾಮಯ್ಯ ಅವರ ಈ ಹಿಂದಿನ ಮೂರು ವರ್ಷದ ಅವಧಿಯಲ್ಲಿ ಆಡಳಿತ ಸರಿ ಇರಲಿಲ್ಲ ಎಂಬುದಾಗಿದೆ. ಡಿಕೆಶಿ ಸಂಪುಟದಲ್ಲಿ ಹಿಂದಿನ ಸಚಿವರೇ ಇದ್ದಾರೆ. ಬಾಟಲಿ ಬೇರೆ, ಅದೇ ಮದ್ಯ ಎಂಬಂತಾಗಿದೆ. ಪ್ರಸ್ತುತ ಖಾತೆ ಹಂಚಿಕೆ ಅಸಮಾಧಾನದಲ್ಲಿ ಒಬ್ಬೊಬ್ಬರೇ ರಾಜೀನಾಮೆ ನೀಡುತ್ತಿದ್ದು, ಇದು ಮುಂದಿನ ದಿನಗಳಲ್ಲಿ ಕನಕಪುರ ಬಂಡೆಗೆ ಸವಾಲಿನ ದಿನಗಳನ್ನು ಎದುರಿಸುವ ಪರಿಸ್ಥಿತಿ ಎಂಬುದರ ಸೂಚಕವಾಗಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಕೇಂದ್ರ ಸರ್ಕಾರ ಗ್ರಾಮ ಪಂಚಾಯತ್‌ಗಳಿಗೆ ಹೇರಳ ಅನುದಾನ ನೀಡಿದರೂ ಅದನ್ನು ಕಾರ್ಯರೂಪಕ್ಕೆ ತರಲು ಗ್ರಾಪಂಗಳಲ್ಲಿ ಚುನಾಯಿತ ಆಡಳಿತ ಇಲ್ಲ. ರಾಜ್ಯ ಸರ್ಕಾರ ಗ್ರಾ.ಪಂ., ನಗರ ಸ್ಥಳೀಯ ಸಂಸ್ಥೆಗಳು, ಜಿ.ಪಂ, ತಾ.ಪಂ.ಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸದೆ ಕೇಂದ್ರ ಅನುದಾನಕ್ಕೂ ತೊಂದರೆಯಾಗುತ್ತಿದೆ. 9–11 ಸಮಸ್ಯೆ, ಪಡಿತರ ವಿತರಣೆಯಲ್ಲಿ ತೊಡಕು ಮುಂತಾದವುಗಳನ್ನು ಜನತೆ ಎದುರಿಸುವಂತಾಗಿದೆ. ಗ್ರಾ.ಪಂ.ಗಳಲ್ಲಿ ಅಧಿಕಾರಶಾಹಿ ಆಡಳಿತ ನಡೆಯುತ್ತಿದೆ. ರಾಜ್ಯ ಸರಕಾರ ತಕ್ಷಣ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು. ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ(ಎಸ್‌ಐಆರ್) ಸಂಬಂಧಿಸಿ ಜಿಲ್ಲಾಡಳಿತ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯಬೇಕು ಎಂದರು.

ಜಲಸಿರಿ ಯೋಜನೆಯಡಿ ಮಂಗಳೂರಿನ 38200 ಮನೆಗಳಿಗೆ ಪ್ರಸಕ್ತ ನೀರು ಪೂರೈಕೆ ಸಂಪರ್ಕ

ಒಂದೇ ವರ್ಷದಲ್ಲಿ ಮನೆಮನೆಗೆ ನೀರು

• **ಮಂಗಳೂರು:** ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಿನದ 24 ಗಂಟೆ ನೀರು ಪೂರೈಕೆಯ ಉದ್ದೇಶದಿಂದ ಅನುಷ್ಠಾನಗೊಳ್ಳುತ್ತಿರುವ ಜಲಸಿರಿ ಯೋಜನೆ ಕಾಮಗಾರಿ ಮೂಲಕ 2027ರ ಆಗಸ್ಟ್ ವೇಳೆಗೆ ಮನೆಗಳಿಗೆ ನೀರಿನ ಪೈಪ್‌ಲೈನ್ ಸಂಪರ್ಕ ಪೂರ್ಣಗೊಳಿಸಲಾಗುವುದು. ಇದುವರೆಗೆ ಜಲಸಿರಿ ಯೋಜನೆಯಡಿ ಶೇ. 76ರಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಗುತ್ತಿಗೆದಾರ ಸಂಸ್ಥೆಯಾದ ಸುಯೆಜ್ ಪ್ರಾಜೆಕ್ಟ್ ಪ್ರೈ. ಲಿ.ನ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.



ಮಂಗಳೂರಿನ ವಿವಿಧ ಕಡೆ ನಡೆಯುತ್ತಿರುವ ಕಾಮಗಾರಿ ಹಾಗೂ ಕೋಡಿಕಲ್‌ನಲ್ಲಿ ನಿರ್ಮಿಸಲಾಗಿರುವ 40 ಲಕ್ಷ ಲೀಟರ್ ಸಂಗ್ರಹ ಸಾಮರ್ಥ್ಯದ ಡಬಲ್ ಸ್ಟೋರೇಜ್ ಟ್ಯಾಂಕ್‌ನ ಪ್ರದೇಶಕ್ಕೆ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ದು ಮಾಹಿತಿ ನೀಡಿದ ಅಧಿಕಾರಿಗಳು, 2027ರ ಮಾರ್ಚ್‌ವರೆಗೆ ಜಲಸಿರಿ ಯೋಜನೆಯ ಕಾಮಗಾರಿ ಪೈಪ್‌ಲೈನ್ ಅಳವಡಿಕೆ, ಟ್ಯಾಂಕ್‌ಗಳ ನಿರ್ಮಾಣ ಹಾಗೂ ಅಡ್ಯಾರ್‌ನಲ್ಲಿ ನಡೆಯುತ್ತಿರುವ ನೀರು ಶುದ್ಧೀಕರಣ ಘಟಕ (ಡಬ್ಲ್ಯುಟಿಪಿ)ವನ್ನು ಅಂತಿಮಗೊಳಿಸಲು ಕಾಲಾವಕಾಶವನ್ನು ವಿಸ್ತರಿಸಲಾಗಿದೆ ಎಂದರು.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ 24X7 ನೀರು ಸರಬರಾಜು ಯೋಜನೆಯಡಿ 1288.8 ಕಿ.ಮೀ. ನೀರು ಪೂರೈಕೆ ಜಾಲ, 19 ಓವರ್ ಹೆಡ್‌ಟ್ಯಾಂಕ್‌ಗಳ ನಿರ್ಮಾಣ, 6 ಜಿಎಲ್‌ಎಸ್‌ಆರ್ ಹಾಗೂ 7 ಪಂಪಿಂಗ್ ಹೌಸ್‌ಗಳ ನಿರ್ಮಾಣದ ಜತೆಗೆ ಮಲ್ಟಿ ಜೆಟ್ ವಾಟರ್ ಮೀಟರ್‌ನೊಂದಿಗೆ 96,300 ಗೃಹ ಬಳಕೆಯ ಸಂಪರ್ಕ ಒದಗಿಸುವುದು, 81.7 ಎಂಎಲ್‌ಡಿ ಫಿಲ್ಟರ್, ಪಂಪ್‌ಹೌಸ್ ನಿರ್ಮಾಣ ಕಾಮಗಾರಿ ಜಲಸಿರಿ ಯೋಜನೆಯಡಿ ಒಳಗೊಂಡಿದೆ. ಯೋಜನೆ ಪೂರ್ಣಗೊಂಡ ಬಳಿಕ ನೀರು ಪೂರೈಕೆ ಹಾಗೂ ನಿರ್ವಹಣಾ ಕಾರ್ಯವನ್ನು 8 ವರ್ಷಗಳ ಅವಧಿಗೆ ಸೂಯೆಜ್ ಕಂಪನಿ ನಿರ್ವಹಿಸಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆಯುಐಡಿಎಫ್‌ಸಿ) ಮೂಲಕ ಮಂಗಳೂರು ನಗರಕ್ಕೆ 24X7 ನೀರು ಸರಬರಾಜು ಯೋಜನೆಯನ್ನು ಒಟ್ಟು 587.67 ಕೋಟಿ ರೂ. ವೆಚ್ಚದಲ್ಲಿ 2019ರ ಡಿಸೆಂಬರ್ 24ರಂದು ಆರಂಭಗೊಂಡಿತ್ತು. 2023ಕ್ಕೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಕೋವಿಡ್ ಹಿನ್ನೆಲೆಯಲ್ಲಿ ಗುತ್ತಿಗೆ ವಹಿಸಿರುವ ಸುವೆಜ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ 1 ವರ್ಷ ಹೆಚ್ಚುವರಿ ಅವಧಿ ನೀಡಿ 2024ರ ಮೇ ತಿಂಗಳಿಗೆ ಅಂತ್ಯಗೊಳಿಸಲು ನಿರ್ದೇಶಿಸಲಾಗಿತ್ತು. ಅಕಾಲಿಕ ಮಳೆ, ಭೂವಾಜ್ಯ, ಹೆದ್ದಾರಿ ಸಮಸ್ಯೆಯ ಕಾರಣಗಳಿಂದಾಗಿ ವಿಳಂಬವಾಗಿರುವ ಜಲಸಿರಿ ಯೋಜನೆಯನ್ನು ಪೂರ್ಣಗೊಳಿಸಲು ಇದೀಗ 2027ರ ಮಾರ್ಚ್ ಅಂತ್ಯದವರೆಗೆ ಮತ್ತೆ ಕಾಲಾವಕಾಶ ನೀಡಲಾಗಿದೆ.

ಈ ನಡುವೆ ಅಡ್ಯಾರ್‌ನಲ್ಲಿ 125 ಎಂಎಲ್‌ಡಿ ಸಂಗ್ರಹ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ನಿರ್ಮಾಣಕ್ಕೆ 127.7 ಕೋಟಿ ರೂ. ವೆಚ್ಚದಲ್ಲಿ 2024ರ ಜನವರಿಯಲ್ಲಿ ಈ ಯೋಜನೆಗೆ ಸರಕಾರದಿಂದ ಅನುಮೋದನೆ ದೊರಕಿದ್ದು ಒಟ್ಟು 617.22 ಕೋಟಿ ರೂ. ವೆಚ್ಚದಲ್ಲಿ ಮನಪಾ ವ್ಯಾಪ್ತಿಯಲ್ಲಿ 24X7 ನೀರು ಪೂರೈಕೆಯ ಜಲಸಿರಿ ಯೋಜನೆ ಪ್ರಗತಿಯಲ್ಲಿದೆ.

ಈವರೆಗೆ 877.79 ಕಿ.ಮೀ. ಎಚ್‌ಡಿಪಿಇ ಮತ್ತು ಡಿಐ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಡೆದಿದ್ದು, 19 ಓವರ್‌ಹೆಡ್ ಟ್ಯಾಂಕ್‌ಗಳಲ್ಲಿ 3 ಟ್ಯಾಂಕ್‌ಗಳು ಕಾರ್ಯಾರಂಭಿಸಿ ನೀರು ಪೂರೈಕೆ ಮಾಡುತ್ತಿದ್ದರೆ, 7 ಟ್ಯಾಂಕ್‌ಗಳು ಕಾರ್ಯಾರಂಭಿಸಿವೆ. ಉಳಿದ 7 ಟ್ಯಾಂಕ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, ಒಂದು ಟ್ಯಾಂಕ್‌ಗೆ ಇನ್ನೂ ಭೂಮಿ ಲಭ್ಯವಾಗದ ಕಾರಣ ಬಾಕಿಯಾಗಿದೆ. ಒಂದು ಭೂಮಟ್ಟದ ಜಲ ಸಂಗ್ರಹಾಗಾರ ಆರಂಭವಾಗಿದ್ದರೆ, 4ರ ಸಿವಿಲ್ ಕಾಮಗಾರಿ ಪೂರ್ಣಗೊಂಡು ಇಲೆಕ್ಟ್ರೋ ಮೆಕ್ಯಾನಿಕಲ್ ಕಾಮಗಾರಿ ಪ್ರಗತಿಯಲ್ಲಿದೆ. 7 ಇಂಟರ್‌ಮಿಟನ್ ಪಂಪಿಂಗ್ ಸ್ಟೇಶನ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಈ ಯೋಜನೆಯಡಿ ಈಗಾಗಲೇ ಹಾಲಿ ಇರುವ ಮನೆ ಸಂಪರ್ಕಗಳಲ್ಲಿ 38200 ಮನೆಗಳಿಗೆ ಜಲಸಿರಿಯಡಿ ನೀರು ಪೂರೈಕೆಯ ಸಂಪರ್ಕ ಪೂರ್ಣಗೊಳಿಸಲಾಗಿದೆ ಎಂದು ಜಲಸಿರಿ ಯೋಜನೆಯ ಕಾರ್ಯ ನಿರ್ವಾಹಕ ಇಂಜಿನಿಯರ್ ಸುರೇಶ್ ಎ.ಎಚ್. ತಿಳಿಸಿದ್ದಾರೆ.

> **ಕೋಡಿಕಲ್‌ನಲ್ಲಿ ತಳ ಮಟ್ಟದ ಹಾಗೂ ಮೇಲ್ಮಟ್ಟದ ನೀರು ಸಂಗ್ರಹಾಗಾರ ಒಂದೇ ಕಟ್ಟಡದಲ್ಲಿ ನಿರ್ಮಾಣ ಮಾಡಲಾಗಿದೆ. ಜಾಗದ ಕೊರತೆ ನೀಗಿಸುವುದು ಹಾಗೂ ತಗ್ಗು ಹಾಗೂ ಎತ್ತರ ಪ್ರದೇಶಗಳಿಗೆ ಸರಿ ಪ್ರಮಾಣದಲ್ಲಿ ನೀರಿನ ಪೂರೈಕೆ ಮಾಡಲು ಅನುಕೂಲವಾಗುವಂತೆ ಈ ಕಟ್ಟಡವನ್ನು ಸುಮಾರು 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ತಳಮಟ್ಟದಲ್ಲಿ 20 ಲಕ್ಷ ಲೀಟರ್ ಹಾಗೂ ಮೇಲ್ಮಟ್ಟದಲ್ಲಿ 20 ಲಕ್ಷ ಲೀಟರ್ ನೀರು ಸಂಗ್ರಹದ ಸಾಮರ್ಥ್ಯವನ್ನು ಈ ಟ್ಯಾಂಕ್ ಹೊಂದಿದೆ. ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಇದು ಕಾರ್ಯಾರಂಭಿಸಲಿದೆ.**
> ■ **ಸುರೇಶ್ ಎ.ಎಚ್.,** ಕಾರ್ಯ ನಿರ್ವಾಹಕ ಇಂಜಿನಿಯರ್, ಕೆಯುಐಡಿಎಫ್‌ಸಿ.

> **ಅಡ್ಯಾರ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ನೀರು ಶುದ್ಧೀಕರಣ ಘಟಕ (ಡಬ್ಲ್ಯುಟಿಪಿ)ದ ಕಾಮಗಾರಿಯೂ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. ಕ್ಲಾರಿಫಿಕೇಶನ್ ಮತ್ತು ಫಿಲ್ಟರ್ ವ್ಯವಸ್ಥೆಯನ್ನು ಒಂದೇ ಕಡೆ ಹೊಂದಿರುವ ಸುಸಜ್ಜಿತ ಡಬ್ಲ್ಯುಟಿಪಿ ಇದಾಗಲಿದ್ದು, ಕೆಮಿಕಲ್ ಕಟ್ಟಡದ ತಳ ಮಹಡಿಯ ಸ್ಲ್ಯಾಬ್ ಕಾರ್ಯ ಸಂಪೂರ್ಣಗೊಂಡಿದೆ. ಕ್ಲೋರಿನ್ ಕಟ್ಟಡದ ಮೇಲ್ಛಾವಣಿ ಕಾಮಗಾರಿ ಆಗಿದ್ದು, ಇತರ ಕಾಮಗಾರಿಗಳು ಪ್ರಗತಿಯಲ್ಲಿವೆ.**
> ■ **ಅಮಿತ್ ಕುಮಾರ್,** ನೆಟ್‌ವರ್ಕ್ ಡಿಸೈನ್ ಇಂಜಿನಿಯರ್, ಸುಯೆಜ್ ಪ್ರೈ. ಲಿ.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಜನ್ಮ ದಿನಾಚರಣೆ



• **ಮಂಗಳೂರು:** ಮೈಸೂರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿ ಮಾತ್ರವಲ್ಲದೆ ಫಲಾನುಭವಿಗಳಿಗೆ ಉತ್ತಮ ವೇದಿಕೆ ಕಲ್ಪಿಸುವ ಮತ್ತು ಉತ್ತಮ ಭವಿಷ್ಯ ರೂಪಿಸುವರೂವಾರಿಯಾಗಿ ಸಾಹಿತ್ಯ, ಕೈಗಾರಿಕೆ, ಶಿಕ್ಷಣ, ಕೃಷಿ ನೀರಾವರಿ, ಕೆ. ಆರ್. ಎಸ್ ಅಣೆಕಟ್ಟು ಯೋಜನೆಗಳು ಮೊದಲಾದ ಜನಪರ ಕೊಡುಗೆಗಳನ್ನು ಒದಗಿಸಿಕೊಟ್ಟ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಸಾಧನೆ ಮಹತ್ತರವಾದುದು ಎಂದು ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ನಾಗಣ್ಣ ಡಿ. ಎ. ಹೇಳಿದರು. ಮಂಗಳೂರಿನ ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ 142ನೇಯ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆ ಸಂಚಾಲಕ ವಸಂತ ಕಾರಂದೂರು ಮಾತನಾಡಿ, ಶ್ರೀ ಕೃಷ್ಣ ರಾಜ ಒಡೆಯರ ಚಿಂತನೆ ಮತ್ತು ಧ್ಯೇಯವನ್ನು ಅನುಸರಿಸುವಲ್ಲಿ ವಿದ್ಯಾರ್ಥಿಗಳ ಪಾತ್ರದ ಕುರಿತು ಮಾರ್ಗದರ್ಶನ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಎಂ. ಪಿ. ಶ್ರೀನಾಥ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಬದ್ಧತೆ ಮತ್ತು ಸಮಾಜದ ಬಗೆಗೆ ಇದ್ದ ಅವರ ಕಾಳಜಿ ಅನುಕರಣೀಯ ಎಂದರು. ಮಂಗಳೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಂಜುನಾಥ ಎಸ್. ರೇವಣಕರ್, ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ನಾಗೇಶ್ ಕರ್ಕೇರ ಶುಭ ಹಾರೈಸಿದರು. ಶ್ರೀಗೋಕರ್ಣನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ. ಉದಯ ಕುಮಾರ್ ಬಿ. ಪ್ರಸ್ತಾವನೆಗೈದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆ

• **ಮಡಿಕೇರಿ.** ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರ ಲ್ಲೊಬ್ಬರಾದ ಮೈಸೂರಿನ ಮಹಾರಾಜ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನವನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮಡಿಕೇರಿಯ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಆಚರಿಸಲಾಯಿತು.



ಸಭೆಯನ್ನುದ್ದೇಶಿಸಿ ಮಾತನಾಡಿದ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ ಪಿ ಕೇಶವ ಕಾಮತ್ , ಮರೆಯಲು ಅಸಾಧ್ಯವಾದಂತಹ ದಿವ್ಯ ಚೇತನ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಅವರು ಕನ್ನಡ ನಾಡಿಗೆ ಮಾಡಿದ ಸೇವೆಯನ್ನು ಎಷ್ಟು ವರ್ಣಿಸಿದರೂ ಸಾಲದು. ಇಂದು ಶತಮಾನೋತ್ಸವ ಆಚರಿಸುತ್ತಿರುವ ಎಲ್ಲ ಸಂಘ–ಸಂಸ್ಥೆಗಳನ್ನು ಪ್ರಾರಂಭಿಸಿದ್ದು ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್.

ಕನ್ನಡ ಸಾಹಿತ್ಯ ಪರಿಷತ್ತನ್ನು ಮಾತ್ರ ಇವರು ಸ್ಥಾಪಿಸಲಿಲ್ಲ. ಇತ್ತೀಚೆಗೆ ಶತಮಾನೋತ್ಸವ ಆಚರಿಸಿದ ರಾಜ್ಯಮಟ್ಟದ ಎಲ್ಲಾ ವರ್ಗದಸಂಸ್ಥೆಗಳ ಸ್ಥಾಪಕರು ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದು ಹೇಳಿದರು.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸ್ಟೇಟ್ ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಬ್ಯಾಂಕ್, ಮೈಸೂರು ರಾಜ್ಯ ಕೈಗಾರಿಕಾ ಬ್ಯಾಂಕ್, ವಿಶ್ವವಿದ್ಯಾಲಯ, ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು, ಯುವರಾಜ ಕಾಲೇಜು, ವಾಣಿವಿಲಾಸ ಸಾಗರದ ಅಣೆಕಟ್ಟು, ಭಾರತದ ಮೊದಲ ಬೃಹತ್ ಅಣೆಕಟ್ಟು ಕೃಷ್ಣರಾಜಸಾಗರ ಅಣೆಕಟ್ಟು, ಶಿವನಸಮುದ್ರದಲ್ಲಿ ಭಾರತದ ಅತಿ ದೊಡ್ಡ ವಿದ್ಯುತ್ ಉತ್ಪಾದನಾ ಕೇಂದ್ರ, ಮೈಸೂರು ಸ್ಯಾಂಡಲ್ ವುಡ್ ಫ್ಯಾಕ್ಟರಿ, ಮೈಸೂರು ಬಲ್ಬ್ ಫ್ಯಾಕ್ಟರಿ, ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್, ಬೆಂಗಳೂರಿನ ವಾಣಿಜ್ಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಮೈಸೂರಿನ ತಾಂತ್ರಿಕ ಕಾಲೇಜು, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಮಂಗಳೂರಿನಲ್ಲಿ ಹಂಚಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆ, ಮೈಸೂರ್ ಪೇಂಟ್ಸ್ ಫ್ಯಾಕ್ಟರಿ, ಭದ್ರಾವತಿಯ ಉಕ್ಕು ಕಾರ್ಖಾನೆ, ಪೇಪರ್ ಕಾರ್ಖಾನೆ, ಬೆಂಗಳೂರಿನ ಮಿಂಟೋ ಆಸ್ಪತ್ರೆ , ಮೈಸೂರಿನ ಕ್ಷಯ ಆಸ್ಪತ್ರೆ, ರಾಜ್ಯ ವ್ಯಾಪ್ತಿ 250ಕ್ಕೂ ಹೆಚ್ಚು ಆಸ್ಪತ್ರೆಗಳು, ಕೊಡಗಿನಲ್ಲಿ ಕಾಫಿ ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಿದರು ಎಂದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ ರಮೇಶ್, ಸಂಘಟನಾ ಕಾರ್ಯದರ್ಶಿ ವಾಸು ರೈ, ಕುಶಾಲನಗರ ತಾ.ಗೌರವ ಕೋಶಾಧಿಕಾರಿ ಕೆ.ವಿ ಉಮೇಶ್, ಸದಸ್ಯರುಗಳಾದ ಭಾರತಿ ರಮೇಶ್, ರೇಣುಕಾ, ಅಜಯ್ ಉಪಸ್ಥಿತರಿದ್ದರು.

'ವಿಶ್ವಾಸ, ಅಭಿವೃದ್ಧಿ ಮತ್ತು ಜನ ಕಲ್ಯಾಣದ 12 ವರ್ಷಗಳು' ಅಭಿಯಾನ । ನೀಲಾವರ ಗೋಶಾಲೆಯಲ್ಲಿ ಕಾರ್ಯಕ್ರಮ

ಉತ್ತಮ ಕೆಲಸದ ಮೂಲಕ ಟೀಕೆಗಳಿಗೆ ಬಿಜೆಪಿ ಉತ್ತರ

• **ಉಡುಪಿ:** ಬಿಜೆಪಿ ಕೇವಲ ಪ್ರಚಾರಕ್ಕಾಗಿ ಅಥವಾ ವರದಿಗಾಗಿ ಕಾರ್ಯಕ್ರಮ ಮಾಡುವುದಿಲ್ಲ. ರಾಷ್ಟ್ರೀಯ ವಿಚಾರಧಾರೆ ಮತ್ತು ಪಕ್ಷದ ತತ್ವ ಸಿದ್ಧಾಂತಗಳಡಿ ಶ್ರದ್ಧೆ ಮತ್ತು ಬದ್ಧತೆಯಿಂದ ಅಭಿಯಾನಗಳನ್ನು ಯಶಸ್ವಿಗೊಳಿಸುತ್ತದೆ. ವಿರಮಿಸದೆ ನಿರಂತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಹೇಳಿದರು.



ಅವರು 'ವಿಶ್ವಾಸ, ಅಭಿವೃದ್ಧಿ ಮತ್ತು ಜನ ಕಲ್ಯಾಣದ 12 ವರ್ಷಗಳು' ಅಭಿಯಾನದ ಅಂಗವಾಗಿ ಜಿಲ್ಲಾ ಬಿಜೆಪಿ ನೇತೃತ್ವ ಹಾಗೂ ಜಿಲ್ಲಾ ರೈತ ಮೋರ್ಚಾ ಸಹಯೋಗದಲ್ಲಿ ನೀಲಾವರ ಗೋಶಾಲೆಯಲ್ಲಿ ನಡೆದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ, ಅಭಿಯಾನಕ್ಕೆ ಜ್ಯೋತಿ ಬೆಳಗಿಸಿ ಚಾಲನೆ ನೀಡಿ ಮಾತನಾಡಿದರು. ಜಿಲ್ಲೆಯಲ್ಲಿ ಹೊಸ ತಂಡ ರಚನೆಯಾಗಿದೆ. ಟೀಕೆಗಳಿಗೆ ಉತ್ತಮ ಕೆಲಸದ ಮೂಲಕ ಉತ್ತರ ನೀಡೋಣ ಎಂದರು.

ಉಡುಪಿ ಶಾಸಕ ಯಶ್ಪಾಲ್ ಎ. ಸುವರ್ಣ ಮಾತನಾಡಿ 2014ರ ಮೊದಲು ದೇಶದಲ್ಲಿ ಯಾವ ರೀತಿಯ ಆರ್ಥಿಕ ಸಂಕಷ್ಟದ ಪರಿಸ್ಥಿತಿ ಇತ್ತು ಎಂಬ ಅರಿವು ಎಲ್ಲರಿಗೂ ಇದೆ. ಆ ಬಳಿಕ ಜನತೆಯ ಆಶಾಕಿರಣವಾಗಿ ಮೂಡಿಬಂದ ವಿಶ್ವ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲಾ ಸವಾಲುಗಳನ್ನು ಸ್ವೀಕರಿಸಿ, ಐತಿಹಾಸಿಕ ಸಾಧನೆಗಳ ಜೊತೆಗೆ ಆರ್ಥಿಕತೆಯಲ್ಲಿ ದೇಶವನ್ನು 3ನೇ ಸ್ಥಾನದತ್ತ ಕೊಂಡೊಯ್ದು ಪ್ರಸಕ್ತ ಜೂ.10ರಂದು ದೇಶದ ಸುದೀರ್ಘ ಅವಧಿಯ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಈ ಸಂದರ್ಭ ಶಾಸಕರಾದ ಕಿರಣ್ ಕುಮಾರ್ ಕೊಡ್ಗಿ, ಗುರ್ಮೆ ಸುರೇಶ್ ಶೆಟ್ಟಿ, ಗುರುರಾಜ್ ಗಂಟಿಹೊಳೆ, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಜಿ. ಸುವರ್ಣ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಉಡುಪಿ ಗ್ರಾಮಾಂತರ ಮಂಡಲಾಧ್ಯಕ್ಷ ರಾಜೀವ ಕುಲಾಲ್, ಅಭಿಯಾನದ ಜಿಲ್ಲಾ ಸಂಚಾಲಕ ಮಹಾವೀರ ಹೆಗ್ಡೆ, ಸಹ ಸಂಚಾಲಕರಾದ ಶಿವಕುಮಾರ್ ಅಂಬಲಪಾಡಿ, ಅನಿತಾ ಶ್ರೀಧರ್ ಹಾಗೂ ಪಕ್ಷದ ಪ್ರಮುಖರು, ಬಿಜೆಪಿ ಜಿಲ್ಲಾ, ಮೋರ್ಚಾ, ಪ್ರಕೋಷ್ಠ ಮಂಡಲಗಳ ಸಹಿತ ವಿವಿಧ ಸ್ತರದ ಪದಾಽಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಹಾಗೂ ಅಭಿಯಾನದ ಜಿಲ್ಲಾ ಸಹ ಸಂಚಾಲಕ ಕಮಲಾಕ್ಷ ಹೆಬ್ಬಾರ್ ಪ್ರಸ್ತಾವಿಕ ಮಾತುಗಳನ್ನಾಡಿದರು.

ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ಮೋಹನ್ ಚಂದ್ರ ಸ್ವಾಗತಿಸಿದರು. ಪ್ರಧಾನಕಾರ್ಯದರ್ಶಿಗಳಾದ ಶ್ಯಾಮ್ ಪ್ರಸಾದ್ ಭಟ್ ಕಾರ್ಯಕ್ರಮ ನಿರೂಪಿಸಿ, ಪುಷ್ಪರಾಜ್ ಶೆಟ್ಟಿ ವಂದಿಸಿದರು.

> **ಕೃಷಿಕರಿಗೆ ಸನ್ಮಾನ**
> **ಗೋಪೂಜೆಯೊಂದಿಗೆ ಔಷಧೀಯ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಹಾಗೂ ಏಕ್ ಪೇಡ್ ಮಾ ಕೆ ನಾಮ್ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಗ್ರಾಮಾಂತರ ಮಂಡಲ ವ್ಯಾಪ್ತಿಯ 12 ಮಂದಿ ಕೃಷಿಕರನ್ನು ಸನ್ಮಾನಿಸಲಾಯಿತು.**

ಕಿರುಸುದ್ದಿ

ಇಂಗ್ಲೆಂಡ್ ಟಿ20 ಸರಣಿಗೆ ಶ್ರೇಯಸ್‌ಗೆ ನಾಯಕತ್ವ?


• **ಮುಂಬೈ:** ಮುಂಬರುವ ಇಂಗ್ಲೆಂಡ್ ಪ್ರವಾಸದ ವೇಳೆ ಭಾರತೀಯ ಪುರುಷರ ಟಿ20 ತಂಡವನ್ನು ಶ್ರೇಯಸ್ ಅಯ್ಯರ್ ಮುನ್ನಡೆಸುವ ಸಾಧ್ಯತೆಯಿದೆ. ಜು.1ರಿಂದ ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿ ಆರಂಭವಾಗಲಿದೆ. ಇಂಗ್ಲೆಂಡ್ ಪ್ರವಾಸವು ಟಿ20 ಸರಣಿಯೊಂದಿಗೆ ಆರಂಭ ಆಗಲಿದ್ದು, ಭಾರತ ಟಿ20 ಸರಣಿ ಗೆಲ್ಲುವ ಅಗತ್ಯವಿದೆ. ಟಿ20 ಸರಣಿ ಬಳಿಕ ಮೂರು ಪಂದ್ಯಗಳ ಏಕದಿನ ಸರಣಿ ಇರಲಿದೆ. ಇದಕ್ಕೂ ಮುನ್ನ ಐರ್ಲೆಂಡ್‌ನ ಬೆಲ್‌ಫಾಸ್ಟ್‌ನಲ್ಲಿ ಎರಡು ಟಿ20 ಪಂದ್ಯಗಳನ್ನು ಭಾರತ ಆಡಲಿದೆ. 31ರ ಹರೆಯದ ಅಯ್ಯರ್ ಕಳೆದ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ ಎಂಬುದು ಗಮನಾರ್ಹ ಅಂಶ. ಐಪಿಎಲ್‌ನಲ್ಲಿ ತಮ್ಮ ನಾಯಕತ್ವದಲ್ಲಿ ಮತ್ತು ಬ್ಯಾಟಿಂಗ್‌ನಲ್ಲೂ ಮಿಂಚಿರುವ ಅಯ್ಯರ್‌ಗೆ ಒಂದು ಅವಕಾಶ ನೀಡುವ ಅಗತ್ಯವಿದೆ. ಐಪಿಎಲ್ 2026ರಲ್ಲಿ 14 ಪಂದ್ಯಗಳಲ್ಲಿ ಅವರು 498 ರನ್ ಕಲೆಹಾಕಿದ್ದರು. ಮೊದಲಾರ್ಧ ಪಂಜಾಬ್ ಶ್ರೇಷ್ಠ ಪ್ರದರ್ಶನ ನೀಡಿತ್ತು. ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಹೆಸರುಗಳೂ ಕೇಳಿಬಂದಿವೆ. ಆದರೆ ಶ್ರೇಯಸ್ ನಾಯಕನಾಗಿ ಸಾಬೀತುಪಡಿಸಿದ್ದಾರೆ.

ಜ್ವೆರೆವ್ ಗ್ರ್ಯಾಂಡ್ ಸ್ಲಾಮ್ ಕನಸು ಜೀವಂತ

• **ಪ್ಯಾರಿಸ್:** ಫ್ರೆಂಚ್ ಓಪನ್ ಪುರುಷರ ವಿಭಾಗದ ಸೆಮಿ ಫೈನಲ್‌ನಲ್ಲಿ ಜೇಕಬ್ ಮೆನ್ಸಿಕ್ ಅವರನ್ನು 7–5, 6–2, 3–6, 6–3 ಸೆಟ್ ಅಂತರದಿಂದ ಸೋಲಿಸಿದ ವಿಶ್ವ ನಂ.3 ಅಲೆಗ್ಸಾಂಡರ್ ಜ್ವೆರೆವ್ ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆಲ್ಲುವ ಕನಸನ್ನು ಜೀವಂತವಾಗಿರಿಸಿದ್ದಾರೆ. ಇಲ್ಲಿ ರೋಲ್ಯಾಂಡ್ ಗೇರೋಸ್‌ನಲ್ಲಿ ನಡೆದ ಮೂರು ಗಂಟೆಗಳ ಸೆಮಿ ಫೈನಲ್ ನಲ್ಲಿ ಅದ್ಭುತ ಪ್ರದರ್ಶನ ನೀಡುವ ಮೂಲಕ ಮೆನ್ಸಿಕ್ ಅವರನ್ನು ಹಿಮ್ಮೆಟ್ಟಿಸಿದರು. ಇದು ಗ್ರ್ಯಾಂಡ್ ಸ್ಲಾಮ್ ಪಂದ್ಯಾವಳಿಗಳಲ್ಲಿ ಜ್ವೆರೆವ್ ಅವರ ಪಾಲಿಗೆ ನಾಲ್ಕನೇ ಫೈನಲ್ ಆಗಿರಲಿದೆ. 2020ರ ಯುಎಸ್ ಓಪನ್, 2024ರ ಫ್ರೆಂಚ್ ಓಪನ್, 2025ರ ಆಸ್ಟ್ರೇಲಿಯನ್ ಫೈನಲ್ ಪ್ರವೇಶಿಸಿದ್ದ ಅಲೆಗ್ಸಾಂಡರ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆಲ್ಲುವಲ್ಲಿ ಯಶಸ್ವಿಯಾಗಿರಲಿಲ್ಲ. ತಾವು ಫ್ರೆಂಚ್ ಓಪನ್ ಪಂದ್ಯಾವಳಿಯಲ್ಲಿ ಒಂದು ವೇಳೆ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆದ್ದರೂ ಸಹ ತಮ್ಮ ಪಾಲಿಗೆ ಒಲಿಂಪಿಕ್ ಪದಕವೇ ಅತ್ಯುನ್ನತ ಪ್ರಶಸ್ತಿ ಎಂದು ಇತ್ತೀಚೆಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದರೆ ಫ್ರೆಂಚ್ ಓಪನ್ ಗೆಲ್ಲುವ ಮೂಲಕ ತಮ್ಮ ಗ್ರ್ಯಾಂಡ್ ಸ್ಲಾಮ್ ಫೈನಲ್ ಸೋಲಿನ ಸರಣಿಗೆ ಬ್ರೇಕ್ ಹಾಕಲು ಜ್ವೆರೆವ್ ಬಯಸುತ್ತಿದ್ದಾರೆ.

ಟೆಕ್ವಾಂಡೋ: ಕರ್ನಾಟಕದ ಅಕ್ಕ ತಮ್ಮನಿಗೆ ಸ್ವರ್ಣ

• **ನೆಲಮಂಗಲ :** ರಾಷ್ಟ್ರೀಯ ಮಟ್ಟದ ಟೆಕ್ವಾಂಡೋ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅಕ್ಕ ತಮ್ಮ ಜೋಡಿ ಇಬ್ಬರೂ ವಿವಿಧ ವಿಭಾಗಗಳಲ್ಲಿ ಸ್ವರ್ಣ, ರಜತ ಹಾಗೂ ಕಂಚಿನ ಪದಕ ಪಡೆಯುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಅಂತರಾಷ್ಟ್ರೀಯ ಟೆಕ್ವಾಂಡೋ ಫೆಡರೇಷನ್ ಆಫ್ ಇಂಡಿಯಾದಿಂದ ಹಿಮಾಚಲ ಪ್ರದೇಶದ ಡಾಲೋಸಿಯಲ್ಲಿ ಆಯೋಜಿಸಲ್ಪಟ್ಟ 35ನೇ ನಾರ್ತ್‌ಈಸ್ಟ್ ಟೆಕ್ವಾಂಡೋ ಚಾಂಪಿಯನ್‌ಶಿಪ್ ಹಾಗೂ ಮಾರ್ಷಲ್ ಆರ್ಟ್ಸ್ ಸ್ಪರ್ಧೆಯಲ್ಲಿ ತಾಲೂಕಿನ ಕೊಡಿಗೆಹಳ್ಳಿಯ 12ನೇ ತರಗತಿಯ ಸೌಜನ್ಯ ಮಂಜುನಾಥ್ ಭಾಗವಹಿಸಿ



2 ಬೆಳ್ಳಿ ಹಾಗೂ 1 ಕಂಚಿನ ಪದಕ ಪಡೆದರೆ, ಸೌಜನ್ಯ ಸಹೋದರ 10ನೇ ತರಗತಿಯ ಶಂಶಾಕ್ ಮಂಜುನಾಥ 4 ಚಿನ್ನದ ಪದಕ, 1 ಬೆಳ್ಳಿ ಪದಕ ಹಾಗೂ 2 ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ. ಬೆಂಗಳೂರಿನ ವಿದ್ಯಾರಣ್ಯಪುರದ ಶ್ರೀ ರವಿಶಂಕರ್ ವಿದ್ಯಾಮಂದಿರ ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಕೊಡಿಗೆಹಳ್ಳಿಯ ಸೌಜನ್ಯ ಮಂಜುನಾಥ್ ಹಾಗೂ ಶಶಾಂಕ್ ಮಂಜುನಾಥ್ ನಿರಂತರ ಪರಿಶ್ರಮದ ಮೂಲಕ ಅತ್ಯುತ್ತಮ ಸಾಧನೆ ಮಾಡಿದ್ದು, ಅಕ್ಕ ತಮ್ಮನ ಸಾಧನೆ ಕಂಡು ಶಾಲಾ ಆಡಳಿತ ಮಂಡಳಿ, ಮುಖಂಡರು, ಪೋಷಕರು ಹಾಗೂ ಗುರುವಾದ ಪ್ರದೀಪ್, ಜನಾರ್ಧನ್, ತಂದೆ ಮಂಜುನಾಥ್, ತಾಯಿ ಕವಿತಾ ಹಾಗೂ ಸ್ನೇಹಿತರು ಸಂತೋಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ಏಕೈಕ ಟೆಸ್ಟ್: ಲೆಗ್ಗಿ ರಶೀದ್ ಖಾನ್ ಲಭ್ಯತೆ ಸಂಶಯ

• **ಚಂಡೀಗಢ:** ಬೆನ್ನುನೋವಿನ ಸಮಸ್ಯೆ ಹಾಗೂ ಜಾಗತಿಕ ಕ್ರಿಕೆಟ್ ವೇಳಾಪಟ್ಟಿಯ ಒತ್ತಡದಿಂದಾಗಿ ಭಾರತ ವಿರುದ್ಧದ ಏಕೈಕ ಟೆಸ್ಟ್‌ಗೆ ರಶೀದ್ ಖಾನ್ ಲಭ್ಯತೆ ಅನಿಶ್ಚಿತ ಎಂಬುದನ್ನು ಅಫ್ಘಾನಿಸ್ತಾನ ತಂಡದ ಮುಖ್ಯ ಕೋಚ್ ರಿಚರ್ಡ್ ಪೈಬಸ್ ಶುಕ್ರವಾರ ಒಪ್ಪಿಕೊಂಡಿದ್ದಾರೆ. ಶನಿವಾರದ ಏಕೈಕ ಟೆಸ್ಟ್ ಪಂದ್ಯಕ್ಕೂ ಮುನ್ನ ಮಾತನಾಡಿದ ಪೈಬಸ್, ರಶೀದ್ ಅವರ ಕರ್ತವ್ಯದ ಭಾರವನ್ನು ಸಮರ್ಪಕ ನಿರ್ವಹಣೆಗೆ ಪ್ರಮುಖ ಆದ್ಯತೆ ನೀಡಿದ್ದು, ಅಫ್ಘಾನಿಸ್ತಾನ ದೀರ್ಘಕಾಲಿಕ ಟೆಸ್ಟ್ ಕಾರ್ಯಕ್ರಮ ರೂಪಿಸಲು ಬದ್ಧವಾಗಿದೆ ಎಂದರು.

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಐದನೇ ಆವೃತ್ತಿಯ ಆಟಗಾರರ ಹರಾಜು

ಹರಾಜಿನಲ್ಲಿ ಕರುಣ್ ನಾಯರ್ ಮಹಾರಾಜ!

• **ಬೆಂಗಳೂರು:** ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಐದನೇ ಆವೃತ್ತಿಯ ಆಟಗಾರರ ಹರಾಜಿನ ಪ್ರಮುಖ ಆಕರ್ಷಣೆಯಾಗಿದ್ದ ಭಾರತ ಟೆಸ್ಟ್ ತಂಡದ ಉಪನಾಯಕ ಕೆಎಲ್ ರಾಹುಲ್ ಖರೀದಿಯಾಗದೆ ಉಳಿದಿದ್ದಾರೆ. ಶುಕ್ರವಾರ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಹರಾಜಿನ 2 ಲಕ್ಷ ರೂ. ಮೂಲಬೆಲೆಯ ಎ ಗುಂಪಿನಲ್ಲಿದ್ದ ರಾಹುಲ್‌ರನ್ನು ಖರೀದಿಸಲು ಯಾವುದೇ ಫ್ರಾಂಚೈಸಿ ಆಸಕ್ತಿ ತೋರಿಸಲಿಲ್ಲ. ಆದರೆ ಕರುಣ್ ಅವರು ದುಬಾರಿ 18 ಲಕ್ಷ ರೂ ಬೆಲೆಗೆ ಮಂಗಳೂರು ತಂಡ ಸೇರಿಕೊಂಡರು.

ತಾರಾ ವಿಕೆಟ್‌ಕೀಪರ್ ಬ್ಯಾಟರ್ ಐಪಿಎಲ್ 2026ರಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ್ದು, ಕೇವಲ 67 ಎಸೆತಗಳಲ್ಲಿ ಅಜೇಯ 152 ರನ್ ಚಚ್ಚಿದ್ದರು. ಈ ಆವೃತ್ತಿಯಲ್ಲಿ ದಿಲ್ಲಿ ಕ್ಯಾಪಿಟಲ್ಸ್ ಪರ 14 ಪಂದ್ಯಗಳಲ್ಲಿ 593 ರನ್ ಕಲೆಹಾಕಿದ್ದರು.

ಬಿಕರಿ ಆಗದಿರಲು ಕಾರಣ?: ಮಹಾರಾಜ ಟ್ರೋಫಿಗೆ ಅವರ ಲಭ್ಯತೆಯನ್ನು ದೃಢೀಕರಿಸದ ಕಾರಣ, ಅವರನ್ನು ಯಾವುದೇ ತಂಡಗಳು ಖರೀದಿಸಿಲ್ಲ ಎನ್ನಲಾಗುತ್ತಿದೆ. ಎ ಗುಂಪಿನ ಆಟಗಾರರಲ್ಲಿ 2 ಲಕ್ಷ ರೂ. ಮೂಲಬೆಲೆಗೆ ರಾಹುಲ್ ತಮ್ಮ ಹೆಸರು ನೋಂದಾಯಿಸಿದ್ದರು. ಶನಿವಾರ ಆರಂಭವಾಗುವ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದ ಉಪನಾಯಕನಾಗಿ ರಾಹುಲ್ ಮೈದಾನಕ್ಕೆ ಇಳಿಯಲಿದ್ದಾರೆ. ಇಂಗ್ಲೆಂಡ್ ಪ್ರವಾಸದಲ್ಲಿ ಅನುಭವಿ ಆಟಗಾರನಾಗಿ ರಾಹುಲ್ ಭಾರತ ಪ್ರತಿನಿಧಿಸಲಿದ್ದಾರೆ. ಇಂತಹ ಸಂದರ್ಭ ರಾಷ್ಟ್ರೀಯ ಕರ್ತವ್ಯದಲ್ಲಿ ವ್ಯಸ್ತರಾಗಿರುವ ರಾಹುಲ್ ಮಹಾರಾಜ ಟ್ರೋಫಿ ಆಡುವ ಸಾಧ್ಯತೆಯಿಲ್ಲ ಎಂಬ ಕಾರಣಗಳಿಂದ ಯಾವುದೇ ಫ್ರಾಂಚೈಸಿ ಅವರನ್ನು ಖರೀದಿಸಲು ಮುಂದಾಗಿಲ್ಲ ಎನ್ನಲಾಗುತ್ತಿದೆ.

ಕರುಣ್‌ಗೆ ಭರಪೂರ ಬೆಲೆ!: ಅನುಭವಿ ಬ್ಯಾಟರ್ ಕರುಣ್ ನಾಯರ್ ಅವರನ್ನು 18 ಲಕ್ಷ ರೂ. ಬೆಲೆಗೆ ಕೋಸ್ಟಲ್ ಕಿಂಗ್ಸ್ ಮಂಗಳೂರು ಫ್ರಾಂಚೈಸಿ ಖರೀದಿಸಿದೆ. ಅಚ್ಚರಿಯೆಂಬಂತೆ ಕರ್ನಾಟಕ ತಂಡದ ನಾಯಕ ಮತ್ತು ಆರ್‌ಸಿಬಿ ಬ್ಯಾಟರ್ ದೇವದತ್ ಪಡಿಕ್ಕಲ್ ಕೇವಲ 2.6 ಲಕ್ಷ ರೂ. ಬೆಲೆಗೆ ಮೈಸೂರು ವಾರಿಯರ್ಸ್ ಸೇರಿದ್ದಾರೆ. ಕೆಕೆಆರ್ ಖ್ಯಾತಿಯ ಮನೀಶ್ ಪಾಂಡೆ 12.75 ಲಕ್ಷ ರೂ. ಬೆಲೆಗೆ ಗುಲ್ಬರ್ಗಾ ಮಿಸ್ಟಿಕ್ಸ್ ಸೇರಿಕೊಂಡಿದ್ದಾರೆ. ಕರ್ನಾಟಕ ತಂಡದ ಮಾಜಿ ನಾಯಕ ಮಯಾಂಕ್ ಅಗರವಾಲ್ 11.5 ಲಕ್ಷ ರೂ. ಬೆಲೆಗೆ ಹುಬ್ಬಳ್ಳಿ ಟೈಗರ್ಸ್ ಸೇರಿದ್ದಾರೆ.





ಜೂ.20ರಿಂದ 6 ನಗರಗಳಲ್ಲಿ ಟೂರ್ನಿ

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ ಜೂ.20ರಿಂದ ಜು.12ರವರೆಗೆ ನಡೆಯಲಿದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮೈದಾನಗಳಲ್ಲಿ ಪಂದ್ಯಗಳನ್ನು ಆಯೋಜಿಸಲಾಗುವುದು. ಈ ಬಾರಿ ಬೆಳಗಾವಿ ಮತ್ತು ಶಿವಮೊಗ್ಗ ಸೇರಿಸಿಕೊಳ್ಳುವ ಸಾಧ್ಯತೆಯಿದೆ.

6 ತಂಡಗಳು

- ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಹುಬ್ಬಳ್ಳಿ ಟೈಗರ್ಸ್
- ಮೈಸೂರು ವಾರಿಯರ್ಸ್
- ಗುಲ್ಬರ್ಗಾ ಮಿಸ್ಟಿಕ್ಸ್
- ಶಿವಮೊಗ್ಗ ಯೋಧಾಸ್
- ಕೋಸ್ಟಲ್ ಕಿಂಗ್ಸ್ ಮಂಗಳೂರು



ದುಬಾರಿ ಖರೀದಿ

- **ಕರುಣ್ ನಾಯರ್** - 18 ಲಕ್ಷ ರೂ.
- **ಸ್ಮರಣ್ ಆರ್** - 15.75 ಲಕ್ಷ ರೂ.
- **ಅಭಿನವ್ ಮನೋಹರ್** - 13.5 ಲಕ್ಷ ರೂ.
- **ಮನೀಶ್ ಪಾಂಡೆ** - 12.75 ಲಕ್ಷ ರೂ.
- **ಮೆಕ್‌ನೀಲ್ ನೊರೊನ್ಹಾ** - 12.25 ಲಕ್ಷ ರೂ.

ವೀಕ್ಷಿಸುವುದು ಹೇಗೆ?

ಫ್ಯಾನ್‌ಕೋಡ್ ಆ್ಯಪ್, ವೆಬ್‌ಸೈಟ್‌ನಲ್ಲಿ ಲೈವ್ ಸ್ಟ್ರೀಮಿಂಗ್ ಇರಲಿದ್ದು, ಪಂದ್ಯಗಳ ಪ್ರಸಾರ ಹಕ್ಕನ್ನು ಸೋನಿ ಸ್ಪೋರ್ಟ್ಸ್ ಖರೀದಿಸಿದ್ದು, ಸೋನಿ ಸ್ಪೋರ್ಟ್ಸ್ 5 ಮತ್ತು ಸೋನಿ ಸ್ಪೋರ್ಟ್ಸ್ 4 (ಕನ್ನಡ) ವಾಹಿನಿಗಳಲ್ಲಿ ಪ್ರಸಾರವಾಗಲಿವೆ.


ಎ ಗುಂಪಿನ ಪ್ರಮುಖರು

- ಅಭಿನವ್ ಮನೋಹರ್ - 13.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ದೇವದತ್ತ್ ಪಡಿಕ್ಕಲ್ - 2.6 ಲಕ್ಷ ರೂ. ಮೈಸೂರು ವಾರಿಯರ್ಸ್
- ಕರುಣ್ ನಾಯರ್ - 18 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಮನೀಶ್ ಪಾಂಡೆ - 12.75 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಮನೋಜ್ ಬಂಡಾಜೆ - 10 ಲಕ್ಷ ರೂ. ಮೈಸೂರು ವಾರಿಯರ್ಸ್
- ಮಯಾಂಕ್ ಅಗರವಾಲ್ - 11.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಪ್ರಸಿದ್ಧ ಕೃಷ್ಣ - 2.6 ಲಕ್ಷ ರೂ. ಮೈಸೂರು ವಾರಿಯರ್ಸ್
- ಪ್ರವೀಣ್ ದುಬೆ - 9.5 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಶರತ್ ಬಿಆರ್ - 5.75 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಶ್ರೇಯಸ್ ಗೋಪಾಲ್ - 10.25 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ವಿದ್ವತ್ ಕಾವೇರಪ್ಪ - 5 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಸ್ಮರಣ್ ಆರ್ - 15.75 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ವೈಶಾಕ್ ವಿಜಯಕುಮಾರ್ - 8.25 ಲಕ್ಷ ರೂ. ಮೈಸೂರು ವಾರಿಯರ್ಸ್
- ಯಶ್ ರಾಜ್ ಪೂಂಜಾ - 5 ಲಕ್ಷ ರೂ. ಶಿವಮೊಗ್ಗ ಯೋಧಾಸ್

ಬಿ ಗುಂಪಿನ ಪ್ರಮುಖರು

- ಮೆಕ್‌ನೀಲ್ ನೊರೊನ್ಹಾ – 12.25 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಧೀರಜ್ ಜೆ ಗೌಡ – 2 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಮನವಂತ್ ಕುಮಾರ್ ಎಲ್ – 7.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಶ್ರೀಜಿತ್ ಶೆಟ್ಟಿ – 4 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಎಸ್‌ಜೆ ನಿಕಿನ್ ಜೋಸ್ – 2.4 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಶುಭಾಂಗ್ ಹೆಗ್ಡೆ – 11 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಶಶಿಕುಮಾರ್ ಕೆ – 1.3 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಸೂರಜ್ ಅಹೂಜ – 6 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಅಭಿಲಾಷ್ ಶೆಟ್ಟಿ – 5.75 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಅನೀಶ್ ಕೆವಿ – 1.8 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಮೊಹ್ಸಿನ್ ಖಾನ್ – 2 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಲವನೀತ್ ಸಿಸೋಡಿಯಾ – 7.75 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ಯಶೋವರ್ಧನ್ ಪರಂತಪ – 3.4 ಲಕ್ಷ ರೂ. ಶಿವಮೊಗ್ಗ ಯೋಧಾಸ್
- ವೆಂಕಟೇಶ್ ಎಂ – 3.4 ಲಕ್ಷ ರೂ. ಕೋಸ್ಟಲ್ ಕಿಂಗ್ಸ್ ಮಂಗಳೂರು
- ಎ ರೋಹನ್ ಪಾಟೀಲ್ – 5.75 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಧ್ರುವ್ ಪ್ರಭಾಕರ್ – 4.25 ಲಕ್ಷ ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಶ್ರೀಜಿತ್ ಕೆಎಲ್ – 9 ಲಕ್ಷ ರೂ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್
- ಕೃತಿಕ್ ಕೃಷ್ಣ – 1 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್
- ಚೇತನ್ ಎಲ್‌ಆರ್ – 11.5 ಲಕ್ಷ ರೂ. ಮೈಸೂರು ವಾರಿಯರ್ಸ್
- ಕುಶ್ ಮರಾಠೆ – 30,000 ರೂ. ಗುಲ್ಬರ್ಗಾ ಮಿಸ್ಟಿಕ್ಸ್
- ಸಿಆರ್ ಹಾರ್ದಿಕ್ ರಾಜ್ – 7.5 ಲಕ್ಷ ರೂ. ಹುಬ್ಬಳ್ಳಿ ಟೈಗರ್ಸ್

ಪ್ರಜ್ಞಾನಂದಗೆ ಗೆಲುವು!



• **ಓಸ್ಲೋ:** ಆರ್.ಪ್ರಗ್ನಾನಂದ ಅವರು ಕ್ಯಾಂಡಿಡೇಟ್ಸ್ ಪಂದ್ಯಾವಳಿಯಲ್ಲಿ ಅತೃಪ್ತಿಕರ ಪ್ರದರ್ಶನ ನೀಡಿದ ಬಳಿಕ ನಾರ್ವೆ ಚೆಸ್ 2026 ಪ್ರಶಸ್ತಿ ಗೆಲ್ಲುವ ಹಂತಕ್ಕೆ ತಲುಪುವ ಮೂಲಕ ಬಲವಾದ ಕಂಬ್ಯಾಕ್ ಮಾಡಿದ್ದಾರೆ. ಹತ್ತನೇ ಮತ್ತು ಕೊನೆಯ ಸುತ್ತಿನ ನಂತರ, ಪ್ರಜ್ಞಾನಂದ ವೆಸ್ಲಿ ಸೊ(15.5 ಅಂಕಗಳು) ಅವರಿಗಿಂತ ಅರ್ಧ ಅಂಕ ಹಿಂದುಳಿದಿದ್ದರು. ಅಂತಿಮ 10ನೇ ಸುತ್ತಿನಲ್ಲಿ ಅವರು ಬಿಳಿ ಕಾಯಿಗಳೊಂದಿಗೆ ವಿನ್ಸೆಂಟ್ ಕೀಮರ್ ವಿರುದ್ಧ ಆಡಲಿದ್ದಾರೆ. ಮತ್ತೊಂದೆಡೆ ಸೊ ಅವರು ಅಲಿರೆಝಾ ಫಿರೂಜಾ ಅವರನ್ನು ಎದುರಿಸಲಿದ್ದಾರೆ.

9ನೇ ಸುತ್ತಿನಲ್ಲಿ, ಪ್ರಜ್ಞಾನಂದ ತಮ್ಮ ದೇಶದವರೇ ಆದ ಪ್ರಸ್ತುತ ಕ್ಲಾಸಿಕಲ್ ವಿಶ್ವ ಚಾಂಪಿಯನ್ ಆಗಿರುವ ಡಿ.ಗುಕೇಶ್ ಅವರನ್ನು ಸೋಲಿಸಿದರು. ಇದು ಪ್ರಗ್ ಅವರ ಸತತ ಮೂರನೇ ಗೆಲುವಾಗಿತ್ತು. ಅದಕ್ಕೂ ಮೊದಲು ಅವರು ಫಿರೂಜಾ ಮತ್ತು ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಸೋಲಿಸಿದ್ದರು. ಕಾರ್ಲ್ಸನ್ ವಿರುದ್ಧ ಎರಡು ಬಾರಿ ಗೆಲುವು ಸಾಧಿಸಿರುವುದು ಅವರ ಈ ಟೂರ್ನಿಯ ಪ್ರಮುಖ ಸಾಧನೆಯಾಗಿದೆ. ನಾರ್ವೆ ಚೆಸ್‌ನಲ್ಲಿ ಕಾರ್ಲ್ಸನ್ ಮತ್ತು ಗುಕೇಶ್ ಇಬ್ಬರೂ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡಿಲ್ಲ. ಪೆನಲ್ಟಿಮೇಟ್ ಸುತ್ತಿನ ಸೋಲುಗಳ ಬಳಿಕ ಕ್ರಮವಾಗಿ 5ನೇ ಮತ್ತು 6ನೇ ಸ್ಥಾನಗಳಲ್ಲಿ ಉಳಿದಿದ್ದಾರೆ. ಸೊ ವಿರುದ್ಧದ ಸೋಲು ಕಾರ್ಲ್ಸನ್‌ಗೆ ಈ ಟೂರ್ನಿಯಲ್ಲಿನ 5ನೇ ಸೋಲಾಗಿದ್ದು, ಗುಕೇಶ್ ಕೇವಲ 3 ಪಂದ್ಯಗಳನ್ನು ಮಾತ್ರ ಗೆದ್ದಿದ್ದಾರೆ.

- **ಕ್ಲಾಸಿಕಲ್ ವಿಶ್ವ ಚಾಂಪಿಯನ್ ಗುಕೇಶ್ ಮಣಿಸಿದ ಪ್ರಗ್**

ಪ್ರಶಸ್ತಿ ಸನಿಹದಲ್ಲಿ ಪ್ರಗ್

ನಾರ್ವೆ ಚೆಸ್ ಪ್ರಶಸ್ತಿ ಗೆಲ್ಲಬೇಕಿದ್ದರೆ, ಅಂತಿಮ ಸುತ್ತಿನಲ್ಲಿ ವಿನ್ಸೆಂಟ್ ಕೀಮರ್ ಅವರನ್ನು ಪ್ರಜ್ಞಾನಂದ ಸೋಲಿಸಬೇಕಿದೆ. ಇದಲ್ಲದೆ, ಅಲಿರೆಝಾ ಫಿರೂಜಾ ಎದುರು ವೆಸ್ಲಿ ಸೊ ಸೋಲಬೇಕು.

ವಿಶ್ವ ಚಾಂಪಿಯನ್‌ಶಿಪ್‌ಗೂ ಮುನ್ನ ಆಫ್ಘಾನ್ ಸವಾಲು

ಇಂದಿನಿಂದ ಅಫ್ಘಾನ್ ವಿರುದ್ಧ ಭಾರತಕ್ಕೆ ಟೆಸ್ಟ್

• **ಮಲ್ಲನ್ಪುರ್(ಚಂಡೀಗಢ):** ಬಲಿಷ್ಠವಾದ ಭಾರತ ಶನಿವಾರ ಆರಂಭವಾಗಲಿರುವ ಏಕೈಕ ಟೆಸ್ಟ್‌ನಲ್ಲಿ ಅಫ್ಘಾನಿಸ್ತಾನ ತಂಡವನ್ನು ಎದುರಿಸಲಿದೆ. ಈ ಪಂದ್ಯವು ಜೂ.6ರಿಂದ ಜೂ.10ರವರೆಗೆ ನಡೆಯಲಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಭಿಯಾನ ಆರಂಭಿಸುವ ಮುನ್ನ ಭಾರತ ತಂಡದ ಸಮತೋಲನವನ್ನು ಪರೀಕ್ಷಿಸಲು ಇದೊಂದು ಅವಕಾಶವಾಗಿ ಇರಲಿದೆ. 2018ರಲ್ಲಿ ಭಾರತ ವಿರುದ್ಧ ನಡೆದ ಮೊದಲ ಟೆಸ್ಟ್‌ನಲ್ಲಿ ಅಫ್ಘಾನಿಸ್ತಾನ ಕೇವಲ ಒಂದು ಸೆಷನ್‌ನಲ್ಲೇ 10 ವಿಕೆಟ್ ಕಳೆದುಕೊಂಡಿತ್ತು. ನಂತರದ 10 ವಿಕೆಟ್‌ಗಳು ಟೀ ವಿರಾಮದಿಂದ ದಿನಾಂತ್ಯದ ನಡುವೆ ಉರುಳಿಬಿದ್ದವು, ಪಂದ್ಯ ಬೇಗನೆ ಅಂತ್ಯಗೊಂಡಿತ್ತು. ಆದರೆ 2026ರಲ್ಲಿ ನಾಯಕ ಹಶ್ಮತುಲ್ಲಾ ಶಾಹಿದಿ ತಮ್ಮ ತಂಡವು ಕನಿಷ್ಠ ಭಾರತಕ್ಕೆ ಗಟ್ಟಿಯಾದ ಸವಾಲು ನೀಡಬೇಕು ಎಂದು ಆಶಿಸುತ್ತಿದ್ದಾರೆ. ಭಾರತ ತಂಡವು ಈ ಬಾರಿ ಪರಿವರ್ತನಾ ಹಂತದಲ್ಲಿದ್ದು, ವಿಭಿನ್ನ ಸಂಯೋಜನೆಗಳನ್ನು ಪರೀಕ್ಷಿಸುವ ಪ್ರಯೋಗಾತ್ಮಕ ಹಾದಿಯಲ್ಲಿದೆ.

ಕಳೆದ ವರ್ಷ ತವರಿನಲ್ಲಿ ಸರಣಿ ಸೋಲು: ಆದಾಗ್ಯೂ, ಕಳೆದ ವರ್ಷ ದಕ್ಷಿಣ ಆಫ್ರಿಕಾ ಎದುರಿನ 0–2 ತವರಿನ ಸರಣಿ ಸೋಲನ್ನು ಭಾರತ ಮರೆಯಲಿಲ್ಲ. ತವರಿನ ಹಳೆಯ ಕಹಿ ಅನುಭವವನ್ನು ಮರೆತು ಅಫ್ಘಾನಿಸ್ತಾನ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ.

ಸಾಯಿ ಸುದರ್ಶನ್‌ಗೆ ಅವಕಾಶ : ಭಾರತದ ಟೆಸ್ಟ್ ತಂಡದಲ್ಲಿ ನಂ.3 ಸ್ಥಾನದಲ್ಲಿ ಬಿ.ಸಾಯಿ ಸುದರ್ಶನ್ ಅವರಿಗೆ ಅವಕಾಶ ನೀಡುವುದಾಗಿ ಮುಖ್ಯ ಕೋಚ್ ಗೌತಮ್ ಗಂಭೀರ್ ಶುಕ್ರವಾರ ದೃಢೀಕರಿಸಿದ್ದಾರೆ. ಮುಖ್ಯ ಕೋಚ್ ಗಂಭೀರ್ ಶುಕ್ರವಾರ ಮಾತನಾಡಿದ್ದು, ಸಾಯಿ ಸುದರ್ಶನ್‌ಗೆ ಇನ್ನೂ ನ್ಯಾಯಯುತ ಅವಕಾಶ ಸಿಕ್ಕಿಲ್ಲ. ಅವರು ಇಂಗ್ಲೆಂಡ್‌ನಲ್ಲಿ ಆಡಿದ್ದಾರೆ. ನಾವು ಅವರಿಗೆ ಹೆಚ್ಚಿನ ಅವಕಾಶ ನೀಡಲಿದ್ದೇವೆ. ತಂಡದಲ್ಲಿ ಕೇವಲ 11 ಆಟಗಾರರನ್ನು ಮಾತ್ರ ಆಯ್ಕೆ ಮಾಡಬಹುದು. ಸುದರ್ಶನ್ ಕೆಟ್ಟ ಲಯದಲ್ಲಿಲ್ಲ. ಅವರು ಐಪಿಎಲ್‌ನಲ್ಲಿ 700 ರನ್ ಗಳಿಸಿದ್ದಾರೆ.



ಪಿಚ್ ರಿಪೋರ್ಟ್

ಕಪ್ಪು ಮಣ್ಣಿನ ಪಿಚ್ ಆಗಿರುವುದರಿಂದ ಇದು ಬ್ಯಾಟಿಂಗ್ ಸ್ನೇಹಿ ಪಿಚ್ ಎಂದು ಗುರುತಿಸಲಾಗಿದೆ. ಜೂನ್ ತಿಂಗಳ 40 ಡಿಗ್ರಿ ಬಿಸಿಲಿನಲ್ಲಿ ಪಂದ್ಯ ನಡೆಯಲಿದೆ.

ನಾಲ್ಕು–ಐದು ಪಂದ್ಯಗಳ ಆಧಾರದ ಮೇಲೆ ಅವರನ್ನು ಮೌಲ್ಯಮಾಪನ ಮಾಡಿದರೆ, ನಾವು ಭವಿಷ್ಯಕ್ಕಾಗಿ ಬಲಿಷ್ಠ ತಂಡ ಕಟ್ಟಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಚೇತೇಶ್ವರ್ ಪೂಜಾರ 2025ರಲ್ಲಿ ನಿವೃತ್ತಿ ಬಳಿಕ 3ನೇ ಕ್ರಮಾಂಕದಲ್ಲಿ ಸ್ಥಿರತೆ ಕಂಡಿಲ್ಲ.

6ನೇ ಸ್ಥಾನದಲ್ಲಿ ಭಾರತ: ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಅಂಕಪಟ್ಟಿಯಲ್ಲಿ ಭಾರತ ಶೇ.48.15 ಅಂಕಗಳೊಂದಿಗೆ ಆರನೇ ಸ್ಥಾನದಲ್ಲಿದ್ದರೂ, ಗಂಭೀರ್ ತಂಡದ ಸಾಮರ್ಥ್ಯದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ನಾವು ಇನ್ನೂ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಗೆಲ್ಲಬಹುದು ಎಂಬ ನಂಬಿಕೆ ಹೊಂದಿದ್ದೇವೆ. ಈ ತಂಡದಲ್ಲಿ ಪ್ರತಿಭೆ ಮತ್ತು ಹಸಿವು ಎರಡೂ ಇವೆ ಎಂದು ಹೇಳಿದರು. ಐಪಿಎಲ್ ಮುಗಿದ ತಕ್ಷಣ ಟೆಸ್ಟ್ ಕ್ರಿಕೆಟ್‌ಗೆ ಮರಳುವ ಸವಾಲಿನ ಕುರಿತು ಮಾತನಾಡಿದ ಗಂಭೀರ್, ಯಾವುದೇ ನೆಪಗಳಿಗೆ ಇಲ್ಲಿ ಜಾಗವಿಲ್ಲ. ಟೆಸ್ಟ್ ಕ್ರಿಕೆಟ್ ಎನ್ನುವುದು ಮಾನಸಿಕ ದೃಢತೆಯ ಪರೀಕ್ಷೆ ಎಂದು ಸ್ಪಷ್ಟಪಡಿಸಿದರು.

ತಂಡಗಳು

ಭಾರತ: ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಕೆಎಲ್ ರಾಹುಲ್ (ಉಪನಾಯಕ), ಸಾಯಿ ಸುದರ್ಶನ್, ರಿಷಭ್ ಪಂತ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ನಿತೀಶ್ ಕುಮಾರ್ ರೆಡ್ಡಿ, ಹರ್ಷ ದುಬೆ, ಕುಲ್ದೀಪ್ ಯಾದವ್, ಪ್ರಸಿದ್ಧ್ ಕೃಷ್ಣ ಮೊಹಮ್ಮದ್ ಸಿರಾಜ್, ಮನವ್ ಸುತಾರ್, ಧ್ರುವ್ ಜುರೆಲ್, ಗುರ್‌ನೂರ್ ಬ್ರಾರ್, ದೇವದತ್ತ ಪಡಿಕ್ಕಲ್.

ಅಫ್ಘಾನಿಸ್ತಾನ: ಹಶ್ಮತುಲ್ಲಾ ಶಾಹಿದಿ (ನಾಯಕ), ಅಬ್ದುಲ್ ಮಲಿಕ್, ರಹ್ಮಾನುಲ್ಲಾ ಗುರ್ಬಾಜ್, ಅಫ್ಸರ್ ಝುಜಾಯಿ, ಇಕ್ರಮ್ ಅಲೀಖಿಲ್, ಸದಿಕ್ಕುಲ್ಲಾ ಅಟಲ್, ರಹ್ಮತ್ ಶಾ, ಅಜ್ಮತುಲ್ಲಾ ಒಮರ್ಜಾಯಿ, ಶರಫುದ್ದೀನ್ ಅಶ್ರಫ್, ನಂಗೇಲಿಯಾ ಖರೋತೆ, ಬಿಲಾಲ್ ಸಾಮಿ, ಖೈಸ್ ಅಹ್ಮದ್, ಮೊಹಮ್ಮದ್ ಸೇಲಿಂ, ಝಿಯಾವುರ್ ರಹ್ಮಾನ್.

- **ಪಂದ್ಯ ಆರಂಭ: ಬೆಳಗ್ಗೆ** 9:30.
- **ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್.**

ಫ್ರೆಂಚ್ ಓಪನ್ 2026 ಮಹಿಳೆಯರ ಫೈನಲ್

ಇಂದು ಮಾಯಾ–ಮಿರ್‍ರಾ ಪ್ರಶಸ್ತಿ ಸೆಣಸು

• **ಪ್ಯಾರಿಸ್:** ಪೋಲೆಂಡ್‌ನ 24 ವರ್ಷದ ಮಾಯಾ ಕ್ವಾಲಿನ್ಸ್ಕಾ ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ರಷ್ಯಾದ ಡಯಾನಾ ಶ್ನೈಡರ್‌ರನ್ನು 7–6 (7/4), 6–4 ಸೆಟ್‌ಗಳಿಂದ ಮಣಿಸಿ ಫ್ರೆಂಚ್ ಓಪನ್ ಫೈನಲ್‌ಗೆ ಪ್ರವೇಶಿಸಿದರು. ಇದರೊಂದಿಗೆ ಓಪನ್ ಯುಗದಲ್ಲಿ(1968ರಿಂದ) ಗ್ರ್ಯಾಂಡ್ ಸ್ಲ್ಯಾಮ್ ಸಿಂಗಲ್ಸ್ ಫೈನಲ್ ತಲುಪಿದ ಕೇವಲ ಎರಡನೇ ಅರ್ಹತಾ ಆಟಗಾರ್ತಿ ಎಂಬ ಸಾಧನೆ ಮಾಡಿದರು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ರಷ್ಯಾದ 19 ವರ್ಷದ ಪ್ರತಿಭಾವಂತ ಆಟಗಾರ್ತಿ ಮಿರ್‍ರಾ ಆ್ಯಂಡ್ರೀವಾ ಅವರನ್ನು ಎದುರಿಸಲಿದ್ದಾರೆ. 2021ರ ಯುಎಸ್ ಓಪನ್‌ನಲ್ಲಿ ಅರ್ಹತಾ ಸುತ್ತಿನಿಂದಲೇ ಪ್ರಶಸ್ತಿ ಗೆದ್ದ ಎಮ್ಮಾ ರಾಡಕಾನು ಸಾಧನೆಯನ್ನು ಕ್ವಾಲಿನ್ಸ್ಕಾ ಸರಿಗಟ್ಟುವ ಅವಕಾಶ ಹೊಂದಿದ್ದಾರೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಆಂಡ್ರೀವಾ, ಉಕ್ರೇನ್‌ನ ಮಾರ್ತಾ ಕೊಸ್ಟ್ಯುಕ್‌ರನ್ನು 6–1, 6–3 ಸೆಟ್‌ಗಳಿಂದ ಸೋಲಿಸಿ ತಮ್ಮ ಮೊದಲ ಗ್ರ್ಯಾಂಡ್ ಸ್ಲ್ಯಾಮ್ ಫೈನಲ್ ಪ್ರವೇಶಿಸಿದರು.



ಅಂಗಣದಲ್ಲಿ ಉದ್ವಿಗ್ನತೆ, ಹಸ್ತಲಾಘವ ಇಲ್ಲ

ಆಂಡ್ರೀವಾ ಮತ್ತು ಕೋಸ್ಟ್ಯುಕ್ ನಡುವಿನ ಸೆಮಿಫೈನಲ್ ಬಳಿಕ ಇಬ್ಬರೂ ಪರಸ್ಪರ ಹಸ್ತಲಾಘವ ಮಾಡಲಿಲ್ಲ. ಉಕ್ರೇನ್‌ನ ಕೋಸ್ಟ್ಯುಕ್ ತಕ್ಷಣವೇ ಕೋರ್ಟ್ ತೊರೆದು ಅಭಿಮಾನಿಗಳಿಗೆ ಕೈ ಬೀಸಿ ವಿದಾಯ ಹೇಳಿದರು. ರಷ್ಯಾದ ಉಕ್ರೇನ್ ಮೇಲಿನ ಆಕ್ರಮಣದ ಹಿನ್ನೆಲೆಯಲ್ಲಿ ಪಂದ್ಯಕ್ಕೂ ಮುನ್ನ ವಾತಾವರಣದಲ್ಲಿ ಸ್ವಲ್ಪ ಉದ್ವಿಗ್ನತೆ ಕಂಡುಬಂದಿತು. ಸಾಮಾನ್ಯವಾಗಿ ಇಬ್ಬರೂ ಆಟಗಾರ್ತಿಯರು ಹಸ್ತಲಾಘವ ನೀಡಿ ಫೋಟೋಗೆ ಪೋಸ್ ನೀಡುವ ಪದ್ಧತಿ ಇದ್ದರೂ, ಈ ಬಾರಿ ಪ್ರತ್ಯೇಕ ಛಾಯಾಚಿತ್ರ ತೆಗೆಸಿಕೊಂಡರು.

ಪ ದ ಬಂ ಧ

ರಾಜಾ ಸಂಗಮೇಶ ಹಿರೇಮಠ



6006

6005 ಉತ್ತರ

ಎಡದಿಂದ ಬಲಕ್ಕೆ:
5.ಸದಾನಂದ 6.ಮದುಮಗ
7.ಜರಿ 8.ಸಹಾಯ 9.ನಗ
11.ಮಗ 13.ಸಮೀರ
15.ಕಟು 16.ಮಗುತನ
17.ಮನೋರಮೆ

ಮೇಲಿನಿಂದ ಕೆಳಕ್ಕೆ :
1.ದಾದಾಗಿರಿ 2.ಮಂದಹಾಸ
3.ಕಮನೀಯ
4.ಧೂಮಪಾನ 7.ಜನುಮ
10.ಕಸಟು 12.ಗದಗುಟ್ಟು
13.ನಗೆನಟ 14.ರಸಮಯ
15.ಕಸರತ್ತು

ಎಡದಿಂದ ಬಲಕ್ಕೆ
1.ಆಗಮನವನ್ನು ನಿರೀಕ್ಷಿಸು ಎಂಬರ್ಥದ ಶಬ್ದ (4)
3.ಸುದರ್ಶನ ಕೈಯಲ್ಲಿ ಹಿಡಿದವ ತಿರುಗಿದ್ದಾನೆ (4)
5.ಪಟ್ಟೆಯುಳ್ಳ ಒಂದು ಬಗೆಯ ಸರ್ಪ (5)
6.ಸಾಧನೆಯ ಸ್ಮರಣಾರ್ಥ ನೀಡುವ ಬಿಲ್ಲೆ (3)
7.ಅಮೂಲ್ಯ–ಹೊಳೆಯುವ ಕಲ್ಲು (2)
8.ಸಾರಾಸಗಟು ಹಲ್ಲೆಯಲ್ಲಿ ತಿರುಗಿದೆ (2)
12.ಎದೆಗಾರಿಕೆಯಿಂದ ಕೂಡಿದ ಕಾರ್ಯ (3)
14.ಭಿಡೆ ಸ್ವಭಾವದವನು ದಾರದ ನಡುವೆ ಇದ್ದಾನೆ (5)
16.ಬಾಗುವಿಕೆ–ನಮಿಸುವಿಕೆ (4)
17.ವಂಚಿಸುವವ–ನಂಬಿಕಸ್ತನಲ್ಲದ ವ್ಯಕ್ತಿ (4)

ಮೇಲಿನಿಂದ ಕೆಳಕ್ಕೆ
1.ಸರಿಯಾದ ಮಾರ್ಗದರ್ಶನ ತೋರುವ ವ್ಯಕ್ತಿ (4)
2.ದಯೆಯ ಸಾಗರ ಈ ದೇವರು (5)
3.ಆರೋಹಿಯಿಲ್ಲಿ ತಲೆಕೆಳಗಾಗಿದ್ದಾನೆ (3)
4.ಇವು ಚರ್ಮದ ಪಾದುಕೆಗಳು (4)
5. ಹಾಯ್ದು ಹೋಗು ಎಂಬ ಬೈರಪ್ಪನವರ ಕಾದಂಬರಿ (2)
9.ಸೇವಕರ ಸೇವಕ–ಅಡಿಯಾಳು (5)
10.ದೇವರ ವಿಗ್ರಹಗಳನ್ನಿಡುವ ಮಂಟಪ (4)
11.ಸುತ್ತು ಬಳಸುಗಳಿಲ್ಲದಿರುವಿಕೆ (2)
13.ಅರಸನ ದಾರಿ ಕಾಯುತ್ತಿರುವ ಸೇನಾಧಿಕಾರಿ (4)
15.ಕೆಲಸಕ್ಕೆ ಪ್ರತಿ ತಿಂಗಳು ನೀಡುವ ವೇತನ (3)

ಕಿರುಸುದ್ದಿ

ವೈದ್ಯಶಾಲೆಗೆ ನುಗ್ಗಿ ಮಾಲಕನಿಗೆ ಹಲ್ಲೆ: 3 ಮಂದಿ ವಿರುದ್ಧ ಕೇಸು

ಮಂಜೇಶ್ವರ: ಆಯುರ್ವೇದ ಔಷಧಿ ಅಂಗಡಿಗೆ ನುಗ್ಗಿ ಅದರ ಮಾಲಕನಿಗೆ ಹಲ್ಲೆಗೈದ ಆರೋಪದಂತೆ ಮೂರು ಮಂದಿಯ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಉಪ್ಪಳ ರೈಲ್ವೆ ನಿಲ್ದಾಣ ಸಮೀಪ ಕಾರ್ಯಾಚರಿಸುವ ಧನ್ವಂತರಿ ವೈದ್ಯಶಾಲೆಯ ಮಾಲಕ, ಕಯ್ಯಾರು ಕುಂಡಚ್ಚಕಟ್ಟೆಯ ಬೀಡು ನಿವಾಸಿ ರವಿಚಂದ್ರ ಕೆ. ಅವರು ನೀಡಿದ ದೂರಿನಂತೆ ಉಪ್ಪಳ ನಿವಾಸಿ ಸವಾದ್ ಸಹಿತ 3 ಮಂದಿಯ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿದ್ದಾರೆ. ಬುಧವಾರ ಮಧ್ಯಾಹ್ನ ರವಿಚಂದ್ರರ ವೈದ್ಯಶಾಲೆ ಸಮೀಪ ನಿಲ್ಲಿಸಲಾಗಿದ್ದ ಅವರ ಕಾರಿನ ಸಮೀಪದಲ್ಲಿ ಸಂಶಯಾಸ್ಪದವಾಗಿ ಕಂಡುಬಂದ ಆರೋಪಿಗಳ ಫೋಟೋ ತೆಗೆದ ದ್ವೇಷದಿಂದ ಆರೋಪಿಗಳು ವೈದ್ಯಶಾಲೆಗೆ ನುಗ್ಗಿ ರವಿಚಂದ್ರರಿಗೆ ಅವಾಚ್ಯವಾಗಿ ನಿಂದಿಸಿ ಹಲ್ಲೆಗೈದುದಾಗಿ ದೂರಲಾಗಿದೆ.

ಬಿ.ಸಿ.ರೋಡು ಮೂಲದ ವ್ಯಕ್ತಿ ಕುವೈತ್ ನಲ್ಲಿ ಕುಸಿದು ಬಿದ್ದು ಮೃತ್ಯು

ಬಂಟ್ವಾಳ: ಕುವೈತ್ ದೇಶದಲ್ಲಿ ಉದ್ಯೋಗದಲ್ಲಿದ್ದ ಬಂಟ್ವಾಳ ಮೂಲದ ವ್ಯಕ್ತಿಯೋರ್ವರು ಕುಸಿದುಬಿದ್ದು ಮೃತಪಟ್ಟಿರುವ ಘಟನೆ ನಡೆದಿದೆ. ಬಂಟ್ವಾಳ ತಾಲೂಕಿನ ಬಿ.ಮೂಡ ಗ್ರಾಮದ ತಲಪಾಡಿ ನಿವಾಸಿ ಅಬ್ದುಲ್ ರಝಾಕ್ ವಳಚ್ಚಿಲ್ (58) ಮೃತಪಟ್ಟವರೆಂದು ಗುರುತಿಸಲಾಗಿದೆ.ಇವರು ಮೂಲತಃ ವಳಚ್ಚಿಲ್ ನಿವಾಸಿಯಾಗಿದ್ದು, ಪ್ರಸ್ತುತ ಬಿ.ಸಿ.ರೋಡು ಸಮೀಪದ



ತಲಪಾಡಿಯಲ್ಲಿ ವಾಸ್ತವ್ಯವಿದ್ದಾರೆ. ಹಲವಾರು ವರ್ಷಗಳಿಂದ ಕುವೈತ್ ದೇಶದ ಫರ್ವಾನಿಯ ಎಂಬಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಎಂದಿನಂತೆ ಅವರು ಬುಧವಾರ ಕೆಲಸದಲ್ಲಿ ನಿರತವಾಗಿದ್ದ ವೇಳೆ ಹಠಾತ್ತನೆ ಕುಸಿದು ಬಿದ್ದಿದ್ದು, ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ದಾರಿ ಮಧ್ಯೆ ಕೊನೆಯುಸಿರೆಳೆದಿದ್ದಾರೆ ಎಂದು ಅವರು ಕುಟುಂಬಸ್ಥರು ತಿಳಿಸಿದ್ದಾರೆ. ಮೃತರ ಪಾರ್ಥಿವ ಶರೀರ ಶುಕ್ರವಾರ ಬೆಳಿಗ್ಗೆ ಊರಿಗೆ ತಲುಪಿದ್ದು, ತಲಪಾಡಿಯ ಮೊಫತ್ ಲಾಲ್ ದಫನ ಭೂಮಿಯಲ್ಲಿ ಅಂತ್ಯ ಕ್ರಿಯೆ ನಡೆಸಲಾಗಿದೆ ಎಂದು ಕುಟುಂಬಿಕರು ತಿಳಿಸಿದ್ದಾರೆ. ಮೃತರು ಪತ್ನಿ, ಪುತ್ರ, ಪುತ್ರಿಯನ್ನು ಸಹಿತ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಕಾಲಿಕ ನಿಧನಕ್ಕೆ ತಲಪಾಡಿ ಆಡಳಿತ ಮಂಡಳಿ ಹಾಗೂ ಅಲ್ ರಹ್ಮಾ ಫೌಂಡೇಶನ್ ಸಂತಾಪ ಸೂಚಿಸಿದೆ.

ಅಲ್ಲಲ್ಲಿ ಮಳೆಯ ಆಗಮನ: ಹಾರಂಗಿ ನೀರಿನ ಮಟ್ಟದಲ್ಲಿ ಸತತ ಏರಿಕೆ

ಮಡಿಕೇರಿ: ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿಗಳಾಗಿದ್ದು, ಶುಕ್ರವಾರ ನೀರಿನ ಮಟ್ಟ 2823.33 ಅಡಿಗಳಷ್ಟಿತ್ತು. ಕಳೆದ ವರ್ಷ ಇದೇ ದಿನಾಂಕದಂದು 2851.43 ಅಡಿ ನೀರಿತ್ತು. ಪ್ರಸಕ್ತ ಜಲಾಶಯಕ್ಕೆ 214 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ ಒಳಹರಿವು 1908 ಕ್ಯುಸೆಕ್ ನಷ್ಟಿತ್ತು. ಜಲಾಶಯದಿಂದ ನದಿಗೆ 180 ಕ್ಯುಸೆಕ್ ನೀರನ್ನು ಹೊರ ಬಿಡಲಾಗುತ್ತಿದ್ದು, ಕಳೆದ ವರ್ಷ ಇದೇ ದಿನಾಂಕದಂದು ನೀರಿನ ಹೊರ ಹರಿವು ನದಿಗೆ 1729 ಕ್ಯುಸೆಕ್‌ನಷ್ಟಿತ್ತು.

ಇಡಿ ತನಿಖೆ ತಡೆ ಕೋರಿದ ಸಿಎಂಆರ್‌ಎಲ್ ಅರ್ಜಿ ತಿರಸ್ಕರಿಸಿದ ಕೇರಳ ಹೈ

ತಿರುವನಂತಪುರಂ:ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಎಂ ನಾಯಕ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ವಿಜಯನ್ ಅವರ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಸಂಸ್ಥೆಗೆ ನೀಡಲಾದ ಲಂಚ ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ(ಇಡಿ)ದ ತನಿಖೆಗೆ ತಡೆಕೋರಿದ ಕೊಚ್ಚಿನ್ ಮಿನರಲ್ಸ್



ಅಂಡ್ ರುಟೈಲ್ ಲಿಮಿಟೆಡ್(ಸಿಎಂಆರ್‌ಎಲ್)ನ ಅರ್ಜಿಯನ್ನು ಕೇರಳ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿತು. ಈ ಹಗರಣದ ತನಿಖೆಯನ್ನು ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ)ಯಡಿ ತನಿಖೆ ನಡೆಸಲು ಇಡಿಗೆ ಅನುಮತಿ ನೀಡಿದ ಏಕ ಸದಸ್ಯ ಪೀಠದ ಆದೇಶದ ವಿರುದ್ಧ ಸಿಎಂಆರ್‌ಎಲ್ ವಿಭಾಗೀಯ ಪೀಠಕ್ಕೆ ಮನವಿ ಸಲ್ಲಿಸಿತ್ತು. ಇಡಿಯು ಪಿಎಂಎಲ್‌ಎಯ 50ನೇ ವಿಧಿಯಡಿ ಸಿಎಂಆರ್ ಎಲ್ ಪದಾಧಿಕಾರಿಗಳಿಗೆ ಸಮನ್ಸ್ ಜಾರಿ ಮಾಡಿರುವುದು ಸಿಂಧುವಾಗಿದೆ ಎಂದು ಹೇಳಿ,ಇಡಿ ಹಣವರ್ಗಾವಣೆ ತನಿಖೆಗಾಗಿ ದಾಖಲಿಸಿಕೊಂಡಿರುವ ಇಸಿಐಆರ್‌ನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿತು.

ಬಂದರು ನಗರಿ ಮಂಗಳೂರು ನಗರದ ಜನತೆಗೆ ಶುಕ್ರವಾರ ಬಹುನಿರೀಕ್ಷಿತ ಮುಂಗಾರು ಮಳೆಯ ಸ್ವಾಗತ ಸಂಭ್ರಮ!







ಕೇರಳಕ್ಕೆ ಮುಂಗಾರಿನ ಆಗಮನವಾದ ಬೆನ್ನಲ್ಲೇ ಕಡಲತಡಿ ಮಂಗಳೂರಿನಲ್ಲಿ ಮಳೆಗಾಲದ ಚಿತ್ರಣ ಅರಳಿಕೊಂಡಿದ್ದು, ಶುಕ್ರವಾರದ ಮಳೆಗೆ ನಗರದ ವಿವಿಧ ಭಾಗಗಳಲ್ಲಿ ಮಳೆ ನೀರು ರಸ್ತೆಯಲ್ಲಿಯೇ ಹರಿದು ಒಂದಿಷ್ಟು ಸಂಕಷ್ಟ ಸೃಷ್ಟಿಸಿತು.

ದಕ್ಷಿಣ ಕನ್ನಡ, ಉಡುಪಿಯಲ್ಲಿ ಭಾರೀ ಮಳೆ | ಕಾಸರಗೋಡಲ್ಲಿ ರೆಡ್ ಅಲರ್ಟ್, ಶಾಲೆಗೆ ರಜೆ

ಮುಂಗಾರು ಭರ್ಜರಿ ಎಂಟ್ರಿ!

ಮಂಗಳೂರು: ಕರಾವಳಿಗೆ ಮುಂಗಾರಿನ ಆಗಮನವಾಗಿದ್ದು, ಶುಕ್ರವಾರ ಮುಂಜಾನೆ ಯಿಂದಲೇ ಮಳೆಯಾರ್ಭಟ ಶುರುವಾಗಿದೆ. ಮುಂಗಾರಿನ ಮೊದಲ ಮಳೆಗೇ ಕರಾವಳಿ ಜಿಲ್ಲೆಗಳು ತತ್ತರಿಸಿವೆ. ಅಲ್ಲಲ್ಲಿ ತಗ್ಗು ಪ್ರದೇಶಗಳು ಜಲಾವೃತವಾಗುವುದು, ಮನೆಗಳಿಗೆ ನೀರು ನುಗ್ಗುವ ಭೀತಿ ಕಳೆದ ಭಾರಿಯಂತೆ ಈ ಬಾರಿಯೂ ಮರುಕಳಿಸಿದೆ. ಹಲವೆಡೆ ಗುಡ್ಡ ಕುಸಿಯುವ ಭೀತಿಯೂ ಮತ್ತೆ ಎದುರಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡಿನಲ್ಲಿ ಶುಕ್ರವಾರ ಎಡೆಬಿಡದೆ ಮಳೆ ಸುರಿದಿದೆ. ಕೊಡಗಿನಲ್ಲಿ ಸಾಧಾರಣ ಮಳೆಯಾಗಿದೆ. ಭಾರೀ ಮಳೆಯ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಇಂದು(ಜೂ.6) ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಮಂಗಳೂರಿನಲ್ಲಿ ಮೊದಲ ಮಳೆಗೆ ನಗರವಾಸಿಗಳು ತತ್ತರಿಸಿಹೋಗಿದ್ದಾರೆ. ರಸ್ತೆಗಳು ಜಲಾವೃತಗೊಂಡು ವಾಹನ ಮತ್ತು ಸಾರ್ವಜನಿಕರ ಸಂಚಾರ ಕಷ್ಟಕರವಾಗಿತ್ತು. ಸತತ ಮಳೆಯ ಪರಿಣಾಮವಾಗಿ ಮಂಗಳೂರಿನ ಕೊಡಿಯಾಲ್ ಬೈಲ್, ಪಂಪ್ ವೆಲ್, ಜಪ್ಪಿನಮೊಗರು, ಕೊಟ್ಟಾರ, ಮಾಲೆಮಾರ್ ಮುಂತಾದ ಪ್ರದೇಶಗಳು ಜಲಾವೃತಗೊಂಡಿವೆ.

ದಂಬೇಲ್‌ನಲ್ಲಿ ತಡೆಗೋಡೆ ಕುಸಿತ

ಕಂಕನಾಡಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚರಂಡಿ ನೀರು ರಸ್ತೆಯಲ್ಲಿಯೇ ಹರಿದ ಪರಿಣಾಮ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೊಳಗಾದರು. ಸತತವಾಗಿ ಸುರಿದ ಮಳೆಯಿಂದಾಗಿ ದಂಬೇಲ್ ಸಮೀಪ ಮನೆಯೊಂದರ ತಡೆಗೋಡೆ ರಸ್ತೆಗೆ ಕುಸಿದು ಬಿದ್ದಿದೆ.

ಉಡುಪಿಯಲ್ಲೂ ಮಳೆಯಾರ್ಭಟ

ಉಡುಪಿ ಜಿಲ್ಲೆಯಲ್ಲೂ ಉತ್ತಮ ಮಳೆ ಯಾಗಿದೆ. ಜಿಲ್ಲೆಯಾದ್ಯಂತ ಸರಾಸರಿ 21.3 ಮಿ.ಮೀ. ಮಳೆಯಾಗಿದೆ. ಕಾಪುವಿನಲ್ಲಿ ಗರಿಷ್ಠ 34.7 ಮಿ.ಮೀ ಮಳೆಯಾಗಿದೆ. ಉಳಿದಂತೆ ಬೈಂದೂರಿನಲ್ಲಿ 28.7 ಮಿ.ಮೀ., ಕುಂದಾಪುರದಲ್ಲಿ 21.3 ಮಿ.ಮೀ., ಕಾರ್ಕಳದಲ್ಲಿ 20.9 ಮಿ.ಮೀ. ಹಾಗೂ ಬ್ರಹ್ಮಾವರ ಭಾಗದಲ್ಲಿ 19.6 ಮಿ.ಮೀ., ಹೆಬ್ರಿಯಲ್ಲಿ 15.4 ಮಿ.ಮೀ. ಮಳೆಯಾಗಿದೆ. ಜಿಲ್ಲಾ ಕೇಂದ್ರ ಉಡುಪಿಯಲ್ಲಿ ಅತ್ಯಂತ ಕಡಿಮೆ ಅಂದರೆ 9.3 ಮಿ.ಮೀ. ಮಳೆಯಾಗಿದೆ.

ಕುಂದಾಪುರದಲ್ಲಿ ಗುಡುಗು ಸಹಿತ ಮಳೆ:

ಕುಂದಾಪುರ ತಾಲೂಕಿನಾದ್ಯಂತ ಗುರುವಾರ ರಾತ್ರಿಯಿಂದ ಗುಡುಗು ಸಿಡಿಲಿನ ಸಹಿತ ಉತ್ತಮ ಮಳೆಯಾಗಿದೆ. ಶುಕ್ರವಾರ ಬೆಳಗ್ಗಿನವರೆಗೂ ಸತತ ಮಳೆಯಾಗಿದ್ದು, ಜಲಮೂಲಗಳು ಮತ್ತೆ ತುಂಬಿಕೊಂಡಿವೆ. ತಾಲೂಕಿನ ಹಲವೆಡೆ ಚರಂಡಿ ಸ್ವಚ್ಛತೆ ಮಾಡದೆ ಇರುವುದರಿಂದ ಮಳೆ ನೀರು ರಸ್ತೆ ಮೇಲೆ ಹರಿಯುತ್ತಿದ್ದ ದೃಶ್ಯ ಕಂಡು ಬಂದಿದೆ.

ಕೊಡಗಿನ ವಿವಿಧೆಡೆ ಸಾಧಾರಣ ಮಳೆ

ನೈಋತ್ಯ ಮುಂಗಾರು ಕೇರಳ ಪ್ರವೇಶಿಸಿರುವ ಬೆನ್ನಲ್ಲೇ ಕೊಡಗು ಜಿಲ್ಲೆಯ ಹಲವೆಡೆ ಹಗುರದಿಂದ ಸಾಧಾರಣ ಮಳೆಯಾಗಲಾರಂಭಿಸಿದೆ. ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣದ ನಡುವೆ ಅಲ್ಲಲ್ಲಿ ಹಗುರವಾದ ಮಳೆಯಾಗುತ್ತಿದ್ದು, ಒಂದೆರಡು ದಿನಗಳಲ್ಲಿ ಮುಂಗಾರು ಪ್ರವೇಶಿಸುವ ನಿರೀಕ್ಷೆಯಿದೆ. ಇದಕ್ಕೆ ಪೂರಕವೆಂಬಂತೆ ಜಿಲ್ಲೆಯ ತಾಪಮಾನದಲ್ಲೂ ಗಣನೀಯವಾದ ಇಳಿಕೆ ಕಂಡು ಬಂದಿದೆ. ಜಿಲ್ಲೆಯಲ್ಲಿ ಶುಕ್ರವಾರ ಗರಿಷ್ಠ ತಾಪಮಾನ 24 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಶುಕ್ರವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ಜಿಲ್ಲೆಯಲ್ಲಿ ಸರಾಸರಿ 14.17 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನಾಂಕದಂದು 1.77 ಮಿ.ಮೀ. ಮಳೆಯಾಗಿತ್ತು. ಮಡಿಕೇರಿ ತಾಲೂಕಿನಲ್ಲಿ ಸರಾಸರಿ ಮಳೆ 19.45 ಮಿ.ಮೀ. ವೀರಾಜಪೇಟೆ ತಾಲೂಕಿನಲ್ಲಿ 23 ಮಿ.ಮೀ., ಪೊನ್ನಂಪೇಟೆ ತಾಲೂಕಿನಲ್ಲಿ 21, ಸೋಮವಾರಪೇಟೆ ತಾಲೂಕಿನಲ್ಲಿ 4.60 ಹಾಗೂ ಕುಶಾಲನಗರ ತಾಲೂಕಿನಲ್ಲಿ ಸರಾಸರಿ 2.60 ಮಿಲಿ ಮೀಟರ್ ಪ್ರಮಾಣದಲ್ಲಿ ಮಳೆಯಾಗಿದೆ.



ಮಂಗಳೂರು ನಗರದ ಕೊಡಿಯಾಲ್‌ಬೈಲ್‌ನ ಸ್ಥಿತಿ. ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಲ್‌ಬಾಗ್

ಕಾಸರಗೋಡು ಜಿಲ್ಲೆಯಲ್ಲಿ ಮಳೆ: ಜಿಲ್ಲಾಡಳಿತ ಅಲರ್ಟ್

ಕಾಸರಗೋಡು ಜಿಲ್ಲೆಯಲ್ಲಿ ಜೂ.6ರಂದು ಅತೀ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದ್ದು, ಅದರಂತೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳು ಮತ್ತು ವಿಪತ್ತು ನಿರ್ವಹಣಾ ಪ್ರಕ್ರಿಯೆಗಳಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಆದೇಶಿಸಿದ್ದಾರೆ.

ಜೂ.4 ರಂದು ನೈಋತ್ಯ ಮಾನ್ಸೂನ್ ಕೇರಳವನ್ನು ಪ್ರವೇಶಿಸಿದ ನಂತರ ಜಿಲ್ಲೆಯಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ನದಿಗಳು, ಹೊಳೆಗಳು ಮತ್ತು ಪ್ರವಾಸಿ ತಾಣಗಳಿಗೆ ತೆರಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ಜಿಲ್ಲಾ ಮತ್ತು ತಾಲೂಕು ನಿಯಂತ್ರಣ ಕೊಠಡಿಗಳನ್ನು ಅಥವಾ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಪೊಲೀಸ್ ಇಲಾಖೆಯನ್ನು ಸಂಪರ್ಕಿಸಬಹುದು. ತಹಶೀಲ್ದಾರರು ಅಗತ್ಯವಿರುವ ಹಂತಗಳಲ್ಲಿ ಪರಿಹಾರ ಶಿಬಿರಗಳನ್ನು ತಕ್ಷಣ ಪ್ರಾರಂಭಿಸಬೇಕು. ಜಿಲ್ಲೆಯ ಎಲ್ಲಾ ಆಸ್ಪತ್ರೆಗಳು, ಸಿಎಚ್‌ಸಿಗಳು ಮತ್ತು ಪಿಎಚ್‌ಸಿಗಳು ಸಾಕಷ್ಟು ಸಿಬ್ಬಂದಿ ಮತ್ತು ಔಷಧಿಗಳೊಂದಿಗೆ ಸಂಪೂರ್ಣವಾಗಿ ಸಜ್ಜುಗೊಂಡಿವೆ ಮತ್ತು ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತವೆ ಎಂದು ಆರೋಗ್ಯ ಇಲಾಖೆ ಖಚಿತಪಡಿಸಿಕೊಳ್ಳಬೇಕು. ಕ್ಷೇತ್ರ ಮಟ್ಟದ ವೈದ್ಯಕೀಯ ತಂಡಗಳನ್ನು ರಚಿಸಬೇಕು ಮತ್ತು ಸಾಂಕ್ರಾಮಿಕ ರೋಗ ತಡೆಗಟ್ಟುವ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಹೌಸ್ ಬೋಟಿಂಗ್, ಟ್ರೆಕ್ಕಿಂಗ್, ಬೋಟಿಂಗ್, ಕಯಾಕಿಂಗ್ ಮತ್ತು ಕ್ರೀಡಾ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು. ಜಿಲ್ಲೆಯಲ್ಲಿ ಕಲ್ಲು ಗಣಿಗಾರಿಕೆ, ಮಣ್ಣು ತೆಗೆಯುವುದು ಸೇರಿದಂತೆ ಎಲ್ಲಾ ನಿರ್ಮಾಣ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಆದೇಶಿಸಲಾಗಿದೆ. ಮಳೆ ನಿಂತ ಕನಿಷ್ಠ 24 ಗಂಟೆಗಳ ವರೆಗೆ ಕಲ್ಲು ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸಮುದ್ರ ಮತ್ತು ನದಿಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವವರಿಗೆ ಹಾಗೂ ಕರಾವಳಿ ನಿವಾಸಿಗಳಿಗೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.

ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಎಡಿಎಂ ಕೆ.ವಿ.ಶ್ರುತಿ ಅವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರ್‌ಗಳು ಮತ್ತು ಸ್ಥಳೀಯಾಡಳಿತ ಇಲಾಖೆಯ ಜಂಟಿ ನಿರ್ದೇಶಕರ ಸಭೆ ನಡೆಯಿತು. ವಿಪತ್ತು ಪೀಡಿತ ಪ್ರದೇಶಗಳಲ್ಲಿ ಎಲ್ಲಾ ಸಮಯದಲ್ಲೂ ಜಾಗರೂಕರಾಗಿರಲು ನಿರ್ದೇಶಿಸಲಾಗಿದೆ. ತಾಲೂಕು ನಿಯಂತ್ರಣ ಕೊಠಡಿಗಳ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಯಿತು. ಪರಿಹಾರ ಶಿಬಿರಗಳನ್ನು ಈಗಾಗಲೇ ಗುರುತಿಸಲಾಗಿದೆ ಎಂದು ತಿಳಿಸಲಾಯಿತು. ಜಂಟಿ ನಿರ್ದೇಶಕರ ಕಚೇರಿಯಲ್ಲಿ ನಿಯಂತ್ರಣ ಕೊಠಡಿಯನ್ನು ಸಹ ಸ್ಥಾಪಿಸಲಾಗಿದೆ.

ಕಾಸರಗೋಡು ಜಿಲ್ಲೆಯಲ್ಲಿ ಹೆಲ್ಪ್‌ಲೈನ್ ಕಾರ್ಯಾರಂಭ

ಮಳೆಗಾಲದ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರು ಟೋಲ್ ಫ್ರೀ ಸಂಖ್ಯೆ - 1077, ಕಂಟ್ರೋಲ್ ರೂಮ್ - 04994 257700, 9446601700, ಕಾಸರಗೋಡು ತಾಲೂಕು ಕಚೇರಿ - 04994 230021, ಮಂಜೇಶ್ವರ ತಾಲೂಕು ಕಚೇರಿ - 04998 244044, ವೆಳ್ಳರಿಕುಂಡು ತಾಲೂಕು ಕಚೇರಿ - 04672 204042 ಸಂಪರ್ಕಿಸಬಹುದು. ವಿದ್ಯುತ್ ಲೈನ್ ಗಳಿಗೆ ಸಂಬಂಧಿಸಿದ ಯಾವುದೇ ದೂರುಗಳಿಗೆ ನಿಯಂತ್ರಣ ಕೊಠಡಿ ಸಂಖ್ಯೆ 9496011431 ಅಥವಾ ಗ್ರಾಹಕ ಸೇವಾ ಸಂಖ್ಯೆ 9496010101 ಗೆ ಮಾಹಿತಿ ನೀಡಬಹುದು ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ. ಗಾಳಿ ಮಳೆಯ ಆರ್ಭಟಕ್ಕೆ ಕಾಸರಗೋಡು ಜಿಲ್ಲೆಯ ಹಲವೆಡೆ ಮರಗಳು ರಸ್ತೆಗೆ ಉರುಳಿ ಬಿದ್ದ ಪರಿಣಾಮ ವಾಹನ ಸಂಚಾರ ಸ್ಥಗಿತಗೊಂಡಿದೆ.

ಸ್ಕೂಟರ್ ಮೇಲೆ ಮರ ಬಿದ್ದು ಸವಾರಗೆ ಗಾಯ

ಬಂಟ್ವಾಳ: ಶುಕ್ರವಾರ ರಾತ್ರಿ ವೇಳೆ ಗಾಳಿ, ಮಳೆಗೆ ವಾಮದಪದವು ಜಂಕ್ಷನ್ ಬಳಿ ಮರವೊಂದು ಸಂಚರಿಸುತ್ತಿದ್ದ ಸ್ಕೂಟರ್ ಮೇಲೆ ಬಿದ್ದು ವಾಮದಪದವು ನಿವಾಸಿ ಮಾದವ ನಾಯ್ಕ ಎಂಬವರು ಗಾಯಗೊಂಡಿದ್ದು ತುಂಬೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ದಿನೇಶ್ ಶೆಟ್ಟಿ ದಂಬೆದಾರ್ ಅವರು ಗಾಯಾಳು ಮಾದವ ನಾಯ್ಕ ಅವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಇವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ. ನೂರಾರು ವರ್ಷಗಳ ಕಾಲ ಹಳೆಯದಾಗಿರುವ ಬೃಹತ್ ಗಾತ್ರದ ಅಶ್ವಥ ಮರ ಬುಡದಲ್ಲಿ ನಿರಂತರ ಮಳೆಗೆ ಮಣ್ಣು ಸಡಿಲಗೊಂಡು ರಸ್ತೆಗೆ ಬಿದ್ದಿದ್ದು, ರಸ್ತೆ ಬದಿ ನಿಲ್ಲಿಸಲಾಗಿದ್ದ ದ್ವಿಚಕ್ರ ವಾಹನಗಳು ಜಖಂ ಗೊಂಡಿದೆ. ನಾಲ್ಕೈದು ವಿದ್ಯುತ್ ಕಂಬಗಳು ಕೂಡ ಧರಾಶಾಹಿಯಾಗಿದ್ದು, ಹಲವೆಡೆ ವಿದ್ಯುತ್ ಕಡಿತಗೊಂಡಿದೆ.

ಸಿಡಿಲಾಘಾತ: ಎರಡು ಮನೆಗಳಿಗೆ ಅಲ್ಪ ಹಾನಿ

ಗುರುವಾರ ಸುರಿದ ಭಾರೀ ಮಳೆ ಹಾಗೂ ಗುಡುಗು ಸಿಡಿಲಿನಿಂದಾಗಿ ಕಾಸರಗೋಡು ಜಿಲ್ಲೆಯ ನಾಯ್ಕಾಪಿನಲ್ಲಿ ಎರಡು ಮನೆಗಳಿಗೆ ಹಾನಿ ಉಂಟಾಗಿದೆ. ನಾಯ್ಕಾಪು ರಾಮೇಶ್ವರನಗರದ ಶಕುಂತಳಾ, ಯಮುನಾ ಎಂಬವರ ಮನೆಗಳಿಗೆ ಸಿಡಿಲಿನ ಆಘಾತ ಉಂಟಾಗಿದೆ. ಮನೆಗಳ ವಿದ್ಯುತ್ ಮೈನ್ ಸ್ವಿಚ್, ಫ್ಯಾನ್ ಸಹಿತ ವಿದ್ಯುತ್ ಉಪಕರಣಗಳು ಹಾನಿಗೀಡಾಗಿವೆ. ಅಲ್ಲದೆ ಗೋಡೆ ಬಿರುಕು ಬಿಟ್ಟಿದೆ.

ಎಲ್ಲೆಡೆ ಇನ್ನಷ್ಟು ಭಾರೀ ಮಳೆಯ ಮುನ್ಸೂಚನೆ

ಮುಂಗಾರಿನ ಆರಂಭ ತೀವ್ರವಾಗಿರಲಿದೆ. ಜೂನ್ 8ರಿಂದ ಜೂನ್ 13ರ ಅವಧಿಯಲ್ಲಿ ಮಳೆ ಹೆಚ್ಚಾಗುವ ಲಕ್ಷಣವಿದೆ. ದ.ಕ. , ಉಡುಪಿ, ಕಾಸರಗೋಡು ಭಾಗದಲ್ಲಿ ತೀವ್ರ ಮಳೆಯಾಗುವ ಸಾಧ್ಯತೆ. ಜನತೆ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವಂತೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ರಾಷ್ಟ್ರೀಯ ಹೆದ್ದಾರಿ ತುಂಬ ಕೆಸರು ನೀರು

ಬೈಕಂಪಾಡಿ, ಮಂಗಳೂರು–ಬಿಸಿರೋಡ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಸರು ನೀರಿನಿಂದಾಗಿ ವಾಹನ ಚಾಲನೆ ಸವಾಲಾಗಿ ಪರಿಣಮಿಸಿತ್ತು. ತುಂಬೆಯಲ್ಲಿ ಮಳೆನೀರಿನ ಜೊತೆಗೆ ಭಾರಿ ಪ್ರಮಾಣದ ಮಣ್ಣು ಕೊಚ್ಚಿಬಂದು ಹೆದ್ದಾರಿಯಲ್ಲೇ ಸಂಗ್ರಹಗೊಂಡು ರಸ್ತೆ ಕೆಸರುಮಯವಾಗಿತ್ತು. ಭಾರೀ ಮಳೆಯಿಂದಾಗಿ ಕೆಲಕಾಲ ಬುತೇಕ ಕಡೆಗಳಲ್ಲಿ ವಾಹನ ಸಂಚಾರ ನಿಧಾನವಾಗಿ ಟ್ರಾಫಿಕ್ ಜಾಮ್ ಕಂಡುಬಂದಿತು.

ಕಾಸರಗೋಡಿನಲ್ಲಿ ಶಾಲಾ ಕಾಲೇಜಿಗೆ ರಜೆ

ಕಾಸರಗೋಡಿನಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಕೇಂದ್ರ ಹವಾಮಾನ ಇಲಾಖೆ ನೀಡಿದ್ದು, ಈ ಹಿನ್ನೆಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಅಲ್ಲದೆ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಇಂದು ರಜೆ ಘೋಷಿಸಿದ್ದಾರೆ. ಆದರೆ ಪೂರ್ವ ನಿಗದಿತ ಪರೀಕ್ಷೆಗಳು ಹಾಗೂ ಸಂದರ್ಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಕಾಸರಗೋಡು ಜಿಲ್ಲಾಡಳಿತ ತಿಳಿಸಿದೆ.

ಬೋಟ್ ರೈಡಿಂಗ್, ಜೆಟ್ ಸ್ಕೀ, ಪ್ಯಾರಾ ಸೈಲಿಂಗ್ ಸಹಿತ ಎಲ್ಲಾ ವಾಟರ್ ಸ್ಪೋರ್ಟ್ಸ್ ಚಟುವಟಿಕೆಗಳು ಬಂದ್ | ಎಲ್ಲೆಡೆ ಈಗ ಸುರಕ್ಷತೆಗಷ್ಟೇ ಆದ್ಯತೆ

ಕಡಲತಡಿ ಭೇಟಿಯ ಸಂಭ್ರಮಗಳಿಗೆ ತೆರೆ ಎಳೆದಿದೆ ಮುಂಗಾರಿನ ಆಗಮನ!

ಮಂಗಳೂರು: ಕರಾವಳಿಯಲ್ಲಿ ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ಕಡಲತೀರಗಳಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ.

ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಸಮುದ್ರದಲ್ಲಿನ ಎಲ್ಲಾ ಸಾಹಸಮಯ ಚಟುವಟಿಕೆಗಳಿಗೆ ಸಂಪೂರ್ಣ ವಾಗಿ ವಿರಾಮ ಘೋಷಿಸಿದೆ.

ನಿಷೇಧಗೊಂಡ ಚಟುವಟಿಕೆಗಳು

ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಪಣಂಬೂರು, ತಣ್ಣೀರುಬಾವಿ, ಸೋಮೇಶ್ವರ ಸೇರಿದಂತೆ ಪ್ರಮುಖ ಬೀಚ್‌ಗಳಲ್ಲಿ ಸಮುದ್ರದೊಳಗಿನ ಮನರಂಜನಾ ಚಟುವಟಿಕೆಗಳಿಗೆ ಸಂಪೂರ್ಣ ತಡೆ ಹಾಕಲಾಗಿದೆ. ತೇಲುವ ಸೇತುವೆ, ಬೋಟ್ ರೈಡಿಂಗ್, ಜೆಟ್ ಸ್ಕೀ, ಪ್ಯಾರಾ ಸೈಲಿಂಗ್ ಸೇರಿದಂತೆ ಎಲ್ಲಾ ವಾಟರ್ ಸ್ಪೋರ್ಟ್ಸ್ ಚಟುವಟಿಕೆಗಳನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ. ಸಮುದ್ರಕ್ಕೆ ಇಳಿಯುವುದನ್ನು ಕೂಡಾ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಮುಂದುವರಿದ ಚಟುವಟಿಕೆಗಳು

ಸಮುದ್ರದಿಂದ ಒಂದಿಷ್ಟು ದೂರ ದಡದಲ್ಲಿ ನಡೆಯುವ ಕುದುರೆ ಸವಾರಿ, ಒಂಟೆ ಸವಾರಿ ಹಾಗೂ ಮಕ್ಕಳ ಆಟದ ಮೈದಾನಗಳು ಸದ್ಯಕ್ಕೆ ಕಾರ್ಯ ನಿರ್ವಹಿಸುತ್ತಿವೆ. ಆಹಾರ ಮಳಿಗೆಗಳು ಎಂದಿನಂತೆ ತೆರೆದಿದ್ದು, ಪ್ರವಾಸಿಗರು ದಡದಲ್ಲಿಯೇ ಕುಳಿತು ಸಮುದ್ರದ ಅಬ್ಬರದ ಅಲೆಗಳನ್ನು ವೀಕ್ಷಿಸಿ, ಅಲ್ಲಿಯೇ ತಯಾರಾಗುವ ಬಿಸಿ–ಬಿಸಿ ತಿಂಡಿ ಸವಿಯುತ್ತಿದ್ದಾರೆ.

ಮೀನುಗಾರಿಕೆಗೆ ರಜೆ, ಮೀನುಗಾರರು ಬಿಝಿ

ಜೂನ್ 1ರಿಂದ ಜುಲೈ 31ರವರೆಗೆ 61 ದಿನ ಗಳ ಅವಧಿಯಲ್ಲಿ ಯಾಂತ್ರಿಕ ಮೀನುಗಾರಿಕಾ ದೋಣಿಗಳಿಗೆ ಮೀನುಗಾರಿಕೆ ನಿಷೇಧ ಹೇರಲಾಗಿದೆ. ಹೀಗಾಗಿ ಮೀನುಗಾರರು ದೋಣಿ ದುರಸ್ತಿ, ಬಲೆ ಹೆಣೆಯುವ ಕೆಲಸದಲ್ಲಿ ತೊಡಗಿದ್ದಾರೆ. ಮುಂಗಾರು ಅವಧಿಯಲ್ಲಿ ಸಮುದ್ರ ಪ್ರಕ್ಷುಬ್ಧವಾಗಿರುವುದರಿಂದ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕೆಯೂ ಒಂದಷ್ಟು ಸಮಯದ ವರೆಗೆ ಸ್ಥಗಿತಗೊಳ್ಳುತ್ತದೆ.

ಪ್ರವಾಸಿಗರ ಒಲವು ಬದಲು

ಕರಾವಳಿ ಭಾಗದಲ್ಲಿ ಮುಂದಿನ ಮೂರ್ನಾಲ್ಕು ತಿಂಗಳು ಸಮುದ್ರದ ಚಟುವಟಿಕೆಗಳಿಗೆ ವಿರಾಮ ಬೀಳುವುದರಿಂದ ಇಲ್ಲಿಗೆ ಬರುವ ಪ್ರವಾಸಿಗರ ಆಯ್ಕೆಯೂ ಬದಲಾಗುತ್ತಿದೆ. ಸಾಹಸ ಪ್ರಿಯ ಯುವಕರು ಪಶ್ಚಿಮ ಘಟ್ಟದ ಚಾರ್ಮಾಡಿ, ಕುದುರೆ ಮುಖ, ಆಗುಂಬೆ ಭಾಗದಲ್ಲಿ ಮಳೆಗಾಲದ ಟ್ರೆಕ್ಕಿಂಗ್ ಕಡೆಗೆ ಮುಖ ಮಾಡಿದರೆ, ಹಿರಿಯ ನಾಗರಿಕರು ಹಾಗೂ ಕುಟುಂಬ ಸಮೇತ ಬರುವವರು ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಕಟೀಲು, ಕೊಲ್ಲೂರು, ಉಡುಪಿ ಶ್ರೀಕೃಷ್ಣ ಮಠದಂತಹ ದೇವಾಲಯಗಳ ಟೆಂಪಲ್ ಟೂರಿಸಂ ಕಡೆಗೆ ಹೆಚ್ಚು ಒಲವು ತೋರುತ್ತಿದ್ದಾರೆ. ಜಲ ಪಾತ ವೀಕ್ಷಣೆಗೆ ಆರ್ಬಿ, ಕೂಡ್ಲು ತೀರ್ಥ, ಹನುಮಾನ್ ಗುಂಡಿ ಫಾಲ್ಸ್‌ಗಳಿಗೆ ಬೇಡಿಕೆ ಹೆಚ್ಚುತ್ತಿದೆ.

24 ಗಂಟೆಯೂ ನಿಗಾ

ಪಣಂಬೂರು ಬೀಚ್‌ನಲ್ಲಿ ಸಮುದ್ರ ತೀರದ ಉದ್ದಕ್ಕೂ ಕೆಂಪು ಹಗ್ಗವನ್ನು ಕಟ್ಟಿ ಪ್ರವಾಸಿಗರು ನೀರಿಗೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ. ಅಪಾಯವನ್ನು ಸೂಚಿಸುವ ಬೋರ್ಡ್‌ಗಳನ್ನು ಪ್ರಮುಖ ಸ್ಥಳಗಳಲ್ಲಿ ಅಳವಡಿಸಲಾಗಿದೆ. ಲೈಫ್ ಗಾರ್ಡ್‌ಗಳು, ಕರಾವಳಿ ಕಾವಲು ಪೊಲೀಸರು 24 ಗಂಟೆ ನಿಗಾ ಇಟ್ಟಿದ್ದಾರೆ. ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವ ಎಚ್ಚರಿಕೆನೀಡಲಾಗಿದೆ.



ಕಡಲಿಗೆ ಇಳಿಯಬೇಡಿ

ಮುಂಗಾರು ಅವಧಿಯಲ್ಲಿ ಅಲೆಗಳ ಅಬ್ಬರ, ಸೆಳೆತ ಹೆಚ್ಚಾಗಿರುವುದರಿಂದ ಯಾವುದೇ ಕಾರಣಕ್ಕೂ ಸಮುದ್ರಕ್ಕೆ ಇಳಿಯಬಾರದು. ಸೆಲ್ಫಿಗಾಗಿ ಅಪಾಯಕಾರಿ ಸ್ಥಳಗಳಿಗೆ ಹೋಗಬಾರದು ಎಂದು ಜಿಲ್ಲಾಡಳಿತ ಪ್ರವಾಸಿಗರಲ್ಲಿ ಮನವಿ ಮಾಡಿದೆ. ಸಾಮಾನ್ಯವಾಗಿ ಸೆಪ್ಟೆಂಬರ್ ಅಂತ್ಯದ ನಂತರ ಹವಾಮಾನ ನೋಡಿ ಕೊಂಡು ಬೀಚ್ ನಲ್ಲಿ ವಾಟರ್ ಸ್ಪೋರ್ಟ್ಸ್ ಚಟುವಟಿಕೆಗಳು ಮತ್ತೆ ಆರಂಭವಾಗಲಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Diganta Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.